ಸಂಪುಟ ೭
ಸಂಚಿಕೆ ೧

ಕರ್ನಾಟಕ ಭಾರತಿ

ರಾಜ್ಯೋದಯ ಸಂಚಿಕೆ
೧೯೭೪

ತ್ರೈಮಾಸಿಕ

ಕರ್ನಾಟಕ ವಿಶ್ವವಿದ್ಯಾಲಯ.

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು **ಎರಡು** ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ   ೨. ರಾಜ್ಯೋದಯ ಸಂಚಿಕೆ

೩. ಸಂಕ್ರಮಣ ಸಂಚಿಕೆ   ೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿಸಂಚಿಕೆಯ ಬೆಲೆ : ರೂ. ೨-೫೦

(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ)

ಹಣವನ್ನು ಮನಿಯಾರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ

ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003 ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೭ ಸಂಚಿಕೆ : ೧

ಪ್ರಧಾನ ಸಂಪಾದಕರು :

ಡಾ. ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು :

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ: ೭   ಸಂಚಿಕೆ: ೨

ನವಂಬರ ೧೯೭೪

ರಾಜ್ಯೋದಯ ಸಂಚಿಕೆ

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.

ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಮುದ್ರಕರು :

ಕೆ. ಜಿ. ಜೋಶಿ

ಕೆ. ಜಿ. ಮೋಡರ್ನ ಪ್ರಿಂಟಿಂಗ ಪ್ರೆಸ್, ಧಾರವಾಡ

ಪರಿವಿಡಿ

		ಪುಟ
೧.	ಶರಣು (ಕವನ) —ಎಸ್. ಎಸ್. ಹಿರೇಮಠ	೧
೨.	ನಟಸಾರ್ವಭೌಮನ ರಂಗಭೂಮಿ —ಮಹಾದೇವ ಕಣವಿ	೨-೧೦
೩.	ಭಾಷಾವಿಜ್ಞಾನದ ಪ್ರಾಮುಖ್ಯತೆ —ಜಿ. ರಾಮಸ್ವಾಮಿ	೧೧ ೧೬
೪.	ಲಾವಣಿಗೋಷ್ಠಿ —ಶ್ರೀರಾಮ ಇಟ್ಟಣ್ಣವರ	೧೭-೨೬
೫.	ದಾಖಲೆ (ಕವನ) —ದೊಡ್ಡರಂಗೇಗೌಡ	೨೭
೬.	ಅನ್ಯಭಾಷಾ ಬೋಧನೆ —ವಿಲ್ಯಂ ಮಾಡ್ತ	೨೮ ೩೦
೭.	ಸ್ತ್ರೀ ಶ್ರಾಪ (ಲಾವಣಿ) —ಸಿ. ವ್ಹಿ. ಪಾಟೀಲ	೩೧-೩೪
೮.	ನವ್ಯಕಾವ್ಯದ ಸ್ಥಿತಿ-ಗತಿ —ಗುರುಲಿಂಗ ಕಾಪಸೆ	೩೫ ೪೮
೯.	ಜನಪದ ಆಟ-ಪಾಟ —ಎಂ. ಎಸ್. ಸುಂಕಾಪುರ	೪೯-೬೧
೧೦	ಕವಿಕಲ್ಪನೆಯಲ್ಲಿ ಚಂದ್ರ —ಬಿಂ. ಎಸ್. ಮಹಾಂತಯ್ಯ	೬೨-೭೫
೧೧.	ಶಿವರುದ್ರಪ್ಪನವರ 'ಗೋಡೆ' —ಬುದ್ದಣ್ಣ ಹಿಂಗಮಿರೆ	೭೬ ೭೯
೧೨.	ಮುಕ್ತಕ ಮಾಲೆ —ಎಚ್. ಜಿ. ಲೋಕೂರ	೮೦-೮೨
೧೩.	ಕೆಳದಿಯನೃಪವಿಜಯದಲ್ಲಿ ಕಾಲಾನುಕ್ರಮಣಿಕೆ —ಗುಂಡಾ ಜೋಯಿಸ್	೮೩-೧೦೮

೧೪. ವ್ಯೂಹಗಳು ೧೦೯–೧೧೫
—ಎಂ. ವ್ಹಿ. ಶರ್ಮಾ ತದ್ದಲಸೆ

೧೫. ಕೋಲುಪದ (ಕವನ) ೧೧೬–೧೧೯
—ಎಂ. ಎನ್. ವಾಲಿ

೧೬. ಪಂಪಭಾರತದ ಪಾಠಾಂತರಗಳು ೧೨೦–೧೨೨
—ಹೇಮಲತಾ ಪದಕಿ

೧೭. ಮಾನವ ಪ್ರಜ್ಞಾವಿಕಾಸ ೧೨೩–೧೩೭
—ಶಂ. ಬಾ. ಜೋಶಿ

೧೮. ಮೈಸೂರು ಪ್ರದೇಶದ ಪ್ರಕಟಿತ ಶಾಸನಗಳ ಸಮೀಕ್ಷೆ ಮತ್ತು ಅಪ್ರಕಟಿತ ಶಾಸನಗಳ ಸೂಚಿ ೧೩೮–೧೫೪
—ಎಸ್. ಶೆಟ್ಟರ್
—ಎಸ್. ರಾಜಶೇಖರ

೧೯. ಒರೆಗಲ್ಲು : ೧೫೫–೧೫೯
'ಅಜ್ಜರ' [= ಅಜ್ಜೆಜು ?] ಎಂದರೇನು ?
—ಎಂ. ಚಿದಾನಂದಮೂರ್ತಿ
ಚಿತ್ರದುರ್ಗದಲ್ಲಿಯ ಗುಂಡಬ್ರಹ್ಮಯ್ಯಗಳ ವಿಗ್ರಹ
—ಎಂ. ಎಂ. ಕಲಬುರ್ಗಿ


೨೦. ಗ್ರಂಥಾವಲೋಕನ ೧೬೦–೧೬೬

೨೧. ಸಾದರಸ್ವೀಕಾರ

೨೨. ಸಂಪಾದಕೀಯ

೨೩. ಈ ಸಂಚಿಕೆಯ ಲೇಖಕರು

ನಮ್ಮ ವಿಶ್ವವಿದ್ಯಾಲಯದ ಹಂಗಾಮಿ ಕುಲಪತಿಗಳಾದ



ಡಾ. ಆರ್. ಸಿ. ಹಿರೇಮಠ

ಪಯಣ

ಎಸ್. ಎಸ್. ಹಿರೇಮಠ

ನಿನ ಕಾಲ ಸಾಲದಂಚಿನ ಗುಂಟ
ಬಿಡಿಸಿದ ರಂಗೋಲಿ ಕುಂಕುಮ ಬಟ್ಟು
ಹಳದಿ ದಂಟಿನ ಗಂಟು.
ಬಿಸಿತಾಗಿದುಸಿರಿನ ಮಧ್ಯೆ, ನಿದ್ದೆ ಗುಳಿಗಿ
ಮಂಪರಿನ ಊರು ಹೊನಲು; ಹಕ್ಕಿ ಹಾಡು.
ನಿನಗಾಗಿ ಕಾದ ದಾರಿಯ ಕಂದುರೆ ಜೂಜು.
ದುಡ್ಡು ಹಾಳು.
ರೇಲು ಚಾರ್ಜಿನಲಿ ತಾಜಮಹಲಿನ ರೂಪ
ಚೈತ್ರ್ಯದಾಲಯದಲ್ಲೂ ಜೀವ ಜಂತು.
ತಂಪನೆರಚುವ ಕೆಂಪು ಸೂರ್ಯನ ಸುತ್ತ,
ಹತ್ತು ಗಂಟೆಯ ಕಿವಿಯ ನಾದ—
ಬದಿಗೆ ಬಂದು, ಹೇಳದೆ ಹೊರಟ ಕಾರು
ಕತ್ತಲೆಯ ದೂರ ದನಿ ಸಂಸ್ಕೃತಿಯ ಸಾರ.
ಉಪ್ಪೆಣ್ಣೆ ವರ್ಜ್ಯ ಗೂರಲಿಗೆ,
ತುಟಿಯಲ್ಲಿ ಕಂಡ ಕತೆ
ಕಣ್ಣಂಚಿನ ಹೆಣವೂ ಜೀವಂತ.
ಬಾಡಿದರಳು ಪಕಳೆ ಜಾರು
ನಾರು ತಂತಿ ಹಾಡು, ಇದೆಲ್ಲ ಕಾಡು.

ನಟಸಾರ್ವಭೌಮದ ರಂಗಭೂಮಿ

ಕಣವಿ ಮಹಾದೇವ

"ಬೆವರು, ಹೊಗೆಗಳಲ್ಲಿ ತುಂಬಿದೆ ಈ ಲೋಕ. ಲಿಲ್ಲಿಹೂ, ಮೂತ್ರ ಎರಡರ ವಾಸನೆಗಳೂ ಇದರಲ್ಲಿ ಮಿಶ್ರಿತ; ನಾವು ಧರಿಸಿದ ವಸ್ತ್ರದ ಹಾಗೆ. ಅಶುಚಿಯಾದ ಎಲ್ಲವನ್ನೂ ಲಜ್ಜೆಗೆಟ್ಟ ನಡತೆ, ಮುಖದ ಮೇಲಿನ ಸುಕ್ಕು, ಜಾಗರಣೆ, ಕನಸು, ಅವಲೋಕನ, ದ್ವೇಷ, ಪ್ರೇಮ, ದೇವತ್ವ, ಮೃಗವರ್ತನೆ, ಪ್ರತಿಭಟನೆ ಎಲ್ಲವನ್ನೂ ಕುರಿತು ನನಗೆ ಬರೆಯುವ ಇಚ್ಛೆ."

— ಪ್ಯಾಬ್ಲೋ ನೇರುಡ

'ನಟಸಾರ್ವಭೌಮ' ಮಡಿವಂತರ ದೃಷ್ಟಿಯಲ್ಲಿ ವಿಟಸಾರ್ವಭೌಮವಾಗಿ ನೀಲಿ ಹೊತ್ತಗೆಯಾಯಿತು. ನಿಷ್ಕಾಳಜಿಯ ಓದುಗರ ಕೈಯಲ್ಲಿ ಸಿಕ್ಕು ದೊರೆಯಬೇಕಾದ ಪ್ರಶಂಸೆಗೆ ಎರವಾಗಿ ಅಜ್ಞಾತವಾಸವನ್ನನುಭವಿಸಿತು. ಬೈಟೀಗ್ ವಿಮರ್ಶಕರ ಗಮನವನ್ನು ಸೆಳೆಯದೆ, ಸೆಳೆದರೂ ಸಮಗ್ರ ವಿವೇಚನೆಯಿಲ್ಲದೆ ಒಂದು ಸಾರ್ಥಕ ಕೃತಿಗೆ ದೊರೆಯಬೇಕಾಗಿದ್ದ ಬೆಲೆ ದೊರೆಯದಿದ್ದುದು ನಮ್ಮಲ್ಲಿಯ ವಿಮರ್ಶೆಯ ಅಪಕ್ವತೆಯನ್ನು ಸೂಚಿಸುತ್ತದೆ. ಅದೊಂದು ಕ್ರಾಂತಿಕಾರಕ ಕಾದಂಬರಿ.

ಪ್ರಗತಿಶೀಲಸಾಹಿತಿಗಳಿಗೆ ಪ್ರಚಾರಕ್ಕಿಂತ ಅಪಪ್ರಚಾರವೇ ಜಾಸ್ತಿ ಸಿಕ್ಕಿತು. ಹಾಗಾಗಿ ಅವರ ಸಾಹಿತ್ಯದ ಮೌಲ್ಯಮಾಪನ ನಡೆಯದೆ, ಬರಹಗಾರರ ಮೇಲೆ ಜನರ ಗಮನ ಕೇಂದ್ರಿತವಾಯಿತು. ಮುಂದಿನ ಎಲ್ಲ ನವ್ಯಗಳಿಗೆ ತಾಯಿಯಾದ ಅದು ಬಹುಸಂಖ್ಯೆಯ ಓದುಗರನ್ನು ಪಡೆದರೂ ಸದ್ದಿಲ್ಲದೆ ಹಾಗೇ ಉಳಿಯಿತು. 'ಏನ ಅಶ್ಲೀಲ ಬರೀತಾನಂವಾ' ಎಂದು ಹೆಚ್ಚಿಗೆ ಬೈಗುಳಗಳನ್ನು ತಿಂದಿತು. ಕೇವಲ ಗಾತ್ರದ ದೃಷ್ಟಿಯಿಂದಲ್ಲ, ಗುಣದ ದೃಷ್ಟಿಯಿಂದಲೂ ನಟಸಾರ್ವಭೌಮ ಅ. ನ. ಕೃ. ಅವರ ಉಳಿದೆಲ್ಲ ಕೃತಿಗಳಿಗಿಂತ ಹೆಚ್ಚು ತೂಗುತ್ತದೆ. 'ಸಂಧ್ಯಾರಾಗ'ದ ಶ್ರೇಷ್ಠತೆಯನ್ನು ಅಲ್ಲಗಳೆಯಕೂಡದಾದರೂ ನಾಯಕ ಲಕ್ಷ್ಮಣ, ರಾಯರು, ಮೀನಾಕ್ಷಮ್ಮ ಸಾತ್ವಿಕರಾದುದರಿಂದ ಸಹಾನುಭೂತಿಯನ್ನು ಗಳಿಸಿದರು. ಕಲೆ–ಕಲಾವಿದ, ಅವನ ಆಸೆ–ಆದರ್ಶಗಳು, ಏಳುಬೀಳುಗಳು, ಸಫಲತೆ–ವಿಫಲತೆಗಳನ್ನು ಕುರಿತಾದ ಬೃಹತ್‌ಕಾದಂಬರಿಯ ನಿರ್ಮಿತಿಯ ಶ್ರೇಯಸ್ಸು ಕೃಷ್ಣರಾಯರಿಗೆ ನಿಸ್ಸಂದೇಹವಾಗಿ ಸೇರುತ್ತದೆ.

ಈ ಲೇಖನಕ್ಕೆ ಮಾರ್ಗದರ್ಶನ ನೀಡಿದ ಡಾ. ಎಸ್. ಎಸ್. ಬಸುಪಟ್ಟದ ಅವರಿಗೆ ನಾನು ಋಣಿಯಾಗಿದ್ದೇನೆ.

ರಂಗಭೂಮಿಯ ಹುಟ್ಟನ್ನು ಯಾವ ಆಶ್ಚರ್ಯವೂ ಇಲ್ಲದಂತೆ ದೇವಲೋಕಕ್ಕೆ ಆರೋಪಿಸುತ್ತೇವೆ. ನಮ್ಮ ನಾಟ್ಯಶಾಸ್ತ್ರದ ಗುರು, ಭರತಮುನಿ. ಪ್ರಚಲಿತ 'ರಂಗಭೂಮಿ' 'ರಂಗಸ್ಥಳ'ಗಳಿಗೆ ರಂಗ ಎಂದರೆ— A place of amusement or for dramatic exhibitions ಎಂದು ಕಿಟೆಲ್ಲರವರು ಅರ್ಥ ಹೇಳುತ್ತಾರೆ. ಅಂದರೆ 'ಪ್ರಯೋಗ ಪ್ರಧಾನಂ ಹಿ ನಾಟ್ಯಂ' ಎಂಬ ಕಾಳಿದಾಸನ ವಿಶಾಲ ಅರ್ಥವನ್ನು ಪಡೆಯುತ್ತದೆ. ಮನರಂಜನೆ ನಡೆಯುವುದಕ್ಕೆ ನಿರ್ದಿಷ್ಟವಾದ ಪರಿಸರವನ್ನು 'ಸ್ಥಳ' ಎಂದು ಹೆಸರಿಸುತ್ತೇವೆ. ರಂಗಭೂಮಿಯನ್ನು ನಾಟಕಕ್ಕೆ ಮಾತ್ರ ಸೀಮಿತಗೊಳಿಸಿದರೆ ಅದರ ಅರ್ಥ ಕುಗ್ಗುತ್ತದೆ. ಅಭಿನಯಕ್ಕೆ ಬೇಕಾದ ಪರಿಕರಗಳು. ಮುಂದೆ ಕುಳಿತ ಪ್ರೇಕ್ಷಕ ಮಹಾಶಯರು. ಅವರನ್ನು ಸಂಪ್ರೀತರಾಗುವಂತೆ ಮಾಡುವ ನಟರು ಅದರ ಆವಶ್ಯಕಗಳು.

ಕನ್ನಡ ನಾಟಕಸಾಹಿತ್ಯಕ್ಕೆ ದೀರ್ಘವಾದ ಇತಿಹಾಸವಿಲ್ಲ. ಪ್ರಾಚೀನ ಕಾವ್ಯಗಳಲ್ಲಿ, ಶಾಸನದಲ್ಲಿ ನಟನ ಹೆಸರು, ವರ್ಣನೆ ಬಂದರೂ ಅನುವಾದ, ಪ್ರೇರಣೆಗಳಿಂದಲೇ ಅದು ಜನ್ಮತಾಳಿದುದು. 'ಕರ್ಕಿಯ ಸೂರಿ ವೆಂಕಟರಮಣಶಾಸ್ತ್ರಿಗಳ' 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ' ಕನ್ನಡದ ಮೊದಲ ಸ್ವತಂತ್ರ ನಾಟಕ. ಸತ್ವಹೀನ ಊಟ, ರುಚಿಗೆಟ್ಟ ಪ್ರೇಕ್ಷಕರು ಇದು ನಮ್ಮ ರಂಗಭೂಮಿಯ ಅಂದಿನ ಮತ್ತು ಇಂದಿನ ಕತೆ. ಬಹುಪಾಲು ನಾಟಕಕಾರರು ಇಂದೂ ಪ್ರೇಕ್ಷಕರ ಅಭಿರುಚಿಯನ್ನು ಅರಿತುಕೊಂಡೇ ಬರೆಯಲು ತೊಡಗುತ್ತಾರೆ. ಅವರಿಗೆ ಮನರಂಜನೆಯಾದರೆ, ಅದೆಂತಹದು ಎಂಬುದು ಬೇಕಿಲ್ಲ. ತಾವು ಕೃತಾರ್ಥರಾದೆವೆಂದು ತಿಳಿಯುತ್ತಾರೆ. ಬಡತನದಲ್ಲಿ ಬೆಳೆಯುವ ಜೀವಗಳು ಹೊಟ್ಟೆಕಿಚ್ಚಿನ ಕಮ್ಯುನಿಜಂ ಕುರಿತೋ. ಪ್ರೇಮ. ಅಣ್ಣ-ತಮ್ಮಂದಿರ ಜಗಳ ಇಲ್ಲವೆ ಭಾರತೀಯ ನಾರೀಮಣಿಯನ್ನು ಬರೆದು ಕೊನೆಗೆ 'ಈ ಮಂಗಳಮಯ ಸನ್ನಿವೇಶವನ್ನು ದಯಪಾಲಿಸಿದ ಪರಮಾತ್ಮನನ್ನು ಪ್ರಾರ್ಥಿಸೋಣ' ಎಂದು ಮುಕ್ತಾಯ ಹಾಡುತ್ತಾರೆ. ಕನ್ನಡ ರಂಗಭೂಮಿ ಇನ್ನೂ ಆಮೆಯ ಗತಿಯಲ್ಲಿದೆ. ನಟಸಾರ್ವಭೌಮದಲ್ಲಿಯ ರಂಗಭೂಮಿಯನ್ನು ನಿಮ್ಮ ಮುಂದಿಡುವುದು ಇಲ್ಲಿಯ ಉದ್ದೇಶ.

ರಂಗಭೂಮಿಯ ಮೀಮಾಂಸೆಯನ್ನು ಪ್ರಾರಂಭಿಸುವುದರ ಜೊತೆಗೆ ಒಂದು ಮಾತನ್ನು ಮೊದಲೇ ಹೇಳುವುದು ಸೂಕ್ತ. ರಮ್. ರಂಭೆಯರ ಕೈಗೊಂಬೆಗಳು ಅ. ನ. ಕೃ. ಕಲಾವಿದರು ನಿಶೆ–ನೀರೆಯರಿಲ್ಲದಿದ್ದರೆ ಅವರ ಕುಂಚ ಮುಂದೆ ಓಡುವುದಿಲ್ಲ, ವೀಣೆಯ ಮೇಲೆ ಬೆರಳಾಡುವುದಿಲ್ಲ. ಕಾಲು ಕುಣಿಯುವುದಕ್ಕೆ ನಿರಾಕರಿಸುತ್ತವೆ ಎನ್ನುವುದು ಒಂದು ಆಕ್ಷೇಪ. ಅದು ಸತ್ಯವೂ ಹೌದು. ನಮಗೆ ಅದೊಂದು ಊನವಾಗಿ ಕಂಡುಬಂದರೂ ನಿಜಜೀವನದ ಹೆಚ್ಚಾಸ್ವಚ್ಚು ಸೃಜನಶೀಲ ಕಲಾಜೀವಿಗಳೂ ಹಾಗಿರುವುದು ಅಷ್ಟೇ ಸತ್ಯ. ಪಾಶ್ಚಾತ್ಯ ವಿಮರ್ಶೆಯಲ್ಲಾದರೆ ಮೇಲಿನ ಅವಗುಣಗಳನ್ನು ವ್ಯಕ್ತಿತ್ವವಿಕಾಸಕ್ಕೆ ಬೇಕಾಗುವ ಗೊಬ್ಬರವೆಂದು ಪರಿಗಣಿಸುತ್ತಾರೆ. ನಾವು ಕಲೆ–ಕಲಾವಿದರ ವೈಯಕ್ತಿಕ ಜೀವನವನ್ನು ಬೇರ್ಪಡಿಸುವುದನ್ನು ತಿಳಿಯದೆಯೆ ಎಮೋಶನಲ್

ಆಗುತ್ತೇವೆ. ಮನಸಿನ ದೌರ್ಬಲ್ಯವನ್ನು ಶಿವನ ಮೂರನೆಯ ಕಣ್ಣಿನಿಂದ ನೋಡುವುದು ಯಾವ ನ್ಯಾಯ ?

ಬಣ್ಣದ ಬದುಕು 'ನಾಟಕ ಸೇರಿದರೆ ಕೆಟ್ಟ' ಎನ್ನುವ ಹೀನ ಸ್ಥಿತಿಯಲ್ಲಿದ್ದಾಗಲೇ ಕಾಲೇಜಿನ ಶೇಕ್ಸಪಿಯರ್ ಎಂದು ಪ್ರಿನ್ಸಿಪಾಲರಿಂದ ಭಲೆ ಎನ್ನಿಸಿಕೊಂಡು, ಪರೀಕ್ಷೆಯಲ್ಲಿ ಪಲ್ಟಿ ಹೊಡೆದ ರಾಜ. ಅದಕ್ಕೆ ಕಾರಣ ಆತನ ದಡ್ಡತನವಲ್ಲ. ನಾಟಕದ ಗೀಳು, ಆ ಸಾಹಿತ್ಯದಲ್ಲಿಯ ಅಪರಿಮಿತ ಆಸಕ್ತಿ. ಮಗ ಆಫೀಸರಾಗಬೇಕೆಂದು ತಂದೆಯ ಆಸೆ. ಅದಕ್ಕೆ ತಣ್ಣೀರೆರಚಿ ತನ್ನ ಮಾರ್ಗಕ್ಕೆ ಪಾದಾರ್ಪಣ ಮಾಡುತ್ತಾನೆ. ಶ್ರೇಷ್ಠ ಇಂಗ್ಲೀಷ್ ನಟನಾದ ಅಲೆನ್ ಕ್ವಾರ್ಟರ ಮೇನ್ ಮುಂದೆ ರೋಮಿಯೋ ಅಭಿನಯಿಸಿ. ಆಶೀರ್ವಾದ ಬೇಡಿದಾಗ "ಕಲಾದೇವತೆ ನಿಮ್ಮನ್ನು ಆಶ್ರಯಿಸಿದ್ದಾಳೆ. ನೀವು ಆಕೆಯನ್ನು ತಿರಸ್ಕರಿಸಕೂಡದು" ಎಂಬ ಅಭಯವನ್ನು ಪಡೆದು ತನ್ನ ಜೀವನದ ಗತಿಯನ್ನು ಗುರುತಿಸಿಕೊಳ್ಳುತ್ತಾನೆ. ಊರಲ್ಲಿ ಆಡುವ ಪ್ರತಿ ನಾಟಕಕ್ಕೂ ರಾಜ ಹಾಜರು. ಚಲೋ ಕೆಟ್ಟ ಎನ್ನುವ ತಾರತಮ್ಯವಿಲ್ಲ. ಆದರೆ ಅಲ್ಲಿಯ ಎಲ್ಲ ನ್ಯೂನತೆಗಳನ್ನು ಅವಲೋಕಿಸುತ್ತಾನೆ.

"Novel is pocket theatre". ನಟಸಾರ್ವಭೌಮ ಈ ಮಾತಿಗೆ ಯೋಗ್ಯವಾದ ಉದಾಹರಣೆ. ಕನ್ನಡ ರಂಗಭೂಮಿ ಸಂಸ್ಕೃತನಾಟಕಗಳ ಸೂತ್ರಧಾರನನ್ನು ಉಳಿಸಿಕೊಂಡು ಪಾರ್ಶಿ ನಾಟಕಗಳು, ಇಂಗ್ಲೀಷ್ ಬಟ್ಟೆಗಳು ಇವೆಲ್ಲವುಗಳ 'ಮಿಸಳ' ಆಗಿತ್ತು. ದೊಡ್ಡ ಚಿಮಣಿಗಳು ಇಲ್ಲವೆ ಗ್ಯಾಸು ಬೆಳಕಿನಲ್ಲಿ ನಾಟಕದ ಆರಂಭ.

"ರಾಜ, ಮಂತ್ರಿ ಸೇನಾಪತಿಗಳ ದರ್ಬಾರು. ಅದರಲ್ಲಿ ಒಂದು ಪಾರ್ಶಿ ಡಾನ್ಸು ಅವಶ್ಯವಾಗಿ ಇರಬೇಕಾದ ಒಂದು ಅಂಗ. ನಾಯಕ ವತ್ಸರಾಜನಾಗಲಿ, ಹರಿಶ್ಚಂದ್ರನಾಗಲಿ, ಕೆನ್‌ಕಾಪಿನ ಸೂಟು ಹಾಕಿಕೊಂಡು ಕಣ್ಣಿಗೆ ಕನ್ನಡಕ, ಕೈಯಲ್ಲಿ ರೇಷ್ಮೆವಸ್ತ್ರ ಹಿಡಿದುಕೊಂಡು ಬರುತ್ತಿದ್ದ...

...ರಂಗದ ಮೇಲಿದ್ದ ನಟರಿಗೂ ಪ್ರೇಕ್ಷಕರಿಗೂ ಧಾರಾಳವಾಗಿ ಸಂಭಾಷಣೆ ನಡೆಯುತ್ತಿತ್ತು. ಉತ್ತರ ಪ್ರತ್ಯುತ್ತರಗಳು ಒಂದೊಂದು ಸಲ ವಿರಸಕ್ಕೆ ಮುಟ್ಟಿ, ಪೋಲೀಸಿನವರು ಬಂದು ಶಿಸ್ತನ್ನು ತರಬೇಕಾಗುತ್ತಿತ್ತು. ಪ್ರೇಕ್ಷಕರು ತಮ್ಮ ಮೆಚ್ಚುಗೆಯನ್ನು ಕಲ್ಲು, ಬೀಡಿಕಟ್ಟು, ಆಲೂಗಡ್ಡೆಗಳ ಮೂಲಕ ವ್ಯಕ್ತಪಡಿಸುತ್ತಿದ್ದರು...

...ಮತ್ತೊಂದು ಕಂಪನಿಯ ಅರ್ಜುನ ಲಕ್ಷಣವಾಗಿ ಬ್ರೀಚಸ್ (Breeches) ಹಾಕಿಕೊಂಡು, ಕಾಲಿಗೆ ಪಂಪ್‌ಷೂಷ್ ಧರಿಸಿ, ಕನ್ನಡಕ ಸಿಕ್ಕಿಸಿಕೊಂಡು, ಕೈಯಲ್ಲಿ ಪೋಲಿಸ್ ಬೆತ್ತ ಹಿಡಿದು ಪ್ರವೇಶ. ದ್ರೌಪದಿ ಪಾರ್ಶಿವೇಷ ಧರಿಸಿ, ಮೈ ಕೈ ಕುಲುಕಿಸಿಕೊಂಡು ಹಾಡಲಾರಂಭಿಸುತ್ತಿದ್ದಳು. ಮೊದಲಿನಿಂದ ಕೊನೆಯವರೆಗೂ ಹಾಡು ಹಾಡು. ಪ್ರೇಕ್ಷಕರಿಗೆ ಒಂದು ಹಾಡು ರುಚಿಸದಿದ್ದರೆ ಅವರಿಗೆ ಬೇಕಾದ ಹಾಡುಗಾರಿಕೆ...

...ನಟರ ನೈತಿಕ ಜೀವನ ಮುಗಿಲುಮುಟ್ಟಕ್ಕೆ ಏರಿತ್ತು. ಹೆಂಡ, ಹಸಿಮಾಂಸ ನೇಪಥ್ಯದಲ್ಲಿ ಇದ್ದ ಹೊರತು ಕೆಲವು ನಟರಿಗೆ ಸ್ಫೂರ್ತಿಯೇ ಬರುತ್ತಿರಲಿಲ್ಲ. ನೇಪಥ್ಯ,

ಬಣ್ಣದ ಕೋಣೆ ಕೀಳುದರ್ಜೆಯ ವೇಶ್ಯಾವಾಟವನ್ನು ಮೀರಿಸಿದ್ದುವು..."

ಕನ್ನಡ ರಂಗಭೂಮಿಯ ಅಂದಿನ ಸ್ಥಿತಿಯನ್ನು ಕಾದಂಬರಿಕಾರ ನಗ್ನವಾಗಿ ನಿಲ್ಲಿಸಿದ್ದಾನೆ. ಈ ಕೋಶಾವಸ್ಥೆಯನ್ನು ದಾಟಿ ಆರೋಗ್ಯವಾದ ಬೆಳವಣಿಗೆ ಹೇಗೆ ಸಾಧ್ಯ ಎನ್ನುವ ಚಿಂತೆ, ಚಿಂತನ.

ಮನೆಯಲ್ಲಿ ಕಸ ತುಂಬಿದೆಯೆಂದು ಮೂಗುಮುಚ್ಚಿಕೊಂಡು ನಿಂತರೆ ಗುಡಿಸುವವರು ಯಾರು ? ರಾಜ ನಟನಾಗುವ ಹಂಬಲದೊಂದಿಗೆ ಶುದ್ಧೀಕರಣಕ್ಕೆ ಕೈಹಾಕುತ್ತಾನೆ. ನೂರು ಕನಸುಗಳನ್ನು ಹೊಂದಿ ಪ್ರವಾಹದ ವಿರುದ್ಧ ಈಸಲು ಸಿದ್ಧವಾದ. ಬಿಸಿರಕ್ತ ಅವನದು. ಗೆಳೆಯರ ಗುಂಪಿನೊಂದಿಗೆ 'ಶಾಕುಂತಲ'ದ ತಾಲೀಮು ನಡೆಸುತ್ತಾನೆ. ನಾಟಕದ ಮಟ್ಟುಗಳಿಗೆ ಬೇಕಾದ ಸಂಗೀತಕ್ಕಾಗಿ ಗುರುಗಳನ್ನು ಹುಡುಕಿ, ಅವರ ಅನಾದರವನ್ನು ಸಹಿಸಿ ಅಭ್ಯಾಸ ನಡೆಸುತ್ತಾನೆ. ಆದೇನು ಹಾಡುತ್ತದೆ ಮಣ್ಣು ! ಎಂದು ಪ್ರತಿಯೊಬ್ಬರನ್ನೂ ಮೂದಲಿಸುವ ಪಂಡಿತರು, ನಾಟಕದ ದಿನ ಕಣ್ಣೊರೆಸಿಕೊಳ್ಳುವಂತೆ ಮಾಡುತ್ತಾನೆ. ಬುಳ್ಳಪ್ಪನ ಟ್ರಾನ್ಸಫರ ಸೀನರಿಯೊಂದಿಗೆ ಸ್ಪರ್ಧಿಸಿ, ನಾಟಕಪ್ರೇಮಿಗಳ ಮನಸನ್ನು ಸೂರೆಗೊಳ್ಳುತ್ತಾನೆ. ಶಿಷ್ಯನ ಅಭ್ಯುದಯವನ್ನು ಕಂಡ ಬ್ರೌನ್ ಸಾಹೇಬರು 'ಅದ್ಭುತ' ಎಂದು ರಕ್ಷೆಯಾಗುತ್ತಾರೆ.

ಎರಡು ದುರಂತಗಳು, ಪ್ರಿಯತಮೆಯಾದ ನೀಲಳು ತಂದೆಯ ಪ್ರೇಯಸಿಯೆಂದು ತಿಳಿದು ಉಂಟಾದ ಆಘಾತ, ಪ್ರಿಯಪತ್ನಿ ಸೀತೆಯ ಮರಣ ರಾಜನ ಜೀವನದ ದಿಕ್ಕನ್ನು ಬದಲಿಸಿದುವು. ನಾಟಕ ಕಲೆಯನ್ನುಳಿದು ಆತನಿಗೆ ಬೇರೆ ಬಂಧುಗಳಿಲ್ಲ. ಆಶೆ ಆಕಾಂಕ್ಷೆಗಳು ಉಳಿದಿಲ್ಲ. ಹಿಂದೆ ಬುಳ್ಳಪ್ಪನ ಆಹ್ವಾನಕ್ಕೆ ಡೋಲಾಯಮಾನ ಉತ್ತರ ನೀಡಿದ್ದ ರಾಜ, ಅವನದೇ ಕಂಪನಿಯನ್ನು ಸೇರುತ್ತಾನೆ. ಹೊಸಬನನ್ನು ಕಂಡ ಪಾತ್ರಧಾರಿಗಳು ಕಲಿತದ್ದಕ್ಕೇನು ಬರುತ್ತದೆ, ಎಂದು ಝೂದಲ್ಲಿ ಕಂಡ ಹೊಸ ಪ್ರಾಣಿಯ ತೆರನಾಗಿ ನಡೆದುಕೊಳ್ಳುತ್ತಾರೆ. ಸೇವಾಮನೋಭಾವದವನಲ್ಲದ ಈ ಹುಡುಗನನ್ನು ಕಂಡು. ಹಳೆಯ ಹುಲಿಗಳಿಗೆ ಬಹಳ ಸಿಟ್ಟು. ಪ್ರೋಜ ಆಕ್ಟರ. ತಾಯಿಗೆ ಕಾಯಿಲೆಯಾಗಿ ಊರಿಗೆ ಹೋದ. ರಾಜ. ಪಾತ್ರ ನಿರ್ವಹಿಸಿದ. ಆತನ ದಾರಿ ನಿರಾತಂಕವಾಯಿತು. ಥಿಯೇಟರ್ ಹೌಸಫುಲ್. ಯಜಮಾನರಿಗೆ ತುಂಬ ಖುಷಿಯಾಗಿ ರಾಜನೆಂದರೆ ಅಭಿಮಾನ. ರಾಜನಿಗೆ ಮಾತ್ರ ನಾಟಕದವರ ಹೀನ ಸ್ಥಿತಿಯನ್ನು ಕಂಡು ಕಸಿವಿಸಿ. ಬುಳ್ಳಪ್ಪ ತಮ್ಮ ಧನಿ, ನಟರೆನ್ನಿಸಿಕೊಂಡವರು ನಿಜ ಜೀವನದಲ್ಲಿಯೂ ದಾಸ್ಯಕ್ಕೆ ತಮ್ಮನ್ನು ಮಾರಿಕೊಂಡು ಜೀಯ. ಬುದ್ಧೀ. ಅಪ್ಪಣೆ ಎಂದು ಹೂಂಗುಟ್ಟುವ. ಕಾಲಲ್ಲಿ ಹೇಳಿದ ಕೆಲಸ ತಲೆಯಲ್ಲಿ ಹೊತ್ತು ಮಾಡುವ ನೈಚ್ಯಮನೋಭಾವದವರು. ರಾಜನಿಗೆ ಇದು ನುಂಗಲಾರದ ತುತ್ತು. ಕಲೆಕ್ಷನ್ ಮೇಲೆ ಕಣ್ಣು ಹಾಯಿಸಿ. ತೃಪ್ತಿಗೊಂಡ ಮಾಲಿಕ ಬುಳ್ಳಪ್ಪ, ರಾಜನ ಸುಧಾರಣೆಗೆ ಹೂಂ ಎನ್ನುತ್ತಾನೆ. ಪರಿಣಾಮ. ರಾಣಿಯ ಪಾತ್ರಕ್ಕೆ ಬುಳ್ಳಪ್ಪನ ಪ್ರೇಯಸಿ ನಂಜಿ ಬಂದಳು. 'ಸಂಭಾವನಾವಿರಹದ' ಪ್ರತೀಕವಾದ ಹೆಣ್ಣಿಗೆ ಶಿವರಾಮು

ರಿಟೈರಾದ ಕೀಳು. ಅಶ್ಲೀಲ ಹಾಸ್ಯ. ಸೆನ್ಸಾರಿನ ಕತ್ತರಿ ಪ್ರಯೋಗ ಪಡೆಯಿತು. ಗಂಟಲು ಹರಿದುಕೊಳ್ಳುವುದು ನಿಂತಿತು. ಕಂಪನಿ ಜನಪ್ರಿಯವಾಯಿತು.

ಕೂಲಿಕಾರನಿಗೆ ಕೂಲಿಕಾರ ಸೇರದಿರುವುದು ಸರ್ವಸಾಮಾನ್ಯ. ತನ್ನ 'ಇಮೇಜ್' ಇಲ್ಲದಾದುದಕ್ಕೆ ಬುಳ್ಳಪ್ಪನಿಗೆ ಅಂಜಿಕೆ. ಸಂದರ್ಭನೋಡಿ ಇತರರು ಬುಳ್ಳಪ್ಪನ ಕಿವಿ ಕಡಿಯುತ್ತಾರೆ; ರಾಜ-ಸಂಜೀಯ ಕತೆ ಕಟ್ಟುತ್ತಾರೆ. ತಂತ್ರ ಸಫಲವಾಯಿತು. ರಾಜ, ಸೇವಕನ ಸ್ಥಿತಿಗೆ ಇಳಿಯುತ್ತಾನೆ. ಸಹನೆಯ ಸೀಮಾರೇಖೆಯನ್ನು ಮುಟ್ಟಿದಾಗ ಕಂಪನಿಗೆ ವಿದಾಯ ಹೇಳುತ್ತಾನೆ. ಹಿಂದೆ ರಾಜನನ್ನು ತನ್ನ ಕಂಪನಿಗೆ ಕದಿಯಲು ಯತ್ನಿಸಿ ನಿರಾಶೆಗೊಂಡಿದ್ದ ಮುನಿವೆಂಕಟಪ್ಪನವರಿಗೆ ಆನಂದವಾಗುತ್ತದೆ. ನಟರಿಗೆ, ಯಜಮಾನ ಬುಳ್ಳಪ್ಪನವರಿಗೆ ಮತ್ಸರ ಬಳುವಳಿಯಾಗಿತ್ತು, ಬರಿಗೈಯಿಂದ ಮುನಿವೆಂಕಟಪ್ಪನವರ ಆಶ್ರಯವನ್ನು ಪಡೆದುದಾಯಿತು. ಎಲ್ಲರಿಗೂ ಪ್ರಿಯನಾಗಿ ಅವರನ್ನು ತಿದ್ದಲು ಶ್ರಮಿಸಿದ. ಒಳ್ಳೆಯ ನಟ ತ್ರಿಮೂರ್ತಪ್ಪನ ಎಲ್ಲ ಆಭಾಸಗಳನ್ನು ತೊಡೆದು ಹಾಕಿದ. ಕಂಠತುಂಬ ಕುಡಿದು ರಂಗಭೂಮಿಯ ಮೇಲೆ ಸಿಕ್ಕಾಪಟ್ಟೆ ಒದರಾಡುವುದು, ಭಕ್ತ ಕಬೀರನ ನಾಟಕದಲ್ಲಿ ಹರಿಶ್ಚಂದ್ರನ ಮಾತುಗಳು, ಸ್ಫೂರ್ತಿ ಬಂದರೆ ತಾಸೆರಡು ತಾಸು 'ಕರಿಹರಿಪ್ರಿಯ ರಾಗಾಲಾಪನೆ' ಇವೆಲ್ಲ ತ್ರಿಮೂರ್ತಪ್ಪನ ವಿಶೇಷಗಳು. ರಾಜನ ಜೊತೆಗೆ ಅಭಿನಯಿಸಲು ಪ್ರಾರಂಭವಾದ ಮೇಲೆ ಇವೆಲ್ಲವುಗಳಿಗೆ ಕಡಿವಾಣ ಬಿತ್ತು. ಭೋಜರಾಜ ಜಯಭೇರಿ ಹೊಡೆಯಿತು.

ನಮಾಜು ಮಾಡಲು ಹೋದರೆ ಮಸೂತಿ ಕೊರಳಿಗೆ ಬಿತ್ತು. ರಾಜ, ಕಂಪನಿಯನ್ನು ಸೇರಿದ ಕೆಲದಿನಗಳಲ್ಲಿಯೇ ಮಾಲಿಕ ಮುನಿವೆಂಕಟಪ್ಪನವರು. ಪ್ರಿಯತಮೆ ಪಾರ್ವತಿಯೊಂದಿಗೆ ಫರಾರಿಯಾದರು ! ಕಂಪನಿಯು ದಿವಾಳಿ ತೆಗೆದರೆ ನಟರ ಹೊಟ್ಟೆಯ ಮೇಲೆ ಕಾಲು ಕೊಟ್ಟಂತೆ. ರಾಜನ ಧೈರ್ಯದ ಪರೀಕ್ಷೆಯ ಸಮಯ ಬಂದಿತು. ವೆಂಕಣ್ಣನವರ ಸಹಾಯದಿಂದ ಕಂಪನಿಯ ಭಾರವನ್ನು ಹೊತ್ತುಕೊಂಡು ಗದಗು, ಬಾಗಿಲುಕೋಟೆ ತಿರುಗಿ ವಿಜಾಪುರಕ್ಕೆ ಕ್ಯಾಂಪ್ ಹಾಕುತ್ತಾನೆ. ರಾಜೇಶ್ವರಿಯ ಥಳಕನ್ನೇ ಸಹಿಸಿ ನಾಟಕಗಳು ಜನಪ್ರಿಯವಾದುವು. ಅನ್ವಾರಿ, ರಾಜನ ಜೊತೆಗೆ ಪಾರ್ಟ್ ಮಾಡುವುದನ್ನು ಪ್ರಾರಂಭಿಸಿದಳು.

ಒಂದು ಸಂಸ್ಥೆಯ ಜವಾಬ್ದಾರಿಯನ್ನು ಹೊತ್ತುಕೊಂಡ ರಾಜನ ಜೀವನದಲ್ಲಿ. ಮತ್ತೊಂದು ಅಧ್ಯಾಯ ಇಲ್ಲಿಂದ ಪ್ರಾರಂಭವಾಗುತ್ತದೆ. 'ಪ್ರೇತ ತಾಂಡವಭೂಮಿಯಾದ ರಂಗಭೂಮಿ ಜನತೆಗೆ ವಿಹಾರ ಕ್ಷೇತ್ರವಾಗುವಂತೆ. ವಿಕಾಸ ಭೂಮಿಯೂ ಆಗಬೇಕೆಂದು' ಆತನ ಹೃದಯದ ಹಂಬಲು. ಪ್ರದರ್ಶನಕ್ಕೆ ಹಾಕುತ್ತಿದ್ದ ನಾಟಕಗಳೆಲ್ಲ ಪೌರಾಣಿಕಗಳು. ಲೇಖಕನೆನಿಸಿಕೊಂಡವನು ತನಗೆ ಸರಿಯೆನಿಸದ ಸನ್ನಿವೇಶಗಳನ್ನು ಸೂಕ್ತ. ತರ್ಕಬದ್ಧ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾನೆ. ಹರಿಶ್ಚಂದ್ರ. ಪ್ರಹ್ಲಾದ ಚರಿತ್ರೆಗಳನ್ನು ಆಡುವಾಗ ಹರಿಶ್ಚಂದ್ರ. ಹೆಂಡತಿ–ಮಕ್ಕಳನ್ನು ಮಾರಲು ಸಿದ್ಧನಾಗಿದ್ದಾನೆ. ಆದರೆ ಸಂತೋಷದಿಂದಲ್ಲ. ಆತನ ಮನಸಿನ ಒಳತೋಟಿ. ಮಾನಸಿಕವಾಗಿ ನಡೆಯುವ

ಆಂದೋಲನವನ್ನು ನೋಡಬೇಕು. ಚಂದ್ರಮತಿ, ಲೋಹಿತಾಶ್ವರನ್ನು ಕೊಳ್ಳಲು ಯಾರೂ ಮುಂದೆ ಬರದಿದ್ದಾಗ ಆತನಿಗೆ ಹೆಂಡತಿ ಮಕ್ಕಳು ಹಿಂದಿರುಗಬಹುದೆಂಬ ಒಂದೇ ಸಮಾಧಾನ. ಆದರೆ ವಿಧಿಯ ಮೇಲೆ ಆತನ ಮೇಲುಗೈ ಹೇಗೆ? ಮನಸ್ಸು ಕಲ್ಲು ಮಾಡುತ್ತಾನೆ. ಸತ್ಯಕ್ಕೆ ಇಷ್ಟು ದೊಡ್ಡ ಬೆಲೆ ತೆರಬೇಕಾದುದು ಅನಿವಾರ್ಯವಾದರೂ ಮಮಕಾರ, ಕೆಲಸ ಮಾಡುತ್ತಲೇ ಇದೆ. 'ಪ್ರಹ್ಲಾದ ಚರಿತ್ರೆ'ಯನ್ನು ದುರಂತ ನಾಟಕಕ್ಕೆ ಅಳವಡಿಸುವ ಕಾದಂಬರಿಕಾರನ ಸೂಚನೆ ಸ್ತುತ್ಯ. ಹಿರಣ್ಯಕಶ್ಯಪು ಅಜೇಯ ಮಹಾಪರಾಕ್ರಮಿ. ತ್ರಿಲೋಕ ವೀರ. ಆದರೆ ತಾನೇ ದೇವರು: ತನ್ನ ಬಿಟ್ಟು ಬೇರೊಬ್ಬರಿಲ್ಲ ಎಂಬ ಅಜ್ಞಾನದ ಅಂಧಕಾರದಲ್ಲಿ ಮುಳುಗಿದ ಆತ್ಮ ವಿಸ್ಮೃತಿ ಅವನಿಗೆ. ಹರಿ-ಹರ ಭೇದ ಬೇಡ. ದೇವರು ಮನುಷ್ಯರ ಪ್ರೀತಿ ಗೌರವಗಳನ್ನು ಬೇಡುತ್ತಾನೆಯೇ ? ದೇಶಪಾಂಡೆಯು ಬರೆದ 'ಆರ್ಯ ಚಾಣಕ್ಯ'ವನ್ನು ಕುರಿತು "ದೇಶಪಾಂಡೆ ನೀವು ಬರೆದಿರುವಂತೆ ಚಂದ್ರಗುಪ್ತನನ್ನು ನಿಮಿತ್ತ ಮಾಡಿಕೊಂಡು ಚಾಣಕ್ಯ ರಾಜ್ಯವಾಳಿದಂತೆ ಭಾಸವಾಗುತ್ತದೆ. ಚಾಣಕ್ಯ ಅಷ್ಟೆಲ್ಲ ಸಾಹಸ ಮಾಡಿ, ತನ್ನ ತಪೋಭೂಮಿಯನ್ನು ಬಿಟ್ಟು ಬಂದುದು ರಾಜ್ಯವಾಳುವುದಕ್ಕಾಗಲೀ, ಬ್ರಾಹ್ಮಣ್ಯದ ಹಿರಿಮೆಯನ್ನು ಸ್ಥಾಪಿಸುವದಕ್ಕಾಗಲೀ ಅಲ್ಲ. ಅವನು ಕಲಿಯುಗದ ಪರಶುರಾಮನಲ್ಲ. ದೇಶವನ್ನು ರಕ್ಷಿಸಲು ಬಂದ ಅವತಾರ ಪುರುಷ" ಎಂದು ಹೇಳುವ ವಿಮರ್ಶನಪ್ರಜ್ಞೆ. ಔಚಿತ್ಯಪೂರ್ಣವಾದುದು. ಚಾಪಲ್ಯಕ್ಕೆ ಸಿಲುಕಿ ಬರೆಯುವ ಅಂದಿನ ನಾಟಕಸಾಹಿತಿಗಳ ಮೇಲೂ ಕಾದಂಬರಿಕಾರನ ಸೂಕ್ಷ್ಮ ಅವಲೋಕನ ಕಂಡುಬರುತ್ತದೆ.

'ಸಾಹಿತ್ಯಕೃತಿ ಹೆಚ್ಚೆಂದರೆ ಕಲಾವಿದನ ಕನಸು' ಎಂದು ಹೇಳುವುದುಂಟು. ಕೃಷ್ಣರಾಯರ ಕಾದಂಬರಿ, ಕಾವ್ಯಪ್ರವಾಹವೂ ಹೌದು. ನಮ್ಮ ರಂಗಭೂಮಿಯ ನಾಟಕಶಾಲೆಗಳು ಇಂದಿಗೂ ಸಾಧಿಸಲಾರದುದನ್ನು ಅವರ ಕಣ್ಣು, ಬಲು ಹಿಂದೆಯೇ ಕಂಡುಕೊಂಡಿತು. ಕನ್ನಡ ಶ್ರೇಷ್ಠಕಾವ್ಯಗಳನ್ನು ನಾಟಕಕ್ಕೆ ಅಳವಡಿಸಿ ಅವುಗಳನ್ನು ಚಾಪೆಯ ಪ್ರಭುಗಳಿಗೆ ಪ್ರಿಯವಾಗಿಸಬೇಕೆಂಬ ಉತ್ಕಟ ಇಚ್ಛೆ ಅವರದು. ಕುಮಾರಸಂಭವ, ಗಿರಿಜಾಕಲ್ಯಾಣಗಳನ್ನು ಅಭ್ಯಸಿಸಿ. ಶಿವ-ಪಾರ್ವತಿ ಗೀತ ನಾಟಕವನ್ನು: ಪ್ರೇಕ್ಷಕರ ಅಭಿರುಚಿಯನ್ನು ಮೇಲಕ್ಕೆತ್ತಿ ಅವರನ್ನು 'ಸಹೃದಯರನ್ನಾಗಿ'ಸಲು ಸಹಾಯಕವಾಗುವಂತೆ ರಾಧಾ-ಕೃಷ್ಣ ನೃತ್ಯನಾಟಕಗಳನ್ನು ರಾಜ ಅಳವಡಿಸುತ್ತಾನೆ. ವ್ಯಾಪಾರೀ ದೃಷ್ಟಿಯಿಂದ ದುಡ್ಡು ಬರಲಿಲ್ಲ. ಅದು ಸಾಮಾಜಿಕರ ಬುದ್ಧಿಯ ಬರಗಾಲವನ್ನು ತೋರಿಸುತ್ತದೆ. ತನಗೆ ಹಾನಿಯಾದರೂ ಪ್ರೇಕ್ಷಕರಿಗೆ ಲಾಭವಾದರೆ ಸಾಕು ಎಂಬ ಛಲ ಅವನದು. ಕನ್ನಡದ ಅಪೂರ್ವ ಕಾವ್ಯವಾದ ಭರತೇಶ ವೈಭವವನ್ನು ಅದರ ಭವ್ಯತೆ, ಶೃಂಗಾರ, ಅಲ್ಲಿಯೇ ಅದರ ಮೇಲ್ಮಟ್ಟದ ವೈರಾಗ್ಯಸ್ಥಿತಿ, ವೈರಾಗ್ಯಗಳನ್ನು ರಂಗಭೂಮಿಯ ಮೇಲೆ ತರುವುದು ನಿಜವಾಗಿ ಮಹಾತ್ವಾಕಾಂಕ್ಷೆಯೂ ಹೌದು. ನಮ್ಮಿಂದಲೇ ಪ್ರೇರಣೆ ಪಡೆದರೂ ಜೆಟ್ ವೇಗದಲ್ಲಿ ಓಡಿ. ನಮ್ಮಿಂದ ಎತ್ತರ ಮಟ್ಟದಲ್ಲಿರುವ ಮರಾಠಿ ರಂಗಭೂಮಿಯ ಅತಿರಥರೂ 'ಬಾಹುಬಲಿ' ಯನ್ನು ಅದರ ರಂಗ ಪರಿಕರ

ಗಳನ್ನು, ಅದ್ಭುತ ಅಭಿನಯವನ್ನು ಮನಸಾರೆ ಒಪ್ಪಿದುದು ರಾಜನ ಸಾಧನೆಯಲ್ಲಿ ಒಂದು ಮೈಲಿಗಲ್ಲು. 'ಮಹಾಭಾರತ'ದಲ್ಲಿ ಕರ್ಣನಿಗೇ ನಾಯಕನ ಪಟ್ಟ. ರಣಾಂಗಣದಲ್ಲಿ ಕರ್ಣನ ಕೆಚ್ಚು, ಧನಿಗಾಗಿ ದೇಹವನ್ನು ತೆತ್ತುದುದನ್ನು ನೋಡಿ :

ಕರ್ಣ : ಭಗವನ್, ಕುರುಕ್ಷೇತ್ರಯುದ್ಧ ನಿನಗೂ ನನಗೂ ನಡೆದ ಯುದ್ಧ. ನಿನ್ನನ್ನು ನಂಬಿ ಪಾರ್ಥ ಜಯಶಾಲಿಯಾದ. ನನ್ನನ್ನು ನಂಬಿ ಸುಯೋಧನ ಕೆಟ್ಟ.

ಕೃಷ್ಣ : ಕರ್ಣಾ. ಇದು ವ್ಯಕ್ತಿಗಳ ಸಮರವಲ್ಲ. ನಿರಂಕುಶತೆಗೂ ಸಾಂಕುಶತೆಗೂ ಯುದ್ಧವಾಯಿತು. ಸಾಂಕುಶತೆ ನಿರಂಕುಶತೆಯನ್ನು ಸೋಲಿಸಿತು.

ಕರ್ಣ : ನೀನು ಜನತಾ ಜನಾರ್ಧನ. ನಿನ್ನ ವಿಜಯದಿಂದ ಲೋಕಕಲ್ಯಾಣವಾಗುತ್ತದೆ.

ಕೃಷ್ಣ : ನನ್ನ ಮಾತು ಕೇಳಲಿಲ್ಲ ಕರ್ಣಾ ನೀನು ....

ಕರ್ಣ : ಈಗಲೂ ಕೇಳುವುದಿಲ್ಲ ಪ್ರಭು. ನನ್ನ ಮನ ಕೃಷ್ಣಾರ್ಪಣ. ನನ್ನ ತನು ಪ್ರಭುಚರಣಾರ್ಪಣ.

ಕೃಷ್ಣನ ತೊಡೆಯ ಮೇಲೆ ಪ್ರಾಣಬಿಟ್ಟ ಕರ್ಣನನ್ನು "ಎಷ್ಟು ಬಳಲಿದೆ ಕಂದಾ" ಎಂದು ವಾತ್ಸಲ್ಯದಿಂದ ಸನ್ನಿಧಿಯನ್ನು ಕರುಣಿಸುತ್ತಾನೆ. ನಾಟಕ ಮುಕ್ತಾಯದ ದೃಶ್ಯಕ್ಕೆ ನಮ್ಮ ಕಣ್ಣುಗಳು ಮಾತ್ರ ಕಾದಂಬರಿಯ ಮೇಲೆ. ಮನಸ್ಸು ರಂಗಭೂಮಿಯಲ್ಲಿ ತಲ್ಲೀನ. ಭಾರತ ಕಥೆಯನ್ನು ಸುಂದರವಾಗಿ ರೂಪ ಪರಿವರ್ತನೆಗೊಳಿಸಿದ ರಾಯರನ್ನು He is ill read rather than well read ಎನ್ನಲು ಮನಸ್ಸನ್ನು ಹೇಗೆ ಒಪ್ಪಿಸುವುದು ?

ಮಾನವನ ದೌರ್ಬಲ್ಯ ದುರ್ದಮ್ಯವಾದುದು. ಅದರ ಸೆಳೆತಕ್ಕೆ ಕಾದಂಬರಿಯ ಕೇಂದ್ರವ್ಯಕ್ತಿ ರಾಜ. ಅನೇಕಸಲ ಸಿಲುಕಿಕೊಳ್ಳುತ್ತಾನೆ. ಆತನ ಅಧಃಪತನವೇ ಆಯಿತೇನೋ ಎನ್ನುವಾಗಲೆ ಆ ಕೊಳಚೆಯಿಂದ ಹೊರಕ್ಕೆ ಧಾವಿಸುತ್ತಾನೆ. ರಾಜನ ಪಾತ್ರವನ್ನು ವಿಮರ್ಶಿಸುತ್ತ ಶ್ರೀ ಕುರ್ತಕೋಟಿಯವರು ಕಾದಂಬರಿಯ ರಾಜ, ಪುರಾಣ ಕಾಲದ ರಾಜನಂತೆ ಬಹುಪತ್ನಿತ್ವ ರೂಢಿಸಿಕೊಂಡಿದ್ದಾನೆ. ಅನೀತಿ ಮಾಡಲು ಲೈಸನ್ಸ್ ಪಡೆದಿದ್ದಾನೆ–ಮುಂತಾಗಿ ಬರೆಯುತ್ತಾರೆ.

ವಿಲಾಸಿ. ವೃತ್ತಿನಾಟಕ ಕಂಪನಿಗಳನ್ನು ಚೆನ್ನಾಗಿ ಅರಿತವರು. ಅವರ ಜೀವನವನ್ನು ಸಮೀಪದಿಂದ ಕಂಡವರು. ಕಾದಂಬರಿಕಾರ ಎಂತಹ ವಾಸ್ತವ ಚಿತ್ರವನ್ನು ಕೊಟ್ಟಿದ್ದಾನೆ ಎಂಬುದನ್ನು ಕಂಡುಕೊಳ್ಳುತ್ತಿದ್ದರು. ರಾಜನನ್ನು ಭರತೇಶನ ಮಾಡೆಲ್ ಮಾಡಲು ಯತ್ನಿಸಿದರೂ ಅಲ್ಲಿ ಕಂಡುಬರುವುದು ಕೃತ್ರಿಮತೆ. ಆದರೆ ಕುರ್ತಕೋಟಿಯವರು ಹೇಳುವಂತೆ ರಾಜ. ಅವರನ್ನು ತಾನಾಗಿಯೇ ತನ್ನ ಅಂತಃಪುರಕ್ಕೆ ಸೇರಿಸಬಯಸಿದವನಲ್ಲ. ಸೀತಾ, ಮೋಹನ, ಮಾಮೂಲಿ ರೀತಿಯ ಆಕಾಂಕ್ಷೆಯುಳ್ಳ ಅನ್ನಾರಿ. ಇವರೆಲ್ಲ

ಕಲಾವಿದೆಯರು. ಅದೊಂದು ಕಲಾವಿದರ ಮೇಳವೇ ವಿನಃ ಕೆಂಪ್ರದೀಪದ ಕೆಳಗಿನ ಹೆಣ್ಣುಗಳ ಚೆಲ್ಲಾಟವಲ್ಲ.

ರಂಗಭೂಮಿ ಒಮ್ಮೊಮ್ಮೆ ರುದ್ರಭೂಮಿಯಾಗಿ. ರಾಡಿ-ರೊಚ್ಚೆಗಳಿಂದ ತುಂಬಿ ಹೋಗುತ್ತದೆ. ಒಂದು ಮನೆಯ ಅಣ್ಣ-ತಮ್ಮಂದಿರು ಕೂಡಿ ಬಾಳುವಾಗ ಮತ್ಸರ, ತಲೆ ಎತ್ತುತ್ತದೆ. ಬುಳ್ಳಪ್ಪನ ಕಂಪನಿಯಲ್ಲಿ ರಾಜನಿಗೆ. ನಾಟಕದಲ್ಲಿ ಆದ ನಿಜವಾದ ಗದಾ ಪ್ರಹಾರ. ನಂಜಮ್ಮನ ಸಂಬಂಧದ ಆರೋಪ, ರಾಜನ ಕಂಪನಿ ಬೆಂಗಳೂರಿಗೆ ಬಂದಾಗ ಸಾಹುಕಾರ್ ಮುರಿಗೆಪ್ಪ ಹಂತಹಂತವಾಗಿ ರಾಜನ ಉದಾರ ಮನೋಭಾವವನ್ನು ದುರುಪಯೋಗಪಡಿಸಿಕೊಂಡುದು; ಕಂಪನಿಯ ನಟಿಯಾದ ಸರೋಜಳನ್ನು ಹಾರಿಸಿಕೊಂಡು ಹೋಗಿ ಉಪಪತ್ನಿಯನ್ನಾಗಿಸಿಕೊಳ್ಳುವುದು. ಸಿನೇಮಾದಲ್ಲಿ ನಟಿಸುವ ಆಸೆಗಾಗಿ ಚೆಟ್ಟಿಯಾರರೊಡನೆ ಓಡಿಹೋದ ಗಿರಿ. ಅನ್ನತಿಂದ ನಾಡಿನಲ್ಲೇ ದ್ರೋಹ ಬಗೆಯಲು ಯತ್ನಿಸುವ ಅಪ್ಪೆಯ ಅನೀತಿ ಈ ಎಲ್ಲ ಓರೆ-ಕೋರೆಗಳನ್ನು ವಾಸ್ತವವಾಗಿ ಬರೆದವರು ಕೃಷ್ಣರಾಯರು. ಕಂಪನಿಗಳಿಗೆ ತಗುಲಿದ ದೊಡ್ಡರೋಗವೆಂದರೆ, ಅಲ್ಲಿರುವ ನಟನಟಿಯರ ಚಂಚಲವೃತ್ತಿ. ಒಂದು ಸುಂದರ ಮುಂಜಾವಿನಲ್ಲಿ ರಾಮ-ಸೀತೆ ಇಬ್ಬರೂ ಕಂಪನಿಯಿಂದ ನಾಪತ್ತೆ! ಇನ್ನೂ ಒಂದು ಸಂಗತಿ ಇಲ್ಲಿ ಅಡಕವಾಗಿದೆ. ಫ್ರಂಟ್ ಸೀಟಿನಲ್ಲಿಯ ಘಟಿಂಗ ಪ್ರಭುಗಳಿಗೆ ಯಾವಾಗಲೂ 'ಬುಕ್' ಮಾಡುವ ಆಲೋಚನೆ, ಆಪ್ತಾಲೋಚನೆಗಳೇ ಮುಖ್ಯ. ಹಣ, ಬಡ ನಟಿಯರ ಬಾಯಿ ತೆರೆಸುತ್ತದೆ.

"ಯಾವ ನಾಡೂ ಒಬ್ಬನ ಹುಟ್ಟಿದ ಊರಿನ ಸೊಗಸನ್ನು ತಾಳಲಾರದು." ಅಭಿನಯದ ಪರಾಕಾಷ್ಠೆಯಲ್ಲಿ ನಿಂತು. ಜಾಪೆ, ಸೋಫಾ ದೊರೆಗಳಿಂದಲೂ ಮೆಚ್ಚುಗೆ ಪಡೆದು, ಆಂಧ್ರ. ಪ್ರಗತಿಪರ ಮಹಾರಾಷ್ಟ್ರಗಳಲ್ಲಿ ಹಾರ, ತುರಾಯಿ. ಮೆಡಲುಗಳನ್ನು ಗೆದ್ದು, ಕಲಾಪ್ರಿಯರ ಕಣ್ಮಣಿಯಾಗಿ 'ನಟಸಾರ್ವಭೌಮನೆಂಬ ಬಿರುದನ್ನು ಗಳಿಸಿ ಬೆಂಗಳೂರಿಗೆ ಬಂದ ರಾಜ, ಇದಕ್ಕೊಂದು ಉದಾಹರಣೆಯಾಗುತ್ತಾನೆ.' ಯಾವ ರಂಗಭೂಮಿಯ ಮೇಲೆ ಆತ ಜನಮನವನ್ನೆಲ್ಲ ಸೂರೆಗೊಂಡಿದ್ದನೋ. ತನ್ನ ಧ್ಯೇಯಕ್ಕಾಗಿ ಸ್ಫೂರ್ತಿಪಡೆದಿದ್ದನೋ ಅದೇ ಅವನ ಮಾರಣಹೋಮಭೂಮಿಯಾಯಿತು. ಬಾಯ್ದುಂಬುಲಕ್ಕೆ ಹೊರಗಿನಿಂದ ಬಂದ ತೆಲುಗು. ತಮಿಳು ನಾಟಕದವರನ್ನು ಇಂದ್ರಚಂದ್ರರೆಂದು ಹೊಗಳಿ ಬಳೆಯುವ 'ಭರತಭೂಮಿಯ' ಸಂಪಾದಕ ಭೀಮಯ್ಯ, ಪತ್ರಿಕೆಯ ಹೆಸರಿಗೇ ಅಪಚಾರಮಾಡುತ್ತಾನೆ. ಕಲೆಯ ಹಾದರ ಮಾಡುವ ಅನ್ಯರನ್ನು ಹೊಗಳಿ. ಅದ್ವಿತೀಯ ಕಲಾವಿದನನ್ನು ಪಿಟಿಸಾರ್ವಭೌಮನೆಂದು ತೆಗಳಿ. ಆತನ ನಾಟಕಗಳ ಟೀಕೆಯನ್ನು ಮಾಡಿ ಲೆಕ್ಕಣಿಕೆಯ 'ಚಟ' ಕಳೆದುಕೊಳ್ಳುತ್ತಾನೆ. ತಾಯಿನಾಡಿನಲ್ಲೇ ಆದ ಅನ್ಯಾಯವನ್ನು ಎದುರಿಸಿ ಗಾಯಗೊಂಡ ರಾಜ, ಚೇತರಿಸಿಕೊಂಡೊಡನೆ ಸವಾಲನ್ನು ಎದುರಿಸುತ್ತಾನೆ. ಛಲದಿಂದ ಮತ್ತೊಮ್ಮೆ ತನ್ನ ಮಾನವನ್ನು. ವ್ಯಕ್ತಿತ್ವವನ್ನು, ಕಲೆಯನ್ನು ಒರೆಗೆ ಹಚ್ಚುತ್ತಾನೆ. ಆತನು ನಂಬಿರುವ ಕಲಾದೇವತೆ ಮಾತ್ರ

ಸಮಾರಕ್ಷೆಯಾಗಿದ್ದಾಳೆ. ಸ್ಪರ್ಧೆಗಳೊಡನೆ ಸೆಣಸಾಟಕ್ಕಿಳಿದು 'ಶಾಕುಂತಲ'ವನ್ನು, ದುಷ್ಯಂತ 'ಬಿಟ್ಟನೇ' ಎನ್ನುವಂತೆ ಅಭಿನಯಿಸಿ ಸಾಮಾಜಿಕರಿಂದ 'ಭಲೇ' ಎನಿಸಿ ಕೊಳ್ಳುತ್ತಾನೆ. ವೈರಿಗಳ ಕಣ್ಣಲ್ಲಿಯೂ ನೀರು! ಆರಾಧನೆಯನ್ನು ಎಲ್ಲಿಂದ ಪ್ರಾರಂಭಿಸಿದ್ದನೋ ಅಲ್ಲಿಯೇ ಅವನ ನುಡಿಲಕ್ಷ್ಮಿಯು ಚಿರಂತನ ಅಭ್ಯುದಯ ಪಡೆಯುತ್ತಾನೆ. ಒಬ್ಬ ಕಲಾವಿದನಾಗಿ ಏನೆಲ್ಲವನ್ನು ಸಾಧಿಸಬೇಕಾಗಿತ್ತೋ? ನಟನೆ, ನಾಟಕ, ರಂಗಸಜ್ಜಿಕೆ, ವೈಚಿತ್ರ್ಯ, ರುಚಿಗಳ ಬಗೆಗೆ ಅತನು ಕನಸು ಕಂಡಿದ್ದನೋ ಅದು ಅವನದಾಯಿತು.

ದೃಶ್ಯಕಾವ್ಯ, ಎಲ್ಲರಿಗೂ ಪ್ರಿಯವಾದ ಸಂಗೀತದ ಸ್ವರದ ವಿವಿಧ ಸ್ತರಗಳಲ್ಲಿ ವಿಲಾಸಿ ನಾಟಕಗಳು ಬಹುಸಂಖ್ಯಾಕರಿಗೆ ಮನರಂಜನೆಯನ್ನು ನಿತ್ಯವಾಗಿ ಒದಗಿಸುತ್ತವೆ. ಉತ್ತರಕರ್ನಾಟಕದಲ್ಲಂತೂ ನಾಯಿಯ ಕೊಡೆಯ ಹಾಗೆ ಹುಟ್ಟುತ್ತವೆ, ಸಾಯುತ್ತವೆ. ಅವುಗಳ ಬೆಳವಣಿಗೆಯ ದೃಷ್ಟಿಯಿಂದ ಯಾವ ಮಾತನ್ನೂ ಹೇಳುವಂತಿಲ್ಲ. ಇದ್ದ ಕಂಪನಿಗಳಿಗೆ ಹಾಗೂ ಹೀಗೂ ಕಾಲ ನೂಕುವ ಸ್ಥಿತಿ. ಅದಕ್ಕೆ ಕಾರಣ, ಬೆಳೆಯುತ್ತಿರುವ ಜಗತ್ತಿನೊಡನೆ ತಮ್ಮ ದೃಷ್ಟಿಕೋನವನ್ನು ಬದಲಾಯಿಸದೆ ಇರುವುದು. ಸಿನೇಮಾ ಪ್ರಿಯರಾದ ಪ್ರೇಕ್ಷಕ ಮಹಾಶಯರು ನಾಟಕಗಳಿಂದ ಅತಿಯಾಗಿ ಅಪೇಕ್ಷಿಸುವುದು, ಮತ್ತೊಂದು 'ಸಪ್ಪರಯ' ಎನ್ನುವ ಪದ. ಅಂದರೆ ಕಥೆಗೆ ಸಂವಾದಿಯಾಗಿರುವವ ಎನ್ನುವುದನ್ನು ಬಳಸುವ ಹಾಗಿಲ್ಲ. ದುಡ್ಡು ಕೊಟ್ಟವನು ಯಾವನೇ ಬೇಕಾದವರೂ ಪ್ರೇಕ್ಷಕನು. ಪ್ರೇಕ್ಷಕರು ಇಂದು ಹಾಡು, ಡಾನ್ಸ್ ನಡೆದಾಗ ಚುರಮುರಿ ತೂರಿದಿದ್ದರೂ ಶಿಳ್ಳು, ಕೇಕೆಗಳಿಂದ ತೃಪ್ತಿಪಡುತ್ತಾರೆ; ವಿರೋಧ ಒದೆಯುತ್ತಾರೆ.

ಬಹುತೇಕ ಕಂಪನಿಗಳಿಗೆ ಬುಕ್ಕಿಷ್ಟನ ಸ್ಟ್ಯಾಂಡರ್ಡ್ ದಾಟಿಯೇ ಇಲ್ಲ. ನಾಟಕದ ವಸ್ತು, ಸಾಮಾಜಿಕವಾಗಿ ಪರಿವರ್ತನೆಗೊಂಡಿದೆ ಅಷ್ಟೆ. ಸಿನೇಮಾ ಚಾಲಿನ ಹಾಡುಗಳನ್ನು ಸೇರಿಸಿ, ಕಥೆಬರೆಯನ್ನು ಕುಗ್ಗಿಸಿ, ಹಾಸ್ಯಕ್ಕಾಗಿ ಕಿತಘ್ರರ ಚಿನ್ನವನ್ನಾ ಮುಂದೆ ರಾಯಣ್ಣ ಮುಂತಾದವರ ಸೆರೆ ಬಾಟಲುಗಳ ಆಣಕುಯುದ್ಧ ನಡೆಸುತ್ತಾರೆ. ಜೊತೆಗೆ ಸುಖಾಂತದ ಮಂಗಳದ ಸವಿಯನ್ನು ತೋರಿಸಿ, ಮಂಗಳೆ ಅರೆಯುತ್ತಾರೆ. ಹಾಡಿದ್ದೇ ಹಾಡೋ ಕಿಸಬಾಯಿದಾಸ ಎಂದರೆ, ನೋಡಿದ್ದನ್ನೇ ಮತ್ತೆ ಯಾರು ನೋಡುತ್ತಾರೆ? ಪರಿಣಾಮ, ಅವು ಪ್ರೋತ್ಸಾಹವನ್ನು ಕಳೆದುಕೊಳ್ಳುತ್ತವೆ. ಘನ ಸರಕಾರ ಇಂತಹ ನಾಟಕ ಸಂಸ್ಥೆಗಳನ್ನು ಯಾವ ರೀತಿಯಾಗಿ ನೋಡುತ್ತದೆ. ಸಹಾಯ ನೀಡುತ್ತದೆ ಎಂದರೆ, ಅದಕ್ಕೆ ಆಶಾದಾಯಕ ಉತ್ತರವಿಲ್ಲ. ಅಕಾಡಮಿ ನಾಟಿಯಿಂದ, ಛಾ ಡಿಲಿ ಸ್ಪ್ರಿಂಗ್ ಅಥವಾ ಪ್ರಚಾರದ ಮತ್ತೊಂತಹದೋ ನಾಟಕ ಆಡಿಸಿದರೆ ಅದು ತನ್ನ ಕರ್ತವ್ಯ ಪೂರೈಸಿತು. ಹೀಗೆ ರಿಕೆಟ್ಸ್ ರೋಗಕ್ಕೆ ಬುತ್ತಾದ ಶಿಶು, ರಂಗಭೂಮಿ. ಹೊಸತಾಗಿ ಬಂದ ಅನುಭವ ನಾಟಕಗಳು. ಸುಶಿಕ್ಷಿತ ಪ್ರೇಕ್ಷಕರಿಗೂ ತಿಳಿಯುವಂತಹ ಪಾತ್ರಗಳು. ಶ್ರೀರಂಗ, ಕಾರಂತ್, ಕಾರ್ನಾಡ್, ದಹಿಂದ್ರ, ಕ್ಷೀರಸ್ವಾದ ಕಲಾವಿದರು ನಮ್ಮಲ್ಲಿ ನಾಟಕ ಪ್ರಪಂಚಕ್ಕೆ ಹೊಸ ಅಕೆಯನ್ನು, ಭರವಸೆಯನ್ನು ಹುಟ್ಟಿಸಿದವರು.

ಭಾಷಾವಿಜ್ಞಾನದ ಪ್ರಾಮುಖ್ಯತೆ

ಜೆ. ರಾಮಸ್ವಾಮಿ

"ಜ್ಞಾನದಲ್ಲಿ, ಆಧ್ಯಾತ್ಮದಲ್ಲಿ ಶ್ರೇಷ್ಠವಾದದ್ದು, ಈ ಭರತಖಂಡ" ಎಂದು ಹಲವು ಜ್ಞಾನಿಗಳೂ, ಕವಿಗಳೂ ನುಡಿದುದು ಬರೀ ಹೊಗಳಿಕೆಯೇ ? ಅಥವಾ ಆಳವಾದ ಅರ್ಥವೇನಾದರೂ ಅದರಲ್ಲಿ ಹುದುಗಿದೆಯೇ ? ಭಾರತದೇಶದ ಗತಿಸಿದ ಇತಿಹಾಸದ ಪುಟಗಳನ್ನು ತಿರುವಿಹಾಕಿದಾಗ, ಅವರು ಹಾಗೆ ನುಡಿದದ್ದರಲ್ಲಿ ಅರ್ಥವಿದೆಯೆಂಬುದಕ್ಕೆ ಹಲವು ಆಧಾರಗಳು ನಮಗೆ ಸಿಗುತ್ತವೆ. ಜ್ಞಾನಕ್ಷೇತ್ರದಲ್ಲಿ ಭಾರತೀಯರ ಕ್ರಿಯಾಶಕ್ತಿ, ಮಾನವಲೋಕದ ಬೇರೆ ಯಾವುದೇ ಭಾಗದವರೊಡನೆ ಸ್ಪರ್ಧಿಸುವಷ್ಟು ಬೆಳೆದಿತ್ತೆಂಬುದಕ್ಕೆ ಸಾಕ್ಷಿಯಾಗಿ ಎಷ್ಟೋ ಮುನಿವರ್ಯರೂ, ಪಂಡಿತರೂ, ಜ್ಞಾನಿಗಳೂ, ಸಾಹಿತಿಗಳೂ ಬಾಳಿ ಮೆರೆದುದನ್ನು ಇತಿಹಾಸದ ಹಾಳೆಗಳಲ್ಲಿ ಓದಿ ತಿಳಿದುಕೊಳ್ಳುತ್ತೇವೆ. ಅವರ ಸೃಷ್ಟಿಕಾರ್ಯಗಳಲ್ಲಿ ಕೆಲವನ್ನು, ಗ್ರಂಥರೂಪದಿಂದಲೂ ಕಂಡು ನಲಿಯುತ್ತೇವೆ. ಜಗತ್ತಿನಲ್ಲಿಯೇ ಅತಿಶ್ರೇಷ್ಠ ಜ್ಞಾನವನ್ನೂ ಕ್ರಿಯಾಶಕ್ತಿಯನ್ನೂ ಹೊಂದಿದ್ದ ಭಾರತೀಯ ಇತಿಹಾಸದ ಮಧ್ಯಕಾಲಕ್ಕೆ ಅಂಧಕಾರ ಕವಿದುದೇಕೆ? ಪರಕೀಯರ ಆಡಳಿತ, ಅದನ್ನನುಸರಿಸಿ ರಾಜಕೀಯ ದಾಸ್ಯತೆ, ಆರ್ಥಿಕ ಅವಲಂಬನ, ಭಾಷಾದಾಸ್ಯತೆ, ಜ್ಞಾನದಾಸ್ಯತೆ ಹೀಗೆ ಕಾರಣಗಳು ಇನ್ನೆಷ್ಟೋ! ಆಡಳಿತ ಬದಲಾಯಿತು. ರಾಜಕೀಯ ದಾಸ್ಯತೆ (ಒಂದಷ್ಟು) ನೀಗಿತು. ಆದರೆ, ಭಾರತೀಯರ ರಕ್ತದೊಡನೆ, ಚಿಂತನೆಯೊಡನೆ, ಅನುದಿನದ ಬಾಳಿನೊಡನೆ ಬೆರೆತುಹೋದ ದಾಸ್ಯಮನೋಭಾವ ನೀಗಲಿಲ್ಲ; ನೀಗಿಸುವುದೂ ಅಷ್ಟು ಸುಲಭವಾಗಿಲ್ಲ. ಜ್ಞಾನದಾಸ್ಯತೆ, ಬುದ್ಧಿಭ್ರಮಣೆ ನೀಗದಲ್ಲದೆ ಬೇರೆಯವು ನೀಗುವುದು ಸುಲಭ ಸಾಧ್ಯವಲ್ಲ. ಭಾರತೀಯರ ಬುದ್ಧಿಭ್ರಮಣಾಸ್ಥಿತಿಗೆ ಮೂಲವಾದ ಹಲವು ಕಾರಣಗಳಲ್ಲಿ ಭಾಷೆಯೂ ಒಂದು. ಈ ವಿಧದಲ್ಲಿ ಭಾಷೆಯ ಪಾತ್ರ ಹಿರಿಯದನ್ನೂ ಭಾಷೆಯಲ್ಲಿ ಚಿಂತನೆಗೆ ದಾರಿ ಹಾಗೂ ಬೆಳವಣಿಗೆ ಕಾಣಲು ಅವಕಾಶಗಳ ಬಗ್ಗೆಯೂ ವಿವರವಾಗಿ ತಿಳಿದುಕೊಳ್ಳಬೇಕಾಗಿದೆ.

ಸಮಾಜದಲ್ಲಿ ಭಾಷೆಯ ಪಾತ್ರ :

ಮಾನವನ ಭಾವನೆಗಳೊಳಗೆ ಮೊದಲನೆಯದು, ಜ್ಞಾನ, ವ್ಯಕ್ತಿಯೊಬ್ಬನ ಭಾವನೆ, ಸಾಮಾಜಿಕ ಭಾವನೆಯಾಗಿ ಬದಲಾಗುವುದಕ್ಕೆ ಮೂಲಭೂತ ಕಾರಣಗಳೊಳಗೆ ಭಾಷೆಗೆ, ಶ್ರೇಷ್ಠಸ್ಥಾನವಿದೆ. ಸಾಮಾಜಿಕ ಒಕ್ಕಟ್ಟಿಗೂ ಸಹಕರಿಸುವ ಒಂದು ಅಸಿ

ಈ ಲೇಖನ ಕೆ. ರಾಮಸ್ವಾಮಿಯವರ ತಮಿಳು ಲೇಖನವೊಂದನ್ನು ಆಧರಿಸಿ ಬರೆದದ್ದು. ಅನುಮತಿಯನ್ನು ಕೊಟ್ಟ ಶ್ರೀ ಕೆ. ರಾಮಸ್ವಾಮಿ ಅವರಿಗೆ ಪ್ರಸ್ತುತ ಲೇಖಕರು ಋಣಿಯಾಗಿದ್ದಾರೆ.

ವಾರ್ಯ ಉಪಕರಣ, ಭಾಷೆಯೊಂದರೂ ಅಧಿಕವಲ್ಲ. ಮಾನವನ ಜ್ಞಾನಪಿಪಾಸೆಯಿಂದ ರೂಪಿತವಾದ ಹಲವು ಶಾಸ್ತ್ರಶಾಖೆಗಳೊಳಗೆ ಭಾಷೆ, ಒಂದು ಮುಖ್ಯ ಅಂಗ. ಭಾಷೆಯಿಲ್ಲದಿದ್ದರೆ ಸಮಾಜದಲ್ಲಿ, ವ್ಯಕ್ತಿಗಳ ಅಂತರದಲ್ಲಿ ಬಾಂಧವ್ಯವೇರ್ಪಡಲು ಸಾಧ್ಯವಾಗುತ್ತಿರಲಿಲ್ಲ. ಕಾಲದಿಂದಲೂ ದೂರದಿಂದಲೂಬೇರ್ಪಟ್ಟ ಮಾನವರ ಅಂತರದಲ್ಲಿ ಜ್ಞಾನದ ದಾರಿ, ಸಾಮಾಜಿಕ ಬಾಂಧವ್ಯವನ್ನು ರೂಪಿಸಿ, ಮಾನವರು ಒಂದಾಗುವುದಕ್ಕೆ ಅತ್ಯಾವಶ್ಯಕವಾದುದು ಭಾಷೆ. ಭಾಷೆಯೇ ಎಲ್ಲಾ ಎಂದು ನಾವು ಹೇಳಲು ಸಾಧ್ಯವಿಲ್ಲ; ಆದರೆ ಭಾಷೆಯ ಮುಖ್ಯತ್ವವನ್ನು ಆಕ್ಷೇಪಿಸುವುದಕ್ಕೂ ಅಲ್ಲಗಳೆಯುವುದಕ್ಕೂ ಸಾಧ್ಯವಿಲ್ಲ. ಆದುದರಿಂದಲೇ ಜಗತ್ತಿನ ಹಲವು ಸಮಾಜಗಳು ಭಾಷೆಯನ್ನು ದೈವವೆಂದು ನಮಿಸಿ, ಶ್ರೇಷ್ಠಿಸುತ್ತವೆ. ಜಾಗತಿಕ ಒಗ್ಗಟ್ಟನ್ನು ರೂಪಿಸಲು ಹೊರಟಿರುವ ಜ್ಞಾನಿಗಳು, ಭಾಷೆಯನ್ನು ಆಳವಾಗಿ ಅಭ್ಯಸಿಸಬೇಕಾದುದು ಇಂದು ಅನಿವಾರ್ಯವಾದುದಾಗಿದೆ. ಈ ಸ್ಥಿತಿಯಲ್ಲೇ "ಭಾಷಾವಿಜ್ಞಾನ"ವೆಂಬುದು ಇಂದಿನ ನಾಗರಿಕ ಜಗತ್ತಿನಲ್ಲಿ ನವಜೀವ ತಾಳಿ, ನವವೇಗದೊಡನೆ ಬೆಳೆದು ಟಿಸಿಲೊಡೆಯುತ್ತಿದೆ.

ಒಂದು ಭಾಷೆ, ಆ ಭಾಷೆಯನ್ನಾಡುವ ಸಮಾಜದ ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಸ್ಥಿತಿ – ಇವುಗಳೊಡನೆ ಅತ್ಯಂತ ನಿಕಟ ಸಂಪರ್ಕ ಹೊಂದಿರುತ್ತದೆ. ಉದಾಹರಣೆಗೆ ಕನ್ನಡ ಭಾಷೆ, ತನ್ನ ಜನರ ಸಾಂಸ್ಕೃತಿಕ, ರಾಜಕೀಯ, ಆರ್ಥಿಕಸ್ಥಿತಿ– ಇವುಗಳೊಡನೆ ಹೆಣೆದುಕೊಂಡಿರುವುದನ್ನು ಸಾವಿರಾರು ವರ್ಷಗಳನ್ನೊಳಗೊಂಡ ಇತಿಹಾಸದ ಹಾದಿಯಲ್ಲಿ ಗುರುತಿಸುತ್ತೇವೆ. ಇದರ ಹಾಗೆಯೇ ಬೇರೆ ಭಾಷೆಗಳೂ ಇರಬೇಕೆಂದು ನಾವು ಭಾವಿಸಬಹುದು; ಅದಕ್ಕೆ ಹಲವು ಆಧಾರಗಳಿವೆ. ಆದುದರಿಂದ ಒಂದು ದೇಶದ ಬೆಳವಣಿಗೆಗೆ, ಆ ದೇಶದ ಜನ ಬಳಸುವ ಭಾಷೆಯೂ ಕಾರಣವಾಗುತ್ತದೆಯೆನ್ನಬಹುದು. ಭಾರತ ನೂರಾರು ಭಾಷೆಗಳನ್ನೊಳಗೊಂಡ ದೇಶ. ಇಡೀ ಭಾರತಕ್ಕೆ ಮಧ್ಯವರ್ತಿಯಾದ ಒಂದು ಭಾಷೆ ಇದ್ದುದಾಗಿ ಇತಿಹಾಸವೇನೂ ಇಲ್ಲ. ಆದರೂ ಭಾರತೀಯರ ಮಧ್ಯೆ ಸಂಪರ್ಕ, ಸೌಲಭ್ಯ ಬೆಳೆದಿದೆ: ತಂತಮ್ಮ ಮಾತೃಭಾಷೆಯ ಮೂಲಕ ಬೆಳವಣಿಗೆಯನ್ನು, ಎಲ್ಲ ಕ್ಷೇತ್ರಗಳಲ್ಲೂ ಕಂಡಿದ್ದಾರೆ. ಪರರಾಷ್ಟ್ರಗಳ ಸಂಪರ್ಕಕ್ಕೂ ಪ್ರಯತ್ನಿಸಿದ್ದಾರೆ. ಭಾರತೀಯರು ಮಾನವ ಜೀವನಕ್ಕೆ ಮೂಲಭೂತವಾದ ಸರ್ವ ಕಲೆಗಳ ಪಾಂಡಿತ್ಯದಲ್ಲೂ ಬಲ್ಲವರಾಗಿ ಬೆಳಗಿದ್ದಾರೆ. ಅವರು ಮುಟ್ಟದ, ಸವಿನೋಡದ, ಕಲೆಗಳೇ ಇಲ್ಲವೆನ್ನಬಹುದು. ಆಡುವ ಮಾತಿನಲ್ಲಿ ಭೇದವಿದ್ದರೂ, ಭಾರತೀಯ ಚಿಂತನೆಯಲ್ಲಿ, ಅದರ ಫಲವಾಗಿ ಜ್ಞಾನ ಬೆಳವಣಿಗೆಯಲ್ಲಿ, ಕಲೆ ಸಂಸ್ಕೃತಿಗಳ ಬೆಳವಣಿಗೆಯಲ್ಲಿ ಸ್ವಾಭಾವಿಕವಾದ ಹೋಲಿಕೆ ಇತ್ತೆಂಬುದು ನಿಚ್ಚಳವಾಗಿದೆ. ಭಾರತೀಯರ ಚಿಂತನೆ ಭಾರತದಷ್ಟಕ್ಕೆ ಸಂಕುಚಿತವಾಗದೆ, ಜಗತ್ತಿನ ಉದ್ದಗಲಕ್ಕೆ ವಿಸ್ತಾರವಾಗಿ ಬೆಳಗಿತ್ತೆಂಬುದಕ್ಕೆ ಸಾಹಿತ್ಯದ ಆಧಾರಗಳು ಹಲವಿವೆ. ಕನ್ನಡವನ್ನು ತೆಗೆದುಕೊಂಡರೆ ದಾಸರ ಪದಗಳು, ಸರ್ವಜ್ಞನ ವಚನಗಳು, ವೀರಶೈವ

ವಚನ ಸಾಹಿತ್ಯ ಇವು ಸಾಕಷ್ಟು ಉದಾಹರಣೆಗಳನ್ನು ಒದಗಿಸಬಲ್ಲವು.

ಜಗತ್ತಿನ ನಾಗರಿಕತೆಗಳೊಳಗೆ ಭಾರತೀಯ ನಾಗರಿಕತೆ, ಶ್ರೇಷ್ಠವಾಗಿ ಬೆಳಗಿತ್ತೆಂಬುದನ್ನು ಜಗತ್ತಿನ ಇತಿಹಾಸಕಾರರು ನಮಗೂ ಪ್ರಪಂಚಕ್ಕೂ ತೋರಿಸಿಕೊಟ್ಟಿದ್ದಾರೆ. ಇಂತಹ ಭಾರತದ ಮಧ್ಯಕಾಲವೂ ವರ್ತಮಾನವೂ ಮಬ್ಬಾಗಿರುವುದೇಕೆ? ಇಂದು ಭಾರತ, ಜಗತ್ತಿನ ಬೇರೆ ರಾಷ್ಟ್ರಗಳಿಗಿಂತ ಯಾವ ರೀತಿಯ ಶ್ರೇಷ್ಠ ಬೆಳವಣಿಗೆಯನ್ನು ತೋರಿದೆ? ಒಂದು ರಾಷ್ಟ್ರದ ಬೆಳವಣಿಗೆಯೆಂಬುದು, ಪರರಾಷ್ಟ್ರಗಳ ಬೆಳವಣಿಗೆ ಯೊಡನೆ ಹೋಲಿಸಿ ತಿಳಿಯತಕ್ಕುದಾಗಿದೆ. ಹೀಗೆ ಇಂದಿನ ಸ್ಥಿತಿಯಲ್ಲಿ ಭಾರತ ಯಾವ ಕ್ಷೇತ್ರದಲ್ಲೂ ಪರರನ್ನು ಮೀರಿಸುಷ್ಟು. ಅಷ್ಟೇ ಏಕೆ ಸಮವಾಗಿ ನಿಲ್ಲುವಷ್ಟು ಕೂಡ ಬೆಳೆದುಬರುತ್ತಿರುವುದಾಗಿ ತೋರುತ್ತಿಲ್ಲ. ಹಿಂದುಳಿದ ರಾಷ್ಟ್ರಗಳಲ್ಲಿ ಒಂದಾಗಿಯೇ ಇನ್ನೂ ಭಾರತವನ್ನು ಎಣಿಸಲಾಗುತ್ತಿದೆ. ಕೆಲವರು ಭಾರತದ ಬೆಳವಣಿಗೆಯನ್ನು ಆಧ್ಯಾತ್ಮಿಕ ಕ್ಷೇತ್ರದ ಮೂಲಕ ತೋರಿಸಲು ಪ್ರಯತ್ನಿಸಬಹುದು. ಆದರೆ ಆಧ್ಯಾತ್ಮಿಕ ಕ್ಷೇತ್ರ ಎಲ್ಲರ ಬುದ್ಧಿಶಕ್ತಿಗೆ ನಿಲುಕುವ ಹಾಗೋ, ಬೆಳವಣಿಗೆ ಹೊಂದಿದ ಜ್ಞಾನಕ್ಕೆ ಒಪ್ಪುವ ರೀತಿಯಲ್ಲೋ ಯಾರೂ ವಿವರಿಸಲಿಲ್ಲ. ಜೊತೆಗೆ ಅದನ್ನು ತೋರಿಸಿ ಹೆಮ್ಮೆ ಪಟ್ಟುಕೊಳ್ಳುವುದು ಯಾವ ರೀತಿಯಲ್ಲೂ ರಾಷ್ಟ್ರದ ವಾಸ್ತವಿಕ ಬೆಳವಣಿಗೆಗೆ ಸಹಕಾರಿಯಲ್ಲ. ಎಲ್ಲ ಜಾಗತಿಕ ಕ್ಷೇತ್ರಗಳ ಮುಂದುವರಿಕೆಯಲ್ಲಿಯೂ ಭಾರತ ಹಿಂದುಳಿದಿರುವುದೇಕೆ? ಇದು ಪಾರಂಪರ್ಯವಾಗಿ ಬಂದ ಸ್ಥಿತಿಯೆಂದರೆ ಸ್ವಾಭಾವಿಕವೆನ್ನಬಹುದು. ಆದರೆ ಇದು ಮಧ್ಯದಲ್ಲಿ ಕವಿದ ತಿಮಿರವಾದ್ದರಿಂದ ಇದರ ಬಗ್ಗೆ ಆಳವಾಗಿ ಯೋಚಿಸಬೇಕಾದದ್ದು ಅವಶ್ಯ.

ಭಾಷೆಯ ಪ್ರಾಮುಖ್ಯತೆ :

ಒಬ್ಬ ಮನುಷ್ಯ, ಎಷ್ಟೇ ಆಳವಾಗಿ ಹಾಗೂ ವಿಸ್ತಾರವಾಗಿ ಚಿಂತಿಸಿದರೂ ಅವನ ಬೆಳವಣಿಗೆಯೆಂಬುದು, ಅವನ ಚಿಂತನೆಗಳನ್ನು ಭಾಷೆಯ ಮೂಲಕ ಎಷ್ಟು ಸಾಮರ್ಥ್ಯವಾಗಿ ಹೊರಗೆಡವುತ್ತಾನೆಂಬುದನ್ನು ಅವಲಂಬಿಸಿದೆ. ಸಮಾಜ ಮಾನ್ಯತೆಯನ್ನು (ಯಾವುದೇ ಕಾಲದಲ್ಲಿ) ಪಡೆಯದ ಅಭಿಪ್ರಾಯಗಳೋ ಕ್ರಿಯೆಗಳೋ ಪ್ರಪಂಚದಲ್ಲಿ ನೆಲಸಿ ನಿಂತುದಕ್ಕೆ ಇತಿಹಾಸವಿಲ್ಲ. ಅಭಿವ್ಯಕ್ತಿಯಿಲ್ಲದೆ ಮಾನ್ಯತೆ ಪಡೆಯಲು ಅಸಾಧ್ಯ. ಚಿಂತನಾ ಅಭಿವ್ಯಕ್ತಿಗೂ, ಅರ್ಥೈಸಿಕೊಳ್ಳುವುದಕ್ಕೂ ಸಹಾಯವಾಗುವುದು ಭಾಷೆಯೇ. ಪಾಶ್ಚಿಮಾತ್ಯರ ಬರವಿನ ನಂತರ ಆಂಗ್ಲಭಾಷೆಯ ಆಧಿಕ್ಯಕ್ಕೊಳಗಾದ ಭಾರತೀಯರು, ಮಾತೃಭಾಷಾ ಚಿಂತನೆಯಲ್ಲಿ ಕಂಗೆಟ್ಟರು. ಆಂಗ್ಲಭಾಷೆಯಲ್ಲಿ ಆಲೋಚಿಸುವುದರಲ್ಲಿ ಕೃತ್ರಿಮ ಉಸಿರಾಟರೂಪದ ಕಷ್ಟವನ್ನು ಹೊಂದಿದವರಾದರು. ಮಾತೃಭಾಷೆಯಲ್ಲಿ ಬರೆಯುವುದಕ್ಕೂ ಮಾತನಾಡುವದಕ್ಕೂ ರಾಜಕೀಯ ಮಾನ್ಯವಿಲ್ಲನ್ನುವ ಸ್ಥಿತಿಯೊದಗಿದಾಗ ಏನು ತಾನೇ ಮಾಡಲು ಸಾಧ್ಯ. ಆಂಗ್ಲಭಾಷೆಯನ್ನು ಕಲಿತುಕೊಳ್ಳಲು ಪ್ರಯತ್ನಿಸಿದರು. ಸಾರ್ವಜನಿಕವಾಗಿ ಮಾತೃಭಾಷೆಯನ್ನು ಬಳಸುವುದಕ್ಕೂ

ಬರೆಯುವುದಕ್ಕೂ ಸ್ವಾತಂತ್ರ್ಯವಿದ್ದು. ಆಂಗ್ಲಭಾಷೆಯನ್ನು ಕಲಿತುಕೊಳ್ಳಲು ಭಾರತೀಯರು ಪ್ರಯತ್ನಿಸಿದ್ದ ಪಕ್ಷದಲ್ಲಿ ಭಾಷಾಕ್ಷೇತ್ರದಲ್ಲಿ ಒಂದು ಸ್ವಾಭಾವಿಕವಾದ ಬೆಳವಣಿಗೆ ಹೆಚ್ಚಿರಬಹುದೇನೋ! ಆದರೆ ಬ್ರಿಟಿಷರ ಪ್ರಯತ್ನ. ಮಾತೃಭಾಷೆಗೆ ತಕ್ಕ ಮಾನ್ಯ ನೀಡದೆಯೂ, ಆಂಗ್ಲಭಾಷೆಯನ್ನು ಅಧಿಕಾರಯುತ ಹೇರಿದುದರಿಂದಲೂ ಭಾರತೀಯರು ದಾಸ್ಯಮನೋಭಾವವುಳ್ಳವರಾದರು. ಮಾತೃಭಾಷೆಯನ್ನು ಅಲಕ್ಷಿಸಿದಷ್ಟು, ಕೆಲವರು ಆಂಗ್ಲಭಾಷಾ ಮೋಹಿತರಾದರು. ಎಷ್ಟೇ ಪ್ರಯತ್ನಿಸಿದರೂ ಆಂಗ್ಲಭಾಷೆಯನ್ನು ಮಾತೃಭಾಷೆಯನ್ನಾಗಿ ಹೊಂದಿರುವವರಿಗಿಂತ ಅದನ್ನು ಎರಡನೆಯ ಭಾಷೆಯನ್ನಾಗಿ ಕೊಂಡವರಿಗೆ, ತಮ್ಮ ಭಾವನೆಗಳನ್ನು ಮೇಲ್ಮಟ್ಟದಲ್ಲಿ ಸೂಕ್ಷ್ಮವಾಗಿ ಶಕ್ತಿಯುತವಾಗಿ ಆ ಭಾಷೆಯ ಮೂಲಕ ಅಭಿವ್ಯಕ್ತಿಸುವುದೂ ಲೋಕಮಾನ್ಯವನ್ನು ಪಡೆಯುವುದೂ ಕಷ್ಟಸಾಧ್ಯ. [ಎರಡನೆಯ ಭಾಷೆಯನ್ನು (Second or foreign Language) ಸರಿಯಾದ ಪದ್ಧತಿಯ ಸಹಾಯವಿಲ್ಲದೆ. ನಿಯೋಜಿತ ಕ್ರಮಗಳಿಲ್ಲದೆ ಸಂಕುಚಿತ ಅವಧಿಯಲ್ಲಿ ಕಲಿಯುವುದೂ ಬಳಸುವುದೂ ಸಾಧ್ಯವಿಲ್ಲ]. ಈ ತೆರನಾದೊಂದು ಭಾಷಾತೊಡಕು ಭಾರತೀಯರಿಗಿದ್ದುದರಿಂದಲೇ ಇಲ್ಲಿಯ ಜ್ಞಾನವೆಲ್ಲ ಭಾರತಕ್ಕಷ್ಟೇ ಸೀಮಿತವಾಗಿ ಹೋಗಿತ್ತು. ಭಾಷಾ ತಡೆಗಳಿಗೆ (ಇಂಥ ಅಡ್ಡಿಗಳಿಗೆ) ಬಲಿಯಾಗದೆ 'ಕೆಲವರು' ಮಿಂಚಿರುವುದು ಸಹಜ. ಆದರೆ ಇದು ಹೊರತಾಗುತ್ತದಷ್ಟೆ! ಈ ಹೊರತನ್ನೇ ಸಾಮಾನ್ಯೀಕರಿಸುವುದು ಸಾಧುವಲ್ಲ.

ಉದಾಹರಣೆಗೆ ಜಾಗತಿಕ ಭಾಷಾಸಂಶೋಧನಾ ಕ್ಷೇತ್ರವನ್ನು ತೆಗೆದುಕೊಳ್ಳೋಣ. ಸಾವಿರಾರು ವರ್ಷಗಳ ಹಿಂದೆಯೇ ಪಾಣಿನಿ ಹಾಗೂ ತೊಲ್ಕಾಪ್ಪಿಯರು ಮೂಲಭೂತವಾದ ಉತ್ತಮ ಭಾಷಾಧ್ಯಯನಗಳನ್ನು ರೂಪಿಸಿಟ್ಟಿರುವುದನ್ನು ನಾವು ಕಾಣುತ್ತೇವೆ. ಇದುವರೆಗೆ ನಮ್ಮ ಮಧ್ಯೆ ಅದಕ್ಕೂ ಉತ್ತಮ ಚಿಂತನೆ ಬೆಳೆಯದೆ ಇರುವುದಕ್ಕೆ ಮಾತೃಭಾಷೆಯ ಅಲಕ್ಷ್ಯ ಕಾರಣವಾಗುತ್ತದೆ. ಅಥವಾ ಇಂದಿನ ಪ್ರಸಿದ್ಧ ಭಾಷಾಶಾಸ್ತ್ರಜ್ಞರಾದ ಛಾಮ್ಸ್ಕಿ (Chomsky), ಮೆಕಾಲೆ (Mccawley), ಫಿಲ್ಮೋರ್ (Fillmore), ರಾಸ್ (Ross) ಮುಂತಾದ ಇನ್ನೂ ಹಲವರ ಮಟ್ಟಕ್ಕೆ ನಾವು ಬೆಳೆಯಲಾಗದುದಕ್ಕೆ ಆಂಗ್ಲಭಾಷಾ ಪ್ರಭುತ್ವ (ಇಲ್ಲದೇ ಇರುವುದು). ಒಂದು ಕಾರಣವಾಗಬಹುದು. ಅಂದರೆ ನಮ್ಮ ಭಾಷೆಗಳ ಕ್ರಿಯೆಯನ್ನು ಅಥವಾ ನಮ್ಮ ತಲೆಯಲ್ಲಿ ಉದ್ಭವಿಸುವ ಯಾವುದೇ ಆಲೋಚನೆಯನ್ನು ಅವರಷ್ಟು ಶಕ್ತಿಯುತವಾಗಿ. ಪ್ರಭಾವಪೂರ್ಣವಾಗಿ ಆಂಗ್ಲಭಾಷೆಯಲ್ಲಿ ಅಭಿವ್ಯಕ್ತಗೊಳಿಸುವುದು ನಮಗೆ ಸಾಧ್ಯವಾಗಲಾರದೆ ಇರುವುದಕ್ಕೆ ಕಾರಣ. ನಮಗೆ ಆಂಗ್ಲಭಾಷಾ ಪ್ರಭುತ್ವವಿಲ್ಲದೇ ಇರುವುದು. ನಮ್ಮದು ಎರಡೂ ಕೆಟ್ಟ ಸ್ಥಿತಿ. ಈ ಸ್ಥಿತಿ ಎಲ್ಲ ಕ್ಷೇತ್ರಗಳಲ್ಲೂ ಇದೆಯೆಂಬುದನ್ನು ಕಾಣಬಹುದು.

ಮುಂದೇನು ? :

ವಿಜ್ಞಾನ ಪ್ರಗತಿಯಿಂದ ಎಷ್ಟೋ ಪ್ರಾಕೃತಿಕ ತಡೆಗಳನ್ನು ಮೀರಿರುವ ಮಾನವ

ನಿಗೆ ಭಾಷೆ, ಒಂದು ಸಮಸ್ಯೆಯಾಗಲಾರದು. ಇಂದಿನ ಭಾಷಾವಿಜ್ಞಾನದ ಬೆಳವಣಿಗೆಯನ್ನು ಬಳಸಿಕೊಂಡು ಈ ಭಾಷಾ ಸಮಸ್ಯೆಯನ್ನು ಬಗೆಹರಿಸುವುದು ಸುಲಭವಾಗಬಹುದು. ಆಂಗ್ಲಭಾಷೆಯನ್ನು ಕಿತ್ತೆಸೆಯುವುದರ ಮೂಲಕ ದಾರಿಕಾಣುವ ಪ್ರಯತ್ನ, ಬುದ್ಧಿವಂತಿಕೆಯಾಗದು. ಜಾಗತಿಕ ಮಾನ್ಯತೆಯನ್ನು ಪಡೆದ ಆಂಗ್ಲಭಾಷೆಯೊಡನೆ ಯಾವುದೇ ವಿಧವಾಗಿ ಹೆಣೆದುಕೊಂಡು ಬಿಟ್ಟ ನಾವು. ಇನ್ನು ಅದರ ಸಂಪರ್ಕವನ್ನು ಸರಿಯಾದ ದಾರಿಯಲ್ಲಿ ಬೆಳಸಿಕೊಳ್ಳಲು ಪ್ರಯತ್ನಿಸುವುದೇ ಜಾಣತನವಾಗುತ್ತದೆ.

ಮೊದಲನೆಯದಾಗಿ ಮಾತೃಭಾಷೆಯನ್ನು ದೂರಮಾಡದ, ಆಂಗ್ಲಭಾಷೆಯನ್ನು ಅಲಕ್ಷಿಸದ ಮನೋಭಾವನೆಯನ್ನು ನಾವು ಹೊಂದಬೇಕು. ಆಂಗ್ಲಭಾಷೆಯ ಮೂಲಕ ಮಾತೃಭಾಷೆಯಿಂದ ರೂಪಿತವಾದ ಚಿಂತನೆಯನ್ನು, ಅಡೆತಡೆಯಿಲ್ಲದೆ ಪ್ರಕಟಿಸುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು. ಕ್ರಮವಾಗಿ ಇಂದು ನಮಗಿರುವ ಅವಶ್ಯಕತೆಗಳು ಮಾತೃಭಾಷಾಭ್ಯಾಸ, ಆಂಗ್ಲಭಾಷಾಭ್ಯಾಸ. ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದ ಎಷ್ಟೋ ವಿದ್ಯಾರ್ಥಿಗಳಿಗೆ ಮಾತೃಭಾಷೆಯಲ್ಲಿ ಎಲ್ಲ ವಿಧವಾದ ಭಾವನೆಗಳನ್ನು ಅಭಿವ್ಯಕ್ತಗೊಳಿಸಲು, ಆಂಗ್ಲಭಾಷೆಯಲ್ಲಿ ಸರಳವಾಗಿ ಮಾತನಾಡಲು, ಬರೆಯಲು ಆಗದ ಸ್ಥಿತಿ ಇಂದು ಎಲ್ಲೆಡೆ ಪಸರಿಸಿದೆ. ಇಂದು ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಅಧ್ಯಾಪಕರಾಗಿರುವ ಎಷ್ಟು ಜನ ಇಂದಿನ ಭಾಷೆಯ ಬಗ್ಗೆ ಸರಿಯಾದ ಅರಿವನ್ನು ಹೊಂದಿದ್ದಾರೆ. ಇವರಲ್ಲಿ ಎಷ್ಟು ಜನಕ್ಕೆ ಭಾಷೆಯ ಸಕಲ ಕ್ರಿಯೆಗಳನ್ನು ವಿವರಿಸುವ ತಾಕತ್ತು ಅಥವಾ ಶಕ್ತಿಯಿದೆ. ಇವರೇ ಅಧ್ಯಾಪಕರಾಗಿರುವ ಹೊತ್ತಿನಲ್ಲಿ ವಿದ್ಯಾರ್ಥಿಗಳ ಸ್ಥಿತಿಯೇನು ? ಹೀಗೆ ಭಾರತೀಯ ಶಿಕ್ಷಣ ಕ್ರಮದಲ್ಲಿ ಸಮಸ್ಯೆಗಳು ಬೆಳೆದುಬಿಟ್ಟಿವೆ. ಆದುದರಿಂದ ಶಿಕ್ಷಣ ಕ್ರಮದಲ್ಲಿ ಹೊಸತನಗಳನ್ನು ಹೊಗಿಸಬೇಕು.

ಸಾಹಿತ್ಯ ವಿದ್ಯಾರ್ಥಿಗಳಿಗೆ ಸಾಹಿತ್ಯದೊಡನೆ ಭಾಷಾವಿಜ್ಞಾನವನ್ನು ಪದವಿ ತರಗತಿಗಳಲ್ಲಿಯೇ ಕಲಿಯುವ ಸೌಲಭ್ಯವನ್ನು ಏರ್ಪಡಿಸಬೇಕಾಗಿದೆ. ಕನ್ನಡವನ್ನು ಅಥವಾ ಯಾವುದೇ ಸಾಹಿತ್ಯವನ್ನು ಮುಖ್ಯ ವಿಷಯವಾಗಿ ಅಭ್ಯಸಿಸುವ ವಿದ್ಯಾರ್ಥಿಗೆ ಅರ್ಥಶಾಸ್ತ್ರ ಅಥವಾ ರಾಜಕೀಯ ಶಾಸ್ತ್ರಗಳನ್ನು ಗೌಣ ವಿಷಯವಾಗಿ ಆರಿಸಿಕೊಳ್ಳುವುದಕ್ಕಿಂತ ಭಾಷಾವಿಜ್ಞಾನವನ್ನು ಕಲಿಯುವ ಸೌಲಭ್ಯವೇರ್ಪಡಿಸಿಕೊಡುವುದು ಉತ್ತಮವಲ್ಲವೆ ? ಇದರಿಂದ ಸಾಹಿತ್ಯದೊಡನೆ ಅದರಲ್ಲಿ ಬಳಸಿರುವ ಭಾಷೆಯ ಬಗ್ಗೆಯೂ ಪೂರ್ಣಜ್ಞಾನವನ್ನು ವಿದ್ಯಾರ್ಥಿ ಹೊಂದಿದವನಾಗುತ್ತಾನೆ.

ಭಾಷಾವಿಜ್ಞಾನ ಅಭ್ಯಾಸದ ಮೂಲಕ, ಯಾವ ಹೊಸ ಭಾಷೆಯನ್ನೂ ಕಲಿತುಕೊಳ್ಳುವುದಕ್ಕಾಗುವ ಒಂದು ಸಾಮಾನ್ಯ ಸಾಮರ್ಥ್ಯವನ್ನು ಹೊಂದುವುದಕ್ಕೆ ಸಾಧ್ಯವಾಗುತ್ತದೆ. ಭಾಷಾಸಂಶೋಧನೆಯ ಮೂಲಕ ರೂಪಗೊಂಡಿರುವ ಹೊಸಪದ್ಧತಿಗಳು, ಉಪಕರಣಗಳು ಇವುಗಳನ್ನು ಬಳಸಿಕೊಂಡು ಭಾಷಾಭ್ಯಾಸದ ಅವಧಿಯನ್ನು ಕೂಡ ಸಂಕುಚಿತಗೊಳಿಸಬಹುದು.

ಭಾಷಾಶಾಸ್ತ್ರದ ಒಂದು ಶಾಖೆಯಾಗಿ ಇಂದು ವೇಗವಾಗಿ ಬೆಳೆದುಬರುತ್ತಿರುವ ರಚನಾಂತರ ವಿಧಾನ (Transformational technique), ಎಷ್ಟರಮಟ್ಟಿಗೆ ಮಾತೃಭಾಷಾ ತರಬೇತಿಗೆ ಹಾಗೂ ಪರಭಾಷಾ ತರಬೇತಿಗೆ ಸಹಾಯಕವಾಗುತ್ತದೆಯೆಂಬುದರಲ್ಲಿ ಇಂದು ಭಾಷಾಸಂಶೋಧನಕಾರರ ಮಧ್ಯೆ ಭಿನ್ನಾಭಿಪ್ರಾಯವಿದೆ. ಈ ಪದ್ಧತಿಯಲ್ಲಿ ನಿಜವಾದ ಸತ್ವವಿದೆಯೇ ಎಂಬುದನ್ನು ಅರ್ಥಮಾಡಿಕೊಂಡು ಅದನ್ನು ಎಷ್ಟರಮಟ್ಟಿಗೆ ಭಾಷಾಭ್ಯಾಸಕ್ಕೆ ಬಳಸಿಕೊಳ್ಳಬಹುದು ಎಂಬುದನ್ನು ಕ್ರಮವಾಗಿ ನಿಯೋಜಿಸಿ ಕ್ರಿಯಾಶೀಲರಾಗಬೇಕು. ಬಳಕೆಯಲ್ಲಿ ಕಾಣಿಸುವ ತಡೆಗಳಿಗೆ ತಕ್ಕ ಬುದ್ಧಿಪೂರ್ವ ಬದಲಾವಣೆಗಳನ್ನು ಮಾಡಿಕೊಳ್ಳುವುದರಲ್ಲಿ ತಪ್ಪೇನಿಲ್ಲ. ಬೆಳೆದ ಭಾಷಾಶಾಸ್ತ್ರವೆಂಬುದು. ಪ್ರಪಂಚದ ಭಾಷೆಗಳ ಜಾಗತಿಕತೆಯನ್ನು ನೀಡುವುದರಿಂದ ಜಗವನ್ನೊಂದಾಗಿಸುವ ಉತ್ತಮ ಪ್ರಯತ್ನಕ್ಕೆ ಇದು ದಾರಿಮಾಡುವುದಾಗುತ್ತದೆ. ಈ ರೀತಿಯಿಂದಲೂ ಭಾರತ, ಭಾಷಾಶಾಸ್ತ್ರದೆಡೆ ಗಮನಹರಿಸುವುದು ಅನಿವಾರ್ಯವಾಗುತ್ತದೆ. ಪರಶಾಸ್ತ್ರಗಳೂ (ವಿಜ್ಞಾನದ ಬೇರೆ ಶಾಖೆಗಳೂ) ಉಜ್ವಲವಾಗಿ ಬೆಳೆಯುವುದಕ್ಕೆ ಭಾಷಾಶಾಸ್ತ್ರ ಸಹಾಯವಾಗುತ್ತದೆಯೆಂಬುದನ್ನು ಅರಿತು ಹೊಸತುಗಳನ್ನು ಮತ್ತು ಬದಲಾವಣೆಗಳನ್ನು ಜ್ಞಾನಪೂರ್ವಕವಾಗಿ ಆಲೋಚಿಸಿ ನಮ್ಮನ್ನು ನಾವೇ ಬೆಳೆಸಿಕೊಳ್ಳಬೇಕು.

ಲಾವಣಿ ಗೋಷ್ಠಿ

ಶ್ರೀರಾಮ ಇಟ್ಟಣ್ಣವರ

ಪಟ್ಟಣಗಳ ಸಂಪರ್ಕ ಈಗೀಗ ಹಳ್ಳಿಗಳಿಗೆ ಹೆಚ್ಚಾಗಿ ಬಂದು ಸಿನೇಮಾ, ರೇಡಿಯೋ, ನಾಟಕಗಳಿಂದಾಗಿ ಜನಪದಸಾಹಿತ್ಯ ಕರಗುತ್ತ ನಡೆದಿದೆ. ಈಗ ಏಳೆಂಟು ದಶಕಗಳ ಹಿಂದೆ ಜನಪದಕಲೆ ತನ್ನ ಪೂರ್ಣವೈವಿಧ್ಯತೋರಿಸಿ ಮೆರೆಯುವ ಕಾಲ ವೊಂದಿತ್ತು. ಈಗ ಅಲ್ಲಲ್ಲಿ ಕಂಡುಬರುವುದು ಅದರ ಅವಶೇಷ ಮಾತ್ರ—ನೂರು ಚೀಲಿನ ರಾಶಿ ಮುಗಿದಮೇಲೆ ಕಣದಲ್ಲಿ ಅಲ್ಲಲ್ಲಿ ಚೆಲ್ಲುವರಿದ ಒಂದಿಷ್ಟು ಜೋಳದ ಕಾಳುಗಳಂತೆ.

ಚೈತ್ರಮಾಸ ಅಡಿಯಿಟ್ಟರೆ ರೈತರಿಗೆ ಬಿಡುವು. ಮುಂದೆ ಶ್ರಾವಣಮಾಸದ ವರೆಗೆ ಹಗುರುಕೆಲಸಗಳೊಂದಿಗೆ ಮೈ-ಮನಗಳಿಗೆ ಉಲ್ಲಾಸದ ಸಂಸ್ಪರ್ಶ. ಜಾತ್ರೆ, ಉತ್ಸವ, ಓಕುಳಿಗಳೆಲ್ಲ ಈ ಉಲ್ಲಾಸಗಳಿಗೆ ಮಾಧ್ಯಮ. ತಮ್ಮಲ್ಲಿರುವ ಕಲೆಗಾರಿಕೆ ಯನ್ನು ಹೊರಹಾಕಿ ಜನರನ್ನು ಸಂತೋಷಪಡಿಸಲಿಕ್ಕೂ ಇದೇ ಕಾಲ. ಬೈಲಾಟ, ಗೀಗೀ, ಬೈಲುಲಾವಣಿ. ಡೊಳ್ಳಿನ ಹಾಡು, ಕರಡಿ ಮಜಲು, ಭಜನಾಮೇಳ ಎಲ್ಲೆಂದ ರಲ್ಲಿ ನಡೆದು ಕಲೆಯಜಾಲ ಸುತ್ತಬೀಸಿ ಜನಮನವನ್ನು ಸೆರೆಹಿಡಿಯುತ್ತವೆ. ಮೊದಲೆಲ್ಲ ಲಾವಣಿಯೆಂದರೆ ಜಾನಪದರಿಗೆ ರಸದೊರೆತೆ. ಊರೂರಿಗೆ, ಓಣಿಓಣಿಗೆ ಲಾವಣಿ ಗೋಷ್ಠಿಗಳು ಕೂಡಿ. ಕಿಕ್ಕಿರಿದ ಜನ ಸುಖಾನುಭವ ಹೊಂದುತ್ತಿದ್ದರು. ಇಂಥ ಲಾವಣಿ ಗೋಷ್ಠಿ ಜರುಗುತ್ತಿದ್ದ ಬಗೆಯನ್ನು ಹಿಡಿದಿಡುವುದು ಪ್ರಸ್ತುತ ಲೇಖನದ ಉದ್ದೇಶ. ಮೊದಲಿಗೆ ಸ್ವಲ್ಪ ಸಂಕೀರ್ಣವೆನಿಸುವ ಮೇಳಲಾವಣಿಯ ಗೋಷ್ಠಿಯನ್ನು ಅಭ್ಯಸಿಸಿ, ತರುವಾಯ ಬೈಲುಲಾವಣಿ ಗೋಷ್ಠಿ ಅದರಿಂದ ಹೇಗೆ ಭಿನ್ನವಾಗಿ ನಿಲ್ಲುತ್ತದೆಂಬುದನ್ನು ನೋಡಬಹುದು.

ಲಾವಣಿಗೋಷ್ಠಿಗೆ ಸಾಮಾನ್ಯವಾಗಿ ಎರಡು ಪಕ್ಷಗಳನ್ನು ಆಹ್ವಾನಿಸುತ್ತಾರೆ: ಒಂದು ಹರದೇಶಿ, ಇನ್ನೊಂದು ನಾಗೇಶಿ. ನಾಗೇಶಿ ಪಕ್ಷಕ್ಕಾಗಿ ಹೆಣ್ಣುಮಗಳನ್ನೇ ಹುಡುಕಿಕೊಂಡು ಹೋಗುವುದು ರೂಢಿ. ಎರಡೂ ಪಕ್ಷಗಳನ್ನು ಗಂಡೇ ವಹಿಸಿದರೆ ಕೇಳುವವರಿಗೆ 'ವಿಶೇಷ' ಆಸಕ್ತಿ ಉಳಿಯುವುದಿಲ್ಲ. ಆದ್ದರಿಂದ ಅವರ 'ರಸಿಕತೆ'ಗೆ ಮಣಿದು ವ್ಯವಸ್ಥಾಪಕರು ಗಂಡು–ಹೆಣ್ಣುಗಳನ್ನೇ ಕೂಡಿಸುತ್ತಾರೆ, ಪ್ರಸಿದ್ಧಿಪಡೆದ ಪಕ್ಷಗಳನ್ನೇ ಆರಿಸುತ್ತಾರೆ. ಊರು ಒಗ್ಗಟ್ಟಾಗಿದ್ದರೆ ಎರಡೂ ಮೇಳಗಳು ಒಂದೇ ಒಡೆತದಲ್ಲಿ ಕೂಡುತ್ತವೆ. ಒಂದುವೇಳೆ ಊರಲ್ಲಿ ಎರಡು ಬಣಗಳಿದ್ದರೆ ಮೊದಲಿನವರು

ಹೇಳಿರುವುದನ್ನು ಬಿಟ್ಟು ಅವರ ವಿರುದ್ಧಪಕ್ಷವನ್ನು ಇನ್ನೊಂದು ಬಣದವರು ಆರಿಸುತ್ತಾರೆ. ಸುಮ್ಮನೆ ಜಗಳಕ್ಕೆ ದಾರಿಯೆಂದು ಈ ಎರಡನೆಯ ರೀತಿ ಕಡಿಮೆ. ಎರಡೂ ಬಣಗಳಲ್ಲಿ ಒಟ್ಟಾರೆ ಹೊಂದಾಣಿಕೆಯೇ ಇರದಿದ್ದರೆ, ಪ್ರತ್ಯೇಕವಾಗಿ ಎರಡೆರಡು ಮೇಳಗಳನ್ನು ಕರೆಯಿಸಿಯೂ ಗೋಷ್ಠಿಯನ್ನು ನಡೆಯಿಸಬಹುದು

ಸಂದರ್ಭ ಇದು, ಇಂಥ ದಿವಸ ನಮ್ಮೂರಿಗೆ ಹಾಡಲು ಬನ್ನಿರಿ ಎಂದು ಹೇಳಲು ಹೋದವನು ಎಲೆಯಡಿಕೆಯನ್ನೋ ಅರಿಷಿಣಬೇರನ್ನೋ ಕೊಡುವುದು ವಾಡಿಕೆ. ಅದನ್ನು ಅವರು ಸ್ವೀಕರಿಸಿದರೆ 'ನಿಮ್ಮೂರಿಗೆ ಹಾಡಲು ನಿಶ್ಚಿತವಾಗಿ ಬರುತ್ತೇವೆ' ಎಂದು ವಚನಕೊಟ್ಟಂತೆ. ಕೆಲವುಸಲ ಸ್ವೀಕರಿಸದೆಯೂ ಹೋಗಬಹುದು. ಅದೇ ವೇಳೆಗೆ ಬೇರೆಡೆಗೆ ಹಾಡಲು ಹೋಗುವುದಿದ್ದರೆ ಇತ್ತ ಬರುವುದು ಸಾಧ್ಯವಾಗುವುದಿಲ್ಲ ಎಂದು ಹೇಳಿ, ನಿರಾಕರಿಸುತ್ತಾರೆ. ವಿಶೇಷವೆಂದರೆ: ಒಮ್ಮೊಮ್ಮೆ ಸ್ವೀಕರಿಸುವುದು, ಬಿಡುವುದು ಎದುರಾಳಿಯ ಹೆಸರು ಅಥವಾ ಖ್ಯಾತಿಯನ್ನು ಅವಲಂಬಿಸಿರುತ್ತದೆ. ಎದುರಾಳಿ ತನಗಿಂತ ಮೇಲಿದ್ದರೆ ವೀಳ್ಯ ಸ್ವೀಕರಿಸುವುದಿಲ್ಲ, ಏನೋ ಒಂದು ನೆಪಹೇಳಿ ತಪ್ಪಿಸಿಕೊಳ್ಳುತ್ತಾರೆ. ಯಾಕೆಂದರೆ ಈ ಮೇಳಕ್ಕೆ ವಿಶ್ವಾಸವಿರುತ್ತದೆ: ಆ ಮೇಳವನ್ನು ಜಯಿಸುವುದು ಅಸಾಧ್ಯವೆಂಬುದು. ಇನ್ನು ಕೆಲವು ಸಲ ಕೊಡಕೊಳ್ಳುವ ಹಣದ ವಿಷಯದಲ್ಲಿ ಹೊಂದಾಣಿಕೆಯಾಗಲಿಕ್ಕಿಲ್ಲ. ಈ ಯಾವ ಅಡೆತಡೆಗಳು ಉಂಟಾಗದೆ ಅವರು ಬರುತ್ತೇವೆಂದು ಒಪ್ಪಿಕೊಂಡರೆ, ಆಹ್ವಾನ ಕೊಡಲು ಹೋದವನು "ನಿಮಗೆ ಇಂತಿಷ್ಟು ಕೊಡುತ್ತೇವೆ, ಊಟದ ಖರ್ಚು-ವಾಹನ ಖರ್ಚು ನೋಡಿಕೊಳ್ಳುತ್ತೇವೆ" ಎಂದು ಕರಾರುಮಾಡಿ ತಿರುಗಿ ತನ್ನೂರಿಗೆ ಬಂದು ಹೇಳುತ್ತಾನೆ "ಎಲಿ ಹಿಡದ್ರು".

ಎರಡೂ ಪಕ್ಷದವರು ವರ್ಷಾನುಗಟ್ಟಲೆ ಮೇಯಿಸಿದ ಹೋರಿಗಳು ಸ್ಪರ್ಧೆಯ ಕಣಕ್ಕಿಳಿಯುವಂತೆ, ಗೆಲ್ಲುತ್ತೇವೆ ಎಂಬ ವಿಶ್ವಾಸದಿಂದ ಹೂಂಕರಿಸುತ್ತಲೇ ಊರಿಗೆ ಕಾಲಿಡುತ್ತಾರೆ. ಈಗ ಊರಲ್ಲೆಲ್ಲ ಹೊಸಗಾಳಿಯ ಅನುಭವ. ಊರತುಂಬೆಲ್ಲ 'ಬಂದರು' 'ಬಂದರು' ಎಂಬ ಮಾತು ಹರಡಿ. ರಾತ್ರಿ ತಾವು ಪಡಬಹುದಾದ ಸುಖವನ್ನು ಕಲ್ಪಿಸಿಕೊಳ್ಳುವುದೇ ಒಂದು ಸುಖ. ಚಿಕ್ಕಮಕ್ಕಳಂತೂ ಪ್ರದರ್ಶನದ ವಸ್ತುವನ್ನು ನೋಡುವಂತೆ ತಿರುತಿರುಗಿ ಇವರು ಇಳಿದುಕೊಂಡಿದ್ದ ಮನೆಯ ಮುಂದೆ ನಿಲ್ಲುತ್ತವೆ. ಹಾಗೇ ನಾಗೇಶಿಯ ಸುತ್ತತಿರುಗುವ ಕಾಮಣ್ಣರುಗಳಿಗೂ ಕೊರತೆ ಇರುವುದಿಲ್ಲ. ಅಂತೂ ಇವರಿಗೆ ಆ ಸಮಯದಲ್ಲೆಲ್ಲ ವಿಶೇಷ ಗೌರವ, ಪೂಜೆ.

ಸಾಯಂಕಾಲ ಊರ ಜನವೆಲ್ಲ ತಮ್ಮ ದೇವತಾಕಾರ್ಯ, ಉಳಿದೆಲ್ಲ ಕೆಲಸ ಮುಗಿಸಿ ಸಂಜೆ ಸುಮಾರು ಹತ್ತು ಘಂಟೆಗೆ ಲಾವಣಿಗೋಷ್ಠಿ ನಡೆಯುವಲ್ಲಿಗೆ ಬಂದು ಕೂಡುತ್ತಾರೆ. ಸ್ಥಳಾವಕಾಶವಿದ್ದರೆ ಇಂಥ ಮೇಳಗಳು ಪ್ರಸಿದ್ಧ ದೇವರಗುಡಿಯ ಮುಂದೆಯೇ ಜರಗುವುದುಂಟು. ಇಲ್ಲದಿದ್ದರೆ ಚಾವಡಿಯ ಮುಂದೋ, ಊರ ಅಗಸಿ

ಯಲ್ಲಿಯೇ ಪ್ರಾರಂಭವಾಗುತ್ತವೆ. ಹಳ್ಳಿಗರಿಗೆ ಉತ್ಸವಸುಖ ಸಾಫಲ್ಯವಾಗುವುದೇ ಇಂಥ ಮೇಳಗಳಲ್ಲಿ.

ಲಾವಣಿಯ ವಸ್ತುವೈವಿಧ್ಯ. ನಾದ ತನ್ಮಯತೆ. ಮರುಳುಗೊಳಿಸುವ ಪದ ಲಾಲಿತ್ಯ. ತತ್ಪರಿಣಾಮವಾಗಿ ಹರಡಿ ನಿಲ್ಲುವ ಸೌಂದರ್ಯ—ಇವೆಲ್ಲವುಗಳನ್ನು ಹಲವಾರುಬಾರಿ ಕೇಳಿ ಅನುಭವಿಸಿದ ಈ ಕಿವಿಗಳಿಗೆ ಸಾಲದ ರುಚಿ, ಇನ್ನೂ ಬೇಕೆನಿಸುವ ರಾಕ್ಷಸ ಒಡಲು. ಸುಮಾರು ಎಂಬತ್ತು ವರ್ಷಗಳ ಹಿಂದೆ ಈಗಿನಂತೆ ಲೈಟ್ ಆಗಲಿ, ಗ್ಯಾಸ ಆಗಲಿ ಹಳ್ಳಿಗಳಲ್ಲಿ ಉಪಲಬ್ಧವಿರುತ್ತಿರಲಿಲ್ಲ. ಹಿಲಾಲದ ಬೆಳಕಿನಲ್ಲಿಯೇ ಬಹಳಷ್ಟು ಗೋಷ್ಠಿಗಳು ನಡೆಯುತ್ತಿದ್ದುವು. ತಮ್ಮ ಅಸ್ತಿತ್ವವನ್ನೆಲ್ಲ ಇವರಲ್ಲಿ ಕೇಂದ್ರೀಕರಿಸಿ ನೆರೆದ ಜನವೆಲ್ಲ ಕುಳಿತಿರುವಾಗ ಇವರ ಮೇಳ, ದೇವತಾಸ್ತುತಿಯಿಂದ ಪ್ರಾರಂಭವಾಗುತ್ತದೆ.

ಗಣಪತಿ ಗಣನಾಥ
ಯಾರು ಇಲ್ಲ ನಿಮ್ಮಹೊರತ.
ವಿದ್ಯಾದಲ್ಲಿ ಸಮರಂತ
ಬುದ್ಧಿಕೊಡ ಇಪರೀತ
ಸಭಾದಾಗ ಬಂದನಿಂತ
ಏನ ಹೇಳಲಿ ಡೌಲಾ
ವಜ್ರದ ಕಿರೀಟ ತಲಿಯ ಮ್ಯಾಲಾ.

ಇವನು ಹರದೇಶಿ ಪಕ್ಷದವನು. ಅಂದರೆ ಪುರುಷಪಕ್ಷ. ಗಂಡುದೇವತೆಯ ಸ್ತುತಿ ಮಾಡದ ಹೊರತು, ಇವನು ಮುಂದೆ ಹೋಗಲಾರ. ಇವನು ಕಟ್ಟುನಿಟ್ಟಾಗಿ ಹೆಣ್ಣು ದೇವತೆಯನ್ನು ಸ್ಮರಿಸಲಾರ. ನಾಗೇಶಿಯೂ ಅಷ್ಟೆ. ಶಕ್ತಿಯನ್ನು ಮೇಲುಗಟ್ಟಿ ಹಾಡುವ ಇವಳು, ಪ್ರಾರಂಭಕ್ಕೆ ನೆನೆಯುವುದು ಸರಸ್ವತಿಯನ್ನೇ ಹೊರತು ಗಣಪತಿ ಅಥವಾ ಇನ್ನೊಬ್ಬ ಗಂಡುದೇವತೆಯನ್ನಲ್ಲ.

ಸರಸೋತಿ ನಿಮ್ಮ ಸ್ತುತಿ
ಮಾಡಾಗ ಬಂದ ನಿಂತ ನಾ ನಾಗೇಶಿ
ಚರಣಕ್ಕೆರಗಿ ಕರುಣಮಾಡಿ ಕೈಯ ಮುಗದ
ಕಾಯಿ ಒಡಿತೇವ ನಾವು ನಮಸ್ಕರಿಸಿ.

ಈ ಹೊತ್ತಿಗೆ ನಮಗೆ ಈ ಮೇಳ ಲಾವಣಿಯ ನಡುವಳಿ ಬಹಳಷ್ಟು ಸ್ಪಷ್ಟ. ಮೂರುಜನ, ಈ ಮೇಳದಲ್ಲಿ; ಮುಂದೆ ಹಾಡುವವ ಒಬ್ಬ, ಹಿಂದೆನಿಂತು ಅವನಿಗೆ ಮೇಳಗೊಡುವವರು ಇಬ್ಬರು. ಮುಂದಿನವನೇ ಹಾಡಿನ ಬಹುಭಾಗವನ್ನು ಸಾಗಿಸಿಕೊಂಡು ಹೋಗುತ್ತಾನೆ. ಇವನ ಕೈಯಲ್ಲಿ 'ಡಪ್ಪು' ಅಥವಾ 'ದಪ್ಪು' ಎಂಬ ಚರ್ಮದ ವಾದ್ಯವಿರುತ್ತದೆ. ಹಿಂದಿನವರ ಒಬ್ಬನ ಕೈಯಲ್ಲಿ ಸುರತಿ ಅಥವಾ ತುಂತುಣಿ. ಇನ್ನೊಬ್ಬನ ಕೈಯಲ್ಲಿ ತಾಳ.

ಆದಿ ಗಣಪತಿ ಸ್ತೋತ್ರ ಮಾಡಿನಾ
ಕೈಯ ಒಳಗ ಹಿಡುತಿನ ಡಪ್ಪಾ

* * * *

ಸ್ವರಾ ತೆಪ್ಪಿ ಹಾಡಿದರ ಮುಂದ ದಿಕ್ಕ ಸಮಸೂದಿಲ್ಲ
ತಾಳಿನವನು ಹೋಗತಾವ ಕೈಕಾಲಾ
ಸಿಟ್ಟಿಗೆದ್ದ ಸುರತ್ಯಾಂವ ಕರಾಕರಾ ತಿಂತಾನ ಹಲ್ಲಾ

ಎಂಬ ಮಾತುಗಳಲ್ಲಿ, ವಾದ್ಯಪರಿಕರಗಳು ಗೋಚರಿಸುತ್ತವೆ. ಡಪ್ಪಿನ ಮೇಲೆ ಸುಂದರವಾದ ವರ್ಣಮಯ ಚಿತ್ರಗಳನ್ನು ಚಿತ್ರಿಸಿ, ನಾನಾವಿಧವಾಗಿ ಸಿಂಗರಿಸಿರುತ್ತಾರೆ. ಅದು ಪೌರುಷಕ್ಕೆ ಕಾರಣೀಭೂತವೆಂದು ಬಲವಾದ ನಂಬಿಕೆ. ಅದ್ದರಿಂದಲೇ "ಡಪ್ಪಿನ ಮೇಲೆ ಬಾವನ್ನ ಬಿರದಾ ನಿಶಾನಿ ಹಚ್ಚೇತಿ."

"ಪ್ರತಿಯೊಂದು ಪಕ್ಷದಲ್ಲಿ ಪಾಡಿಕೆಯಾಗಿ ಮೂವರ ಗುಂಪು, ಹಾಡಲು ಅಣಿಗೊಂಡಿರುತ್ತದೆ. ಅವರಲ್ಲಿ ಮುಂದಿನವರಿಬ್ಬರಿಗೆ ಹಾಡುಗರೆಂದು ಹೇಳಿದರೆ. ಹಿಂದಿನವನಿಗೆ 'ಜೀ' ಅಥವಾ 'ಗೀಗೀ' ಯುವನೆಂದೋ ಸೂರಿನವನೆಂದೋ ಹೇಳುವರು. ಹಾಡುಗರು ಬಗಲಲ್ಲಿ 'ದಪ್ಪು' ಎಂಬ ಚರ್ಮವಾದ್ಯ ಹಿಡಿದು, ಅದೇ ಕೈಯಿಂದ ಬಾರಿಸುವರು. ಸೂರಿನವನ ಕೈಯಲ್ಲಿ 'ತಿಂತಿಣಿ' ಎಂಬ ತಂತುವಾದ್ಯವಿರುತ್ತದೆ. ಒಮ್ಮೊಮ್ಮೆ ಸೂರಿನವನೂ ಹಾಡಿಕೆಯ ಯಶಸ್ಸಿಗೆ ಭಾಗಿಯಾಗುತ್ತಾನೆ."* ಶ್ರೀ ಸಿಂಪಿ ಲಿಂಗಣ್ಣನವರ ಈ ಹೇಳಿಕೆಯನ್ನು ಗಮನಿಸಿದರೆ, ಘಟಪ್ರಭಾ ಮತ್ತು ಕೃಷ್ಣಾ ತೀರಗಳ ಪರಿಸರದ ಗೋಷ್ಠಿಗಳನ್ನು ಗಮನಿಸಿದರೆ, ಎರಡು ಸ್ಪಷ್ಟವಾದ ಭಿನ್ನಾಭಿಪ್ರಾಯಗಳು ತಲೆದೋರುತ್ತವೆ. ಈ ಕಡೆ ರಬಕವಿ, ಬನಹಟ್ಟಿ, ತೇರದಾಳ ಹಿಡಿದುಕೊಂಡು ದಕ್ಷಿಣಕ್ಕೆ ಬೈಲುಹೊಂಗಲದವರೆಗೆ ನಾನು ಈ ಮೊದಲು ವಿವರಿಸಿದ ಸಂಪ್ರದಾಯವೇ ಇದೆ. ಮುಂದೆ ಒಬ್ಬ ಹಾಡುವವ ಅವನ ಹಿಂದೆ ಇಬ್ಬರು. ಇಲ್ಲಿ ಮುಂದೆ ಹಾಡುವವನಿಗೆ ಸಹಾಯಕರಾಗಿ ಹಿಂದಿನವರು ವಿಶಿಷ್ಟವಾದ ಗೊಗ್ಗರು ದನಿ ತಗೆದು ಗೀಗೀ ಅಥವಾ ಜೀಜೀ ಅನ್ನುವರು. ಆದ್ದರಿಂದಲೇ ಮೇಳಲಾವಣಿಗಳಿಗೆ 'ಗೀಗೀ' ಪದಗಳೆಂದು ಇನ್ನೊಂದು ಹೆಸರು. "ಕಮಲುಗುಡ್ಡದ ಹೆಣ್ಣುಮಕ್ಕಳಿಬ್ಬರು ಡಪ್ಪುಹಿಡಿದು ಮುಂದೆ ಹಾಡುವುದನ್ನು ನಾನು ಕಂಡಿದ್ದೇನೆ" ಎಂದೊಬ್ಬರು ಹೇಳುವುದನ್ನು ಪ್ರಸ್ತುತ ಲೇಖಕನೂ ಕೇಳಿದ್ದಾನೆ. ಅಂತೂ ಪ್ರಾದೇಶಿಕ ಹಿನ್ನೆಲೆಯಲ್ಲಿ ಈ ಮೇಳಗಳ ರೀತಿಯಲ್ಲಿ ಬದಲಾವಣೆ ಕಾಣುತ್ತೇವೆ.

ಹರದೇಶಿ ಸಂಪ್ರದಾಯವನ್ನು ಗಂಡೇ ನಡೆಯಿಸಿಕೊಂಡು ಹೋಗಬೇಕೆಂಬ ನಿಯಮವಾಗಲಿ, ನಾಗೇಶಿ ಪಕ್ಷವನ್ನು ಹೆಣ್ಣೇ ನಡೆಯಿಸಿಕೊಂಡು ಹೋಗಬೇಕೆಂಬ ನಿರ್ಬಂಧನೆಯಾಗಲಿ ಇಲ್ಲ. ಈವರೆಗೆ ನಡೆದುಕೊಂಡು ಬಂದ ರೂಢಿಯೆಂದರೆ, ಗಂಡು

* ಸುವರ್ಣಸಂಚಯ. ಪುಟ. ೪೧.

ಪರದೇಶಿ–ನಾಗೇಶಿ ಎರಡೂ ಪಕ್ಷಗಳನ್ನು ನಿರ್ವಹಿಸಬಹುದು: ತಾನು ಗಂಡಾಗಿಯೂ ಹೆಣ್ಣಿನ ಪಕ್ಷವನ್ನು ಹಿಡಿದು ಹಾಡುತ್ತಿದ್ದೇನೆ, ಹೆಣ್ಣನ್ನು ಬೆಳೆಸುತ್ತಿದ್ದೇನೆ ಎಂಬಂಥ ಯಾವೊಂದು ಸಂಕೋಚ ಮನೋಭಾವನೆಯನ್ನೂ ನಾಗೇಶಿಯನ್ನು ವಹಿಸಿ ಹಾಡುವ ಗಂಡು ತಾಳುವುದಿಲ್ಲ. ಆದರೆ ಹೆಣ್ಣು, ಯಾವಾಗಲೂ ನಾಗೇಶಿಪಕ್ಷಗಟ್ಟುತ್ತಾಳೆ. ಸಂಖ್ಯೆಯ ದೃಷ್ಟಿಯಿಂದ ಹೋಲಿಸಿ ನೋಡಿದಾಗ ಗಂಡಿಗಿಂತಲೂ ಹೆಣ್ಣು. ಗೋಷ್ಠಿಯಲ್ಲಿ ಭಾಗವಹಿಸುವುದು ಬಹಳ ಕಡಿಮೆ. ತಮ್ಮ ಪಕ್ಷವನ್ನು ಕಡಿಮೆ ಸಂಖ್ಯೆಯಲ್ಲಿರುವ ತಾವೇ ಎತ್ತಿಹಿಡಿಯದಿದ್ದರೆ ಉಳಿದ ಯಾರು ಅದನ್ನು ಹೊಗಳಬೇಕು. ಎನ್ನುವ ಆಂತರಿಕಪ್ರಜ್ಞೆ. ಹೆಣ್ಣು ಕಟ್ಟುನಿಟ್ಟಾಗಿ ನಾಗೇಶಿಯನ್ನು ಅನುಸರಿಸಲು ಕಾರಣವಾಯಿತೆನೋ.

ಇಷ್ಟದೈವದ ಸ್ತುತಿಯ ತರುವಾಯ ತಾನು ಎಂಥ ಹಾಡು ಹಾಡಬೇಕು, ಸಭೆಯ ಅಭಿರುಚಿಯೇನು ? ಮುಂತಾದ ವಿಷಯಗಳನ್ನೊಳಗೊಂಡ ಹಾಡೊಂದನ್ನು ಹಾಡಿ, ಆ ಮೇಲೆ ಸ್ಪರ್ಧೆಯ ಕಣಕ್ಕಿಳಿಯುತ್ತಾರೆ ಇಬ್ಬರೂ. ಒಂದು ಪಕ್ಷ, ಪ್ರಕೃತಿಯನ್ನು ಮೇಲುಗಟ್ಟಿ ಹಾಡಿದರೆ ಇನ್ನೊಂದು ಪಕ್ಷ, ಶಕ್ತಿಯನ್ನು ಮೇಲುಗಟ್ಟುತ್ತ ಕಥೆ, ಪುರಾಣ, ವೇದ, ಶಾಸ್ತ್ರ ಏನೆಲ್ಲ ಇಲ್ಲಿ ಮುಗುಚಿ ಬೀಳುತ್ತವೆ. ಸವಾಲ್-ಜವಾಬ್ ಗಳನ್ನು ಕೇಳುವಾಗಂತೂ ಆ ಗತ್ತು, ಆ ಒಗರು, ಆ ಆಡಂಬರ ಎಲ್ಲ ಮನಮೋಹಿಸಿ ನಿಶ್ಚಿತವಾಗಿ, ಕೇಳುವ ಸಂದರ್ಭಕ್ಕೆ ಸರಿಯಾಗಿ ಒಂದೊಂದು ಪಕ್ಷಕ್ಕೆ ಆಧೀನ. ಅಭ್ಯಾಸಪೂರ್ಣ ತಯಾರಿಯೊಂದೇ ಎದುರಾಳಿಯನ್ನು ಸೋಲಿಸಬಲ್ಲುದು. ಅಲ್ಲಿಯೇ ಏನಾದರೂ ಹೇಳಿ ಪಾರಾಗುತ್ತೇನೆ ಎಂದರೆ ಎದುರುಪಕ್ಷ ಬಿಡುವುದಿಲ್ಲ. ಹಂಗಿಸಿಯೇ ಬಿಡುತ್ತದೆ.

ಕಡಿಗೆ ಹಾಡಿದರ ಕಲತ ಹಾಡಾರೆ
ತರ್ಕ ಶಾಸ್ತ್ರ ನಿನ್ನಲ್ಲಿ ಕಮ್ಮಾ
ವರಿಗಿ ಹಚ್ಚಿ ಬರೋಬರಿ ಹಾಡತಿವ
ಇಳಿಸಿಬಿಟ್ಟಿವ ತಲಿಯಾನ ದಿಮ್ಮಾ.

ಇದುವರೆಗೆ ಗೆಲ್ಲುತ್ತೇನೆ ಎಂಬ ವಿಶ್ವಾಸದಿಂದಲೇ ಇದ್ದ ಈ ಪಕ್ಷಕ್ಕೆ ಅನಿರೀಕ್ಷಿತ ಆಘಾತ. ಸಾಧ್ಯವಾದಷ್ಟು ತಲೆಕೆದರಿ ಉತ್ತರ ಕೊಡುವ ಪ್ರಯತ್ನ ನಡೆಯುತ್ತದೆ. ಸಾಧ್ಯವಾಗದೇ ಹೋದರೆ, ಅಪಮಾನವಾಗಬಾರದು ಎನ್ನುವ ದೃಷ್ಟಿಯಿಂದ ಇವರೂ ಅದಕ್ಕಿಂತ ಕಠಿಣತರವಾದ ಸವಾಲು ಎಸೆಯುತ್ತಾರೆ. ಅದನ್ನೂ ಮೊದಲಿನ ಪಕ್ಷದವರು ಹೇಳಿದರೋ ಮುಗಿಯಿತು ಇವರ ಗತಿ; ಬಿದ್ದ ಗೂಳಿ-ಆಳಿಗೊಂದು ಕಲ್ಲು. ಸುತ್ತಲೂ ಕೇಕೆ. ಚಪ್ಪಾಳೆ, ಸಿಳ್ಳುಗಳ ಆರಂಭ. ಇವರು ಸಂಪೂರ್ಣವಾಗಿ ಪರಾಭವಗೊಂಡರು ಎನ್ನುವ ಪ್ರಜ್ಞೆ, ಜನಕ್ಕೆ ಬರುತ್ತಲೇ ವಿಜಯ ಸಂಪಾದಿಸಿದ ಪಕ್ಷಕ್ಕೆ ಮತ್ತಷ್ಟು ಹುರುಪು,

ಬಿರದ ಹೇಳಬೇಡ ಮರ್ದನಾಗಬೇಡ
ಸರದ ಹೋಗಬೇಡ ಸಬಾದಾಗ
ಕೂಡಿದ ಮಂದ್ಯಾಗ.

* * *

ಕುಂತಮಂದಿ ಎಲ್ಲಾ ನೀವು ಈತಗ ಬುದ್ಧಿಹೇಳ್ರಿ
ತೂತೂ ಅಂತ ಉಗಳರೆವನ ಮಾರಿ ಮ್ಯಾಲಾ
ತುರಾಯಿದವರು ನಾವು ಮುತ್ತಿನ ತುರಾಯಿ ಹಚ್ಚಿ
ಮೆರಿತೇವ ನಾವು ನಾಡಮ್ಯಾಲಾ.

ಸವಾಲ್–ಜವಾಬ್ ಲಾವಣಿಗಳಲ್ಲಿ ಉಕ್ತವಾಗಿರುವ ಇಂಥ ಮಾತುಗಳಲ್ಲಿ, ಪ್ರತಿಪಕ್ಷವನ್ನು ಸಭೆಯಲ್ಲಿ ಕಾಣುವ ವಕ್ರದೃಷ್ಟಿ ಸುವ್ಯಕ್ತ.

ಇಲ್ಲೆಲ್ಲ ಹಾಡುವವರು ಸುಮ್ಮನೆ ನಿಂತು ಹಾಡುವುದಿಲ್ಲ. ಅವರ ಹಾವಭಾವಗಳನ್ನು ನೋಡುವುದೇ ಒಂದು ಮೋಜು. ಕುಳಿತಂಥ ಎದುರುಪಕ್ಷದ ಕಡೆಗೆ ಕೈ ಮಾಡುವುದು, ಅವರ ಮುಖವನ್ನು ತಿವಿಯುವುದು. ಕುಳಿತ ಎದುರುಪಕ್ಷದವರನ್ನು ಹಾಡುತ್ತ ಸುತ್ತುಹಾಕುವುದು. ಇವೆಲ್ಲ ಧಾರಾಳವಾಗಿ ನಡೆಯುತ್ತವೆ. ಆಗ ಇವರು ಏನೂ ಅನ್ನುವುದಿಲ್ಲ. ತಾವೂ ಹೀಗೆ ಸೇಡುತೀರಿಸಿಕೊಳ್ಳಲು ಸಮಯ ಕಾಯುತ್ತಿರುತ್ತಾರೆ ಅಷ್ಟೆ.

ಹೀಗೆ ನಡೆದ ಗೋಷ್ಠಿಯಲ್ಲಿ ಜಗಳಗಳಾಗುವ ಸಂಭವವೂ ಉಂಟು. ಮುಖ್ಯವಾಗಿ ಅಗಮು*ವನ್ನು ತಪ್ಪಾಗಿ ಹಾಡಿದರೆ ಅಥವಾ ಅಗಮುದಲ್ಲಿರುವ ನಿಜ ಹೆಸರು ಕಿತ್ತು ತಮ್ಮ ಹೆಸರು ಸೇರಿಸಿಕೊಂಡು ಹಾಡಿದರೆ, ಖಂಡಿತವಾಗಿ ಇನ್ನೊಂದು ಪಕ್ಷ ಜಗಳ ಕಾಯುತ್ತದೆ. ಇನ್ನೊಬ್ಬರ ಕಾವ್ಯಶಕ್ತಿಯನ್ನು ತಮ್ಮದನ್ನಾಗಿ ಮಾಡಿಕೊಂಡು, ಹೆಸರು ಬೆಳೆಯಿಸಿಕೊಳ್ಳುತ್ತಿದ್ದಾರೆ ಎಂಬ ತಿಳುವಳಿಕೆಯೇ ಇದಕ್ಕೆ ಕಾರಣ. ಇನ್ನು ಒಂದೇ ವಿಷಯದ ಬಗ್ಗೆ ಭಿನ್ನಾಭಿಪ್ರಾಯ ಕೊಡುವ ಶಾಸ್ತ್ರ, ಪುರಾಣಗಳ ಬಗೆಗೂ ವ್ಯಾಜ್ಯ. ನನ್ನದೇ ಸತ್ಯ ಎಂದು ಇವನು. ಇಲ್ಲ, ನನ್ನದೇ ಸತ್ಯ ಎಂದು ಬೇರೊಬ್ಬ. ನನ್ನದಕ್ಕೆ ಆಧಾರವಿದೆಯೆಂದು ಪುರಾಣ ಬಿಚ್ಚುತ್ತಾನೆ ಮೊದಲಿನವ. ನನಗೂ ಆಧಾರವುಂಟೆಂದು ಮತ್ತೊಬ್ಬನೂ ತನ್ನ ಹೊತ್ತಿಗೆ ತೋರಿಸುತ್ತಾನೆ. ಹೀಗೆ ತಮ್ಮದನ್ನು ತಾವು ಸಮರ್ಥಿಸಿಕೊಳ್ಳುವಲ್ಲಿ ವಾದ ಹೋಗಿ, ವ್ಯಾಜ್ಯಕ್ಕಿಳಿಯುವ ಸಂಭವ ಬಹಳ ವೇಳೆ ಉಂಟು. ಊರ ಹಿರಿಯರೇ ಇವರಿಗೆ ಸಮಾಧಾನಹೇಳಿ, ವ್ಯಾಜ್ಯ ಬಗೆಹರಿಸಬಹುದಲ್ಲದೆ ವಾದ ಮಾತ್ರ ಹಾಗೇ ಉಳಿದು ಇದೇ ಸತ್ಯ ಎಂಬ ಯಾವುದೊಂದು ತೀರ್ಮಾನವೂ ಇತ್ಯರ್ಥಗೊಳ್ಳುವುದಿಲ್ಲ.

* ನೋಡಿ : ಕರ್ನಾಟಕ ಭಾರತಿ ೭–೪ ಪುಟ ೯೧

ಮೇಲೆಮೇಲೆ ಇದೆಲ್ಲ ಹುಡುಗಾಟಿಕೆ. ಜಗಳ ಅನ್ನಿಸಿದರೂ ಹೊಕ್ಕುನೋಡಿದರೆ ವಿಷಯದ ಗಂಭೀರತೆ ಅರ್ಥವಾಗುತ್ತದೆ. ಸವಾಲ್-ಜವಾಬ್‌ಗಳಿಗೆ ಹೊರತುಪಡಿಸಿದ ಹಾಡುಗಳನ್ನು ಹಾಡುವಾಗ ಗೋಷ್ಠಿ, ಅಷ್ಟೇ ಗಾಂಭೀರ್ಯವನ್ನು ಕಾಯ್ದುಕೊಳ್ಳುತ್ತವೆ. ವೀರ, ಕರುಣೆ, ಶೃಂಗಾರ ಮುಂತಾದ ರಸಗಳಿಗೆಲ್ಲ ಇಲ್ಲಿ ಎಡೆದೊರೆತು ಲಾವಣಿಕಾರ, ಸಭಿಕರು ಎಲ್ಲ ತಾದಾತ್ಮ್ಯದ ಶಿಶುಗಳಾಗಿ ವರ್ತಿಸುವಲ್ಲಿ ಸಾಹಿತ್ಯ ಸಾರ್ಥಕತೆಯನ್ನು ತಲುಪುತ್ತದೆ. ಸಂವಾದರೂಪದ ಲಾವಣಿಗಳಲ್ಲಿ ಕೂಗು ಹೊಡೆದ ಜನ, ಹುಚ್ಚೆದ್ದು ಕುಣಿದ ಜನ ಇವರು ಮೊದಲಿನವರೆ ? ಎಂದು ಆಶ್ಚರ್ಯಪಡುವಷ್ಟರ ಮಟ್ಟಿಗೆ ಈಗ ಬದಲಾಗುತ್ತಾರೆ. ಅದರಲ್ಲೂ ಶೋಕಪೂರಿತ ಲಾವಣಿ ಕೇಳುವಾಗಂತೂ ಕಣ್ಣೀರು ಸುರಿಸಿ, ಸಹೃದಯತೆ ತೋರಿಸಿ ಗೋಷ್ಠಿಯ ಮತ್ತೊಂದು ಮುಖದ ಪರಿಚಯಕ್ಕೆ ನಿಜವಾದ ಕಾರಣೀಭೂತರಾಗುತ್ತಾರೆ.

ಹಲವಾರುಬಾರಿ ಉತ್ಸವವನ್ನು ಸಹಜ ನೋಡಲು ಬಂದವನೋ, ಮಾವನ ಮನೆಗೆ ಅಳಿಯತನಕ್ಕಾಗಿ ಬಂದವನೋ, ಅಲ್ಲಿ ನೆರೆದ ಜನರ ಒತ್ತಾಯಕ್ಕಾಗಿ ಇಲ್ಲವೆ ತನ್ನೊಳಗಿನ ಹುರುಪಿಗಾಗಿ ಹಾಡಲು ನಿಲ್ಲುವುದುಂಟು. ಈ ಸಮಯದಲ್ಲಿ ಅಲ್ಲಿ ಕೂಡಿರುವ ಗೀಗಿ ಮೇಳಗಳಿಂದ ಇಬ್ಬರು ಎದ್ದು ಅವನಿಗೆ 'ಸಾತಿ'(ಥಿ) ಆಗುತ್ತಾರೆ; ಅಥವಾ ಒಬ್ಬನೇ ನಿಂತು ಬೈಲುಲಾವಣಿ ಹಾಡಬಹುದು. ಸುಣಗಾರ ಭೀಮಪ್ಪ ಎನ್ನುವವರು ಇಂಥ ಒಂದು ಸಂದರ್ಭವನ್ನು ಚನ್ನಾಗಿ ಸ್ಮರಿಸಿಕೊಂಡು ಹೇಳುತ್ತಾರೆ : "ನನ್ನ ಹರೇದ ಕಾಲಕ್ಕ ಈ ಲಾವಣಿ ಗುಂಗ ಬಾಳ ಇತ್ತರಿ. ಹಾಡಬೇಕು, ನೋಡಬೇಕು, ಮಾಡಬೇಕು ಅನ್ನೂ ಕುಬೇ ಬಾಳಾ; ಹಿಂಗಾಗಿ ಊರೂರ ಊರೂರ ಬಾಳ ತಿರಗತಿದ್ರಿ. ಒಮ್ಮೆ ಹಿಂಗ ಒಂದಕಡೆ ಸಽಜ ಹ್ವಾದಾಗ ಆ ಊರಾಗ ಗೀಗೀಪದಾ ಇದ್ದೂರಿ. ನೋಡಾಕ ನಾನೂ ಹ್ವಾದ್ನಿ. ಅಲ್ಲೇನೋ ಹಾಡಾಕ ರಗಽಡಮಂದಿ ಕೂಡಿದ್ರಿ. ಆದರ ಯಾರ ಹಾಡನೂ ನನ್ನ ಮನಸಿಗಿ ಬರಲಿಲ್ಲಾ. ನಾ ಎದ್ದುನಿಂತ ಈ ಕೂಡಿದ ಮಂದಿ ಎಲ್ಲಾ ಮೆಚ್ಚುಹಾಂಗ ಹಾಡಬೇಕು ಅನ್ನೂದ ಒಂದಽ ಸಮನ ನನ್ನ ಎದ್ಯಾಗ ಕುದ್ಯಾಕಹತ್ರಿ. ಆದರ ನಾನಽ ಕುಂತೆ 'ನಾ ಹಾಡತೀನ್ರಿ ಅಂತ' ಹಿರ್ಯಾರಿಗಿ ಹೋಗಿ ಹೇಳೂದ ಹ್ಯಾಂಗ್ರಿ ? ಅದಕ ಸುಮ್ಮನ ಒಂದ ಗಳಿಗಿ ಕುಂತ್ನಿ. ಆದರ ಮುಂದ ನನಗ ತಡೂಕ್ಕದ ಆಗದ, ಒಬ್ಬನ ಕರದ ಹೇಳಿದ್ನಿ. 'ನೋಡಪಾ ಇವರ್‍ಯಾರ ಹಾಡೂದ ನನ್ನ ಮನಸಿಗಿ ಬರವೊಲ್ದು. ನಾ ಒಂದ ಯಾಡ ಹಾಡಾ ಹಾಡತೇನ. ಅದಕ ನೀ ಎದ್ದುನಿಂತ, ಪನೋಪಾ ಹಿರ್‍ಯಾ ಹಾಂಗ ಕುಂತೀಲಾ, ನೀ ಒಳೆ ಚೆಲೋ ಹಾಡತಿ ಅಂತ ಅನ್ನು, ನಾ ಎದ್ದುಬಂದ ಹಾಡತೇನ' ಅಂತ ಅಂವಗ ಕಲಿಸಿಕೊಟ್ಟ್ನಿ. ನಾ ಕಲಿಸಿ ಕೊಟ್ಟ್ಹಾಂಗ ಅಂವ ಎದ್ದುನಿಂತ ನನ್ನ ಕರದರಿ. ನಾ ಬೇಕಂತ ಅರಿದಾವರ್‍ಹಾಂಗ 'ಛೇ ಛೇ ನನಗೇನ ಹಾಡಾಕ ಬರತಽತ್ಯೋಪಾ' ಅನ್ನಿ. ಆದರ ಕೂಡಿದ ಜನಾ ಬಿಡಲಿಲ್ಲಾ. ಉಳಿದವರ ಅಳಬುರಕ ಹಾಡಾ ಕೇಳಿ ಎಲ್ಲಾರಿಗೂ ಬ್ಯಾಸರೂ ಬಂದಿತ್ತು. ಹಿಂಗಾಗಿ ನನ್ನ ಜಗ್ಗಿ ತಂದ ನಿಲ್ಲಿಸಿಬಿಟ್ರಿ. ಆಗ ನಂದೂ ಸೂರ ಒಳೆ ಚೆಲೋ ಇತ್ರಿ.

ಒಂದ ಹಾಡು ಸುರೂಮಾಡಿದ ಕೂಡ್ಲೆ ಜನಾ ಹುರಿಪಿಗೆದ್ದು ಕೂಗ್ಯಾಡಾಕ್ಹತ್ತಿ ಒಂದ ಹಾಡ ಮುಗ್ಯೂದರೊಳಗ ಮುಂದ. ನೀನs ಹಾಡಪಾ ನೀನs ಹಾಡಪಾ ಅಂದ್ರು. ಮುಂದ ನಾ ಒಲ್ಲಿ ಅಂದ್ರೂ ಕೇಳಲಿಲ್ಲಾ. ಬೆಳ್ಳಬೆಳಗ ಹಾಡಿಸಿದ್ರು. ಮುಂದ ಬೆಳಗ ಹರದವ್ಮ್ಯಾಲ ನನಗ ಹದನೈದ ರೂಪಾಯಿನೂ ಕೊಟ್ಟು ತಕ್ಕ ಮಾನಪಾನೂ ಮಾಡಿದರ್ರಿ."

ಮೇಲಿನ ಈ ಹೇಳಿಕೆಯಲ್ಲಿ ಲಾವಣಿಗೋಷ್ಠಿಯ ಅರ್ಥ ಸ್ವರೂಪವೇ ಕಣ್ಣೆದುರು ನಿಂತಂತಾಗುತ್ತದೆ. ಕಲಾಕಾರನ ಎದೆಯ ಆ ಕುದಿತ ಎಂಥದು. ಹಳ್ಳಿಯ ಹೃದಯಕ್ಕೆ ಅಭಿವ್ಯಕ್ತಿಯ ತೀವ್ರತೆ ಎಷ್ಟು; ಅಥವಾ ಮತ್ತೊಂದು ಕಡೆಗೆ ಇಂಥ ಕಲಾಕಾರರನ್ನು ನೆರೆದ ಜನ ಮೆಚ್ಚುವ ರೀತಿ, ಕಲೆಯನ್ನು ಗುರುತಿಸುವ ಬಗೆ ಎಲ್ಲ ನಮಗೆ ಇಲ್ಲಿ ಪ್ರತ್ಯಕ್ಷ ದರ್ಶನ ಮಾಡಿದಷ್ಟು ಪರಿಚಿತವಾಗುತ್ತವೆ.

ರಾತ್ರಿ ಸುಮಾರು ಹತ್ತು ಹನ್ನೊಂದು ಘಂಟೆಗೆ ಪ್ರಾರಂಭವಾದ ಈ ಗೋಷ್ಠಿ ಮುಕ್ತಾಯವಾಗುವುದು ಸೂರ್ಯೋದಯಕ್ಕೆ. ಇನ್ನೂ ತುರುಸು ಉಳಿದಿದ್ದರೆ ಕೈಮಾರು ಹೊತ್ತೇರುವ ವರೆಗೂ ಈ ಗೋಷ್ಠಿ ನಡೆದು, ಜನರನ್ನು ವಿಸ್ಮಯಗೊಳಿಸುತ್ತದೆ. ಗೋಷ್ಠಿ ಮುಗಿದ ತರುವಾಯ ಭಾಗವಹಿಸಿದವರಿಗೆ ಚಾವಡಿಯಲ್ಲೋ, ದೇವಾಲಯದಲ್ಲೋ ಅಥವಾ ಊರ ಪ್ರಮುಖರ ಮನೆಯಲ್ಲೋ 'ಕುಸಿ' ಕೊಡುತ್ತಾರೆ. ಕುಸಿಕೊಡುವುದೆಂದರೆ ಕೊಡಬೇಕೆಂದಿರುವ ಹಣ ಕೊಡುವುದು; ಹಾಗೇ ಕೇವಲ ಹಣಕೊಡಬಾರದೆಂದು ಸಂಗಡ, ದೇವರ ಪ್ರಸಾದವೂ ಇರುತ್ತದೆ. ಈ ಕುಸಿ. 'ಖುಷಿ' (ಸಂತೋಷ) ಎಂಬ ಶಬ್ದದಿಂದ ಬಂದುದು. ವ್ಯವಸ್ಥಾಪಕರು ಸಂತೋಷದಿಂದ ಕೊಡುತ್ತಾರೆ. ಇವರೂ ಸಂತೋಷದಿಂದ ತೆಗೆದುಕೊಳ್ಳುತ್ತಾರೆ ಎಂಬ ದೃಷ್ಟಿಯಿಂದ ಏನೊ ಸ್ವಲ್ಪ ಎಳೆದಾಟವಾದರೂ ಪ್ರೀತಿ ಹರಿದುಕೊಳ್ಳುವುದಿಲ್ಲ. ಕೆಲವೊಮ್ಮೆ ಕರಾರುಮಾಡಿಕೊಂಡು ಬಂದಿರದಿದ್ದರೆ ಅವರಿಗೆ ಯೋಗ್ಯವಾಗುವ ರೀತಿಯಲ್ಲಿ "ಕೈ ಮುಚ್ಚಿಕೊಡುವ" ಸಂಪ್ರದಾಯ. "ನಮ್ಮ ಕುಸಿ ಹಿಡಿಪಾ" ಎನ್ನುವಲ್ಲಿ ಅವರು ಕೊಟ್ಟದ್ದು—ಸಂತೋಷ. ಪ್ರೀತಿ. ಅದನ್ನೇ ಇವರು ವೈಮನಗಳಲ್ಲಿ ವ್ಯಾಪಿಸಿಕೊಂಡು ಹೋಗುವ ಹಿರಿಮೆ. ಇಂತಲ್ಲಿ ಕಲೆ ಮುಖ್ಯವಾಗಿ ಹಣ ಗೌಣ ಎನ್ನುವುದರಿಂದ. ಪ್ರೀತಿ ಪ್ರಬಲವಾಗಿ ಬಂದವರು ಸಂತೋಷಚಿತ್ತರಾಗಿ ಹಿಂದಿರುಗಬೇಕೆಂಬ ಅಭಿಲಾಷೆಯಿಂದ. ಈ 'ಕುಸಿ' ಎಂಬುದು ಯಥಾಯೋಗ್ಯ ಅರ್ಥ ಪಡೆದಿದೆ ಕುಸಿ ತೆಗೆದುಕೊಂಡ ತರುವಾಯ ಅಲ್ಲಿದ್ದವರ ಅಭಿಲಾಷೆಯ ಮೇರೆಗೆ ಮತ್ತೊಂದು ಹಜಲಾಗುವ ಸಾಧ್ಯತೆಯೂ ಉಂಟು.

ಗೋಷ್ಠಿ ಮುಗಿದ ತರುವಾಯ, ನೋಡಿದ ಜನ ಬೆರಗು ಕಟ್ಟುವಂತೆ ಇವರು ಸ್ನೇಹಿತರಾಗುತ್ತಾರೆ. ರಾತ್ರಿಯುದ್ದಕ್ಕೂ ಬದ್ಧವೈರಿಗಳಂತೆ ಹಾಡಿದ ಇವರು, ಈಗ ಮುಂಜಾನೆ ಸನ್ಮಿತ್ರರಂತೆ ಹಿತಚಿಂತಕರು. ಪರಸ್ಪರ ಹಾಡುವಾಗ ಉದ್ಭವಿಸಿದ ಸಮಸ್ಯೆ

ಗಳನ್ನು ಚರ್ಚಿಸಿ ವಿಚಾರವಿನಿಮಯ ಮಾಡಿಕೊಳ್ಳುತ್ತಾರೆ. ಆದರೆ ಹಾಡುಗಳನ್ನು ಯಾರು ಯಾರಿಗೂ ಕೊಡುವುದಿಲ್ಲ. ಒಂದುವೇಳೆ ಕೊಡುವುದೇ ಆದರೆ ತಮಗೆ ಅವಶ್ಯವಿರುವ ಒಂದು ಲಾವಣಿಯನ್ನು ತೆಗೆದುಕೊಂಡು ಕೊಡುತ್ತಾರೆ. ಒಂದಕ್ಕೆ ಒಂದು ಎರಡಕ್ಕೆ ಎರಡು......

○ ○ ○

ಇನ್ನು ಬೈಲುಲಾವಣಿಯ ರೀತಿ :

ಇಲ್ಲಿ ಒಬ್ಬನೇ ನಿಂತು ಹಾಡುತ್ತಾನೆ, ಮೂರುಮಂದಿಯ ಸ್ಥಾನದಲ್ಲಿ. ಯಾವೊಂದು ವಾದ್ಯವನ್ನೂ ಇವನು ಕೈಯಲ್ಲಿ ಹಿಡಿಯುವುದಿಲ್ಲ. ಕಾಲಲ್ಲಿ ಗೆಜ್ಜೆಯನ್ನು ಮಾತ್ರ ಕೆಲವರು ಕಟ್ಟುತ್ತಿದ್ದರೆಂಬುದನ್ನು ನೋಡಿದವರು ಹೇಳಿದ್ದಾರೆ. ಟೊಂಕಕ್ಕೆ ಧೋತ್ರಕಟ್ಟಿ, ತಾಳಕ್ಕೆ ಸರಿಯಾಗಿ ಚಿಟಿಕೆ ಹಾಕುತ್ತಾ, ನಾಲ್ಕೂ ದಿಕ್ಕಿಗೆ ತಿರುತಿರುಗಿ ಹಾಡುವ ಇವನು, ಮೇಳಲಾವಣಿಯಷ್ಟೇ ಪ್ರಭಾವವನ್ನು ಬೀರಬಲ್ಲ. ಉದ್ದೇಶಪೂರ್ವಕ ಒಂದು ಪಕ್ಷಗಟ್ಟಿ ಹಾಡುತ್ತಿರದಿದ್ದರೆ, ಅನುಭಾವ ಲಾವಣಿಗಳನ್ನೋ ಶೃಂಗಾರ ಲಾವಣಿಗಳನ್ನೋ ವೀರಲಾವಣಿಗಳನ್ನೋ ಹಾಡುತ್ತಾನೆ. ಇವನಿಗೆ ಯಾವ ವಾದ್ಯಗಳು ಬೇಡ ಅನ್ನುವುದರಿಂದ, ಬೆಂಬಲಿಗರ (ಗೀಗೀ ಅನ್ನುವವರ) ಅವಶ್ಯಕತೆ ಇವನಿಗಿಲ್ಲ ಅನ್ನುವುದರಿಂದ ಇವನು ಎಲ್ಲೆಂದರಲ್ಲಿ ಹಾಡಲು ತಯಾರು. ಮೇಳಲಾವಣಿಯಲ್ಲಿಯೇ ಆಗೀಗ ನಿಂತು ಬೈಲುಲಾವಣಿಯನ್ನು ಪ್ರಾರಂಭಿಸುವುದುಂಟು ಸರಿಯೇ. ಡೊಳ್ಳಿನ ಹಾಡಿನ ಮೇಳ ನಡೆದಾಗಲೂ ಈ ಬೈಲುಲಾವಣಿಗಳನ್ನು ಹಾಡಿಸುವರು. ಒಂದೇ ರೀತಿಯ ಹಾಡುಗಳನ್ನು ಕೇಳಿದ ಕಿವಿಗಳಿಗೆ ಸ್ವಲ್ಪ ವೈವಿಧ್ಯ ತುಂಬಿಕೊಡಲು, ೩–೪ ತಾಸಿಗೊಮ್ಮೆ ಲಾವಣಿಕಾರನನ್ನು ಜನ ಹುರುದುಂಬಿಸುತ್ತಾರೆ. ಕರಡಿಮಜಲು, ಹಲಿಗೆಮಜಲು, 'ವಿಶೇಷ ಮಜಲು' ಮುಗಿಸಿ, ಬಿಡುವು ಅನುಭವಿಸಲು ಇವನಿಗೆ ಅವಕಾಶ. ಲಗ್ನ ಸಮಾರಂಭಗಳಲ್ಲಿಯೂ ಈ ಲಾವಣಿಕಾರ ಸಿದ್ಧ. ಕೇಳುವ ಸಹೃದಯರಿದ್ದರೆ ಯಾರ ಮುಲಾಜಿಲ್ಲದೆ, ಯಾವೆಡೆಯಲ್ಲಿಯೂ ಈತ ಹಾಡಬಹುದು. ಇಂಥಲ್ಲೆಲ್ಲ ಉದ್ದೇಶ ಒಂದೇ : ತನ್ನ ಮತ್ತು ಕುಳಿತವರ ಮನಸ್ಸಂತೋಷ.

ಮೇಳಲಾವಣಿಯಂತೆ ಪಕ್ಷಗಳಿಗನುಗುಣವಾಗಿ ಹಾಡುಗಳನ್ನು ಕೂಡಿಸುವ ರೀತಿ ಇಲ್ಲಿಯೂ ಇದೆ. ಆದರೆ ಬೈಲುಲಾವಣಿಯಲ್ಲಿ ಎರಡೂ ಪಕ್ಷಗಳನ್ನು ಪುರುಷರೇ ನಡೆಯಿಸಿಕೊಂಡು ಹೋಗುತ್ತಾರೆ. ಮೇಳಲಾವಣಿಯಂತೆ ಇಲ್ಲಿಯೂ ಮೇಲು-ಕೀಳು ಪ್ರಶ್ನೆ ಉದ್ಭವಿಸುತ್ತ, ಸಂವಾದ ರೂಪದ ಲಾವಣಿಗಳನ್ನು ಹಾಡುತ್ತಾರೆ. ಒಟ್ಟಂದದಲ್ಲಿ ಹೇಳುವುದಾದರೆ, ಹಾಡಿನ ವಸ್ತುವೈವಿಧ್ಯದಲ್ಲಿ ಮೇಳಲಾವಣಿಗೂ ಬೈಲುಲಾವಣಿಗೂ ಹೊಂದುತ್ತದೆ; ಉಳಿದ ವಿಷಯದಲ್ಲಿ ಈ ಮೊದಲು ಮಾಡಿದ ಚರ್ಚೆಯನ್ನು ಗಮನಿಸಿ ಅರಿಯಬಹುದು.

ಮೇಳಲಾವಣಿಕಾರರನ್ನಾಗಲಿ, ಬೈಲುಲಾವಣಿಕಾರರನ್ನಾಗಲಿ ಕರೆಸಲೇಬೇಕು, ಆಗಮಾತ್ರ ಬರುತ್ತಾರೆ ಎಂದೇನೂ ಇಲ್ಲ. ದೊಡ್ಡದೊಡ್ಡ ದೇವಸ್ಥಾನಗಳ ಉತ್ಸವ-ಜಾತ್ರೆಗಳಲ್ಲಿ ಸ್ವಪ್ರೇರಣೆಯಿಂದ, ಹಲವಾರು ಮೇಳಗಳು ಬಂದು ಹಾಡುವುದುಂಟು. 'ದೇವರಿಗೆ ನಮ್ಮ ಸೇವೆ' ಎಂದು ಬಂದು, ತಮ್ಮಲ್ಲಿದ್ದಷ್ಟು ಕಲಾಕೌಶಲ್ಯವನ್ನು ತೋರಿಸಿಕೊಡುತ್ತಾರೆ. ಇಲ್ಲಿಯೂ ತುರುಸು ಒಳಒಳಗೆ ಇದ್ದೇ ಇರುತ್ತದೆ. ಮುಂದ್ದಾಪುರ ಉರುಸಿನಲ್ಲಿ ೩೦-೪೦ ಗೀಗೀ ಮೇಳಗಳು. ಸ್ವಪ್ರೇರಣೆಯಿಂದಲೇ ಕೂಡುತ್ತಿದ್ದುವಂತೆ. ಇಂಥ ಕಡೆಗಳಲ್ಲಿ ನಾಮೊದಲು, ತಾಮೊದಲು ಹಾಡಬೇಕೆಂಬ ಗದ್ದಲವೇ ಹೆಚ್ಚಾಗುವುದರಿಂದ, ಒಂದೊಂದು ಮೇಳಕ್ಕೆ ಒಂದೆರಡು ಹಾಡುಗಳನ್ನು ಮಾತ್ರ ಹಾಡುವಷ್ಟು ಅವಕಾಶವಿರುವುದರಿಂದ, ಲಾವಣಿಸ್ವರೂಪದ ಪೂರ್ತಿದರ್ಶನ ಸಭಿಕನಿಗಾಗುವುದಿಲ್ಲ.

ಇತ್ತೀಚಿನ ಗೋಷ್ಠಿ ಸ್ವರೂಪ, ತೀರ ಬದಲಾಗಿ ಬಿಟ್ಟಿದೆ. ಮುಂಚಿನಂಥ ಗೋಷ್ಠಿ ಅಭಿರುಚಿ, ಈಗ ಜನರಲ್ಲಿ ಕಾಣುವುದಿಲ್ಲ. ಎಲ್ಲೋ ಒಂದೊಂದು ಕಡೆ ಉಳಿದಿದ್ದರೆ ಬೆಂಗಳೂರಂಥ ಪಟ್ಟಣದಲ್ಲಿ ಸೀರೆ-ಕುಪ್ಪಸ ತೊಟ್ಟ ಹಳೆಯ ಕಾಲದ ಮುತ್ತೈದೆಯನ್ನು ಕಂಡಷ್ಟು, ಕ್ವಚಿತ್ತಾಗಿ. ಇಂದು ಲಾವಣಿ ಪ್ರಚಾರದ ಮಾಧ್ಯಮವಾಗಿ ಬರುತ್ತಿದೆ. ಚುನಾವಣೆಯ ಕಾಲಗಳಲ್ಲಿ ಆಯಾ ಪಕ್ಷದ ಮಹತ್ವವನ್ನು ಸಾರುತ್ತ, ಪ್ರಚಾರಕರ ಭಾಷಣಕ್ಕೆ ಮೊದಲು ಹಾಡುತ್ತಾರೆ ಕೆಲವರು. ದೊಡ್ಡವರ ಕೈಯಲ್ಲಿ ಸೂತ್ರದ ಗೊಂಬೆಗಳಂತೆ ಹಾಡೆಂದಾಗ ಹಾಡಿ, ಸಾಕೆಂದಾಗ ಗಪ್ಪನೆ ಬಾಯಿ ಹೊಲಿದುಕೊಳ್ಳುವ ಕರುಣಾಜನಕ ಸ್ಥಿತಿಯನ್ನು ಕಂಡಾಗ, ಅಯ್ಯೋ ಅನ್ನಿಸುತ್ತದೆ.

ದಾಖಲೆ

ದೊಡ್ಡರಂಗೇಗೌಡ

ನಿನ್ನ ಬರುವಿಕೆ ನನ್ನ ದಣಿವಾರಿಸಿತು
ನೀರಡಿಕೆ ನಿವಾರಿಸಿತು; ಈಗ—
ಲಗುಬಗೆ ಶರೀರಕ್ಕೆ ನಿನ್ನಂಗಾಂಗ ಹೊಂದಿಕೆ ಹೊದಿಕೆ.
ಕಪಟರಹಿತ ನಗೆ ಚಿಮ್ಮಿ
ಅಪ್ಪಟ ಮಾತು–ಮಾತಿನ ಚಿಟಿಕೆ, ಎಲ್ಲ ಒಂದಾಗಿ–
ಇಬ್ಬರೊಂದಾಗಿ ಲವಲವಿಕೆ;
ಮೊಂಬತ್ತಿ ಹೊತ್ತಿಸಿ ಬೆಳಕು ರೂಮಿನಲ್ಲಿ–
ಚಿಮ್ಮುವ ಹೊಳಪು, ಮಿಂಚು ಮುಖದಲ್ಲಿ.
ನನ್ನ ಸೋಂಕಿಗೆ ನೀನು ಮೈಚೆಲ್ಲಂವಲ್ಲಿ
ನಿನ್ನಲ್ಲಿ ವಿಶ್ವಾಸದ ಬಿತ್ತು, ಬಿತ್ತುವಲ್ಲಿ ಖುಷಿ, ಹಂದರ
ನನಗೆ—ಮೊಳಕೆಗಾಗಿ ಕಾತರ ನಿನಗೆ.
ಕಣ್ಣುಗಳಲ್ಲಿ ಸಂಕೋಚ ಕಿನಿಸುತ್ತೆ
ಹತ್ತಿ ಉರಿಯುವ ಮೊಂಬತ್ತಿ ಕರಗುತ್ತೆ
ಕತ್ತಲಲ್ಲೂ ಪ್ರೀತಿ ಬೆಳ್ದಿಂಗಳು
ರೂಮಿನ ಗೋಡೆ ಕಿಟಕಿ ಬಾಗಿಲುಗಳಲ್ಲಿ
ತುಂಬಿ ತುಳುಕುತ್ತೆ
ಹುಣ್ಣಿಮೆಯ ಕನಸು ಘನಿಸುವ ವೇಳೆ
ಒಲುಮೆ ಹುಚ್ಚುಹೊಳೆ ಹರಿಯುತ್ತೆ
ಇದೆಲ್ಲ ಎಂಥ ಲೀಲೆ ?

ಅನ್ಯಭಾಷಾ ಬೋಧನೆ

ವಿಲ್ಯಂ ಮಾಡ್ತ

೬. ಸುಯೋಜಿತ ಬೋಧನೆ :

ಮನಶ್ಶಾಸ್ತ್ರದ ತತ್ತ್ವಗಳನ್ನು ಅವಲಂಬಿಸಿ ತಯಾರಿಸಿದ ಬೋಧನೆಯೇ ಸುಯೋಜಿತ ಬೋಧನೆ (Programmed Instruction). ಬೋಧನೆಯ ಗೊತ್ತು, ಗುರಿ, ಉದ್ದೇಶಗಳನ್ನು ಚೆನ್ನಾಗಿ ಅರಿತು ಬೋಧನಾಕ್ರಮದ ಏರ್ಪಾಟು ಮಾಡುವುದು; ತೀವ್ರ ಕಲಿಯುವಿಕೆಗೆ ಅತ್ಯಂತ ಅನುಕೂಲವಾದ ಹಾಗೂ ಸಮರ್ಥವಾದ ಬೋಧನಾಕ್ರಮಕ್ಕೆ ಯೋಗ್ಯವಾದ ವಿಷಯ ಸರಣಿಗಳನ್ನು ಸಿದ್ಧಗೊಳಿಸುವುದು; ಅಲ್ಲದೆ ಅವುಗಳ ಗಾತ್ರ ಹಾಗೂ ಕ್ರಮಾನುಕ್ರಮಗಳನ್ನು ವ್ಯವಸ್ಥಿತಗೊಳಿಸುವುದು; ವಿದ್ಯಾರ್ಥಿಗಳಿಗೆ ಬೋಧಿಸುವ ಪಾಠಗಳ ಗುಣಮಟ್ಟವನ್ನು ತಿಳಿದುಕೊಳ್ಳಲು ಅನುಕೂಲತೆಗಳನ್ನು ಒಳಗೊಂಡಿರುವುದು—ಇವೇ ಮೊದಲಾದ ಗುಣಲಕ್ಷಣಗಳಿಂದ ಸುಯೋಜಿತ ಬೋಧನೆ ಕೂಡಿಕೊಂಡಿದೆ.

ಸಂಯೋಜಿತ ಬೋಧನೆಯನ್ನು ಅಳವಡಿಸುವಲ್ಲಿ, ಮೊತ್ತಮೊದಲು ಬೋಧನೆಯ ಗುರಿಯನ್ನು ಚೆನ್ನಾಗಿ ತಿಳಿದುಕೊಂಡು. ಅದನ್ನು ಸಾಧಿಸಲು ವಿದ್ಯಾರ್ಥಿಯಲ್ಲಿ ಹುದುಗಿಕೊಂಡಿರುವ ವಿದ್ಯಾಶಕ್ತಿಯನ್ನು ಕ್ರಿಯಾಶೀಲವನ್ನಾಗಿ ಮಾಡಿಕೊಳ್ಳುವ ವಿಧಾನವನ್ನು ತಿಳಿದುಕೊಳ್ಳುವುದು, ಅತ್ಯಾವಶ್ಯಕ. ಇದಕ್ಕೆ ಅನುಕೂಲವಾಗಿರುವ ನಿರ್ದಿಷ್ಟ ಉದ್ದೀಪಕ (Stimulus)ಗಳನ್ನು ಪ್ರಸ್ತುತ ಬೋಧನೆಯಲ್ಲಿ ಸಂಯೋಜಿಸಿಕೊಳ್ಳುವುದರಿಂದ. ಈ ಬೋಧನೆಯನ್ನು ಸುಯೋಜಿತ ಬೋಧನೆಯೆಂದು ಕರೆಯುತ್ತಾರೆ.

ಸುಯೋಜಿತ ಬೋಧನೆಯನ್ನು ಬಳಸುವಲ್ಲಿ ಕೆಲವು ನಿರೂಪಣಾತಂತ್ರಗಳು ಬಳಕೆಯಲ್ಲಿವೆ.

೧. **ಸುಯೋಜಿತ ಪಠ್ಯಪುಸ್ತಕಗಳು** (Programmed text books) : ಸುಯೋಜಿತ ಪಠ್ಯಪುಸ್ತಕಗಳಲ್ಲಿ ಸರಳತೆಯಿಂದ ಕ್ಲಿಷ್ಟತೆಯತ್ತ ಸಾಗುವ ಪಾಠಚೌಕಟ್ಟು (frame)ಗಳನ್ನು ಕೊಡುತ್ತಾರೆ. ಸುಲುವಿನ ಪಾಠಗಳನ್ನು ಅರಿಸಿ. ಅವನ್ನು ಚೆನ್ನಾಗಿ ಅರಗಿಸಿಕೊಂಡು ಮುಂದೆ ಹೋದಂತೆ ಭಾಷಾಪ್ರಭುತ್ವವು, ವಿದ್ಯಾರ್ಥಿಗೆ ಸಹಜವಾಗಿ ಬಂದುಬಿಡುತ್ತದೆ.

೨. **ಸ್ವಬೋಧನಾ ಯಂತ್ರಗಳು** : ಉಪಾಧ್ಯಾಯನ ಸಹಾಯವಿಲ್ಲದೆ

ಬೋಧನೆಯನ್ನೀಯುವ ಯಂತ್ರಗಳೇ. ಸ್ವಬೋಧನಾ ಯಂತ್ರಗಳು. ಇವುಗಳ ಸಹಾಯದಿಂದ ಪ್ರತಿಯೊಬ್ಬ ವಿದ್ಯಾರ್ಥಿ. ತನ್ನ ಪ್ರಗತಿಯನ್ನು ಹೊಂದಿಕೊಂಡು ಬೋಧನೆಯನ್ನು ನಿಯಂತ್ರಿಸಿಕೊಳ್ಳಬಹುದು. ಭಾಷಾಪ್ರಯೋಗಶಾಲೆಯಲ್ಲಿಯ ಧ್ವನಿ ಯಂತ್ರೋಪಕರಣಗಳು ಇವಕ್ಕೆ ಉತ್ತಮ ಉದಾಹರಣೆ.

ವಿದ್ಯಾರ್ಥಿಗಳು ಸಂಯೋಜಿತ ಪಠ್ಯಪುಸ್ತಕಗಳನ್ನೇ ಬಳಸಲಿ ಅಥವಾ ಸ್ವಬೋಧನಾ ಯಂತ್ರಗಳನ್ನೇ ಬಳಸಲಿ; ಆದರೆ ಇಲ್ಲಿ ಗಮನಿಸತಕ್ಕ ಅಂಶವೇನೆಂದರೆ ಅವುಗಳಿಗೆ ತಳಹದಿ ರೂಪದಲ್ಲಿರುವ ಯೋಜನೆಯೇ ಹೊರತು. ಪುಸ್ತಕಗಳೂ ಅಲ್ಲ; ಯಂತ್ರಗಳೂ ಅಲ್ಲ. ಓರ್ವ ವ್ಯಕ್ತಿಯು ಯಾವುದೇ ಕ್ರಿಯೆಯ ವಿವರಣೆ ಕೊಡುವುದಾಗಲಿ ಅಥವಾ ವರ್ಗೀಕರಣ ಮಾಡುವುದಾಗಲಿ ಸಾಧ್ಯವಿದೆ: ಅಷ್ಟೇ ಅಲ್ಲ. ನಿಷ್ಕೃಷ್ಟ ವಿಧಾನಗಳಿಂದ ಸಮಂಜಸವಾದ ಬದಲಾವಣೆಗಳನ್ನೂ ಅಲ್ಲಿ ಮಾಡಿಕೊಳ್ಳಬಹುದೆಂಬ ಮನೋವಿಜ್ಞಾನದ ತತ್ತ್ವ. ಸಂಯೋಜಿತ ಬೋಧನೆಗೆ ಅಡಿಪಾಯ ರೂಪದಲ್ಲಿದೆ. ಬೋಧನೆಯ ಗುರಿಯನ್ನು ನಿರ್ಧರಿಸು: ಗುರಿಸಾಧನೆಗಾಗಿ ತಕ್ಕುದಾದ ಪ್ರಚೋದನೆಗಳನ್ನು ಸಂಯೋಜಿಸು; ಯಶಸ್ಸು ಕನಿಷ್ಠವಾದರೂ ಅದನ್ನು ಪ್ರೋತ್ಸಾಹಿಸು–ಎಂಬೀ ಮನೋವೈಜ್ಞಾನಿಕ ಸಲಹೆಗಳಿಗೆ ಸಂಯೋಜಿತ ಬೋಧನೆಯಲ್ಲಿ ಮಹತ್ವವಿದೆ.

ಸಂಯೋಜಿತ ಬೋಧನೆ ಯಶಸ್ವಿಗೊಳ್ಳಬೇಕಾದರೆ, ವಿದ್ಯಾರ್ಥಿಯಾದವನು ಬೋಧನೆಯ ಗುರಿ–ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು, ಸತತ ಅಭ್ಯಾಸವನ್ನು ನಡೆಯಿಸಬೇಕು. ಬೋಧಕನು ಸಂದರ್ಭೋಚಿತವಾಗಿ ಪರೀಕ್ಷೆಗಳನ್ನು ನಡೆಯಿಸಿ, ವಿದ್ಯಾರ್ಥಿಯ ಮಟ್ಟವನ್ನು ಕಾಲಕಾಲಕ್ಕೆ ತಿಳಿದುಕೊಳ್ಳಬೇಕು.

ಪಾಠ ನಮೂನೆಗಳು, ಅವುಗಳ ಅನುಕ್ರಮಣಿಕೆ, ಗಾತ್ರ ಮೊದಲಾದ ವಿಷಯಗಳನ್ನು. ನಡೆಯಿಸಿದ ಪರೀಕ್ಷೆಗಳ ಫಲಿತಾಂಶವನ್ನು ಗಮನದಲ್ಲಿಟ್ಟುಕೊಂಡು ನಿರೂಪಿಸಿಕೊಳ್ಳಬೇಕು. ಪಾಠಗಳನ್ನು ವಿಭಜನಾತ್ಮಕ ರೀತಿಯಿಂದ ಕಲಿತುಕೊಂಡರೂ ಅವುಗಳನ್ನು ಮನನಮಾಡಿಕೊಳ್ಳುವಾಗ ಸಂಯೋಜನಾತ್ಮಕ ದೃಷ್ಟಿಯನ್ನಿಟ್ಟುಕೊಳ್ಳುವುದು ಸೂಕ್ತ. ವಿದ್ಯಾರ್ಥಿಯಲ್ಲಿ ಭಾಷಾಪರಿಣತಿ ಬೆಳೆದುಕೊಂಡು ಬಂದಂತೆ. ಬೋಧಕನು ಕೊಡುವ ಸಲಹೆ ಮುಂತಾದವುಗಳನ್ನು ಕಡಿಮೆಗೊಳಿಸುತ್ತಾ ಬಂದು. ಕಟ್ಟಕಡೆಗೆ ಅವುಗಳನ್ನು ನಿಲ್ಲಿಸಬೇಕು.

ಸಂಯೋಜಿತ ಬೋಧನೆಯ ಗುಣಗಾನ. ಇತ್ತೀಚೆಗೆ ಎಲ್ಲೆಲ್ಲೂ ಕೇಳಬರುತ್ತಿದೆ. ಮಾನವನ ಅತ್ಯಂತ ಶ್ರೇಷ್ಠ ಹಾಗೂ ಗುರುತರವಾದ ಮಾನಸಿಕ ಕ್ರಿಯೆಯೊಂದರ ವಿಶ್ಲೇಷಣೆಯನ್ನು ಅದು ಹೊಂದಿಕೊಂಡಿರುವುದರಿಂದ. ಭಾಷಾಬೋಧನೆ ಹಾಗೂ ಅಧ್ಯಯನದಲ್ಲಿ ಅದಕ್ಕೆ ಹೆಚ್ಚಿನ ಪ್ರಾಧಾನ್ಯ ದೊರೆತಿರುವುದು ಸಹಜವೇ ಸರಿ. ಆದರೆ ಒಂದು ವಿಷಯವನ್ನು ಇಲ್ಲಿ ಗಮನಿಸತಕ್ಕದ್ದು. ಇಂದು ನಮಗೆ ದೊರೆಯುವ ಎಲ್ಲ ಸಂಯೋಜಿತ ಬೋಧನೆಯ ಪಠ್ಯಪುಸ್ತಕಗಳು ಶ್ರೇಷ್ಠದರ್ಜೆಯವುಗಳಲ್ಲ. ಅಷ್ಟೇ

ಅಲ್ಲದೆ ಹಲವುಬಾರಿ ಅವುಗಳಲ್ಲಿ ವಿಜ್ಞಾನದ ಅತಿರೇಕತೆಯನ್ನು ಕೂಡ ನಾವು ಕಾಣುತ್ತೇವೆ. ಬೋಧನೆಯಲ್ಲಿ ಮಾನವೀಯತೆಯ ಅಂಶವೂ ಅಗತ್ಯವಷ್ಟೆ! ಸಂಯೋಜಿತ ಬೋಧನೆಗೆ ಹಣವಿನಿಮಯವೂ ಧಾರಾಳವಾಗಿ ಬೇಕು. ಬಡದೇಶ. ಬಡವಿದ್ಯಾಸಂಸ್ಥೆಗಳಲ್ಲಿ ಅವುಗಳನ್ನು ಅಳವಡಿಸುವುದು, ಅಷ್ಟೇನೂ ಸುಲಭದ ಕೆಲಸವಲ್ಲ. ಅಷ್ಟೇ ಅಲ್ಲದೆ. ಸಾಂಪ್ರದಾಯಿಕ ಬೋಧನೆಗಿಂತ ಸಂಯೋಜಿತ ಬೋಧನೆ ಯಶಸ್ವಿಯನ್ನು ಪಡೆದಿದೆ. ಎಂದು ಖಚಿತವಾಗಿ ಹೇಳುವಂತಹ ನಿರ್ದಿಷ್ಟ ಅಭ್ಯಾಸ ಇನ್ನೂ ಆಗಿಲ್ಲವೆಂದರೆ ತಪ್ಪಾಗಲಾರದು! ಒಮ್ಮೆ ತಯಾರಿಸಿದ ಹೊಸ ಪಾಠ ನಮೂನೆ, ಚೌಕಟ್ಟುಗಳು ತೀವ್ರವಾಗಿ ಹಳೆಯದಾಗುತ್ತವೆ. ದಿನಂಪ್ರತಿ ಹೊಸ ಬೋಧನಾವಿಧಾನಗಳು ಬೆಳೆಯುವುದೇ ಇದಕ್ಕೆ ಕಾರಣ. ಇಂದಿನದು ನಾಳೆಗೆ ಹಳತಾದರೆ, ಹೊಸತಾವುದು ಎಂಬ ಪ್ರಶ್ನೆ ಮೂಡುವುದು ಸಹಜ. ಈ ಕಾರಣಗಳಿಂದಾಗಿ ಸಂಯೋಜಿತ ಬೋಧನೆ ಎಲ್ಲ ಬೋಧನಾ ಸಮಸ್ಯೆಗಳಿಗೆ ಪರಿಹಾರವೆಂದು ತಿಳಿದುಕೊಳ್ಳುವುದು ಅನುಚಿತ.

(ಮುಂದುವರಿಯುವುದು)

ಸ್ತ್ರೀ ಶ್ರಾಪ : ಲಾವಣಿ

ಸಂ : ಸಿ. ವ್ಹಿ. ಪಾಟೀಲ

ನೀಲ್ವರ್ಣದ್ಹೆಣ್ಣ ನೀನು । ನೀರ್ಗಿ ಒದ್ದು ನೀರ್ತರ್ತಿ ।
ಸರ್ಗಿ ಬಂಗಾರಬಳಿ ವಸ್ತ್ರಾ ಇಟ್ಟಿ ಕೊರಳಾಗ ।
ಜರದ ಸೀರೆಯುಂಟ್ಟಿ ವರದ ಕುಬ್ಸ ತೊಟ್ಟಿ ತೋಳಾಗ ।
ಬತ್ಸಗಾಳಿ ಹೆಣ್ಣ ನೀನು । ಅತ್ತಿಹೂವಿನ ಸೀರೆಯುಟ್ಟಿ ।
ಹತ್ತುನೀರ್ಗಿ ಹೋದಂ ಡಾಬಿಟ್ಟಿ ನಡದಾಗ ।
ಸೀತಾಸಂತಾಕಿ ಕಾಣಲಿಲ್ಲೋ ರಾಜದ್ಮ್ಯಾಗ ।
ತೋಳ್ಳೊಡಿ ಬಾಳಿದಿಂಡು । ಹೇಳಿ ಮಾಡ್ಸಿದಂಗ ಶಿವಾ ।
ಬಾಳ್ಮಂದಿ ನಿಂತು ನೋಡ್ತಾರೋಣ್ಯಾಗ ।
ಆಕಿ ಸ್ವರನೋಡ ಸುದ್ದ ಕಿನ್ನರಿ ಶಬ್ದ ನಡದಾಂಗ ।
ತೋಳುಬಂದ್ಗಿ ಬಾಜುಬಂದ ಬೆಳ್ಳಿಬಳಿ ಬಂಗಾರಸರಗಿ ।
ಹಿಂಗ ಹಾಕ್ಸ್ಯಾಳ ಚೌಕಾ ಹಾಕ್ಯಾಳೆದಿಮ್ಯಾಲ ।
ಗೆಜ್ಜಿಟೀಕಿ ಪಿಂಜ್ರಾಗುಂಡ ಲಕ್‌ಲಕ್ ಅಕಿ ಕೊರಳಾಗ ।
ವಸ್ತ್ರಾಕಿನ್ನ ಯಾತ್ಕಿನ್ನ ಕಡೀಮಿಲ್ಲ ।
ಮೌನಸ್ಟ್ಸಾರ ಚಂದ್ರಹಾರ ಪ್ರತಳಿಸರ ಬಂಗಾರದ ಪದ್ಕ ಹಾಕ್ಯಾಳೆದಿಮ್ಯಾಲ ।
ಹಿಂಗ ಏಕಾವಳಿ ಚಿನ್ಮ್ಯಾಗ ಚಿಂತಿ ಪೆಟಿಗ್ಯಾಗ ।
ಹವಳಸರ ಹಾಗಲಕಾಯಿ ಗುಜ್ಜಿಕರಿಮಣಿ ಬ್ಯಾಳಿಮಣಿ ।
ಮಂಗಳಸೂತ್ರದ ಮ್ಯಾಲೆ ಮನಸಿಟ್ಟಿ ಹ್ಯಾಂಗ ।
ಆಕಿ ಗುಜರಾತನಾಡಿನ ಗುಳದಾಳಿ ಕಟ್ಟಿ ನಿಂತಾಳೋಣ್ಯಾಗ ।
ಏನ್ಸುದ್ದ ಹೆಣ್ಣ ನೀನು ? ತಿದ್ದಿ ಮಾಡಿದ್ಹಂಗ ಚೌಕ ।
ಚಂದ್ರನಂತ ನತ್ತ ಇಟ್ಟಿ ಮೂಗಿನ್ಯಾಗ ।
ವಾಲಿ ಬುಗಡಿ ಜಮ್ಕಿ ಮುತ್ತಾ ಹಾಕ್ಸ್ಯಾಳದರಾಗ ।
ರಾಜಚೌಡಿ ಹೇರಳ ಬಂಗಾರ । ರಾಜ್ಯದ ತುಂಬ ನಿನ್ನ ಬೆಳಕ
ರಾಜರಂತ ಹೆಣ್ಣ ಬಂದುನಿಂತೆ ಬಯಲಾಗ ।
ನಿನ್ನ ಹೆರಳಗೊಡಲ ಸರಳ ಬೈತಲಿ ಕೇದಗಿ ಅದರಾಗ ।
ನಿನ್ನ ಹೊಳಪ ತಿಳಿಪಗಲ್ಲ ಗಜನಿಂಬೀ ಹಣ್ಣ ।
ಏನಂ ಹರೆಯುದ ಭಾರ ಬಂತಂ । ಭಾಗೀರಥಿ ಬಂದ್ಹಂಗ ತುಂಬಿ ।

ನಿನ್ನ ಸುರತ ಶಿವನ ಮನಿರಂಬಿ ।
ಜರಾ ಯ್ಯಾಸಿಯಿಲ್ಲಾ ನೆಟ್ಟನ್ನ ಮಾಗಿನ ಕಂಬಿ ।
ನಿನ್ನ ಚಲ್ವಿಕಿ ಸೂತ್ರದನ ಗೊಂಬಿ ।
ನಾ ಹೇಳ್ತಿನಿ ಇಂಥಾಕಿ ಯಾರಿಗೆ ನಂಬಿ ।
ಸುಕುಸ್ಮ ಹೆಣ್ಣ ಶೂಲಿಹಲ್ಲ ಕುಂಕುಮ್ರೇಖಾ ಹಣೆಮ್ಯಾಲ ।
ಕೂಡಿದಚ್ಚು ಕಾಡಿಗಣ್ಣ ತಿರುವ್ಯಾಳೊ ಹ್ಯಾಂಗ ।
ಹುಡಗಿ ನಡಗಿ ನಡಿತ್ಯಾಳೊ ಕುವರಿಜಾಲ ಹೋದ್ಯಾಂಗ ।
ಕೊಟ್ಟಿಗುಣ್ದ ಕೆಟ್ಟಗಣ್ಣ ದೃಷ್ಟಿ ಇಟ್ಟ್ಯಾ ನನಮ್ಯಾಲ ।
ದುಷ್ಟರಾವ್ಣ ಕೆಟ್ಟುಹೋದಾ ಹೆಣ್ಣಿನ್ಯಾಕಲಾಗ ।
ಅವನ ಹತ್ತು ತಲಿ ಇಪ್ಪತ್ತ್ಬುಜಾ ಕೇಳ್ರಿ ಹೋದವಿದ್ಯಾಗ ।
ಅರವಯಿಲ್ಲ ದೈತರ್ವಂಶ ಗರ್ವಿಲಿಂದ ಸೀತಾನ್ಹೊಯ್ದ ।
ಅಲ್ಲಿ ಗರ್ಡಪಕ್ಷಿ ಶಬ್ದಕೇಳಿ ರಥ ತರಬ್ಯಾನ ದಾರ್‍ಯಾಗ ।
ಪತಿವ್ರತಾ ಸೀತಾದೇವಿ ತಪ ಹಾನಿಮಾಡ್ದಾ ರಾವಣ ।
ಸತ್ಯವಂತ ರಾಮುಸ್ವಾಮಿ ಹೋಗಿದ್ವನದಾಗ ।
ಅವರ ಬ್ರಹ್ಮಬರೆದ ಪೂರ್ವಲಿಖಿತಾಗೋದಿದರಾಗ ।
ಗರ್ಡಪಕ್ಷಿ ಪಂಕಾಮುರಿದು ಜಾಡಸಿ ರಥಾನ ಹೊಡೆದ ।
ಸರರರೆ ಹೋಗಿ ನಿಂತಾರ ಲಂಕಾದಾಗ ।
ಅವ್ರು ಏಸುದಿನ ಗುಪ್ತಕಟ್ಟಿ ಇಟ್ಟಾರ ಸೀತಾಗ ।
ರಾಮ್ಲಕ್ಷ್ಮಣ್ಣವ್ರು ರಾಜ್ಯನೆಲ್ಲಾ ತಿರ್‍ಗಿಬಂದು ।
ರಾಗಾ ಮಾಡ್ತಾರ ಕುಂತು ಕೇಳ್ರಿ ವನದಾಗ ।
ಅವ್ರು ಮರಾಮರಾ ಮರುಗತಾರ ತಮ್ಮ ಮನದಾಗ ।
ಅನ್ನ ನೀರು ಅವ್ರಿಗಿಲ್ಲಾ ಹಣ್ಣುಹಂಪ್ಲ ತಿಂತಾರ ।
ಬಾಳ ಸಣ್ಣಾಗಿದ್ದಾರ ಸೀತನ್ಯಾಕಲಾಗ ।
ಬಣ್ಣದ್ಗೊಂಬೀ ಅಂತ ಹೆಣ್ಣ ಆಗಲಿಹ್ವಾದಳ್ಳ್ಯಾಂಗ ।
ರಾಮಚಂದ್ರ ವನದಾಗ ಕುಂತಾನ ಲಕ್ಷ್ಮಣ್ಣ ಹೇಳತಾನ ।
ಇಂದು ಶಂಬು ಮುನಿದಾಸೇನೋ ।
ಸೀತಾನ ರಾವ್ಣ ಒಯ್ದ್ಯಾನೋ ಲಕ್ಷ್ಮಣ ಹೇಳತಾನ ।
ದಶಶಿರಾನ ಹರಿತೇನೋ ಅಷ್ಟ ಪದ್ಮದ ಸೇನಾ ಕೂಡಸ್ತೇನೋ ।
ಲಂಕಾ ಹಲ್ಲಾಮಾಡಿಸಿ ಸೀತಾನ ತರತೇನೋ ।
ರಾಮ್ಗ ಹೇಳ್ತಾನೋ ಧೀರಾ ಆಗಿಕುಂತ ಬೇಖಬರಾ ।
ಶೃತಿಯಿಲ್ಲಾ ವ್ಯರ್ಥ ಜಲ್ಮಹೋದಾಂಗ ।
ರಾಮನೆಂಬ ಶಬ್ದ ಮಾಳಗಿತೇನೋ ರಾಜದ್ಯಾಗ । ಚೌಕ ॥೨॥

ದುಃಖಮಾಡುತಾಳ್ಸೀತಾ ಯಾಳ್ಯಾತಂದಿ ಭಗವಂತಾ ।
ದಿಕ್ಕು ಇಲ್ಲದ ನಾನು ಎತ್ತಹೋಗಲಿ ।
ರಾಮಸ್ವಾಮಿನ ವನದೊಳಗು ಬಿಟ್ಟು ಅಗಲಿ ಬಂದೇನ್ರಿ ।
ಅಕ್ಕ–ತಂಗಿ ಇಲ್ಲದಾಕಿ ಹಕ್ಕಿಹಂಗ ಬಲುಬುತೇನಿ ।
ಸಿಕ್ಕಿದೇನಿ ಬಲಿಯೊಳಗೆತ್ತ ಹೋಗಲಿ ।
ಈ ದೈತ್ಯಾವಂಶವೆಲ್ಲಾ ಹರಿದು ಖಂಡವಾಗಲಿ ।
ಅಣ್ಣ–ತಂಗಿ ಇಲ್ಲದಂಗಾಗಲಿ ಶೂರ್ಪನಕಿಮೂಗು ವನದಾಗ ಕೊಯ್ಯಲಿ ।
ಕುಂಭಕರ್ಣನ ತಲಿಪಲ್ಟಿ ಸಿಡಿದು ಮ್ಯಾಲಕ್ಹಾರಲಿ ।
ಜೆಳ್ಳಿ ಕ್ವಾಟಿ ತಾಮ್ರಕ್ವಾಟಿ ಹಿತ್ತಾಳಿಕ್ವಾಟಿ ।
ಕಲ್ಗೋಡಿ ಮಣ್ಗೋಡಿ ಸಂಹಾರಾಗಲಿ ।
ಅವನ ರತ್ನಕೆಚ್ಚಿದ ಸದರ ಸುಟ್ಟು ಭಸುಮವಾಗಲಿ ।
ಲಂಕಾದ್ಸುತ್ತಾ ರಾಕ್ಷಿ ಕಾವಲಾ ರಾತ್ರಿಹಗಲ ಚೌಕಿಪಾರಾ ।
ಹೇಳಕೇಳ್ದ್ಹಂಗ ಅವ್ರು ಬಿಟ್ಟು ಹೋಗಲಿ ।
ರಾಮನ್ದಂಡಿನಾಗ ಪುಂಡ ಪೋಳೆಂಕಾರ್ಹುಟ್ಟಲಿ ।
ಪಾಸಿಮಾಡಿ ಓದಾ ರಾವ್ಣ ಜನಕಾಣ್ಸೆ ಮ್ಯಾಲೆಹಾಕಿ ।
ಹೋದಾರೊ ಪಣಾ ಇದು ತಪ್ಪದು ರಾಮರ ಬಾಣಾ ।
ಕೈಲಾಸದಾಗ ಹೊಡೆದು ಹಾಕ್ಯಾರೋ ಹೆಣಾ ।
ಸ್ವಾಮಿ ದಯಾ ಇರಲಿ ಕರುಣಾ ।
ಲಂಕಾ ಹಾಳಾಗಿ ಹದ್ದು ಕಾಗಿ ಆಡಲ್ಯೊ ರಣಾ ।
ಹಕ್ಕಿ ಹಲುಬಿದ್ಹಂಗ ಹಲುಬುತಾಳ ಸೀತಾದೇವಿ ।
ಮಂಪ್ರಮಾಡಿ ತಗೊಂಡುಹೋದ ಹಿಂಗ ರಾವ್ಣ । ಚೌಕ ॥೩॥
ಕೋಲಿಕ್ವಾಟ ಕ್ವಾಟಿರಾಕ್ಷಿ ಹಲ್ಲುತೆರಿಯುತಾವೋ ।
ಬಾಳಮಂದಿ ಇದ್ದಿದಾವು ಲಂಕಾದೊಳಗ ।
ಈ ಲಂಕಾದೊಳಗ ಯಾವ ಬಂದ ಸೀತಾನ್ನೋಯ್ಯೋವ್ನ ।
ಹಾರಿಹೋಗೋ ಗರ್ಡಪಕ್ಷಿ ದಾರಿವಳ್ಗ ಹೊಡದ್ಹಾಕಿ ।
ಆರ್ಕ್ವೋಟಿ ಮಂಶಾಸು ಪಡೆದು ಬಂದೆನೋ ।
ಛತ್ತೀಸ್ಕ್ವೋಟಿ ದೇವಾದೇವ್ತೇರ್ನ ಹಿಡ್ದು ಬಂಧಿ ಹಾಕ್ಸಿನೋ ।
ಸಂಖ್ಯೆ ಇಲ್ಲದ ಪದ್ಮದ ದಂಡು ಲಂಕದೊಳ್ಗ ಲೆಕ್ಕವಿಲ್ಲ ।
ಮಾಡಿನ ತೆರಿಯೊಳಗ ಇಂದ್ರಜಿತ ಇದ್ದಾನೋ ।
ರಾಮರ್ಗಂಡು ಕಂಡ್ರೊಂದಕ್ಷಣದಾಗ ಗುದ್ದಿ ಜಿಡ್ತಾನೊ ।
ಮಂರಣೆಲ್ಲಾಂತ ಹೇಳ್ತಾನೋ ಇಂದ್ರಜಿತ ।
ನನ್ನ ಹೊಡಿಯಂತಾವ ಯಾವ್ನುಯಿದ್ದಾನೋ ಶಪ್ತಂತ ।

ನಾರದ ಬಂದ ಸಾಕ್ಷ್ಯಾಂತ ।
ಹೋಮ ಮಾಡಿರಂತ್ಹೇಳತಾನ ಇಂದ ಖಚಿತ ।
ನಡಸುಳಿಯೊಳಗ ಇವನ ಪುರ್ಣಾಂತ ।
ಲಕ್ಷ್ಮಣಗ ಹೇಳ್ತಾನ ಸಾಕ್ಷೀಂತ ।
ಹೋಮಾ ಮಾಡಿದಾ ಇಂದ್ರಜಿತ ।
ಬಾಲ ಬೆಳಸಿದಾ ಹನ್ಮಂತಾ ।
ಕಿತ್ತು ಒಗಿಬೇಕು ಅಂತಾ ಬಾಗ್ಯಾರೊ ತಳಕಾ ।
ಬಾಳ ಜಂಬತುಂಬಿ ಆಡ್ತಾರೊ ಕೇಳ್ವಲ್ಲಿನ್ನೊ ಅವಗ ।
ಲಕ್ಷ್ಮಣ ಬಾಣಾ ಹೊಡದಾ ।
ಇಂದ್ರಜಿತ ಹೋದಾ ಸಿಡಿದಾ ।
ಕೈಹಸ್ತಬಿತ್ತುಹೋಗಿ ಅವನ ಸ್ತ್ರೀಯಾರಂತ್ಹೇಲಿ ।
ಕೈಗುಂತರ್ಗ ಹಿಡ್ಕ್ತ ದುಃಖಮಾಡ್ತಾಳೋ ನಾನಾಪರಿಯಲಿ ।
ಯಾವ್ಬಂದಂ ಬಾಣ ಹೊಡದಾ ।
ಮುತ್ತೈದಿತನಾ ಹೋತೋ ನಂದಾ ।
ಏನ್ಬೇಡಿ ಬಂದಿದ್ದೆನೋ ಶಿವನಲ್ಲಿ ।
ಈ ಜನರ ಒಳಗ ರಂಡಿಆಗಿ ಹ್ಯಾಂಗ ತಿರಗಲಿ ।
ಕೊಂದ ರಾವ್ಣಸತ್ತು ರಾವ್ಣನ್ಹೆಂಡ್ತಿ ರಂಡಿಆಗಲಿ ।
ಬಾಳ ಶಾಪ ಮಾಡ್ತೇನಿ ಮುತ್ತೈದಿತನ ಹೋಗಲಿ ।
ಲೆಂಕಕ್ಕ ರಾಮು ಬರ್ಲಿ ಗುಪ್ತದಿಂದ ಸೀತಾನ್ನೊಯ್ಲಿ ।
ಆಡಿದಂತ ಹರ್ಕಿನಂದು ಕೈಗೂಡಲಿ ।
ಈ ಲೆಂಕದೊಳ್ಗ ಬಿಭೀಷ್ಣಗ ಪಟ್ಟವಾಗಲಿ ।
ಐರಾವಣ–ಮೈರಾವಣರ್ಹೆಂಡರು ರಂಡೇರಾಗಲಿ ।
ಮುಂದೆ ಸತ್ಯಭಾಮಿನಿ ರುಕ್ಮಿಣ್ಯಾಗಿ ಹುಟ್ಟಿಬರಲಿ ।
ಮುಂಟ್ನಿ ಅವತಾರದೊಳಗ ಕೃಷ್ಣ ಅವ್ರನ್ನ ಲಲ್ಲಾಟಮಾಡಲಿ ।
ಸೇರ್ಲಾರ್ದ ಸವತೇರ ಮನಿ ಸೇರೆನಂತ ಕೇಳಿ ಅವ್ರು ।
ನಾನಾಪರಿಯಿಂದ ದುಃಖಮಾಡಲಿ ।
ಸೋಳಾಸಾವಿರ್ಹೆಣ್ಣ್ಯಾರ ಒಳಗ ಕೃಷ್ಣ ಅವ್ರನ್ನ ಲಲ್ಲಾಟಮಾಡಲಿ ।
ಒಬ್ಬೊಬ್ರು ಮಾಡಿದ ಕಿರತಿ ರಾಷ್ಟ್ರಮಾಡಿದ ಶಾಸ್ತ್ರಯಿಲ್ಲಿಗೆ
ಹೆಂಗಮುಗಿತ್ಕೈತಿ । ವಾಲ್ಮೀಕಿ ಮಾಡಿದನೋ ಕತಿ । ಚೌಕ ॥೧॥

ನವ್ಯಕಾವ್ಯದ ಸ್ಥಿತಿ-ಗತಿ

ಗುರುಲಿಂಗ ಕಾಪಸೆ

ಸರಿಯಾಗಿ ಈ ಶತಮಾನದ ಪೂರ್ವಾರ್ಧ ಮುಗಿಯುವ ಹೊತ್ತಿಗೆ, ಕನ್ನಡದಲ್ಲಿ ನವ್ಯಕಾವ್ಯ ಕಾಣಿಸಿಕೊಂಡಿತು. ೧೯೭೫ ನೆಯ ಇಸ್ವಿ ಮುಗಿದರೆ ಅದು, ಬೆಳ್ಳಿಹಬ್ಬದಲ್ಲಿ ಕಾಲಿರಿಸುತ್ತದೆ. ಆದರೆ ಅದು ಆ ಹಬ್ಬವನ್ನು ಆಚರಿಸುವ ಸ್ಥಿತಿಯಲ್ಲಿ ಇಲ್ಲ. ನವ್ಯ ಕವಿಗಳೇ ಹೇಳುತ್ತಿರುವಂತೆ ಅದು ಈಗ ಮುಪ್ಪಾವಸ್ಥೆಯಲ್ಲಿದೆ; ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ ಮರಣೋನ್ಮುಖ ಸ್ಥಿತಿಯಲ್ಲಿದೆ. ಅದು ಈ ಸ್ಥಿತಿಗೆ ಬರಲು ಕಾಲ ಪರಿವರ್ತನೆ ಮುಖ್ಯಕಾರಣವಾದರೂ, ಪರಿವರ್ತಿತಗೊಂಡ ಕಾಲಕ್ಕೆ ತಕ್ಕ ವಾಹಕವಾಗುವ ತಾಕತ್ತು, ಅದಕ್ಕಿಲ್ಲದಿರುವುದೂ ಇನ್ನೊಂದು ಮಹತ್ವದ ಕಾರಣವಾಗಿದೆ. ನವ್ಯಕಾವ್ಯ ಮೊದಮೊದಲಿಗೆ ತೋರಿದ ಭರವಸೆ, ಬೆಳೆಬೆಳೆದಂತೆ ತೋರಿದ ಅಪೂರ್ವತೆ, ಮೊನ್ನೆಮೊನ್ನೆಯವರೆಗೂ ಸಾಹಿತ್ಯ ಸಿಂಹಾಸನದ ಮೇಲೆ ಮೆರೆದ ದುರ್ಯೋಧನ ಛಲ, ಕಾಲಲ್ಲಿಯ ನೆಲ ಕುಸಿಯುತ್ತಿರುವುದನ್ನು ಮರೆತ ನಾಗರಿಕಪ್ರಜ್ಞೆಯ ವಿಭ್ರಮ, ಜನಸಾಮಾನ್ಯರ ಬದುಕಿನ ನೈಜಬವಣೆಗಳನ್ನು ಅಭಿವ್ಯಕ್ತಗೊಳಿಸುವ ಸವಾಲನ್ನು ಎದುರಿಸಿದೆ. ಕಂಗೆಟ್ಟ ಸದ್ಯದ ದುಃಸ್ಥಿತಿ, ಎಲ್ಲವನ್ನೂ ಸಾಕ್ಷಿಯಾಗಿ ನೋಡುತ್ತ ಬಂದ ಸಾಹಿತ್ಯಾಭ್ಯಾಸಿಗೆ ಅದರ ಒಟ್ಟು ಸ್ಥಿತಿ–ಗತಿಗಳ ಬಗ್ಗೆ ಅನಿಸಿದ್ದೇನು? ಎಂಬುದೇ ಈ ಲೇಖನದ ತಿರುಳು. ಅಥವಾ ಇನ್ನೊಂದು ದೃಷ್ಟಿಯಿಂದ ಅಂಥ ಅಭ್ಯಾಸಿಯ ಒಂದು ಪ್ರತಿಕ್ರಿಯೆ ಇದು, ಎಂದೂ ಹೇಳಬಹುದು.

ನವ್ಯಕಾವ್ಯದ ಜನಕರು ವಿ. ಕೃ. ಗೋಕಾಕರು. ಈಲಿಯಟ್, ಎಝ್ರಾಪೌಂಡ, ಆಡೆನ್‌ರನ್ನು ಅಭ್ಯಸಿಸಿದ ಅವರು, ನಮ್ಮಲ್ಲಿಯೂ ಅಂಥ 'ಮಾಡರ್ನ ಪೊಯೆಟ್ರಿ' ಬರಬೇಕಾದುದರ ಅಗತ್ಯವನ್ನು ಕಂಡುಕೊಂಡರು. ಆ ಲಕ್ಷಣಗಳುಳ್ಳ ಕಾವ್ಯ ಪ್ರಕಾರವನ್ನು ನಮ್ಮಲ್ಲಿ ಪ್ರಾರಂಭಿಸಲು ೧೯೫೦ ಡಿಶಂಬರದಲ್ಲಿ ಮುಂಬಯಿಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದ ಲೇಖಕ ಗೋಷ್ಠಿಯ ಅಧ್ಯಕ್ಷ ಪೀಠದಿಂದ ಕರೆಯಿತ್ತರು.[1] ಅದೇ ವರುಷವೇ ತಾವು ರಚಿಸಿದ ಅಂಥ ಕವಿತೆಗಳ ಪ್ರಾಯೋಗಿಕ ಸಂಕಲನವನ್ನು (ನವ್ಯಕವಿತೆಗಳು) ಅವರು ಪ್ರಕಟಿಸಿದರು. ಗೋಕಾಕರ ಆ ಭಾಷಣವನ್ನು ಪ್ರತ್ಯಕ್ಷವಾಗಿ ಕೇಳಿದ ನನಗೆ ಆಗ ಉಂಟಾದ (ಈಗೂ ಇರುವ) ಸಂದೇಹವನ್ನು ಇಲ್ಲಿ ಮೊದಲು ಹೇಳಬೇಕು.

---

1 ಗೋಕಾಕರ ಆ ಭಾಷಣ ಮುಂದೆ 'ನವ್ಯತೆ ಹಾಗೂ ಕಾವ್ಯಜೀವನ' ಎಂಬ ಅವರ ಪುಸ್ತಕದಲ್ಲಿ ಪ್ರಕಟವಾಗಿದೆ.

ಅದೇ ವರ್ಷ ಅಂದರೆ ೧೯೫೦ರ ಫೆಬ್ರುವರಿಯಲ್ಲಷ್ಟೇ ಜರುಗಿದ. ಸೊಲ್ಲಾಪುರ ಸಾಹಿತ್ಯ ಸಮ್ಮೇಲನದ ಕವಿಗೋಷ್ಠಿಯ ಅಧ್ಯಕ್ಷಸ್ಥಾನದಿಂದ ಆಗಿನ ಇನ್ನೊಬ್ಬ ಮಹತ್ವದ ಕವಿಗಳಾದ ಮಧುರಚೆನ್ನರು ತಮ್ಮ ವೈಯಕ್ತಿಕ ಸಾಧನೆಯನ್ನು ಹೇಳುವುದರ ಜೊತೆಗೆ, ಕನ್ನಡ ಕಾವ್ಯದ ಬೆಳವಣಿಗೆಯನ್ನು ಅವಲೋಕಿಸಿದ್ದರು. ಹಾಗೆ ಅವಲೋಕನ ಮಾಡುವಾಗ ಎ. ಇ. ಅರವಿಂದರ ಕಾವ್ಯದ ಮಹತ್ವವನ್ನು ಎತ್ತಿ ತೋರಿಸಿ. ಆ ದಿಶೆಯಲ್ಲಿ ನಮ್ಮ ಕಾವ್ಯ ಮುಂದುವರಿಯಬೇಕೆಂಬುದನ್ನು ಸೂಚಿಸಿದ್ದರು. ಒಂದು ವರ್ಷದಲ್ಲಿಯೇ ಅದೂ ಸಾಹಿತ್ಯಸಮ್ಮೇಲನದ ಗೋಷ್ಠಿಗಳ ಅಧ್ಯಕ್ಷೀಯತದಿಂದ ಎರಡು ವಿರೋಧ ದೃಷ್ಟಿಗಳು ತೋರಿದ್ದುದು ವಿಸ್ಮಯವನ್ನುಂಟು ಮಾಡಿತು. ಮಧುರಚೆನ್ನರದು ಅನುಭಾವ ದೃಷ್ಟಿ, ಗೋಕಾಕರದು ವಾಸ್ತವ ದೃಷ್ಟಿ ಎಂದು ಆ ವಿರೋಧಾಭಿಪ್ರಾಯಗಳಿಗೆ ಕಾರಣವನ್ನು ಹುಡುಕಿಕೊಂಡರೂ ಗೋಕಾಕರ ನಿಲುವೆ ತಕ್ಷಣ ಒಪ್ಪಿಕೊಳ್ಳುವಂತಹುದೆಂದೆನಿಸಿರಲಿಲ್ಲ. ಕುವೆಂಪು. ಬೇಂದ್ರೆ. ಪುತಿನ. ಕಕೆ ಮೊದಲಾದ ಗಣ್ಯಕವಿಗಳ. ಇನ್ನೂ ಬೆಳೆಯುತ್ತಿರುವ ಕಾವ್ಯಸೃಷ್ಟಿ ಆಗ ನಮ್ಮೆದುರಿಗಿತ್ತು. ಅಂತೆಯೇ ಆಗ ನವ್ಯಕಾವ್ಯದ ಬಗ್ಗೆ ಬಿಸಿಬಿಸಿ ಚರ್ಚೆಗಳು ನಡೆದುವು. ಅದನ್ನು ತಿರಸ್ಕಾರದೃಷ್ಟಿಯಿಂದಲೇ ನೋಡುವವರು. ಆಗ ಬಹಳ ಜನರಿದ್ದರೂ ಸುಧಾರಣಾವಾದಿ ಪುರಸ್ಕರ್ತರು ಕೆಲವರು ಮುಂದೆ ಬಂದರು. ಆ ದಿಶೆಯಲ್ಲಿಯೇ ಕಾವ್ಯರಚನೆಗೆ ಅವರು ತೊಡಗಿದರು. ಬರುಬರುತ್ತ ತಿರಸ್ಕಾರಭಾವನೆ ಕುಂದುತ್ತ ಪುರಸ್ಕಾರವು ಬೆಳೆಯುತ್ತಹೋಯಿತು. ಎಲ್ಲ ಹೊಸ ಸುಧಾರಣೆಯು ಕಾಲದಲ್ಲಿ ಹೀಗಾಗುವುದು ಸಹಜವೆಂದು ತೋರುತ್ತದೆ.

ಕಾವ್ಯದ ಬದಲಾವಣೆ, ಜೀವನ ನಿರ್ವಹಣೆಯ ಬದಲಾವಣೆಯನ್ನೇ ಅವಲಂಬಿಸಿರುತ್ತದೆಂಬುದು ಕಾವ್ಯಾಭ್ಯಾಸಿಗಳಿಗೆ ತಿಳಿದಿರುವ ವಿಷಯ. ೧೯೫೦ರ ವೇಳೆಗೆ. ನವ್ಯಕಾವ್ಯ ಸೃಷ್ಟಿಗೆ ಬೇಕಾದ ಜೀವನಪರಿಸರ ನಮ್ಮಲ್ಲಿರಲಿಲ್ಲವೆಂಬುದನ್ನು ಗಮನಿಸದಿರಲಿಕ್ಕಾಗದು. ಸ್ವಾತಂತ್ರ್ಯ ಪಡೆದ ಉತ್ಸಾಹ. ಗಣರಾಜ್ಯದ ಸವಿಯನ್ನು ಅನುಭವಿಸುವ ಉತ್ಸುಕತೆ. ಸ್ವಾತಂತ್ರ್ಯಪ್ರಾಪ್ತಿಗಾಗಿ ಹೋರಾಡಿದವರಿಗೆ. ತ್ಯಾಗಮಾಡಿದವರಿಗೆ ಧನ್ಯತೆಯನ್ನು ಅರ್ಪಿಸುವ ಹಂಬಲ. ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿಯೇ ಜೀವನವನ್ನು ಆದರ್ಶಮಯವಾಗಿ ಮಾಡಿಕೊಳ್ಳಬೇಕೆಂಬ ದೃಷ್ಟಿ. ಜೊತೆಗೆ ಗಾಂಧಿ. ಅರವಿಂದರಂಥವರ ಪ್ರಭಾವಲಯ—ಇವೆಲ್ಲ ಆಗಿದ್ದುವು. ಅಷ್ಟಲ್ಲದೆ ನವೋದಯ ಕಾವ್ಯ. ತನ್ನ ಎಲ್ಲ ಸಾಧ್ಯತೆಗಳನ್ನು ತೋರಿ ಸೋತು ಹೋಗಿರಲಿಲ್ಲ. ಹದಗೆಟ್ಟ ಆರ್ಥಿಕ ಪರಿಸ್ಥಿತಿಯಾಗಲಿ ನೈತಿಕ ವಿಪರ್ಯಾಸಗಳಾಗಲಿ. ಜಾತಿಯತೆಯ ವಿಕ್ಷಿಪ್ತತೆಗಳಾಗಲಿ. ಎಲ್ಲ ಕ್ಷೇತ್ರಗಳಲ್ಲಿಯೂ ರಾಜಕೀಯವೇ ತುಂಬಿತುಳುಕುವ ದುರವಸ್ಥೆಯಾಗಲಿ ಇನ್ನೂ ಪ್ರಾಪ್ತವಾಗಿರಲಿಲ್ಲ. ಹೀಗಿರುವ ಜೀವನವು. ನವ್ಯಕಾವ್ಯಕ್ಕೆ ವಸ್ತುವಾಗುವಂತಹದೆಂದು ಅನಿಸುವುದಿಲ್ಲ. ಅಂದರೆ ಈಲಿಯಟ್‌ನಿಗೆ ದೊರೆತಂತಹ ಕಾವ್ಯಸಾಮಗ್ರಿ ಆ ದೇಶದಲ್ಲಿ ಹೇಗಿತ್ತೋ ಹಾಗೆ ನಮ್ಮಲ್ಲಿರಲಿಲ್ಲ ಎಂಬುದು ಸ್ಪಷ್ಟ.

ಅಂತೂ ಕನ್ನಡದಲ್ಲಿ ನವ್ಯಕಾವ್ಯ ಬಂದದ್ದು ತನಗೆ ಸೂಕ್ತವಾದ ಪರಿಸರದಲ್ಲಿ

ಅಲ್ಲ. ಅಂತೆಯೇ ಅದು ಒಮ್ಮೆಲೆ ತನ್ನ ಪ್ರಭಾವ ಬೀರಲಿಲ್ಲ. ಈ ಹೊಸ ಕಾವ್ಯ ಪ್ರಕಾರಕ್ಕೆ ಆಕರ್ಷಿಸಲ್ಪಟ್ಟ ಹಲವಾರು ಕವಿಗಳು ಎರಡೂ ರೀತಿಯಲ್ಲಿ ಕಾವ್ಯ ರಚಿಸಲು ತೊಡಗಿದರು. ಎರಡನ್ನೂ ಮಿಶ್ರ ಮಾಡಿಯೂ ಕೆಲವರು ಬರೆದರು. ಹೊಸ ತಂತ್ರ ಹಾಗೂ ಹೊಸ ದೃಷ್ಟಿಯನ್ನು ಕಾವ್ಯಕ್ಕೆ ಹೊಂದಿಸಿಕೊಳ್ಳಲು ಬಹುಜನರು ಯತ್ನಿಸಿದ್ದುದನ್ನು ಇಲ್ಲಿ ಕಾಣಬಹುದು. ಆಗ ಪರಿಣತಾವಸ್ಥೆಯಲ್ಲಿದ್ದ ಬೇಂದ್ರೆ, ಕುವೆಂಪು ಮೊದಲಾದವರು ಯಥಾಪ್ರಕಾರ ತಮ್ಮ ಕಾವ್ಯಸೃಷ್ಟಿಯನ್ನು ಮುಂದುವರಿಸಿದರು. ಅನೇಕ ಭಾವಗೀತೆಯ ಮಹತ್ವದ ಸಂಗ್ರಹಗಳು ೧೯೫೦-೬೦ ರ ಮಧ್ಯದಲ್ಲಿ ಪ್ರಕಟವಾದವು. ಬೇಂದ್ರೆಯವರ ಕಾವ್ಯಸಿದ್ಧಿಯ ಗಮನಾರ್ಹ ಕೊಡುಗೆಯಾದ 'ಅರಳು-ಮರಳು' ಮೂಡಿದ್ದೂ ಇದೇ ಅವಧಿಯಲ್ಲಿಯೇ. ಕೆ. ಎಸ್. ನರಸಿಂಹಸ್ವಾಮಿ, ಜಿ. ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ-ಮೊದಲಾದ ಹೊಸ ತಲೆಮಾರಿನವರ ಎದ್ದು ಕಾಣುವ ಭಾವಗೀತ ಸಂಗ್ರಹಗಳೂ ಇದೇ ಕಾಲದಲ್ಲಿ ಪ್ರಕಟವಾಗಿವೆ. ಇವರೆಲ್ಲ ನವ್ಯದ ಕಡೆಗೆ ಹೊರಳುತ್ತಿದ್ದರೂ ನವೋದಯವನ್ನು ಬಿಟ್ಟುಕೊಟ್ಟವರಲ್ಲ. ನಿಜವಾಗಿ ನೋಡಿದರೆ, ೧೯೫೦-೬೦ರ ದಶಕವು ನವೋದಯ ಕಾವ್ಯದ ವೈಭವದ ಕಾಲವೇ ಆಗಿದೆ. ಈ ಅವಧಿಯಲ್ಲಿಯೇ [illegible] ಪ್ರಾರಂಭಿಸಿದ ನವ್ಯಕಾವ್ಯ, ಬಹುಪಾಲು ಕವಿಗಳಿಗೆ ಅನಿವಾರ್ಯವಾದ ಆಂತರಿಕ ಒತ್ತಡವಾಗಿ ಬಂದಂತೆ ಕಾಣುವುದಿಲ್ಲ. ಹೊಸ ಮಾರ್ಗದಿಂದ ಹಿಂದುಳಿಯಬಾರದೆಂದೂ ಅಥವಾ ಪ್ರಚಲಿತವಾದುದರಲ್ಲಿ ತಾವೂ ಚಲಾವಣೆಯ ನಾಣ್ಯವಾಗಬೇಕೆಂದೂ ಅವರು ಬಯಸಿದಂತೆ ತೋರುತ್ತದೆ. ಹೀಗಾಗಿ ಈ ಒಂದು ದಶಕ, ನವೋದಯ ಹಾಗೂ ನವ್ಯ ಕಾವ್ಯಗಳ ಮಿಶ್ರಣವಾಗಿ ಕಾಣುತ್ತದೆ.

ನವ್ಯ ಕಾವ್ಯದ ತಂತ್ರ-ಮಂತ್ರಗಳನ್ನೂ ಶಾಸ್ತ್ರೀಯವಾಗಿ ವಿವೇಚಿಸಿದ ಗೋಕಾಕರು, ತಮ್ಮ ಕಾವ್ಯರಚನೆಯಲ್ಲಿ ಅದನ್ನೆಲ್ಲ ದಿಗ್ದರ್ಶಿಸಲು ಯತ್ನಿಸಿದರೂ "ಸಮುದ್ರಗೀತೆಗಳ"ಲ್ಲಿಯ ಛಂದೋವಿನ್ಯಾಸವನ್ನೂ, ವೈಚಾರಿಕ ಹಾಗೂ ತಾತ್ತ್ವಿಕ ನಿಲುವನ್ನು ತ್ಯಜಿಸಲಿಲ್ಲ. ಅವರು ಮಾನವತೆ, ಅತಿಮಾನವತೆ, ದೇವತ್ವಗಳಂತಹ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಸ್ತರಗಳಲ್ಲಿಯೇ ತಮ್ಮ ಜೀವನವನ್ನು ರೂಪಿಸಿಕೊಳ್ಳುವುದರಲ್ಲಿ ತನ್ಮಯರಾಗಿ, ಅಂಥ ಕಾವ್ಯಕಾವ್ಯವನ್ನೇ ಸೃಷ್ಟಿಸಿದರು. ಅವರ 'ನವ್ಯ ಕವಿತೆ'ಗಳು ಪ್ರಯೋಗಾಲಯ ಮಾದರಿಗಳಂತೆ ಉಳಿದು, ಅವರ ನಿಜವಾದ ಧೋರಣೆ 'ದ್ಯಾವಾ ಪೃಥಿವಿ' 'ಚಿಂತನ'ದಂತಹ ಸಂಗ್ರಹಗಳಲ್ಲಿ ಕಾಣಿಸಿಕೊಂಡಿತು. ನವ್ಯ ಕ್ರಾಂತಿಮಂತ್ರವನ್ನು ಉಪದೇಶಿಸಿದ ಗೋಕಾಕರೇ ಮುಂದೆ ಸಮನ್ವಯ ಬೋಧಕರೂ ಆದರು. ಅವರ ಸಮನ್ವಯವು ಹಳೆ-ಹೊಸ ವಿಚಾರಗಳನ್ನು ಬೆಸೆಯುವ ಇಲ್ಲವೆ, ಎರಡರಲ್ಲಿ ಸಂಧಾನವೇರ್ಪಡಿಸುವ ಒಂದು ಮಧ್ಯಮ ಮಾರ್ಗ. ಈ ಮಾರ್ಗದಲ್ಲಿಯೇ ಜಿ. ಎಸ್ ಶಿವರುದ್ರಪ್ಪ, ಚನ್ನವೀರ ಕಣವಿ, ಗಂಗಾಧರ ಚಿತ್ತಾಲರಂಥ ಕೆಲವು ಮಹತ್ವದ ಕವಿಗಳು ಸೇರ್ಪಡೆಯಾಗುತ್ತಾರೆ. ಆದರೆ ಇವರೆಲ್ಲ ಸೃಷ್ಟಿಸಿದ ಕಾವ್ಯ ನವ್ಯವೆನ್ನುವುದಕ್ಕಿಂತ, ಸಮನ್ವಯ ಕಾವ್ಯವೆಂದು ಹೇಳುವುದು ಸರಿಯೆಂದು ತೋರುತ್ತದೆ. ಕಣವಿಯವರು

ನವ್ಯ ಕಾವ್ಯದ ಆರಂಭದ ದಶಕದಲ್ಲಿ ಪ್ರಕಟವಾದ 'ದೀಪಧಾರಿ'ಯಲ್ಲಿ ತಮ್ಮ ನವೋದಯ ನವ್ಯಗಳಿಗೆ ಸೇತುವೆಯಾಗುವ ಕಾವ್ಯವೆಂದು ಭಾವಿಸಿದ್ದ ಕವನಗಳು ಮಿಶ್ರಣವನ್ನೇ ಎತ್ತಿ ಹಿಡಿಯುತ್ತವೆ. ಬಿದರಪ್ಪನವರ 'ದೀಪದ ಹೆಜ್ಜೆ' ಮತ್ತು ಅವರ 'ಮನುಕುಲದ ಹಾಡು'-ಈ ಸಂಗ್ರಹಗಳು ಅದೇ ಧೋರಣೆಯುಳ್ಳವುಗಳಾಗಿರುವುದನ್ನು ಗುರುತಿಸಬಹುದು.

ನವ್ಯ ಕಾವ್ಯದ ಪ್ರಾರಂಭದ ಹಂತದಲ್ಲಿ ಬಂದ್ದು ನವ್ಯಕವಿಗಳಾಗಿಯೇ ಕಾವ್ಯರಚನೆಗೆ ತೊಡಗಿದವರು ದುರ್ಲಭ. ನನಗೆ ತಿಳಿದಮಟ್ಟಿಗೆ, ಆ ಕಾಲದಲ್ಲಿ ಬಂದ ಮಹತ್ವದ ಕವಿಗಳೆಲ್ಲ ಅವರೆಲ್ಲ ನವೋದಯದಲ್ಲಿ ಹಾಯ್ದೇ ನವ್ಯಕ್ಕೆ ಬಂದಿದ್ದಾರೆ. ಹಾಗೆ ಬಂದವರಲ್ಲಿ ನವ್ಯಕ್ಕೆ ತಮ್ಮನ್ನು ಸಂಪೂರ್ಣ ಒಪ್ಪಿಸಿಕೊಟ್ಟವರೂ ಒಬ್ಬಿಬ್ಬರಿದ್ದಾರೆ; ಅವರಲ್ಲಿ ಎಂ. ಗೋಪಾಲಕೃಷ್ಣ ಅಡಿಗರು ಪ್ರಮುಖರು. ಮತ್ತು ಭಿನ್ನ ದೃಷ್ಟಿಯುಳ್ಳವರಾದ ಅಡಿಗರು, ಜೀವನವನ್ನು ನೋಡುವ ದೃಷ್ಟಿಯೇ ಬೇರೆಯಾಗಿದೆ. ಅವರು ನಮ್ಮ ಜೀವನದ ಒಳತೋಟಿಯನ್ನು, ಕಂದರವನ್ನು ಕಣ್ಣಿಟ್ಟು ಕಣ್ತೆರೆದು ನೋಡಲು ಬಯಸಿದವರು. ಅಂತೆಯೇ ಅವರಿಗೆ ಸಮಾಧಾನ, ಸಂತೃಪ್ತಿಯು, ಪ್ರಸನ್ನತೆಯು ಬದುಕಿನ ಮುಖ್ಯವಾಗಿ ಕಾಣದೆ, ನೈರಾಶ್ಯ, ವಿಕೃತಿ, ತುಮುಲಗಳು ಪ್ರಬಲವಾಗಿ ಕಂಡವು. ಅವರ 'ಕಟ್ಟುವೆವು ನಾವು' ಸಂಗ್ರಹದಲ್ಲಿಯೇ ಅವರಿಗೆ ಇಂಥ ದೃಷ್ಟಿ ಇರುವುದನ್ನು ಕಾಣಬಹುದು. ತಮ್ಮ ಕಾವ್ಯಸಾಧನೆಯ ಒಂದು ಹಂತದಲ್ಲಿ ಅಡಿಗರು 'ನಡೆದು ಬಂದ ದಾರಿ'ಯ ಕಡೆಗೆ ಕಣ್ಣು ತಿರುಗಿಸಬಾರದೆಂದು ಪಣ ತೊಡುವುದಕ್ಕೂ 'ನವ್ಯಕಾವ್ಯ' ಕನ್ನಡದಲ್ಲಿ ಕಾಲಿಡುವುದಕ್ಕೂ ಮೇಳೈಸಿತು. ಈ ಕಾವ್ಯವು ಅವರಿಗೆ ಒಂದು ಪ್ರಯೋಗಿಕ ಮಾರ್ಗವಾಗಿಯೂ, ಹೊಸ ಆಕಾಂಕ್ಷೆಯಾಗಿಯೂ ಕಾಣಿಸಿತು. ಅದರಿಂದ ಅತ್ಯಗತ್ಯವಾದ ಅಭಿವ್ಯಕ್ತಿಯು ಸಾಧ್ಯವಾಗಿ ಕಂಡಿತು. ಅದ್ದರಿಂದ ಅವರು ರಭಸದಿಂದಲೇ ಆ ಮಾರ್ಗದಲ್ಲಿ ನಡೆದರು; ನವ್ಯರ ಮಾರ್ಗದಲ್ಲಿಯೇ ಮುನ್ನಡೆ ನಡೆಸಿದರು.

ಅಡಿಗರು ಈ ಕಾವ್ಯದ ಮೂಲಕ ಮಾಡಿದ ಮಹತ್ವದ ಕಾರ್ಯವೆಂದರೆ: ನಮ್ಮ ಜೀವನವನ್ನು, ಅದರ ಸಮಸ್ಯೆಗಳನ್ನು ಬಿಡುಗಣ್ಣಿನಿಂದ ನೋಡಿದ್ದು. ಬುದ್ಧಿಯ ಕಣ್ಣಿನಿಂದ ನೋಡಲು ಯತ್ನಿಸಿದ್ದು. ವ್ಯಕ್ತಿ-ಸಮಷ್ಟಿಗಳ ಒಳಗಿನ ಸಂಘರ್ಷಗಳನ್ನು ಬಿಡಿಸಿಟ್ಟು ತೋರಿಸಿದ್ದು. ಸ್ವತಂತ್ರಭಾರತದ ಪ್ರಜೆಯಂ ತನ್ನ ಸ್ವಾತಂತ್ರ್ಯವನ್ನೆಯನ್ನು ಬಿಟ್ಟುಕೊಟ್ಟು, ಗುಲಾಮಗಿರಿಯನ್ನು ದ್ರೋಹಿಸಿದ್ದನ್ನು. ಅವರ ಆಮೇಲಿನ ನವ್ಯಕವಿತೆಗಳು. ಅದರಲ್ಲಿಯೂ 'ಭೂಮಿಗೀತ' ಹಾಗೂ ಆ ಸಂಕಲನದಲ್ಲಿರುವ ಇತರ ಕವಿತೆಗಳು ಈ ಮಾತಿಗೆ ಸ್ಪಷ್ಟ ನಿದರ್ಶನಗಳಾಗಿವೆ.

ಈ ದಶಕದ (೧೯೫೦-೬೦) ನವ್ಯಕಾವ್ಯದಲ್ಲಿ ಕಾಣಿಸಿಕೊಂಡ ಇನ್ನೊಂದು ಮಹತ್ವದ ಅಂಶವನ್ನು ಮರೆಯುವಂತಿಲ್ಲ. ಮನುಷ್ಯನ ಮೂಲಪ್ರವೃತ್ತಿಗಳಲ್ಲಿ ಅದಮ್ಯ

ಮಾಡದ್ದು ಕಾಮಪ್ರವೃತ್ತಿ. ಅದನ್ನು ಶುಚಿಗೊಳಿಸಿ, ಅದರಲ್ಲಿಯೇ ಒಂದು ರುಚಿ ತೋರಿಸಿ, ಕಾವ್ಯದಲ್ಲಿ ಅಭಿವ್ಯಕ್ತಗೊಳಿಸುವ ಕಲಾತ್ಮಕ ಪರಂಪರೆ ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿತ್ತು. ಆ ಪರಂಪರೆಯ ಭೂಮಿಕೆಯ ಮೇಲೆಯೇ ನವೋದಯಕಾವ್ಯ ತನ್ನ ರೀತಿಯಲ್ಲಿ ಅದರ ಸೊಗಸನ್ನು ಸೂರೆಗೊಳಿಸಿತ್ತು. ಆದರೆ ನವ್ಯಕಾವ್ಯ ಅದನ್ನು ನೋಡುವ ದೃಷ್ಟಿಯೇ ಭಿನ್ನವಾಯಿತು. ಇದಕ್ಕೆ ಪ್ರೇರಣೆ ದೊರೆತದ್ದು ಮುಖ್ಯತಃ ಫ್ರಾಯಿಡ್‌ನ ಮಾನಸಶಾಸ್ತ್ರ ಸಿದ್ಧಾಂತದಿಂದ. ಅವನು ಎಳೆ ವಯಸ್ಸಿನಿಂದ, ಇಳಿವಯಸ್ಸಿನವರಿಗೆ ಸುಪ್ತವಾಗಿ ಆದರೂ ಪ್ರಖರವಾಗಿ, ವಿಲಕ್ಷಣವಾಗಿ ಇರುವ ಅದರ ವಿವಿಧ ಸ್ವರೂಪಗಳನ್ನು ವಿಶ್ಲೇಷಿಸಿದ್ದನು. ಅವನ ಈ ವಿಶ್ಲೇಷಣೆ ಅರ್ಥಪೂರ್ಣವಾದುದೆಂಬುದನ್ನು ಅನುಭವದಿಂದ ಕಂಡುಕೊಂಡ. ಅನೇಕ ಪಾಶ್ಚಾತ್ಯ ಲೇಖಕರು ಕತೆ, ಕಾದಂಬರಿ, ಕವಿತೆಗಳಲ್ಲಿ ಅದನ್ನು ಆ ದೃಷ್ಟಿಯಿಂದ ನೋಡಿ ಅಭಿವ್ಯಕ್ತಗೊಳಿಸಲು ಉಪಕ್ರಮಿಸಿದ್ದರು. ಅಂಥ ಸಾಹಿತ್ಯವನ್ನು ಓದಿದ, ನಮ್ಮ ಜೀವನದ ಸುತ್ತುಮುತ್ತು ಕಾಣುವ ಆ 'ಲಿಬಿಡೊ'ದ ವೈಶಿಷ್ಟ್ಯವನ್ನು ಅರಿತ ನಮ್ಮ ನವ್ಯ ಕವಿಗಳಿಗೂ ಅದನ್ನು ಕಾವ್ಯದಲ್ಲಿ ಚಿತ್ರಿಸುವುದು ಅಗತ್ಯವಾಗಿ ತೋರಿತು. ಆದರಿಂದ ಅವರೂ ಅದನ್ನು ಕಾವ್ಯವಸ್ತುವಾಗಿ ದುಡಿಸಿಕೊಳ್ಳಲು ತೊಡಗಿದರು. ಈ ದಿಶೆಯಲ್ಲಿ ರಾಮಚಂದ್ರಶರ್ಮರದು ಮುಂಚೂಣಿಯಲ್ಲಿ ನಿಲ್ಲುವ ಹೆಸರು. ಅವರ 'ಏಳುಸುತ್ತಿನ ಕೋಟೆ' ಕಥನಕವನದ ತಂತ್ರವನ್ನು ಒಳಗೊಂಡು ಈ ದೃಷ್ಟಿಯಿಂದ ಮಹತ್ವದ ಕೃತಿಯಾಗಿದೆ. ಈ ಕಾವ್ಯದ ಧೋರಣೆಯಲ್ಲಿ ನವ್ಯತೆ ಪ್ರಖರವಾಗಿದ್ದರೂ ತಂತ್ರದಲ್ಲಿ ಅಲ್ಲಲ್ಲಿ ಬರುವ ವರ್ಣವಿನ್ಯಾಸದಲ್ಲಿ ನವೋದಯದ ಲೇಪನವಿಲ್ಲದಿಲ್ಲ.

ಅಂತೂ ಈ ದಶಕದ ಪೂರ್ವಾರ್ಧದಲ್ಲಿ ನವೋದಯ, ನವ್ಯಕಾವ್ಯಗಳಿಗೆ ಸೇತುವೆಯಾಗುವ ಕಾವ್ಯವೇ ಹೆಚ್ಚಾಗಿದ್ದು ಬರೀ ನವ್ಯವೇ ಆಗಿರುವ ಕವಿತೆಗಳು ಕೆಲವು ಬಂದಿವೆ. ಈ ಕಾರ್ಯ ಕಾವ್ಯಧೋರಣೆಯ ದೃಷ್ಟಿಯಿಂದಷ್ಟೇ ಅಲ್ಲ, ಕಾವ್ಯತಂತ್ರದ ದೃಷ್ಟಿಯಿಂದಲೂ ನಡೆಯಿತು. ನವೋದಯ ಕಾವ್ಯದ ಗುಣಗಳಾದ ವರ್ಣನಾಪ್ರಿಯತೆ, ಸೊಗಸುಗಾರಿಕೆ, ನವುರಾದ ಹಾಸ್ಯ, ಲಯಗಾರಿಕೆ ಮುಂತಾದವುಗಳು ನವ್ಯಕಾವ್ಯದ ಲಕ್ಷಣಗಳಾದ ಛಂದೋಸ್ವಾತಂತ್ರ್ಯ, ಆಡುಮಾತಿನ ಲಯ, ಪ್ರತಿಮೆ-ಸಂಕೇತಗಳ ಸೃಷ್ಟಿ, ತೀಕ್ಷ್ಣ ವಿಡಂಬನೆ, ಮುಂತಾದವುಗಳು ಸಾಮಾನ್ಯವಾಗಿ ಎಲ್ಲ ಕವಿಗಳ ಕವಿತೆಗಳಲ್ಲಿಯೂ ಮಿಶ್ರಣಗೊಂಡಿವೆ. ಬರೀ ನವ್ಯವಾಗಿಸಲು ತೊಡಗಿದ ಅಡಿಗರೂ ಕೂಡ ಬಹು ಮಾತ್ರೆಯ ಗಣಯೋಜನೆಯಿಂದ, ಸರಳರಗಳೆಯ ಬಂಧದಿಂದ, ವಿವರವಾದ ವರ್ಣನೆಗಳಿಂದ, ಪ್ರಾಸಾನುಪ್ರಾಸಗಳ ವ್ಯಾಮೋಹದಿಂದ ಸಂಪೂರ್ಣ ಮುಕ್ತರಾಗಿದ್ದುದು ಕಂಡುಬರುವುದಿಲ್ಲ.

೧೯೫೦-೬೦ ರ ಉತ್ತರಾರ್ಧವು ನವ್ಯಕಾವ್ಯದ ಮಹತ್ವದ ಕಾಲ. ಒಂದೆ ಸೇತುವೆಯ ಕಾವ್ಯ ನಿರ್ಮಿಸುತ್ತಿದ್ದ ಕವಿಗಳು ಈಗ ಅದನ್ನು ದಾಟಲು ಹವಣಿಸಿದ್ದಾರೆ.

ಕೆ. ಎಸ್. ನರಸಿಂಹಸ್ವಾಮಿಯವರು ತಮ್ಮ ಖಾಸಾವಸ್ತುವಾದ ಶೃಂಗಾರವನ್ನು ಜತನದಿಂದ ಬೆಳೆಸುತ್ತ, ಸುಕುಮಾರ ಕಾವ್ಯ ರಚಿಸುತ್ತಿದ್ದವರು 'ಗಡಿಯಾರದಂಗಡಿಯ ಮುಂದೆ' ನಿಂತು ಕಾಲಮಾನವನ್ನು, ಅದರ ಸಂಕೀರ್ಣತೆಯನ್ನು ನಿರೀಕ್ಷಿಸಲು ತೊಡಗಿದ್ದಾರೆ. 'ಮನೆಯಿಂದ ಮನೆಗೆ' ಅಲೆದಾಡಬೇಕಾದ ಅಸ್ಥಿರ ಬದುಕಿನ ಇತಿ-ಮಿತಿಗಳನ್ನು ಅಳೆದು ನೋಡಲು ಯತ್ನಿಸಿದ್ದಾರೆ. ಕಣವಿಯವರು ಸಮಾಜ ಜೀವನದಲ್ಲಿ ಕಾಣಿಸಿಕೊಳ್ಳುವ 'ಅಪರಾವತಾರ' ವನ್ನು ಗುರುತಿಸುವ, 'ಮಣ್ಣಿನ ಮೆರವಣಿಗೆ' ಯಲ್ಲಿರುವ ವಿವಿಧ ಗತ್ತು-ಗಮ್ಮತ್ತುಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಕಣವಿಯವರ ವರ್ಣನಾಪ್ರಿಯತೆ, ಅದರಲ್ಲೂ ಪ್ರಕೃತಿವರ್ಣನೆ, ಭಾವಜೀವಿಯ ಮುಗ್ಧತೆಯನ್ನು ಕಳೆದುಕೊಂಡು ಸಂಕೇತ-ಪ್ರತಿಮೆಗಳಲ್ಲಿ ಪರಿವರ್ತನೆಗೊಂಡು ವ್ಯಂಗ್ಯದ ಘಾಟಿನಿಂದ ಹೊಸತನವನ್ನು ಪಡೆದಿವೆ. ರಭಸ, ರೊಚ್ಚು ಇವರ ಕಾವ್ಯದಲ್ಲಿಲ್ಲದಿದ್ದರೂ ಚುರುಕು ತಟ್ಟಿಸುವ, ನಮ್ಮತನದ ಶೋಧನೆಗೆ ತೊಡಗಿಸುವ ಅರ್ಥಪೂರ್ಣತೆ ಇಲ್ಲಿ ಬೇಕಾದಷ್ಟಿದೆ. ಈ ದಾರಿಯಲ್ಲಿಯೂ ಅವರು ಸಮರ್ಥವಾಗಿ ಕ್ರಮಿಸಬಲ್ಲರೆಂಬುದಕ್ಕೆ, ಆಮೇಲೆ ಬಂದ 'ನೆಲಮುಗಿಲು' ಹಾಗೂ 'ಎರಡು ದಡ' ಸಂಗ್ರಹಗಳಲ್ಲಿಯ ಅವರ ಕೆಲವು ನವ್ಯಕವಿತೆಗಳು ಉದಾಹರಣೆಯಾಗಿವೆ. ಹಾಗಿದ್ದರೂ ಅವರು ನವೋದಯ ಕಾವ್ಯಪ್ರಕಾರವನ್ನು ಉಳಿಸಿಕೊಂಡು ಬಂದಿದ್ದಾರೆ. ಜೀವನದ ಚೆಲುವು-ಒಲವುಗಳನ್ನು ರಮ್ಯವಾಗಿ, ಆತ್ಮೀಯವಾಗಿ ಚಿತ್ರಿಸುತ್ತಿದ್ದ ಜಿ. ಎಸ್. ಶಿವರುದ್ರಪ್ಪನವರು ಹೆಚ್ಚು ಹೆಚ್ಚು ಅಂತರ್ಮುಖಿಗಳಾಗಿ, ಸಮಾಜದ ಅಂತರಂಗದ ಪರಿಶೋಧನೆಗೆ ತೊಡಗಿದ್ದಾರೆ. ಅವರ ದೃಷ್ಟಿಯಲ್ಲಿ 'ಅನಾವರಣ' ವಾಗಬೇಕಾದದ್ದು ಬಾಹ್ಯಜೀವನ ಚಿತ್ರಕ್ಕಲ್ಲ, ಅಂತರಂಗ ಜೀವನಕ್ಕೆ. ಆ ಮುಂದಿನ ಅವರ ಕವಿತೆಗಳಲ್ಲಿ ಅವರ ಸಂಯಮಪೂರ್ಣವಾದ, ಅಬ್ಬರಣೆಯಿಲ್ಲದ, ಆದರೂ ಗಂಭೀರವಾದ ನವ್ಯದ ದಾರಿ ತೆರೆದಿದ್ದು, ಜೀವನದ ಹಲವಾರು ಸನ್ನಿವೇಶಗಳು ಕಾವ್ಯದ ವಸ್ತುವಾಗಿ ರೂಪ ತಾಳುತ್ತವೆ. ಅವರ ಈಚಿನ ಕವನ ಸಂಕಲನವಾದ 'ಗೋಡೆ'ಯಲ್ಲಿ ಅವರದೇ ಆದ ನವ್ಯದ ನೆಲೆಗಟ್ಟಿರುವುದನ್ನು ಕಾಣಬಹುದು. ಹಾಗಿದ್ದೂ ಕಣವಿಯವರಂತೆ ಇವರೂ (ಶಿವರುದ್ರಪ್ಪನವರಂತೆ ಕಣವಿಯವರು ಎಂದೂ ಹೇಳಬಹುದು) ನವೋದಯಮಾರ್ಗವನ್ನು ಸಂಪೂರ್ಣ ತ್ಯಜಿಸಿದವರಲ್ಲ.

ನವ್ಯ ಕಾವ್ಯದ ಆರಂಭದ ದಶಕ ಮುಗಿಯುವ ಹೊತ್ತಿಗೆ, ಆ ಕಾವ್ಯದಲ್ಲಿ ಕೃಷಿ ಮಾಡುವ ಹಲವಾರು ಕವಿಗಳು ಕಾಣಿಸುತ್ತಾರೆ. ಮೊದಲಿನಿಂದಲೇ ಜೀವನವನ್ನು ವಕ್ರದೃಷ್ಟಿಯಿಂದ ನೋಡುವ ವಿ. ಜಿ. ಭಟ್ಟ, ಪುರಾಣ ಪರಂಪರೆಯಲ್ಲಿ ಹೊಸತನವನ್ನು ತೋರುವ ಸು. ರಂ. ಎಕ್ಕುಂಡಿಯವರಲ್ಲದೆ, ಕ. ವೆಂ. ರಾಜಗೋಪಾಲ, ಜಿ. ಎಸ್. ಸಿದ್ಧಲಿಂಗಯ್ಯ, ಎಂ. ಅಕಬರ ಅಲಿ, ದೇವೇಂದ್ರಕುಮಾರ ಹಕಾರಿ, ಚಂದ್ರಕಾಂತ ಕುಸನೂರ ಮುಂತಾದವರು ಹಾಗೂ ಪ್ರಧಾನವಾಗಿ, ಗದ್ಯ ಲೇಖಕರಾದ ಶಂಕರ

ವೆಂಟಾಚಿ – ಪ್ರಕಾಶಕರ, ಯು. ಆರ್. ಅನಂತಮೂರ್ತಿ–ಗಳು ನವ್ಯಕವಿತೆಗಳನ್ನು ಬರೆಯುವುದರಲ್ಲಿ ತೊಡಗಿದ್ದಾರೆ.

೧೯೬೦–೭೦ರ ದಶಕವು ನವ್ಯಕವಿತೆಯ ಏರಿಕೆಯ ಕಾಲ. ಈ ಹಿಂದಿನ ಕವಿಗಳಲ್ಲದೆ, ಹೊಸ ಪೀಳಿಗೆಯೊಂದು ಅಮಿತೋತ್ಸಾಹದಿಂದ ಕಾವ್ಯಸೃಷ್ಟಿಗೆ ಕಾಲಿರಿಸುತ್ತದೆ. ಬಿಸಿನೆತ್ತರಿನ ಈ ತರುಣ ಕವಿಗಳು ಪಾದರಸವಾಗಿ, ಜ್ವಾಲಾಮುಖಿಯೂ ಆಗಿ ಕಾರ್ಯಮಾಡಿದುದನ್ನು ಗಮನಿಸಿದರೆ, ನವ್ಯಕಾವ್ಯಕ್ಕೆ ಈಗ ನಿಜವಾದ ಕಳೆ ಬಂದಿತೆಂದು ಎನಿಸುತ್ತದೆ. ಈ ಹೊತ್ತಿಗೆ ನಮ್ಮ ರಾಷ್ಟ್ರಜೀವನದಲ್ಲಿ, ತನ್ಮೂಲಕ ಸಾಮಾಜಿಕ ಜೀವನದಲ್ಲಿ ಆದ ಬದಲಾವಣೆಗಳೂ ಗಮನಾರ್ಹವಾಗಿವೆ. ಸುರಾಜ್ಯ ಕಟ್ಟುವ ಭಾರತೀಯರ ಕನಸು ಕನಸೇ ಆಗಿ ಉಳಿದು, ಗಟ್ಟಿಹಾಲನ್ನು ಕೊಡಬೇಕಾಗಿದ್ದ ನಮ್ಮ ಸ್ವಾತಂತ್ರ್ಯಧೇನು, ನೀರುನೀರಾದ ಹಾಲನ್ನೇ ಕೊಡಲು ಆರಂಭಿಸಿ, ಸಾಮಾಜಿಕ ಜೀವನ ಅಶಕ್ತವಾಗಿ, ಅನಾರೋಗ್ಯಕರವಾಗಿ ಬಳಲುವಂತಾಗುತ್ತದೆ. ಪಂಚವಾರ್ಷಿಕ ಯೋಜನೆಯ ಮೇಲೆ ಪಂಚವಾರ್ಷಿಕ ಯೋಜನೆಗಳು ಬಂದರೂ ಸಮಾಜವಾದದ ಸಮಾಜರಚನೆಯ ತತ್ತ್ವವು ಕಾರ್ಯರೂಪಕ್ಕೆ ಬರದೆ, ಮಹಲುಗಳಿಗು ಗುಡಿಸಲುಗಳಿಗು ಇರುವ ಅಂತರ ಇನ್ನೂ ಹೆಚ್ಚಾಗುತ್ತದೆ. ನಮ್ಮ ಆದರ್ಶಗಳೆಲ್ಲ ತಲೆಕೆಳಗಾಗುವಂತಹ, ನೈತಿಕಬಂಧನಗಳೆಲ್ಲ ಶಿಥಿಲವಾಗುವಂತಹ ದಿನಮಾನಗಳು ಬಂದುಬಿಡುತ್ತವೆ. ಸ್ವಾರ್ಥ, ಪಕ್ಷಪಾತ, ಭ್ರಷ್ಟಾಚಾರ, ಎಲ್ಲ ಕ್ಷೇತ್ರಗಳಲ್ಲಿ, ಎಲ್ಲ ಹಂತಗಳಲ್ಲಿ ವಿಜೃಂಭಿಸ ತೊಡಗುತ್ತವೆ. ಇಂಥವುಗಳನ್ನು ಕಾವ್ಯವಸ್ತುವಾಗಿ ದುಡಿಸಿಕೊಳ್ಳುವ, ಕಾವ್ಯದ ಮೂಲಕವೇ ತಮ್ಮ ಬೌದ್ಧಿಕ ಪ್ರತಿಕ್ರಿಯೆ ತೋರಿಸಬೇಕಾದ ಜವಾಬ್ದಾರಿ, ತರುಣ ಕವಿಗಳದಾಗುತ್ತದೆ. ಇದನ್ನರಿತ ಅವರು, ದಿಟ್ಟತನದಿಂದಲೇ ಎಲ್ಲ ಆಹ್ವಾನವನ್ನು ಎದುರಿಸಲು ಸಿದ್ಧರಾಗುತ್ತಾರೆ. ಕೆ. ಎಸ್. ನಿಸಾರ್ ಅಹಮದ್, ಚಂದ್ರಶೇಖರ ಪಾಟೀಲ, ಪಿ. ಲಂಕೇಶ, ಕೆ. ಪಿ. ಪೂರ್ಣಚಂದ್ರ ತೇಜಸ್ವಿ–ಇವರೇ ಮೊದಲಾದವರು ಹರಿತವಾಗಿ, ಕಟುವಾಗಿ, ಖಾರವಾಗಿ ಅದರೂ ವ್ಯಂಗವಾಗಿ (ಒಮ್ಮೊಮ್ಮೆ ವಾಚ್ಯವೂ ಆಗಿರಬಹುದು) ಅಂಥ ವಸ್ತುವನ್ನಾಯ್ದುಕೊಂಡು, ರಚಿಸಿದ ಕವಿತೆಗಳು ಗಮನಾರ್ಹವಾಗಿವೆ. ಕೆಲವು ಜನ ವಿಮರ್ಶಕರಿಗೆ ಅವರು ಬಳಸುವ ಪದಗಳು, ಪ್ರತಿಮೆಗಳು, ಜೀವನ ದೃಶ್ಯಗಳು ಅಸಹ್ಯವಾಗಿ ಕಂಡರೂ ಅವರು ವಾಸ್ತವವಾದುದನ್ನೇ ಕಾವ್ಯವಾಗಿಸಿದ್ದಾರೆಂಬುದು ಬುದ್ಧಿಯಿದ್ದವರಿಗೆಲ್ಲ ತಿಳಿದಿರುವ ವಿಷಯ.

ಹೀಗೆ ನಮ್ಮ ಸಾಮಾಜಿಕ, ರಾಜಕೀಯ ದುರವಸ್ಥೆಯನ್ನು ಚಿತ್ರಿಸುವ ದೃಷ್ಟಿ ಒಂದು ಕಡೆ ಮೂಡಿದ್ದರೂ ಇನ್ನೊಂದು ಕಡೆಗೆ, ಈ ಮೇಲೆ ಹೇಳಿದ ಕವಿಗಳನ್ನು ಒಳಗೊಂಡು ಬಹುಪಾಲು ಕವಿಗಳದೃಷ್ಟಿ ಹರಿದದ್ದು ಲೈಂಗಿಕ ವಿಷಯದ ಕಡೆಗೆ. ನವೋದಯಕಾವ್ಯವನ್ನು ನೈಸರ್ಗಿಕ, ಕೌಟುಂಬಿಕ, ಸಾಮಾಜಿಕ, ರಾಷ್ಟ್ರೀಯ, ಆಧ್ಯಾತ್ಮಿಕ ಎಂದು ಮುಂತಾಗಿ ವಿಂಗಡಿಸುವಂತೆ, ನವ್ಯಕಾವ್ಯವನ್ನು ಲೈಂಗಿಕ ಮತ್ತು ಲೈಂಗಿಕೇತರ

ಎಂದು ಎರಡೇ ವಿಭಾಗಗಳಲ್ಲಿ ವಿಂಗಡಿಸುವಷ್ಟು ಲೈಂಗಿಕಪ್ರಜ್ಞೆ ಪ್ರಖರವಾಗಿದೆ. ಲೈಂಗಿಕ ವಿಷಯವನ್ನು ಕುರಿತು ಬರೆದ ಕವಿತೆಗಳಲ್ಲಿ ಕಂಡುಬರುವ ಹಸಿ-ಹಸಿ ಅನುಭವಗಳಲ್ಲಿ ಕವಿಯ ಸ್ವಂತದ್ದೆಷ್ಟು ಎಂಬುದನ್ನು ಗುರುತಿಸುವುದೇ ಕಷ್ಟ. ತಮ್ಮ ಮನಸ್ಸಿನ ಚಪಲವನ್ನೆಲ್ಲ ಕಾವ್ಯ ಮುಖಾಂತರ ಈಡೇರಿಸಿಕೊಳ್ಳಲು, ಅದರಲ್ಲಿಯೇ ಖುಷಿಪಟ್ಟುಕೊಳ್ಳಲು ಇವರು ಯತ್ನಿಸುತ್ತಾರೋ ಏನೋ, ಎನ್ನುವಂತಹ ಕವಿತೆಗಳೂ ಬಂದಿವೆ. ಹೀಗೆಂದು ಹೇಳುವಾಗ, ಬದುಕಿನ ಜ್ವಲಂತಸಮಸ್ಯೆಗಳಲ್ಲೊಂದಾದ ಕಾಮವನ್ನು ಕುರಿತು ಬರೆಯುವುದು ತಪ್ಪೆಂದರ್ಥವಲ್ಲ. ಅದು ಎಷ್ಟರ ಮಟ್ಟಿಗೆ ಅನುಭವಪೂರ್ಣವಾಗಿ, ಸಾರ್ಥಕವಾಗಿ ಅಭಿವ್ಯಕ್ತಿಗೊಂಡಿದೆ, ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸಬೇಕೆಂಬುದು ಇಲ್ಲಿಯ ಅಭಿಪ್ರಾಯ. ಈ ವಿಷಯದಲ್ಲಿ ಎಚ್. ಎಂ. ಚೆನ್ನಯ್ಯ, ನಿಸಾರ್ ಅಹಮದ್, ಸಿದ್ಧಲಿಂಗ ಪಟ್ಟಣಶೆಟ್ಟಿ, ಸುಮತೀಂದ್ರ ನಾಡಿಗ, ಚಂದ್ರಶೇಖರ ಕಂಬಾರ—ಈ ಮೊದಲಾದವರ ಕಾವ್ಯ ಉಲ್ಲೇಖನೀಯವಾಗಿದೆ. ಕಾಮದ ಅತಿರೇಕ, ವ್ಯತಿರೇಕಗಳನ್ನೂ ಚಿತ್ರಿಸಲೆಳಸಿದ ಈ ಕವಿಗಳು ಮಡಿವಂತಿಕೆಯಿಲ್ಲದೆ, ಸಂಕೋಚವಿಲ್ಲದೆ ಅದರ ವಿವಿಧ ಮೈ-ಮಗ್ಗುಲುಗಳನ್ನು ಕಾವ್ಯವಾಗಿಸಿದರು. ನಮ್ಮ ಪ್ರಜ್ಞೆಯ ಒಳಹೊಕ್ಕು ನೋಡುವ, ಅದರ ಸುರುಳಿ ಬಿಚ್ಚುವ, ಅದರ ಸಂಕೀರ್ಣತೆಯ ಹೊಲಿಗೆ ಬಿಚ್ಚಿ ಬಯಲಿಗಿಡುವ ಕಾರ್ಯವನ್ನು ಇವರೆಲ್ಲರ ಕಾವ್ಯ ಮಾಡಿತೆನ್ನಬೇಕು.

ಈ ದಶಕದಲ್ಲಿ ಇನ್ನೊಂದು ಹೊಸ ಜನಾಂಗ ಕಾವ್ಯರಚನೆಗೆ ಅಣಿಯಾಗಿದೆ. ಇವರಿಗೆ ಈ ಹಿಂದಿನವರು ನಿರ್ಮಿಸಿಟ್ಟ ಸಂಕೇತ, ಪ್ರತಿಮೆಗಳ ಮಾಡೆಲ್ಲುಗಳು, ಭಾಷೆ-ಲಯಗಳ ಮಾದರಿಗಳು ಸಿದ್ಧಸಾಮಗ್ರಿಯಾಗಿ ದೊರೆತು ಕಾವ್ಯರಚನೆ ಹೆಚ್ಚು ಸುಲಭವೆನಿಸಿದೆ. ವಯಸ್ಸಿನಿಂದಲೂ ಮನಸ್ಸಿನಿಂದಲೂ ತರುಣರಾದ ಇವರು, ತಮಗೆ ತಿಳಿದೋ ತಿಳಿಯದೆಯೋ ಹಿಂದಿನ ಕವಿಗಳ ನುಡಿಗಟ್ಟುಗಳನ್ನು, ಪ್ರತಿಮೆಗಳನ್ನು ಅನಾಮತ್ತಾಗಿ ಎತ್ತಿಕೊಂಡು ತಮ್ಮದೇ ಆದ ಕಾವ್ಯವನ್ನು ನಿರ್ಮಿಸಿಕೊಂಡ ಉದಾಹರಣೆಗಳೂ ಸಿಗುತ್ತವೆ. ಹಾಗಿದ್ದೂ ಇವರಲ್ಲಿ ಕೆಲವರು ತಮ್ಮ ಸ್ವಂತಿಕೆಯನ್ನು ಪ್ರದರ್ಶಿಸಿದ್ದಾರೆ. ಕೆ ವಿ ತಿರುಮಲೇಶ, ಸೋಮಶೇಖರ ಇಮ್ರಾಪೂರ, ದೊಡ್ಡರಂಗೇಗೌಡ, ಜಯಸುದರ್ಶನ, ಸುಬ್ರಾಯ ಚೊಕ್ಕಾಡಿ, ಕಾಳೇಗೌಡ ನಾಗವಾರ, ಶ್ರೀಕೃಷ್ಣ ಆಲನಹಳ್ಳಿ, ಚೆನ್ನಣ್ಣ ವಾಲೀಕಾರ—ಈ ಮೊದಲಾದವರು ಕಾವ್ಯರಚನೆಯಲ್ಲಿ ತೋರಿದ ಕಾಳಜಿ ಮಹತ್ವದ್ದಾಗಿದೆ. ತಂತ್ರದಲ್ಲಿ ಈ ಹಿಂದಿನ ಎಲ್ಲ ಕವಿಗಳನ್ನು ದಾಟಿಹೋಗುವಂತಹ ಕಾವ್ಯ ಬಂದದ್ದು ಎ. ಕೆ. ರಾಮಾನುಜನ್ ಅವರಿಂದ. ಚಂದ್ರಕಾಂತ ಕುಸನೂರರೂ ಅಂಥ ಕೆಲವು ವಿಲಕ್ಷಣವಾದ ಪ್ರಯೋಗಗಳನ್ನು ಮಾಡಿದ್ದುಂಟು. ಆದರೂ ರಾಮಾನುಜನ್‌ರ ವೈಶಿಷ್ಟ್ಯವೇ ಬೇರೆ. ನವ್ಯ ಕಾವ್ಯದಲ್ಲಿಯ ಲಯಗಳು, ಕಾವ್ಯವಸ್ತು ಹಾಗೂ ಅಭಿವ್ಯಕ್ತಿಯ ಅರ್ಥವಂತಿಕೆಯನ್ನವಲಂಬಿಸಿ, ವಿವಿಧ ಬಗೆಯಾಗಿ ಕಾಣಿಸಿಕೊಂಡವು. ಆದರಲ್ಲಿಯ ಗದ್ಯತನ ಮಾತ್ರ, ಆಡುಮಾತಿನ ಲಯ ಸ್ವಲ್ಪ ಹೆಚ್ಚುಕಡಿಮೆ ಎಲ್ಲ ಕವಿಗಳಲ್ಲಿ ಒಂದೇ ರೀತಿಯಾಗಿದೆ. ಗದ್ಯಸಾಲು, ಉದ್ದಸಾಲು, ಉದ್ದುದ್ದಸಾಲು ಇಷ್ಟಾದರೆ ಮುಗಿಯಿತು.

ಆದರೆ ರಾಮಾನುಜನ್. ಅವರಲ್ಲಿಯೇ ಒಂದು ನವೀನತೆಯನ್ನು ತೋರ್ಪಡಿಸಿದ್ದಾರೆ. ಅವರು ಲಯಗಳನ್ನು ಮುರಿವ, ಮೋಡುಗೊಳಿಸುವ, ಕಮಾಸಿಸುವ ಗಮ್ಮತ್ತು ಆಕರ್ಷಕವಾಗಿದೆ. ಅವರ ಕೆಲವು ಪ್ರತಿಮೆಗಳೂ ವಿಲಕ್ಷಣವಾಗಿವೆ. ಇಷ್ಟೆಲ್ಲ ಇದ್ದರೂ ಅವರ ಕಾವ್ಯಧೋರಣೆಯಲ್ಲಿ ಸ್ವದೇಶಿಗಿಂತ ಪರದೇಶಿತನವೇ ಹೆಚ್ಚಾಗಿದೆ.

ಈ ದಶಕದಲ್ಲಿ ಧ್ವನಿಗೂಡಿಸಿದ ಕವಿಗಳನ್ನು ಎಣಿಸಿ ಹೇಳುವುದು ಸುಲಭವಾಗಿಲ್ಲ. 'ಲಹರಿ'. 'ಸಂಕ್ರಮಣ'. 'ಸಮೀಕ್ಷೆ'. 'ಸಾಕ್ಷಿ'ಗಳಂತಹ ಪತ್ರಿಕೆಗಳು ಹೊಸ ಕವಿಗಳನ್ನು ಬೆಳಕಿಗೆ ತಂದವದ್ದೇ ತಾವವು. ಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದುಕೊಡುವಲ್ಲಿ ಈ ಪತ್ರಿಕೆಗಳು-ವಿಶೇಷವಾಗಿ 'ಸಂಕ್ರಮಣ', 'ಸಾಕ್ಷಿ'ಗಳು-ಮಾಡಿದ ಕಾರ್ಯ ನವೋ ದಯ ಕಾಲದಲ್ಲಿ 'ಜಯ ಕರ್ನಾಟಕ' ಮತ್ತು 'ಜೀವನ' ಪತ್ರಿಕೆಗಳು ಮಾಡಿದ್ದುದರಷ್ಟೇ ಮಹತ್ವದ್ದಾಗಿದೆ ಅಂದಿನವುಗಳಿಗಿಂತ ಇಂದಿನ ಪತ್ರಿಕೆಗಳ ಕಾರ್ಯ ಮಿಗಿಲಾದದ್ದೆಂದು ವಾದಿಸುವವರಿದ್ದರೆ ಅವರಿಗೆ ಸಾಹಿತ್ಯದ ಇತಿಹಾಸವೇ ಗೊತ್ತಿಲ್ಲವೆನ್ನಬೇಕು. ಅಷ್ಟೆ. 'ಪ್ರಬುದ್ಧ ಕರ್ಣಾಟಕ' 'ಕರ್ನಾಟಕ ಭಾರತಿ' 'ಸಾಧನೆ'-ಈ ಪತ್ರಿಕೆಗಳೂ ಅಂಶತಃ ಆ ಕಾರ್ಯ ನಿರ್ವಹಿಸುತ್ತಿವೆ. ಅದೇನೆ ಇರಲಿ, ಈ ದಶಕದಲ್ಲಿ ಬೆಳೆದ ಬನ್ನಂಜೆ. ಲಕ್ಷ್ಮೀ ನಾರಾಯಣ ಭಟ್ಟ. ಹಿಂಗಮಿರೆ. ರಾಮದಾಸ್, ಸಿಂಹ ಕೊಳ್ಳೆಗಾಲ. ರಾಮಚಂದ್ರ ದೇವ, ಬಿ ಆರ್. ಲಕ್ಷ್ಮಣರಾವ-ಹೀಗೆ ಹಲವಾರು ಕವಿಗಳನ್ನು ಹೆಸರಿಸುತ್ತ ಹೋಗ ಬಹುದು.

ಮೂರನೆಯ ದಶಕದಲ್ಲಿ ಅಂದರೆ ೧೯೭೦ರಿಂದೀಚೆಗೆ ಬಂದ ನವ್ಯಕಾವ್ಯ (ಇನ್ನೂ ದಶಕದ ಅರ್ಧಭಾಗ ಕ್ರಮಿಸದಿದ್ದರೂ) ಕಡಿಮೆ ಪ್ರಮಾಣದ್ದೇನೂ ಅಲ್ಲ. ತೀರ ಹೊಸಧ್ವನಿಗಳೂ ಈಚೆಗೆ ಕೇಳಿಬರುತ್ತಲಿವೆ. ಈಚೆಗೆ ನವ್ಯಕಾವ್ಯದ ಅಭಿವ್ಯಕ್ತಿಯ ಬಗ್ಗೆ ತೀವ್ರವಾದ ಅತೃಪ್ತಿ ಕಂಡುಬರುತ್ತಿದೆ. ಕೆಲವು ಮಹತ್ವದ ಕವಿಗಳು, ನವ್ಯ ಕಾವ್ಯದಲ್ಲಿಯ ಏಕತಾನತೆಗೋ ಅಥವಾ ಕೆಲವು ಸಂಕೀರ್ಣಾನುಭವಗಳನ್ನೂ ಅಭಿ ವ್ಯಕ್ತಗೊಳಿಸಲು ಅದು ಸರಿಯಾದ ಮಾಧ್ಯಮವಾಗಲಾರದೆಂದೋ ಅಸಂಗತ ನಾಟ ಕಗಳ ಕಡೆಗೆ, ಕತೆ-ಕಾದಂಬರಿಗಳ ಕಡೆಗೆ ಮುಖ ತಿರುವಿದ್ದಾರೆ. ಈ ಲೇಖನದ ಆರಂಭ ದಲ್ಲಿ ಹೇಳಿದಂತೆ ನವ್ಯಕಾವ್ಯ ಇಳಿಮುಖದಲ್ಲಿದೆ, ಇಲ್ಲವೆ ಗೋರಿಗೆ ಹೋಗುವ ಸ್ಥಿತಿಯಲ್ಲಿದೆ ಎಂದು ಅನಿಸುತ್ತಿದ್ದರೂ ಯಾವುದೇ ಕಾವ್ಯ, ಇದ್ದಕ್ಕಿದ್ದಂತೆ ಕಣ್ಮರೆ ಯಾಗುವಂಥದ್ದಲ್ಲ. ನವೋದಯ ಕಾವ್ಯವೇ ಈವರೆಗೂ ಸಂಪೂರ್ಣ ಮರೆಯಾಗದಿರು ವಾಗ, ನವ್ಯಕಾವ್ಯ ಸತ್ತಿತು ಎಂದು ಏಕಾಏಕಿ ಘೋಷಿಸುವುದು ಸರಿಯಾಗಿ ಕಾಣುವು ದಿಲ್ಲ. ಇಷ್ಟು ಮಾತ್ರ ನಿಜ: ಈಗ ಕಾವ್ಯದೃಷ್ಟಿ ಬದಲಾಗಿದೆ. ನಗರಜೀವನದಿಂದ ಹೊರಬಂದು ಗ್ರಾಮೀಣ ಜೀವನದ ಕಡೆಗೆ, ಶ್ರೀಮಂತಮನಸ್ಸಿನ ಭೋಗಜೀವನದ ಸಂಕೀರ್ಣತೆಯಿಂದ ಬಿಡಿಸಿಕೊಂಡು ದೀನದಲಿತರ ಅಸಹಾಯಕತೆಯೆಡೆಗೆ. ಮಹಾ ನಗರಗಳ ಮಹಲುಗಳ ಒಳಗೆ ಕಣ್ಣಾಡಿಸುವ ಬದಲು ಗುಡಿಸಲುಗಳ ಕಡೆಗೆ, ಕಲಿತ ಮದ

ಗಳಿಂದ ಸಿಡಿದು ಚಾಲ್ತಿ ಮಾತುಗಳ ಕಡೆಗೆ ಇಂದಿನ ಕವಿಗಳು ತೀವ್ರವಾಗಿ, ನಿಖರವಾಗಿ ವಾಲುತ್ತಿದ್ದಾರೆ. ಇದು ನವ್ಯಕಾವ್ಯದ ಹೊಸತಿರುವೋ ಅಥವಾ ಕನ್ನಡಕಾವ್ಯದ ಇನ್ನೊಂದು ಹೊಸ ಪ್ರಕಾರವೋ ಎಂಬುದನ್ನು ಈಗಲೇ ಹೇಳುವುದು ಕಠಿಣ. ಅದು ಯಾವ ರೂಪಕ್ಕೆ ಬಂದುನಿಲ್ಲುತ್ತದೆಂಬುದನ್ನು ಇನ್ನೂ ಕಾದು ನೋಡಬೇಕು.

ಎರಡು-ಮೂರು ವರ್ಷಗಳ ಹಿಂದೆ ಬೆಂಗಳೂರಿನ ಕಡೆಗೆ, ತೆಲುಗಿನ ಪ್ರೇರಣೆಯಿಂದ 'ದಿಗಂಬರ ಕಾವ್ಯ'ವೊಂದು ಕಾಣಿಸಿಕೊಂಡಿತ್ತು. ಅದು ಈಗ ಕನ್ನಡದಲ್ಲಿ ಜೋರಾಗಿ ಕಾರ್ಯ ಮಾಡುತ್ತಿರುವಂತೆ ಕಂಡುಬರುವುದಿಲ್ಲ. ತೀರ ಈಚೀಚೆಗೆ ಧಾರವಾಡದ ಕಡೆಯ ಕೆಲವು ಕವಿಗಳು ಮರಾಠಿ 'ದಲಿತ ಪ್ಯಾಂಥರ್ಸ' ಪ್ರೇರಣೆಯಿಂದ ಅಂಥ ಸಾಹಿತ್ಯ ನಿರ್ಮಾಣದ ಕಡೆಗೆ ಗಮನ ಹರಿಸಿದ್ದಾರೆ. ಇವರ ಸಾಧನೆಯೆಲ್ಲ ಇನ್ನೂ ಮುಂದೆ ಇದೆ. ಅವರು ಏನನ್ನು ಸಾಧಿಸಿ ತೋರಿಸುತ್ತಾರೆಂಬುದು ಭವಿಷತ್ಕಾಲಕ್ಕೆ ಬಿಟ್ಟುಕೊಟ್ಟ ಮಾತು.

ಈ ಇಪ್ಪತ್ನಾಲ್ಕು ವರ್ಷಗಳ ನವ್ಯಕಾವ್ಯದ ಇತಿಹಾಸದಲ್ಲಿ ಕಂಡುಬರುವ ಗುಣದೋಷಗಳನ್ನು ಹೀಗೆ ಸೂಚಿಸಬಹುದು :

ಗುಣಗಳು : ೧. ಭಾವುಕತೆ, ಕನಸುಗಾರಿಕೆ ನಿಂತು ವೈಚಾರಿಕತೆ ವಾಸ್ತವತೆ ಬೆಳೆದದ್ದು. ೨. ಆದರ್ಶದ ಹೆಸರಿನ ಒಳಗೆ ಹುದುಗಿರುವ ವೈಚಿತ್ರ್ಯಗಳನ್ನು ದಿಟ್ಟತನದಿಂದ ವಿಡಂಬಿಸಿದ್ದು. ೩. ಮಾನವ ಮನಸ್ಸಿನ ಒಳತೋಟಿಯನ್ನು ಶೋಧಿಸಲು ಉಪಕ್ರಮಿಸಿದ್ದು. ೪. ಭಿಡೆ-ಮುರವತ್ತುಗಳಿಲ್ಲದೆ ಘಟಾನುಘಟಿಗಳ ಸೋಗಲಾಡಿತನವನ್ನು ಬಯಲಿಗೆಳೆದದ್ದು. ೫. ಕಾಮದ ವಿಕೃತಸ್ವರೂಪಗಳನ್ನು ಹಿಂದು-ಮುಂದು ನೋಡದೆ ಚಿತ್ರಿಸಿದ್ದು. ೬. ಛಂದಸ್ಸಿಗೆ ಸಂಪೂರ್ಣಸ್ವಾತಂತ್ರ್ಯ ತಂದುಕೊಟ್ಟು. ಸಭ್ಯವಲ್ಲದ ಪದಗಳನ್ನು Poetic diction ನಲ್ಲಿ ಸಮಾವೇಶಗೊಳಿಸಿದ್ದು. ೭. ಸಂಕೇತ ಪ್ರತಿಮೆಗಳಲ್ಲಿ ನಾವೀನ್ಯತೆಯನ್ನು ಮೆರೆಸಿದ್ದು. ಇತ್ಯಾದಿ.

ದೋಷಗಳು : ೧. 'ಮಣ್ಣಿನ ವಾಸನೆ' ಎಂದು ಹೇಳಿ, ನಗರದ ಟಾರಿನ, ಗಟಾರಿನ ವಾಸನೆಯನ್ನೇ ಹೆಚ್ಚಾಗಿ ಘಮ್ಮೆನಿಸಿದ್ದು. ೨. ಸಾಮಾಜಿಕರ ಹತ್ತಿರಕ್ಕೆ ಬರದೆ, ಕಾಲೇಜು–ವಿಶ್ವವಿದ್ಯಾಲಯಗಳ ಅಂತಸ್ಥಿನಲ್ಲಿಯೇ ವಿರಾಜಿಸಿದ್ದು. ೩. ಒಂದೇ ರೀತಿಯ ನಡಿಗೆಯಿಂದ ಕಾಲು ಸವೆಸಿಕೊಂಡದ್ದು. ೪. ಅಸ್ಪಷ್ಟ ಸಂಕೇತ-ಪ್ರತಿಮೆಗಳಿಂದ ದುರ್ಗ್ರಾಹ್ಯವಾದದ್ದು. ಇತ್ಯಾದಿ. ಇಲ್ಲಿಯ ಛಂದಸ್ಸು ಮತ್ತು ಸಂಕೇತ-ಪ್ರತಿಮೆಗಳಿಗೆ ಹೇಳಿದ ಗುಣ–ದೋಷಗಳನ್ನು ಒಟ್ಟಿಗೆ ನೋಡಿದರೆ ವಿರೋಧಾಭಾಸವಾಗಿ ಕಾಣಬಹುದು. ಹಾಗೆ ನೋಡದೆ ಆ ಆ ಹೇಳಿಕೆಗಳ ಹಿಂದೆ ಇರುವ ನಿಜವಾದ ಸಂದರ್ಭವನ್ನು ನೆನೆದುಕೊಂಡು ಅರ್ಥೈಸಿಕೊಳ್ಳಬೇಕು.

ಈ ರೀತಿಯಾಗಿ ಹುಟ್ಟಿ, ಬೆಳೆದು, ಬಾಳಿ, ಬದಲಾಗುತ್ತಿರುವ ನವ್ಯಕಾವ್ಯದ

ಆಯಾ ದಿನ ಸ್ಥಿತಿ-ಗತಿಗಳನ್ನು ತಿಳಿಸಿಕೊಡಬಲ್ಲ ನಾಲ್ಕು ಆ್ಯಂಥೋಲೊಜಿಗಳು[2] ನಮ್ಮಲ್ಲಿ ಉಪಲಬ್ಧವಿರುವುದು ಒಂದು ವಿಶೇಷವೆಂದೇ ಹೇಳಬೇಕು ಈ ಸಂದರ್ಭದಲ್ಲಿ. ಆ ಆ್ಯಂಥೋಲೊಜಿಗಳು ಎಷ್ಟರಮಟ್ಟಿಗೆ ನವ್ಯಕಾವ್ಯದ ಪರಿಚಯವನ್ನು ಮಾಡಿಕೊಡುತ್ತವೆಂಬುವನ್ನು ನೋಡುವುದು ಸೂಕ್ತವೆನಿಸುತ್ತದೆ.

ನವ್ಯಧ್ವನಿ (೧೯೫೭) ಪ್ರಥಮ ಆ್ಯಂಥೊಲೊಜಿ. ಇದರಲ್ಲಿಯ ಹೆಚ್ಚು ಕವಿತೆಗಳು ಗೋಕಾಕರು, ಅವರ ದ್ವಿತೀಯ ಮುದ್ರಣದ ಮುನ್ನುಡಿಯಲ್ಲಿ ಸೂಚಿಸಿದಂತೆ 'ನವ್ಯತೆಯನ್ನು ಸಮೀಕರಿಸಿ ಪ್ರಗತಿಶೀಲ ಹಾಗೂ ಉಪನವ್ಯತೆಯನ್ನು ದಾಟಿ ನವ್ಯ ಕವಿತೆಗಳನ್ನೇ ಬರೆಯಲುಪಕ್ರಮಿಸಿದ್ದು ಇಲ್ಲಿಯೇ ಕಂಡುಬರುತ್ತದೆ. ನವ್ಯಕಾವ್ಯದ ಮೈಲುಗಲ್ಲಾಗಿರುವ 'ಭೂಮಿಗೀತ', ಈ ಸಂಕಲನದಲ್ಲಿಯೇ ಇರುವುದು ಗಮನಾರ್ಹ ಅಂಶವಾಗಿದೆ. ಅನಂತರ ಒಂಬತ್ತು ವರ್ಷಗಳ ಮೇಲೆ ಬಂದ 'ಸಂಕ್ರಮಣ-ಕಾವ್ಯ' (೧೯೬೬) ನವ್ಯದ್ದೇ ಆದ ವಿಶಿಷ್ಟ ಕವಿತೆಗಳನ್ನು ಸಂಗ್ರಹಿಸಿದ್ದರೂ ಕೆಲವು ಹಳೆಯವಿಕೆಗಳನ್ನು ಸೇರಿಸಿಕೊಂಡು ಹಂಡಬಂಡಾಗಿ ಹೆಸರಿಗೆ ತಕ್ಕಹಾಗೆ ಸಂಕ್ರಮಣಾವಸ್ಥೆ ಉಳ್ಳುದಾಗಿದೆ. ಮುಂದೆ ಐದುವರ್ಷಗಳ ಮೇಲೆ 'ಅಕ್ಷರಹೊಸ-ಕಾವ್ಯ' ಬಂದಿದೆ. ಸಂಪಾದಕರ, ವಿಶೇಷವಾಗಿ ಪ್ರಕಾಶಕರ ಅಲಕ್ಷ್ಯತನದಿಂದಲೊ, ಅದಕ್ಷತೆಯಿಂದಲೊ ಐತಿಹಾಸಿಕ ದಾಖಲೆಯಾಗಿರಬೇಕಾದ ಇಸ್ವಿ, ಈ ಪುಸ್ತಕದ ಯಾವ ಮೂಲೆಯಲ್ಲಿಯೂ ಕಾಣಿಸುವುದಿಲ್ಲ. ಲೇಖಕರ ಪರಿಚಯದಲ್ಲಿ ಒಬ್ಬೊಬ್ಬರ ೧೯೭೦ರಲ್ಲಿ ಪ್ರಕಟವಾದ ಕೃತಿಗಳ ಸೂಚನೆಯಿರುವುದರಿಂದ, ಇದು ಆ ಇಸ್ವಿಯಲ್ಲಿ ಅಥವಾ ಅನಂತರ ಪ್ರಕಟವಾಗಿರಬೇಕು. ಪುಸ್ತಕದ ಕೊನೆಯ ಪುಟದ ಮೇಲೆ 'ಕಳೆದ ಇಪ್ಪತ್ತು ವರ್ಷಗಳ ಅವಧಿಯಲ್ಲಿ ರಚಿತವಾಗಿರುವ ಮುಖ್ಯಕವನಗಳ ಈ ಸಂಗ್ರಹ', ಎಂದಿರುವ ಮಾತಿನಲ್ಲಿ ಕಳೆದ ಇಪ್ಪತ್ತುವರ್ಷ ಎಂದರೆ ೧೯೫೦–೧೯೭೦ ರ ಕಾಲಾವಧಿ ಎಂದು ಭಾವಿಸಲು ಅವಕಾಶವಿದೆ. ಅಂತೂ ಪ್ರಾಚೀನ, ಅಜ್ಞಾತಕೃತಿಯೊಂದರ ಕಾಲವನ್ನು ಅದರ ಅಂತರ್ಬಾಹ್ಯ ಪ್ರಮಾಣಗಳಿಂದ ಊಹಿಸುವಂತೆ ಇದನ್ನೂ ಊಹಿಸಬೇಕು. ಈ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಇಂಥ ಬೇಜವಾಬ್ದಾರಿ ಪ್ರಕಾಶನ ಕಾರ್ಯ ನಡೆಯುತ್ತಿರುವುದು ಕನ್ನಡದ ದುರ್ದೈವ. ಇದು ನವ್ಯಕಾವ್ಯದ ವಿವಿಧ ಸಂವೇದನೆಗಳನ್ನು ಒಳಗೊಂಡ ಮಹತ್ವದ ಆ್ಯಂಥೊಲೊಜಿಯಾದರೂ ಸಂಪಾದಕರ ಸ್ವೇಚ್ಛಾಮನೋವೃತ್ತಿಯಿಂದ ಅವ್ಯವಸ್ಥಿತವಾಗಿದೆ. ಮರುಮುದ್ರಣವೇ ಬಂದ (ಇಲ್ಲಿಯೂ ಕಾಲಸೂಚನೆಯ ಹಗರಣವಿಲ್ಲದಿಲ್ಲ. ಸಂಘಟಕರ 'ನಮ್ಮ ಮಾತಿ'ನ ಕೆಳಗಿರುವ ದಿನಾಂಕ ಬೇಜವಾಬ್ದಾರಿತನವನ್ನು ಮುಚ್ಚಿಕೊಳ್ಳುವಂತಿದೆ. ಅಷ್ಟೆ.) 'ಹೊಸ

೨ 'ಚಿನ್ನದಂದಿನ ಬೆಳಕು' ಎಂಬ ಪ್ರಾದೇಶಿಕ ಮಾಲಿಕೆಯುಳ್ಳ ಇನ್ನೊಂದು ಆ್ಯಂಥೋಲಜಿಯೂ ಇದೆ. ಅದು ಒಂದು ಇಡೀ ಸಾಹಿತ್ಯವನ್ನು ಪ್ರತಿನಿಧಿಸುತ್ತದೆಂದು ಹೇಳುವುದು ಸರಿಯಲ್ಲವೆಂದು ತಿಳಿದು ಅದರ ವಿಷಯ ಇಲ್ಲಿ ಪ್ರಸ್ತಾಪಿಸಿಲ್ಲ.

ಜನಾಂಗದ ಕವಿತೆಗಳು' (೧೯೭೧) ಸಂಪೂರ್ಣವಾಗಿ ಹೊಸ ಜನಾಂಗಕ್ಕೇ ಮೀಸಲಾಗಿರದ್ದರಿಂದ ತನ್ನ ಉದ್ದೇಶಕ್ಕೆ ತಾನೇ ಭಂಗತಂದುಕೊಂಡಿದೆ. ಈಚೆಗೆ ಒಬ್ಬ ವಿಮರ್ಶಕರು ಪ್ರಾಸಂಗಿಕವಾಗಿ 'ಅಕ್ಷರ ಹೊಸ ಕಾವ್ಯ ಅಹಂಕಾರಜನ್ಯ, ಹೊಸ ಜನಾಂಗದ ಕವಿತೆಗಳು ಸೇಡಿನಿಂದ ಹುಟ್ಟಿದ್ದು' ಎಂದೂ ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಈವರೆಗೂ ಈ ಎರಡೂ ಗ್ರಂಥಗಳ ಸಂಪಾದಕರಿಂದ ಯಾವ ಪ್ರತಿಕ್ರಿಯೆಯೂ ಬಂದಿಲ್ಲವಾದ್ದರಿಂದ ಅವರು ತಮ್ಮ ಮೌನಸಮ್ಮತಿಯನ್ನು ಸೂಚಿಸಿದಂತೆ ಕಾಣುತ್ತದೆ. ಹಾಗಿರುವುದರಿಂದಲೇ ಅವೆರಡು ದೋಷಯುಕ್ತವಾಗಿರುವುದು ಸಹಜವಾಗಿದೆ. ಈ ನಾಲ್ಕು ಆ್ಯಂಥೊಲೊಜಿಗಳಲ್ಲದೆ 'ನಡೆದು ಬಂದ ದಾರಿ' ಸಂ. ೧. ರ ಕವನ ಸಂಗ್ರಹ ಹಾಗೂ ಸ್ವಾತಂತ್ರ್ಯೋತ್ತರ ಭಾರತೀಯ ಕಾವ್ಯಮಾಲಿಕೆಯಲ್ಲಿ, ನ್ಯಾಶನಲ್ ಬುಕ್ ಟ್ರಸ್ಟ್, ಇಂಡಿಯಾದವರು ಪ್ರಕಟಿಸಿದ 'ಕನ್ನಡ ಕಾವ್ಯ ಸಂಗ್ರಹ', ಭಾಗಶಃ ನವ್ಯಕಾವ್ಯವನ್ನು ಪ್ರತಿನಿಧಿಸುತ್ತವೆ. ಇವೆರಡು ಕ್ರಮವಾಗಿ ಕನ್ನಡದ ಗಣ್ಯವಿಮರ್ಶಕರಾದ ಕೆ. ಡಿ. ಕುರ್ತಕೋಟಿ, ಯು. ಆರ್. ಅನಂತಮೂರ್ತಿಗಳಿಂದ ಸಂಪಾದಿತವಾಗಿದ್ದರೂ ಅವರ ಅಪ್ರಾಮಾಣಿಕತೆಯಿಂದಾಗಿ ಅಸಮಂಜಸವಾಗಿವೆ. ಈ ಎಲ್ಲ ಸಂಪಾದಕರ ಸಂಪಾದನೆಯನ್ನೇ ಕುರಿತು ಒಟ್ಟಾಗಿ ಆಲೋಚಿಸಬೇಕಾದ ಕಾರ್ಯ ಇನ್ನೂ ಆಗಬೇಕಾಗಿದೆ. ಕನ್ನಡ ವಿಮರ್ಶಕರಲ್ಲಿ ಜಿ. ಎಸ್. ಆಮೂರ, ಜಿ. ಎಚ್. ನಾಯಕರಂಥ ತೀರ ಕೆಲವು ಜನರನ್ನು ಬಿಟ್ಟರೆ ಉಳಿದವರೆಲ್ಲ ಕವಿಗಳೇ ಆಗಿರುವುದರಿಂದ, ಆ ಕವಿಗಳೆಲ್ಲ ಒಂದಿಲ್ಲೊಂದು ಆ್ಯಂಥೊಲೊಜಿಯಲ್ಲಿ ಮಹತ್ವದ ಕವಿಗಳೆಂದು (Majar peots) ಸ್ಥಾನ ಪಡೆದದ್ದರಿಂದ, ಅವರು ಅವುಗಳ ಬಗ್ಗೆ ಸ್ವತಂತ್ರವಾಗಿ ನಿಷ್ಪಕ್ಷಪಾತವಾಗಿ ಮಾತನಾಡುವ ಸ್ಥಿತಿಯಲ್ಲಿಲ್ಲವೆಂದು ತೋರುತ್ತದೆ. ಪತ್ರಿಕೆಗಳಲ್ಲಿ ಒಂದೆರಡು ಸಂಗ್ರಹಗಳ ಬಗ್ಗೆ ವಿಮರ್ಶೆ, ಪ್ರತಿಕ್ರಿಯೆಗಳು ಮಾತ್ರ ಬಂದುಹೋಗಿವೆ. ಅಂಥ ಪ್ರತಿಕ್ರಿಯೆಗಳಲ್ಲಿಯೇ ಒಂದಾಗಿ ಬಂದ ಯು. ಆರ್. ಅನಂತಮೂರ್ತಿಗಳ ವಿಚಾರವೊಂದನ್ನು ಆ್ಯಂಥ್ಯಾಲೊಜಿಗಳಲ್ಲಿ ಸಮಾವೇಶಗೊಂಡ ಕವಿತೆಗಳ ಮಟ್ಟದ ದೃಷ್ಟಿಯಿಂದ ಇಲ್ಲಿ ಗಮನಿಸುವುದು ಸೂಕ್ತವೆನಿಸುತ್ತದೆ. "ಅಕ್ಷರ ಹೊಸ ಕಾವ್ಯದಲ್ಲಿ ನನಗೆ ಲಂಕೇಶರು ದಯಪಾಲಿಸಿರುವ ಪುಟಗಳ ಸಂಖ್ಯೆಯಿಂದ ನನಗೆ ಆಶ್ಚರ್ಯವಾಗಿದೆ. ನಾನೇ ಒಂದು ನವ್ಯಕಾವ್ಯ ಸಂಕಲನವನ್ನು ಸಂಪಾದಿಸಿದ್ದ ಪಕ್ಷದಲ್ಲಿ ನನ್ನ ಪದ್ಯಗಳಿಗೆ ಅದರಲ್ಲಿ ಅವಕಾಶವಿರಬೇಕೆ? ಲಂಕೇಶರು ಕೊಟ್ಟಷ್ಟು ಇರಬೇಕೆ? ಎಂಬಬಗ್ಗೆ ಅನುಮಾನವಿರುತ್ತಿತ್ತು." ಎಂದು ಅನಂತಮೂರ್ತಿಗಳು ತಮ್ಮನ್ನು ತಾವು ನೋಡಿಕೊಳ್ಳುವ ವಿವೇಕ ತೋರಿದ್ದಾರೆ. ಇದರಿಂದ 'ಅಕ್ಷರ ಹೊಸ ಕಾವ್ಯ'ದಲ್ಲಿ ಬಂದ ಅವರ ಎಲ್ಲ ಕವಿತೆಗಳೂ ಅದಕ್ಕೆ ಅರ್ಹವಾದವುಗಳಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದರೆ ಇದೇ ಅನಂತಮೂರ್ತಿಗಳು 'ಕನ್ನಡ ಕಾವ್ಯ ಸಂಗ್ರಹ'ದ ಸಂಪಾದಕರಾಗಿ ಕಾರ್ಯ ಮಾಡಬೇಕಾಗಿ ಬಂದಾಗ ರಾಷ್ಟ್ರಮಟ್ಟದ ಕವಿಗಳೆನಿಸಿಕೊಳ್ಳುವ ಭರದಲ್ಲಿ ಮೈಮರೆತಿದ್ದರೆ. ಈ ಸಂಗ್ರಹದ ಬಗ್ಗೆ ಚರ್ಚೆ ನಡೆದಾಗ ಅವರೂ ತಮ್ಮ ಅಸಹಾಯಕತೆಯನ್ನು ಸೂಚಿಸಿ, (ಬಿಟ್ಟವು

ರ್ಶಕರಾದ ಇವರು ಹಾಗೆ ಅಸಹಕರಾಗಿ, ಸಂಪಾದಕರಾಗಿ ಉಳಿದದ್ದು ವ್ಯಕ್ತಿತ್ವವನ್ನು ಉಳಿಸಿಕೊಳ್ಳುವಂತಹ ಕಾರ್ಯವಲ್ಲ.) ಅದರಲ್ಲಿ ತಮ್ಮ ಪದ್ಯ ಇರದಿದ್ದರೂ ನಡೆಯುತ್ತಿತ್ತೆಂದು ಒಪ್ಪಿಕೊಂಡಿದ್ದುದು ನನಗೆ ನೆನಪಿದೆ. ಹೀಗೆ ತಿಳಿದೂ ತಿಳಿದೂ ತಪ್ಪು ಮಾಡಿ, ಅದನ್ನು ನಿಷ್ಕರ್ಷೆಗೆ ಹಚ್ಚಿದಾಗ ಒಪ್ಪಿಕೊಂಡರು. ಸಾಚಾತನ ತೋರುವುದು ಒಂದು ಜಾಣತನವೇ ಇರಬೇಕು. ಅದೇನೇ ಇರಲಿ, ಅನಂತಮೂರ್ತಿಗಳ ಪತ್ರಿಕಾ ಪ್ರತಿಕ್ರಿಯೆಗಳಿಂದ 'ಅಕ್ಷರ ಹೊಸ ಕಾವ್ಯ' ಮತ್ತು 'ಕನ್ನಡ ಕಾವ್ಯ ಸಂಗ್ರಹ'ಗಳೆರಡೂ ದೋಷಯುಕ್ತವಾದುವು ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಇವೆರಡು ಕನ್ನಡ ಕಾವ್ಯದ ನೈಜಸ್ವರೂಪವನ್ನು ಯಥಾವತ್ತಾಗಿ ರೂಪಿಸಬಲ್ಲವೆ ಎಂಬುದು ಒಂದು ಪ್ರಶ್ನೆಯಾಗಿ ಉಳಿಯುತ್ತದೆ.

ಆ್ಯಂಥೊಲೊಜಿಗಳನ್ನು ಕ್ರಮವಾಗಿ ಓದಿ ನವ್ಯಕಾವ್ಯ ಮತ್ತು ನವ್ಯಕವಿಗಳ ಬಗ್ಗೆ ಸರಿಯಾದ ಜ್ಞಾನಮಾಡಿಕೊಳ್ಳಲು ಬಯಸಿದ ನನ್ನ ವಿದ್ಯಾರ್ಥಿ ಮಿತ್ರರೊಬ್ಬರು ತಮ್ಮ ಅಭ್ಯಾಸದ ಅನುಕೂಲತೆಗಾಗಿ 'ನವ್ಯ ಧ್ವನಿ', 'ಸಂಕ್ರಮಣ–ಕಾವ್ಯ' ಮತ್ತು 'ಅಕ್ಷರ ಹೊಸ ಕಾವ್ಯ'ಗಳಲ್ಲಿ ತಪ್ಪದೇ ಕಾಣಿಸಿಕೊಂಡ–ಒಬ್ಬ ಮಹತ್ವದ ಕವಿಯಾಗಿ ತೋರುವ–ಪಿ. ವೆಂಕಟರಮಣಾಚಾರ್ಯರ ಮತ್ತು 'ಸಂಕ್ರಮಣ-ಕಾವ್ಯ' 'ಅಕ್ಷರ ಹೊಸ ಕಾವ್ಯ'ಗಳೆರಡರಲ್ಲಿ ಎದ್ದುಕಾಣುವ ಏಕಮೇವ ಕವಯಿತ್ರಿ ನಳಿನಿ ದೇಶಪಾಂಡೆ[3] ಇವರ ಕವನ ಸಂಗ್ರಹಗಳನ್ನು ಓದಲು ಹಾಗೂ ಇವರ ಬಗ್ಗೆ ಹೆಚ್ಚಿನ ವಿಷಯ ತಿಳಿಯಲು ನನ್ನ ಬಳಿ ಪ್ರಸ್ತಾಪಿಸಿದರು. 'ನನಗೆ ತಿಳಿದಮಟ್ಟಿಗೆ ಪಿ. ವಿ. ಆಚಾರ್ಯರು 'ಕಸ್ತೂರಿ'ಯ ಉಪಸಂಪಾದಕರು. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನವೋದಯ ಕಾವ್ಯದಲ್ಲಿ ಹತ್ತರಗೂಡ ಹನ್ನೊಂದಾಗುವ 'ನವನೀತ' ಎಂಬ ಕವನ ಸಂಗ್ರಹವನ್ನು ಪ್ರಕಟಿಸಿದವರು. ಅವರ ನವ್ಯಕಾವ್ಯದ ಯಾವ ಸಂಗ್ರಹವೂ ನನ್ನ ಕಣ್ಣಿಗೆ ಬಿದ್ದಿಲ್ಲ. ಅವರು ಬರೆದ ಒಂದೊಂದು ಪದ್ಯವೂ ಆ್ಯಂಥೊಲೊಜಿಯಲ್ಲಿ ಸೇರಲೆಂದೇ ಹುಟ್ಟಿಕೊಂಡಿದೆಯೊ ಏನೊ ? ಅಂತೂ ಮೂರು ಪದ್ಯಗಳು ಅಲ್ಲಿ ಬಂದಿವೆ. ಇನ್ನೂ ಒಂದೆರಡು ಕವಿತೆ 'ಸಂಕ್ರಮಣ'ದಲ್ಲಿಯೋ ಇನ್ನಾವುದೋ ಪತ್ರಿಕೆಯಲ್ಲಿಯೋ ನೋಡಿದ ಹಾಗೆ ನೆನಪು. ಇನ್ನು ನಳಿನಿ ದೇಶಪಾಂಡೆ 'ನಾಮದಲ್ಲಿ ಹೆಣ್ಣು, ಭಾವಿಸಲು ಗಂಡು ರೂಪ' ಎಂದು ಈಚೆಗೆ ತಿಳಿದಿದೆ. ಯಾರೋ ತೇಜಸ್ವಿಯಾದ ಕವಿಗಳು ಹೆಣ್ತನವನ್ನು ತಮ್ಮಲ್ಲಿ ಆರೋಪಿಸಿಕೊಂಡು ಈಗ ಪ್ರಕಟವಾದಷ್ಟು ಕವಿತೆ ಬರೆದಿದ್ದಾರೆಂದು ವದಂತಿ, (ಲೀಲಾರಾವ್ ಎಂಬ ಇನ್ನೊಬ್ಬರ ವಿಷಯವೂ ಹೀಗೆಯೇ ಇದೆಯಂತೆ.) ಎಂದು ಮುಂತಾಗಿ ಹೇಳಿದಾಗ ಆ ನನ್ನ ವಿದ್ಯಾರ್ಥಿ ಮಿತ್ರರು ದಂಗಾಗಿ ನಿಂತರು. 'ನದಿ ಮುಖ್ಯ, ನದಿಯ ಮೂಲ ಮುಖ್ಯವಲ್ಲ. ಹಾಗೆಯೇ ಕವಿತೆ ಮುಖ್ಯ. ಕವಿ ಅಥವಾ ಕವಯಿತ್ರಿ

3 'ಅಕ್ಷರ ಹೊಸ ಕಾವ್ಯ'ದಲ್ಲಿರುವ 'ಕವಿ ಪರಿಚಯ' ನೋಡಿದ್ದೇನೆ. ಇವರ ಬಗ್ಗೆ ಇರುವ ಪರಿಚಯ ನುಣುಚಿಕೊಳ್ಳುವಂತಹದು ಇದೆ.

ಮುಖ್ಯವಲ್ಲ' ಎಂದು ತಿಳಿಹೇಳಿ ಅವರ ದಂಗುಬಡಿಸಬೇಕಾಯಿತು. ಹೀಗೂ ಇದೆ ನಮ್ಮ ಕಾವ್ಯದ ಕಥೆ. ಸಾಹಿತ್ಯಕ್ಕೊಂದು ಇತಿಹಾಸವಿರುತ್ತದೆಂಬುದನ್ನು ನಮ್ಮ ಆ್ಯಂಥೊಲೊಜಿ ಸಂಪಾದಕರು ಮರೆತುಬಿಟ್ಟರೆ ತಲೆ-ತಲಾಂತರದ ವರೆಗೆ ಸಾಹಿತ್ಯಾಭ್ಯಾಸಿಗಳು ಪೇಚಾಡಬೇಕಾಗುವುದು. ಕನ್ನಡ ಕವಿಚರಿತ್ರೆಕಾರರಿಗೆ ಹಿಂದಿನ ಹಲವಾರು ಕವಿಗಳ ಕಥೆಯೇ ಬಗೆಹರಿಯದ ಸಮಸ್ಯೆಯಾಗಿರುವಾಗ ಇಂಥ ಹೊಸ ಸಮಸ್ಯೆಗಳನ್ನು ಹುಟ್ಟಿಸುವುದು ಆಶ್ಚರ್ಯದ ಸಂಗತಿ. ವಸ್ತುನಿಷ್ಠ ಪ್ರಾಮಾಣಿಕ ದೃಷ್ಟಿ, ಹಾಗೂ ಚಾರಿತ್ರಿಕ ದೃಷ್ಟಿ ಇರಬೇಕೆಂದು ಹೇಳುವ ನಮ್ಮರೇ ಅಪ್ರಾಮಾಣಿಕರೂ ಆಗಿರುವುದು, ಒಂದು ದುರಂತ.

ಇದೇ ಸಂದರ್ಭದಲ್ಲಿ, ಆ್ಯಂಥೊಲೊಜಿಯಲ್ಲಿ ಬಂದ ಕವಿಗಳ ಬಗ್ಗೆಯೂ ಒಂದು ಮಾತು ಹೇಳಬೇಕು. 'ನವ್ಯಧ್ವನಿ'ಯಲ್ಲಿ ಕಾಣಿಸಿಕೊಂಡ ಕೆಲವು ಕವಿಗಳು ಬೆಳವಣಿಗೆಯನ್ನು ಹೊಂದದೆ ಅಲ್ಲಿಗೇ ನಿಂತುಬಿಟ್ಟರು. ಅದರಲ್ಲಿಯ ಕೆಲವರು ಬೆಳೆಯುತ್ತ ಮುನ್ನಡೆದರು. 'ಸಂಕ್ರಮಣ-ಕಾವ್ಯ' ಸಿದ್ಧವಾಗುವ ಹೊತ್ತಿಗೆ ಮತ್ತೆ ಕಲವರು ಹೊಸದಾಗಿ ಕಾಣಿಸಿಕೊಂಡರು. ಅಂದರೆ ಅದರಲ್ಲಿರುವ ಕವಿಗಳೆಲ್ಲ ಆಗ ಚಾಲ್ತಿಯಲ್ಲಿದ್ದವರು, ಹೊಸ ಜನಾಂಗದಲ್ಲಿ ಸೇರ್ಪಡೆಯಾಗಬೇಕಾಗಿದ್ದ ಬಿ. ಆರ್. ಲಕ್ಷ್ಮಣರಾವ್. (ಬಹುಶಃ ವಕೀಲಿಯಿಂದ) 'ಅಕ್ಷರ ಹೊಸ ಕಾವ್ಯ'ದಲ್ಲಿ ಸ್ಥಾನಪಡೆದರು. 'ಅಕ್ಷರ ಹೊಸ ಕಾವ್ಯ'ದಲ್ಲಿ ಪ್ರವೇಶಪಡೆಯಬೇಕಾಗಿದ್ದ ಹಿಂಗಮಿರೆ (ಆ ಸಂಪಾದಕರ ಅಲಕ್ಷ್ಯತನದಿಂದ) 'ಹೊಸ ಜನಾಂಗದ ಕವಿಗಳ'ಲ್ಲಿ ಉಳಿದುಬಿಟ್ಟರು. ಅನಂತಮೂರ್ತಿಗಳ ಕೃಪೆಯಿಂದ 'ಕನ್ನಡ ಕಾವ್ಯಸಂಗ್ರಹ'ದಲ್ಲಿ ಸೇರಿದ ಜಯಂತ ಕಾಯ್ಕಿಣಿ ಅಟ್ಟಕ್ಕೆ ಹಾರುವ ಮೊದಲೇ ಬೆಟ್ಟಕ್ಕೆ ಹಾರಿದಂತಾಯಿತು. 'ಅಕ್ಷರ ಹೊಸ ಕಾವ್ಯ'ದಿಂದೀಚೆಗೆ ನಿರ್ಲಕ್ಷಿಸಲ್ಪಟ್ಟ ಎಂ. ಅಕಬರ ಅಲಿ. ದೇವೇಂದ್ರಕುಮಾರ ಹಕಾರಿಯವರಂಥ ದುರ್ದೈವೀ ಕವಿಗಳೂ ನಮ್ಮಲ್ಲಿದ್ದಾರೆ ಇವೆಲ್ಲ ನಮ್ಮ ಕಾವ್ಯ ಪ್ರಪಂಚದಲ್ಲಿರುವ ಅವಾಂತರಗಳು. ನಾನು ಈ ಮೊದಲೇ ಹೇಳಿದಂತೆ ಈ ಎಲ್ಲ ವಿಷಯಗಳು ಪ್ರತ್ಯೇಕವಾಗಿ, ವಿವರವಾಗಿ ಚರ್ಚಿಸುವಂತಹದ್ದಾಗಿವೆ. ಇದನ್ನೆಲ್ಲ ಗಮನಿಸಿದಾಗ ಯಾವ ಅವಾಂತರಕ್ಕೂ ಆಸ್ಪದವಿರದಂತಹ ಇನ್ನೊಂದು ಸಮರ್ಪಕವಾದ ಆ್ಯಂಥೊಲೊಜಿ ಬರುವುದರ ಅಗತ್ಯವಿದೆಯೆಂದು ಅನಿಸದೆ ಇರಲಾರದು.

ಜನಪದ ಆಟ-ಪಾಟ

ಎಂ. ಎಸ್. ಸುಂಕಾಪೂರ

ಚಿಕ್ಕಮಕ್ಕಳಿಗೆ ಆಟವೆಂದರೆ ಪಂಚಪ್ರಾಣ. ಅವು ಆಟಕ್ಕೆ ನಿಂತರೆ ಊಟವನ್ನೂ ಮರೆಯುತ್ತವೆ. ಆಡುವುದು, ಆಡುತ್ತಲೇ ಹಾಡುವುದು ಮಕ್ಕಳ ಸಹಜಸ್ವಭಾವ. ಮಗು ತನಗೆ ಆನಂದವೆನಿಸಿದಾಗ ಕೈಕಾಲು ಕುಣಿಸಿ ಗಾಗೂ ಎಂದು ಆಡುತ್ತದೆ, ಹಾಡುತ್ತದೆ. ಕಟ್ಟೆಯ ಮೇಲೆ ಮಲಗಿಸಿದರೂ ಅಷ್ಟೇ, ತೊಟ್ಟಿಲಲ್ಲಿ ಹಾಕಿದರೂ ಅಷ್ಟೇ! ಅದು ಹರ್ಷವಾದಾಗ ನಕ್ಕು ಆಡಬಲ್ಲುದು; ದುಃಖವೆನಿಸಿದಾಗ ಕೂಗಿ ಅಳಬಲ್ಲುದು. ನಗು, ಅಳು ಅವರ ಸಹಜಸ್ವಭಾವ. ಮಗು ಹುಟ್ಟುತ್ತಲೇ ಅಳುತ್ತದೆ; ಆದರೆ ನಗಲು ಅದಕ್ಕೆ ಕೆಲವೊಂದು ಕಾಲಬೇಕು. ಕೂಸು ಸದೃಢವಾಗಿದ್ದರೆ, ಮೂರು ತಿಂಗಳಿಗೆ ಮುಗುಳುನಗೆ ಬೀರುತ್ತದೆ. ನಗು, ಅಳು ಮಾನವನ ಸಹಜಪ್ರವೃತ್ತಿಗಳಾಗಿದ್ದರೆ ಕೂಸು ಹುಟ್ಟುತ್ತಲೇ ಅಳುವಂತೆ ಏಕೆ ನಗುವುದಿಲ್ಲ? ಈ ಪ್ರಶ್ನೆಗೆ ಉತ್ತರ ನೀಡಲು ಮಾನಸಶಾಸ್ತ್ರಜ್ಞರು ಪ್ರಯತ್ನಿಸಿದ್ದಾರೆ. ನಗು, ಅಳು ಮಾನವನ ಸಹಜಪ್ರವೃತ್ತಿ ಎನ್ನುವುದೇನೋ ನಿಜ; ನಗು, ಅಳು ಮಾನಸಿಕಕ್ರಿಯೆಗೆ ಸಂಬಂಧಿಸಿದಂತೆ, ಶಾರೀರಿಕ ಕ್ರಿಯೆಗೂ ಒಳಪಟ್ಟಿವೆ ಅಳು ಸರಳವಾಗಿದ್ದರೆ ನಗು ತೊಡಕಿನದಾಗಿದೆ. ಶರೀರದ ಸ್ನಾಯುಗಳ ಒಂದು ವಿಶೇಷ ರಚನೆಗೆ ನಗು ಒಳಪಟ್ಟಿದೆ. ಅಳುವಿಗೆ ಅಂತಹದೇನೂ ಬೇಕಿಲ್ಲ. ಶರೀರದ ಸ್ನಾಯುಗಳು ಬಲಗೊಂಡಾಗ ಮಾತ್ರ ನಗೆ ಜನಿಸಲು ಸಾಧ್ಯವಾಗುತ್ತದೆ. ಆದ್ದರಿಂದಲೇ ಕೂಸು ಜನಿಸಿದೊಡನೆ ಅಳಬಲ್ಲುದು: ಮೂರು ನಾಲ್ಕು ತಿಂಗಳು ಕಳೆದಮೇಲೆ ಸ್ನಾಯುರಚನೆ ಬಲಗೊಳ್ಳುತ್ತಲೇ ಅದು ನಗಲೂ ಆರಂಭಿಸುವುದು.

ಮಗುವಿಗೆ ಮೊದಲು ಬೇಕಾದುದು ಊಟ. ನಂತರ ಆಟ. ಆಗ ಅದಕ್ಕೆ ಆನಂದವೇ ಆನಂದ. ಆ ಆನಂದ ಉಕ್ಕೇರಿ ಹೊರಚೆಲ್ಲಿದಾಗ, ಹಾಡಿ ಕುಣಿದು ನಕ್ಕು ನಲಿಯುತ್ತದೆ ಅದಕ್ಕೆ ಮೂಲಕಾರಣ ಆಟದ ಪ್ರವೃತ್ತಿ. ಅದು ಬಾಲ್ಯಜೀವನದಲ್ಲಿ ಹೆಚ್ಚಾಗಿರುತ್ತದೆ; ದೊಡ್ಡವರಾದಂತೆ ಅಲ್ಪಮಟ್ಟಿಗೆ ಕಡಿಮೆಯಾಗುವುದು. ಆಟಕ್ಕೆ ಮುಖ್ಯವಾಗಿ ಉತ್ಸಾಹ ಬೇಕು, ಚೈತನ್ಯ ಚಿಮ್ಮುತ್ತಿರಬೇಕು. ಹೀಗಾದಾಗ ಮಕ್ಕಳು ಚಿನ್ನಾಟ ಆಡುತ್ತವೆ. ಆಗ ಅವು ಆಡಿದ್ದೇ ಆಟ; ಅದಕ್ಕೆ ತುದಿಮೊದಲು ಇಲ್ಲವೇ ಇಲ್ಲ. ಅದಕ್ಕೊಂದು ನಿಶ್ಚಿತವಾದ ಗುರಿಯೂ ಇಲ್ಲ. ಆಡುತ್ತಲೇ ಮಕ್ಕಳಿಗೆ ಹಾಡಬೇಕೆನಿಸುತ್ತದೆ. ಅವು ಏನೇನೋ ಹಾಡಿಕೊಳ್ಳುತ್ತವೆ. ಆಟದಲ್ಲಿ ಕೈ-ಕುಣಿತ, ಮೈ-ಮಣಿತ ಸರಾಗವಾಗಿ ಸಾಗುತ್ತದೆ. ಆಟದ ಗತಿಗೆ ತಾಳಹಾಕಿ ಹಾಡು ಹೊರಹೊಮ್ಮುತ್ತದೆ. ಆದ್ದರಿಂದ ಆಟಪಾಟಗಳಿಗೆ ಎಲ್ಲಿಲ್ಲದ ದೋಸ್ತಿ.

ಆಡುವುದು ಆಟ, ಹಾಡುವುದು ಪಾಟ. ಆಟ-ಪಾಟ ಮಕ್ಕಳಿಗೆ ಸಹಜವಾದರೂ ಮೊದಮೊದಲು ಹಿರಿಯರು ಅವುಗಳನ್ನು ಕಲಿಸಬೇಕಾಗುತ್ತದೆ. ಜನಪದದಲ್ಲಂತೂ ಈ ರೂಢಿಯೇ ಹೆಚ್ಚು. ಜನಪದ ಆಟಗಳು ಕಲಿತು ಆಡಲು ಬಹು ಸುಲಭ. ಪಾಶ್ಚಾತ್ಯರಂತೆ ಹಣಸುರಿಯಬೇಕಾಗಿಲ್ಲ. ಒಂದೆರಡು ಕೋಲು-ಚಿಣಿ, ಗುಂಡು-ಗಜಗ, ಬುಗುರಿ-ದಾರ ಇದ್ದರೆ ಹೆಚ್ಚಾಯಿತು. ಮಕ್ಕಳಾಟ ತಾಸುಗಟ್ಟಲೆ ಸಾಗಬಲ್ಲದು. ಆಟಸಾಗುತ್ತಲೇ ಅವರು ಹಾಡಿಕೊಳ್ಳುವುದೂ ಉಂಟು. ಅಳುವ ಮಕ್ಕಳನ್ನು ಸಮಾಧಾನಪಡಿಸಲು ತಂದೆ, ತಾಯಿ, ಹುಡುಗರನ್ನು ಆಡಿಸಿ ಹಾಡು ಹೇಳುವುದು ಬಹು ಕಾಲದಿಂದ ನಡೆದುಬಂದ ಮಾತು.

ಜನಪದ ಆಟ-ಪಾಟ ಮಕ್ಕಳ ವಯಸ್ಸಿಗೆ ಅನುಗುಣವಾಗಿ ಇರಬೇಕಾದುದು ಸಹಜ. ಕೂಸು ಇನ್ನೂ ಚಿಕ್ಕದಿದ್ದಾಗ ತೊಟ್ಟಿಲಲ್ಲಿ ತೂಗಿ, ಜೋಗುಳ ಹಾಡದ ತಾಯಿಯೇ ಇಲ್ಲೆನ್ನಬಹುದು. ಅಷ್ಟರಮಟ್ಟಿಗೆ ಮಕ್ಕಳಿದ್ದ ಮನೆಯಲ್ಲಿ ಜೋಗುಳ ಹಾಡು ಕೇಳಬರುತ್ತದೆ. ಇದನ್ನು ಕೂಸು ಹಾಡುವುದಿಲ್ಲ. ಕೂಸಿನ ತಾಯಿ ಹೇಳುತ್ತಾಳೆ. 'ಜೋ ಜೋ ಎನ್ನ ಗೋಪಿಯ ಕಂದ ಜೋ ಜೋ' ಎನ್ನುವ ಪಲ್ಲವಿಯನ್ನೆತ್ತಿ ತಾಯಿ, ತನ್ನ ಮಗುವಿನ ಬಾಲವರ್ಣನೆ ಮಾಡುತ್ತಾಳೆ. ತಾಯಿಗೆ ಮಗು ಮುದ್ದಿನ ಗೊಂಬೆ; ಸುಗಂಧದ ಕೊಂಬೆ; ಆ ವರ್ಣನೆ ಜನಪದಸಾಹಿತ್ಯದಲ್ಲಿಯೇ ಹಿರಿದು. ಮಗು ಸ್ವಲ್ಪ ದೊಡ್ಡದಾಗಲು ತಾಯಿ ಗಿಲಗಂಚಿ, ಉಳುಕ ತಂದು ಕೂಸಿನ ಕೈಯಲ್ಲಿ ಕೊಡುತ್ತಾಳೆ. ಅದು ಅತ್ತರೆ ಗಿಲಗಂಚಿ ಬಾರಿಸಿ ರಮಿಸುತ್ತಾಳೆ. ಮಗುವಿಗೆ ಆಗ ಹಿಡಿಸಲಾರದಷ್ಟು ಸಂತೋಷ

ಕೂಸು ವರ್ಷ ಮಿಕ್ಕಿದರೆ ಸಾಕು: ದಟ್ಟಡಿ ಇಡಲು ಯತ್ನಿಸುತ್ತದೆ. ದಾದಾಯೆಂದು ತೊದಲ್ನುಡಿ ಹೇಳಲು ಪ್ರಾರಂಭಿಸುತ್ತದೆ. ಆಗ ತಾಯಿ ಮಗುವಿಗೆ ಹಾಲ್ಗಡಗ, ಕಾಲ್ಗೆಜ್ಜೆ ತೊಡಿಸುತ್ತಾಳೆ. ಗಿಲ್‌ಗಿಲ್ ಸಪ್ಪಳಮಾಡುತ್ತ ದಟ್ಟಡಿ ಇಡುವಾಗ, ಕೈ ಹಿಡಿದು ಮುಂದೆ ನಡೆಸುತ್ತ :

"ದಟ್ಟೆದಟ್ಟೆ ದಡಸಾಲಿ ದಡಸಾಲಿ
ಬಿಟ್ಟೆ ಬಿಟ್ಟೆ ಪಡಸಾಲಿ ಪಡಸಾಲಿ"

ಪಾಲು, ಪಾರಾಣ್ ಎಂದು ಹಾಡುತ್ತಾಳೆ. ಕೂಸಿನ ಕಾಲ್ಗೆಜ್ಜೆಯ ತಾಳಕ್ಕೆ ಈ ಹಾಡು, ಲಯಬದ್ಧವಾಗಿ ಕೇಳಿಸಿದಾಗ ಕೂಸು ನಕ್ಕುನಲಿಯುತ್ತೊದಗುವುದು ಬೀಳುವುದು, ಏಳುವುದು ಕೂಸಿಗೊಂದು ಆಟ; ತಾಯಿಗೆ ಚೆಲ್ಲಾಟ, ನೋಡುವವರಿಗೆ ಮುದ್ದಾಟ.

ಮಗು, ಎರಡು-ಮೂರು ವರ್ಷಕ್ಕೆ ಬಂದಾಗ ಹಿರಿಯರು ಅದಕ್ಕೆ ಆನೆ ಆಡಿಸುವುದುಂಟು. ಆನೆಯಾಟವೆಂದರೆ ಮಕ್ಕಳಿಗೆ ಇಲ್ಲದ ಹಿಗ್ಗು. 'ಆನೆ ಬಂತು ಆನೆ' ಎನ್ನುವುದೇ ಆ ಆಟ-ಪಾಟಕ್ಕೆ ಹೆಸರು. ಈ ಆಟದಲ್ಲಿ ಆಡಿಸುವವರು ಅಂಗಾತ ಮಲಗಿ, ಮೊಳಕಾಲು ಮಡಚಿಕೊಂಡು, ಕಾಲಮೇಲೆ ಮಗುವನ್ನು ಕೂರಿಸುತ್ತಾರೆ. ಕಾಲು

ಗಳನ್ನೂ ಒಂದೇ ಸವನೆ ಎತ್ತಿ ಇಳಿಸುತ್ತಾರೆ. ಆಗ ಕೂಸು ಮೇಲೆಕೆಳಗೆ ಆಗುವುದರಿಂದ ಅದಕ್ಕೆ ಮೋಜು ಎನಿಸುತ್ತದೆ. ಆಗ ಪಾಲಿಸುವ ವ್ಯಕ್ತಿ:

"ಆನಿ ಬಂತೌ ಆನಿ, ಇದ್ಯಾವೂರಾನಿ ?
ವಿಜಾಪುರದಾನಿ, ಇಲ್ಲಿಗ್ಯಾಕ ಬಂತು ?
ಹಾದಿತಪ್ಪಿ ಬಂತು । ಹಾದಿಗೊಂದು ದುಡ್ಡು
ಬೀದಿಗೊಂದು ದುಡ್ಡು । ಅದ ದುಡ್ಡ ಕೊಟ್ಟು
ಕೊಬ್ಬರಿ ಬೆಲ್ಲ ತಂದು । ಲಟಲಟ ಮುರಿದು
ಚುಕ್ಕೊಳ ಕೈಯಾಗ ಕೊಟ್ಟು......"

ಎಂದು ಮಗುವನ್ನು ಬೀಳುವಂತೆ ಮಾಡುತ್ತಾನೆ. ಅದು ಮೊದಲೇನೋ ಅಂಜುತ್ತದೆ. ಬೀಳುವ ಅಂಜಿಕೆ ತೊಲಗಿದಾಗ ನಗಲು ಆರಂಭಿಸುತ್ತದೆ; ಆ ನಗೆಯೊಡನೆ ಆಡಿಸುವವನೂ ನಗುತ್ತಾನೆ. ಮಗುವಿಗೆ ಈ ಆಟ ಇನ್ನೊಮ್ಮೆ ಬೇಕೆನಿಸುವುದು. ಪುನಃ ಅದೇ ಆಟ, ಅದೇ ಹಾಡು ಅದೇ ಆನೀಯಾಟ!

'ಇತ್ತಾ ಇತ್ತಾ ಬಸರಾ' ಎನ್ನುವ ಆಟ ಚಿಕ್ಕಮಕ್ಕಳಿಗೆ ಅತೀ ಪ್ರಿಯವಾದದ್ದು. ಬೆಳಗಾವಿ ಜಿಲ್ಲೆಯ ಗಡೀ ವಿಭಾಗದಲ್ಲಿ ಈ ಆಟ ಪ್ರಸಿದ್ಧವಾಗಿದೆ. ಚಿಕ್ಕಮಕ್ಕಳ ಅಂಗೈಗಳನ್ನೂ ಸಾಲಾಗಿ ಡಬ್ಬುಮಲಗಿಸಿ, ಹಾಡುವವ ತನ್ನ ತುದಿಬೆರಳಿಂದ ಕೂಸಿನ ಆ ಬೆರಳ ಮೇಲೊಮ್ಮೆ. ಈ ಬೆರಳ ಮೇಲೊಮ್ಮೆ ಕೈಯಿಡುತ್ತ ಕೆಳಗಿನಂತೆ ಹಾಡುತ್ತಾನೆ:

"ಇತ್ತಾ ಇತ್ತಾ ಬಸರೆ ಮೋರಾs ।
ಚಾರಾ ಖಾ ಪಾನೀ ಪಿ ಭುರ್‌ದಿಸಿ ಉಡುನ್ ಜಾ ॥ "

ಎಲೆ ನವಿಲೇ. ಈ ಕಡೆಗೆ ಬಾ: ಹುಲ್ಲುತಿನ್ನು; ನೀರುಡಿ: ಭುರ್ರೆಂದು ಹಾರಿಹೋಗು—ಇದು ಹಾಡಿನ ಅರ್ಥ. ಈ ಆಟ ಆಡುವ ಹುಡುಗರು ಎಲ್ಲೆಲ್ಲೂ ಸಿಗುತ್ತಾರೆ

ಮಕ್ಕಳು ಅನುಕರಣ ಮಾಡಿ ಆಟ-ಪಾಟ ಕಲಿಯುತ್ತವೆ. ಸುತ್ತುಮುತ್ತಲಿನ ಸಂಸಾರ ಅವರಿಗೊಂದು ಅರಿದ ಒರತಿ: ಇತರರನ್ನು ಅನುಕರಿಸುವುದೇ ಅವರ ಜೀವನ ಪರತಿ. ಮಕ್ಕಳು ಸಂಸಾರ ಹೂಡುತ್ತವೆ ಗಂಡ-ಹೆಂಡರಾಗಿ ಆಡುತ್ತವೆ. ದಿನನಿತ್ಯದ ಅಡಿಗೆ, ಊಟ, ವಿಶ್ರಾಂತಿ ಎಲ್ಲವನ್ನೂ ಅನುಕರಣೆ ಮಾಡಿ ಸುಕ್ಕ-ಪಕ್ಕ ಆಡುತ್ತವೆ. ಆಟದಲ್ಲಿ ಹಾಡುವುದೂ ಕೂಡುತ್ತದೆ. ಮಕ್ಕಳು ನಾಲ್ಕೈದು ವರ್ಷಕ್ಕೆ ಬಂದಾಗ, ಹಿರಿಯರು ಮಕ್ಕಳಿಗೆ ಆಟದ ಸಾಮಾನು ಕೊಂಡುಕೊಡಿಸುವುದು ಸಂಪ್ರದಾಯ. ಹೆಣ್ಣುಹುಡುಗರಿಗೆ ಪುತ್ತಲಿ, ಕಳ್ಳಿ-ಮಿಳ್ಳಿ, ಒನಕೆ-ಬಾಂಡಿಯಾದ ಸಾಮಾನು: ಗಂಡು ಹುಡುಗರಿಗೆ ಬುಗುರಿ, ಗುಂಡ ಗಜಗ ಮೊದಲಾದ ವಸ್ತು. ಇವನ್ನೇ ಹುಡುಗರು ಆಡುವಾಗ ಉಪಯೋಗಿಸುವವು. ಹೆಣ್ಣುಹುಡುಗರು ಆಟ ಆಡುತ್ತಲೇ

"ಅಕ್ಕಿ ತಳಸೇನೌ ಅಕ್ಕಿ ತಳಸೇನೌ ।
ಬಣ್ಣದ ಒನಕಿಲೆ ॥೧॥

ಜೋಳ ಕೇರೆನೌ ಜೋಳ ಕೇರೆನೌ ।
ಬಣ್ಣದ ಮುತ್ಲೀಲೆ ॥೨॥
ಅನ್ನ ಮಾಡೇನೌ ಅನ್ನ ಮಾಡೇನೌ ।
ತಾಮರ ಗುಂಡ್ಯಾಗ ॥೩॥
ರೊಟ್ಟಿ ಸುಟ್ಟೇನೌ ರೊಟ್ಟಿ ಸುಟ್ಟೇನೌ ॥
ಕಾದ ಹಂಚಿನ್ಯಾಗ ॥೪॥
ಬಾನ ಬಸ್ತೇನೌ, ಬಾನ ಬಸ್ತೇನೌ ।
ಬಿದಿರಿನ ಬುಟ್ಬ್ಯಾಗ ॥೫॥
ಪಲ್ಲೆ ಮಾಡೇನೌ ಪಲ್ಲೆ ಮಾಡೇನೌ ।
ತುಪ್ಪದೊಗ್ಗರಣ್ಯಾಗ ॥೬॥
ಉಣ್ಣಾಕ ನೀಡಿನೌ ಉಣ್ಣಾಕ ನೀಡಿನೌ ।
ಮಣ್ಣ ಪರ್ಯಾಣದಾಗ ॥೭॥ "

ಹೀಗೆ ಹಾಡಿಕೊಳ್ಳುತ್ತವೆ. ಹಿರಿಯ ಹುಡುಗಿ ಚಿಕ್ಕ ಹುಡುಗಿಯರಿಗೆ ಸಾಲಾಗಿ ಕೂಡಿಸಿ ಊಟ ಬಡಿಸುವುದೊಂದು ಮೋಜಿನ ಕೂಟ. ಈ ವಯಸ್ಸಿನಲ್ಲಿ ಮಕ್ಕಳು ಗಂಡು-ಹೆಣ್ಣು ಎನ್ನುವ ಭೇದ-ಭಾವವಿಲ್ಲದೆ ಕೂಡಿ ಆಡುವುದು ಕಂಡುಬರುತ್ತದೆ.

ಹುಡುಗರಿಗೆ ತಿಳಿವಳಿಕೆ ಬಂದಮೇಲೆ, ಅವರು ಹೇಳುವ ಹಾಡುಗಳಲ್ಲಿಯೂ ನಾವೀನ್ಯತೆ ತಲೆದೋರುತ್ತದೆ:

" ಸೇದು ಬಾಂವಿ ಸರಕಾರ ಬಾಂವಿ
ನಮ್ಮಪ್ಪ ಕಟಸ್ಯಾನ ಮುತ್ತಿನ ಬಾಂವಿ
ಸೇದಲ್ಯೋ ಬ್ಯಾಡೋ
ಕಲ್ಲೋ ಮುಳ್ಳೋ ಧುಮಕ್ । "

ಹುಡುಗರು ಗಂಡು-ಹೆಣ್ಣೆನ್ನದೆ ಕೂಡಿಕೊಂಡು ಹೇಳುವ ಈ ಹಾಡು ಬೆಳದಿಂಗಳ ತಂಪಿನಲ್ಲಿ ಇಂಪಾಗಿ ಕೇಳಿಬರುವುದು. ಒಮ್ಮೊಮ್ಮೆ ಯಾರನ್ನೋ ಉದ್ದೇಶಿಸಿ ಚೇಷ್ಟೆ ಮಾಡುವ, ಕುಚೋದ್ಯ ಹಾಡುಗಳೂ ಅವರಲ್ಲುಂಟು:

ಐನೋರ ಐನೋರ, ಇತತ್ತ ಬಾ ।
ಗೆಜ್ಜಿ ಕಟಿಗೊಂಡು ಮಜ್ಜಿಗ್ಗೆ ಬಾ ॥

ಒಮ್ಮೊಮ್ಮೆ ಮಕ್ಕಳು ಹೇಳುವ ಹಾಡುಗಳಲ್ಲಿ ಯಾವ ಅರ್ಥವಿರುವುದೋ ತಿಳಿಯುವುದಿಲ್ಲ. ಕೆಳಗಿನ ಹಾಡು ಕೇಳಿ:

" ಹತ್ತಿಕಟಿಗಿ ಬತ್ತಿಕಟಿಗಿ,
ಬಾವಾನೂರು, ಬಸಾನೂರು
ಕೈಕೈ ಧೂಳಗೈ
ಪಂಚಂ ಪಗಡಂ "

" ಎದಿಮ್ಯಾಲ ಚಿಕ್ಕಿ, ಧಡಂ ಧುಡುಕಿ
ಪಾವಸೇರ ಅಡಿಕಿ, ತೊಗೊಳಿಲೆ ಬಿಡಿಕಿ ॥ "

ಆಟದಲ್ಲಿ ಚಿಕ್ಕಮಕ್ಕಳು ಎದುರು-ಬದುರು ನಿಂತು ಸಂಭಾಷಣೆ ಮಾಡುವುದುಂಟು. ಜನಪದ ಸಾಹಿತ್ಯದ ವೈವಿಧ್ಯವನ್ನು ಅರಿಯಬೇಕಾದವರು. ಅವರ ಮಾತಿನ ಮರ್ಮ ಅರಿಯಬೇಕು. ಒಬ್ಬ ಕೇಳಿದಾಗ ಇನ್ನೊಬ್ಬ ಹೇಳುತ್ತಾನೆ. ಇದೋ ಕೇಳಿ :

"ಕೈಕೈ ಎಲ್ಲಿಟ್ಟಿ ? ಬಾಗಿಲ ಸಂದ್ಯಾಗ ಇಟ್ಟ್ಯಾ
ಬಾಗಿಲೇನಂ ಕೊಟ್ಟಿತು ? ಚಕ್ಕೀ ಕೊಟ್ಟಿತು
ಚಕ್ಕಿ ಏನ್ಮಾಡಿದಿ ? ಒಲೀಗೆ ಹಾಕಿದೆ
ಒಲಿ ಏನ್ ಕೊಟ್ಟಿತು ? ಬೂದೀ ಕೊಟ್ಟಿತು
ಬೂದಿ ಏನ್ಮಾಡಿದಿ ? ತಿಪ್ಪಿಗೆ ಹಾಕಿದೆ
ತಿಪ್ಪೇನ್ ಕೊಟ್ಟಿತು ? ಗೊಬ್ರಾ ಕೊಟ್ಟಿತು
ಗೊಬ್ರಾ ಏನ್ಮಾಡಿದಿ ? ತ್ವಾಟಕ್ಕ ಹಾಕಿದೆ
ತ್ವಾಟೇನ್ ಕೊಟ್ಟಿತು ? ಹೂವಾ ಕೊಟ್ಟಿತು
ಹೂವೇನ್ ಮಾಡಿದಿ ? ದೇವರಿಗೆ ಏರಿಸಿದೆ
ದೇವರೇನ್ ಕೊಟ್ಟ ? ಮಕ್ಕಳ ಕೊಟ್ಟ"

ಈ ಸಂಭಾಷಣೆಯಲ್ಲಿ ಪರಮ ಅರ್ಥ ಇಲ್ಲೆನ್ನಬಹುದು, ಪಂಡಿತರು. ಆದರೆ ಅದರ ಲ್ಲಿಯೇ ಪಂಚಾಮೃತ ಕಾಣುತ್ತಾರೆ, ಪಾಮರರು.

ಸಂಸಾರದ ಗಂಧವನ್ನರಿಯದ ಹುಡುಗೆಯರು ಗೊಂಬೆಯ ಮದುವೆಮಾಡಿ, ಗಂಡನ ಮನೆಗೆ ಹೋಗಲು, ಹೆಣ್ಣು ಗೊಂಬೆಗೆ ಹೇಳುತ್ತಾರೆ ಇದಕ್ಕೆ ಗಂಡಹೆಂಡತಿ ಯಾಟವೆಂದು ಕರೆಯುವುದುಂಟು. ಆಗ ಹುಡಿಗಿ ಹುರುಪಿನಿಂದ ತಾಯಿಯನ್ನು ಕೇಳುತ್ತಾಳೆ:

"ಯವ್ವಾ ಯವ್ವಾ ಗೆಣಸ ।
ಕುಳ್ಳ್ಯಾಗ ಹಾಕಿ ಕುದಸ ।
ತುತ್ತಮಾಡಿ ಉಣಸ ।
ಹಸರ ಸೀರಿ ಉಡಸ ।
ಆನಿ ಅಂಬಾರಿ ತರಸ ।
ಗಂಡನ ಮನಿಗೆ ಕಳಸ ।"

ಈ ಹಾಡು ಕೇಳಿದ ಇತರ ಹುಡುಗರು ಗೊಳ್ಳೆಂದು ನಗುತ್ತವೆ. ಗಂಡನ ಮನೆಯ ಸವಿ ಅವಕ್ಕೇನು ಗೊತ್ತು ? ಗಂಡ ಎನ್ನುವ ಶಬ್ದವೇ ಅವಕ್ಕೆ ಮೋಜಿನ ಮೇಜವಾನಿ !

ಹುಣ್ಣಿವೆಯ ಬೆಳದಿಂಗಳು. ಬುವಿಯನ್ನೇ ತಬ್ಬಿಕೊಂಡಾಗ ಮಕ್ಕಳ ಆಟಪಾಟಕ್ಕೆ ಕೋಡು ಮೂಡುತ್ತದೆ; ಚಿಕ್ಕಮಕ್ಕಳು ಮನೆಬಿಟ್ಟು ಅಂಗಳಕ್ಕೆ ಜಿಗಿಯುತ್ತವೆ. ಇದೇ ಆಟ ಆಗಬೇಕೆಂದು ಅವಕ್ಕೆ ಹಟ ಇಲ್ಲ. ಅವರಿಗೆ ಮುಖ್ಯವಾಗಿ ಆಟವೊಂದಿದ್ದರೆ ಸಾಕು. 'ಕಣ್ಣು ಮುಚ್ಚಾಣಿಕೆ' ಆಡಿದರಂತೂ ಅವಕ್ಕೆ, ಇಲ್ಲದ ಸಂತೋಷ. ಕೂಡಿದ ಹತ್ತಾರು ಹುಡುಗರಲ್ಲಿ ಒಬ್ಬಳು ಕಟ್ಟೆಯಮೇಲೆ ಕುಳಿತು, ಒಂದು ಹುಡುಗೆಯ ಕಣ್ಣು ಮುಚ್ಚಿ :

"ಅಕಲಕ ದುಕಲಕ ಚಂಡಿ ಚಕಲಕ ।
ಲಾಮಲೂಮು ಲಂಕಾಪುರಿ ಚೌ ॥
ಕಳ್ಳಿಕಳ್ಳಿ ಮಗ್ಗಳ್ಳಿ ।
ಹೊರಸಿನ ಬುಡಕ ಡೊಗ್ಗಳ್ಳಿ ।
ಕದಲು ಬದಲು ಕಂಚೀ ಬದಲು
ಇವರ ಬಿಟ್ಟು ಇವರ‍್ಯಾರು ?"

ಎಂದು ಕೇಳುತ್ತಾಳೆ. ಉಳಿದ ಹುಡುಗಿಯರು ದೂರದಲ್ಲಿ ನಿಂತು 'ಪಿಸಿಪಿಸಿ' ನಗುತ್ತಿರುತ್ತವೆ. ಆಗ ಕಣ್ಣುಮುಚ್ಚಿ ಹಿಡಿದವಳು :

"ಬಿಟ್ಟು ಬೆಳಗಾಯಿತು
ತಟ್ಟೀಮನಿ ಹಾಳಾಯಿತು
ಹಾಳು ಗ್ವಾಡಿಯ ದೆವ್ವ ಬಂದು ಬಡೀತು"

ಎಂದವಳೇ ಆ ಹುಡಿಗೆಯನ್ನು ಬಿಡುತ್ತಾಳೆ. ಅವಳು ಓಡಿಹೋಗಿ ಉಳಿದವರನ್ನು ಮುಟ್ಟಲು ಯತ್ನಿಸುತ್ತಾಳೆ. ಉಳಿದವರು ಕೈಗೆ ಸಿಗದಂತೆ ಓಡಾಡುತ್ತಾರೆ. ಕೊನೆಗೆ ಮುಟ್ಟಿಸಿಕೊಂಡವಳು ಸೋತಂತೆ. ಆಗ ಅವಳದು ಕಣ್ಣುಮುಚ್ಚಿಕೊಳ್ಳುವ ಸರತಿ. ಹೀಗೆಯೇ ತಾಸುಗಟ್ಟಲೆ ಸಾಗುತ್ತದೆ. ಬೆಳದಿಂಗಳಲ್ಲಿ ಇಂತಹ ಅನೇಕ ಆಟಗಳನ್ನು ಆ ಹುಡುಗರು ಆಡುತ್ತಾರೆ. 'ಗುಳುಗುಳು ಗುಪ್ಪಂಡಿ' ಇದೇ ಬಗೆಯ ಇನ್ನೊಂದು ಆಟ. ಅದನ್ನು ನೆಳಲು–ಬೆಳಕಿನಾಟವೆಂದು ಕರೆಯಬಹುದು. ಒಬ್ಬಳನ್ನು ಕಣ್ಣುಮುಚ್ಚಿ ಕೂಡ್ರಿಸಿ, ಉಳಿದವರು ಗೋಡೆಯ ಮರೆಯ ಕವಿನೆಳಲಲ್ಲಿ. ಸಣ್ಣಸಣ್ಣ ಮಣ್ಣುಗುಂಪಿ ಹಾಕಿ ಚೋಟು ಹಾಕುತ್ತಾರೆ. ಆಗ ಕಣ್ಣು ಮುಚ್ಚಿಸಿಕೊಂಡ ಹುಡುಗೆ. ತನ್ನ ಕಣ್ಣು ಪರದೆ ತೆರೆದು ಓಡಿಹೋಗಿ ಆ ಮಣ್ಣುಗುಂಪಿಗಳನ್ನು ಕೆಡಿಸಬೇಕು. ಎಲ್ಲಾ ಗುಂಪಿಗಳು ನಿರ್ನಾಮವಾದರೆ ಆ ಹುಡುಗ ಗೆದ್ದಂತೆ. ಹೀಗೆ ನಿದ್ರೆ ಬರುವವರೆಗೆ ಆ ಹುಡುಗರು ಆಡುತ್ತವೆ. ಇವೆಲ್ಲ ನಗೆಯಾಟಗಳು.

ಹುಡುಗರು ಆರೇಳು ವರ್ಷಕ್ಕೆ ಬರುತ್ತಲೇ ಗಂಡು-ಹೆಣ್ಣು ಕೂಡಿ ಆಡುವುದಿಲ್ಲ. ಕೂಡಿ ಆಡಲು ಹಿರಿಯರೂ ಬಿಡುವುದಿಲ್ಲ. ಸಮಾಜದ ಕಟ್ಟು-ನಿಟ್ಟು ಇದಕ್ಕೆ ಅಡ್ಡಿ ಮಾಡುವುದು. ಆಗ ಹುಡುಗರೂ ಹುಡುಗೆಯರೂ ಬೇರೆಯಾಗಿ ಆಟವಾಡಲು ಪ್ರಾರಂಭಿಸುವರು. ಇವು ಗಂಡುಹುಡುಗರ ಆಟ. ಹೆಣ್ಣುಹುಡುಗರ ಆಟ–ಎಂದು ವಿಭಾಗಿಸುವುದು ಸಾಧ್ಯವಾಗುತ್ತದೆ. ಇನ್ನು ಮುಂದೆ ಹುಡಿಗೆಯರ ಕೆಲವು ಆಟಪಾಟಗಳನ್ನು ಗಮನಿಸಬಹುದು.

'ಅಸಿಬೀಸಿ' ಆಟ ಹುಡುಗೆಯರಾಡುವ ಆಟಗಳಲ್ಲಿ ಮಹತ್ವದ್ದಾಗಿದೆ. ಅದರಿಂದ ಶರೀರಕ್ಕೆ ವ್ಯಾಯಾಮ. ಮನಸ್ಸಿಗೆ ಆನಂದ ತಪ್ಪದೆ ದೊರೆಯುತ್ತದೆ. ಈ ಆಟ ಆಡುವಾಗ, ಇಬ್ಬರು ಹುಡುಗೆಯರು ಕೆಲ ಅಂತರದಲ್ಲಿ ಇದಿರು-ಬದಿರಾಗಿ ತುದಿಗಾಲ ಮೇಲೆ ಕುಳಿತು ಕಪ್ಪೆಯಂತೆ ಜಿಗಿಯುತ್ತ ಬರುತ್ತಾರೆ. ಒಬ್ಬರಾದ ಮೇಲೊಬ್ಬರು.

ಒಂದು ಕೈ ಮೊಳಕಾಲ ಮೇಲಿಟ್ಟು, ಇನ್ನೊಂದನ್ನು ನೆಲಕ್ಕೆ ಊರಿ ಮುಂದೆ ಸಾಗುವರು. ಒಬ್ಬರ ಪಾಳಿ ಮುಗಿದಮೇಲೆ ಇನ್ನೊಬ್ಬಳ ಪಾಳಿ. ಆಗ ಅವರು ಕೆಳಗಿನಂತೆ ಅನ್ನುವರು:

ಇಬತ್ತಿ ಉಂಡಿ ಡಾಬದ ಕೊಂಡಿ ।
ಉಡ್ಯಾಗ ಪುಟಾಣಿ ತಾ ನನ ಕಟಾಣಿ ॥
ಅಂಗಡ್ಯಾಗ ಲೋಬಾನ ಗಂಡ ಹೆಂಡ್ತಿ ಸೋಬಾನ ।
ಅಂಗಡ್ಯಾಗ ಕಸಕಸಿ ಗಂಡಹೆಂಡ್ತಿ ಕುಸಿಕುಸಿ ॥
ಗಂಗಾಳದಾಗ ಗಾರಿಗಿ ಗಂಡಹೆಂಡ್ತಿ ಪಾರಿಗಿ ।
ಕಣದಾಗ ಕಂಕಿ ಕೈಯಾಗ ವಂಕಿ ॥

ಹೀಗೆಯೇ ಈ ಬಗೆಯ ಸಾಹಿತ್ಯ ಬೆಳೆಯುತ್ತದೆ. ಇಲ್ಲಿ ಬರುವ ಪ್ರಾಸಾನುಪ್ರಾಸ ಕಿವಿಗೆ ಹಿತವಾಗಿ ಕೇಳಿಸುವುದರಲ್ಲಿ ಸಂಶಯವಿಲ್ಲ.

'ಸಕ್ಕ್ಯಾಸರಿಗಿ' ಆಟ ಬಲು ಮೋಜಿನದು. ಈ ಆಟಕ್ಕೆ ಕೆಲವು ಕಡೆ 'ಗಿರಿಗಿರಿಗಿಂಡಿ' ಎಂದೂ ಕರೆಯುವುದುಂಟು. ಈ ಆಟಕ್ಕೆ ಇಬ್ಬರು ಹುಡಿಗೆಯರು ಬೇಕು. ಅವರಿಬ್ಬರೂ ಎದ್ದುನಿಂತು ಕತ್ತರಿಗೈ ಹಿಡಿದು ತಮ್ಮ ಪಾದಗಳ ಮುಂಭಾಗ ಕೂಡಿಸಿಟ್ಟು, ಹಿಂದಕ್ಕೆ ಸೆಟೆದು ದುಂಡಾಗಿ ಜಗಿಯುತ್ತ ತಿರುಗುವರು. ಆಗ ಅವರು ಹೇಳುವ:

" ಜಾಲಿಕಾಯಿ ಜಗ್ಗಿತವ್ವ
ನನ್ನ ಬುಗುಡಿ ಹಿಗ್ಗಿತವ್ವ ॥ಪಲ್ಲ॥
ಕಲಕ ನೀರ ಕುಡಿಯಲಾರೆ ।
ಹುಣಸಿಬಕ್ಕ ಎಣಿಸಲಾರೆ ॥
ಬಿದಿರಬೆತ್ತ ಒಡಿಯಲಾರೆ ।
ನೆಗ್ಗಿನಮುಳ್ಳ ತುಳಿಯಲಾರೆ ॥
ಅಪ್ಪನ ರೊಕ್ಕಾ ಎಣಿಸಲಾರೆ ।
ಅವ್ವನ ಸೀರಿ ಮಡಿಚಲಾರೆ ॥
ಸುಣ್ಣದ ಗುಡಿಯ ಸುತ್ತಲಾರೆ ।
ಬೆಳ್ಳಿಬಟ್ಟಲ ಹಿಡಿಯಲಾರೆ ॥
ಹಚ್ಚೆಂದೇನ ಹಣಸಿ ಬಟ್ಟು ।
ಬೆಳ್ಳೆಂದೇನ ಬೆಳ್ಳಿಗುಂಡ ॥
ಉಗರ ಉಗರ ಮಲ್ಲೀಗಿ ।
ನನ್ನ ಉಪ್ಪು ಕ್ಯಾದಿಗಿ ॥
ನಾಗರ ಹಾವು ಸಳಸಳ ।
ಜಮುಕಿ ಮುತ್ತು ಥಳಥಳ ॥
ಒಡ್ಡಿನ ಮ್ಯಾಲ ಮುನಿಗ್ಯಾನವ್ವ ।
ಅಡ್ಡ ಚೌಕಾ ಹಾಕ್ಯಾನವ್ವ ॥
ಬಚ್ಚಲದಾಗ ಬಂಗಾರ ।
ಶಿವನ ಕುದುರಿ ಸಿಂಗಾರ ॥ "

ಈ ರೀತಿ ಹಾಡುತ್ತ ಆಟ ಸಾಕಾಗುವವರೆಗೆ ಸಾಗುವುದು. ಇಲ್ಲಿ ಮೂರು ಮಾತ್ರೆಯ ಗಣಕ್ಕೊಮ್ಮೆ ಹಾಡುಗರ ಹೆಜ್ಜೆ ಬೀಳುವುದರಿಂದ ಆಟ ಲಯಬದ್ಧವಾಗಿ ಪರಿಣಮಿಸುವುದು.

'ಹೊನ್ನಾಲಿ-ಜೊನ್ನಾಲಿ' ಎನ್ನುವುದು ಇನ್ನೊಂದು ಬಗೆಯ ಆಟ. ಬೆಳದಿಂಗಳು ಅಂಗಳದಲ್ಲಿ ಹಿಟ್ಟು ಚೆಲ್ಲಿದಂತೆ ಬಿದ್ದಾಗ, ಹುಡುಗೆಯರು ಎದುರುಬದಿರು ಕುಳಿತು ತಂತಮ್ಮ ಕಿರಣಿಗಳ ಸೆರಗನ್ನು ಎರಡೂ ಕೈಗಳಿಂದ ಹಿಡಿದುಕೊಂಡು, ಎಡಕ್ಕೊಮ್ಮೆ ಬಲಕ್ಕೊಮ್ಮೆ ನೆಲಮುಟ್ಟಿ ಮೇಲೇಳುವರು. ಈ ಆಟ ಟೊಂಕಕ್ಕೆ ವ್ಯಾಯಾಮ ನೀಡುವುದು. ಆಟದುದ್ದಕ್ಕೂ ಕೆಳಗಿನ ದ್ವಿಪದಿಗಳನ್ನು ಅವರು ಅನ್ನುವರು :

" ಹೊನ್ನಾಲಿ ಹೊಸಗೋಪು
ಜೊನ್ನಾಲಿ ಗುಂಡ ಜರಿ । ಜSSರಿ ॥
ಆಚಿ ಗೊಂಡ್ಯಾ ನೋಡು
ಈಚಿ ಗೊಂಡ್ಯಾ ನೋಡು ॥
ಮುಚ್ಚಳ ತುಂಬಾ ಮೂವತ್ತು ಗೊಂಡ್ಯಾ
ಹ್ಯಾಂಗ ಇಟ್ಟಾರ ನೋಡು ॥
ಜಕ್ಕವ್ವನ ಗೊಂಡೆ ಜಬರಿ ತಗೊಂಡು
ಸೆಳಿಲಾಕ ಬಂದಾನ ನೋಡು ॥ "

ಹುಡುಗೆಯರ ಈ ಆಟ ಸರಸವಾಗಿರುವುದನ್ನು ನೋಡಿಯೇ ಅರಿಯಬೇಕು

'ಧುಡುಂ ಧುಡುಕಿ' ಹುಡುಗೆಯರ ಮೆಚ್ಚಿನ ಆಟ ಇಬ್ಬರು ಹುಡಿಗೆಯರು ತಮ್ಮ ಬೆನ್ನುಗಳನ್ನು ಕೂಡಿಸಿ, ಹಿಮ್ಮಗ್ಗಲಿಗೆ ಕೈಗಳನ್ನು ತೊಡಕಿಸಿ ಸರತಿಯ ಮೇಲೆ ಹಿಂದೊಮ್ಮೆ ಬಾಗಿ ಏಳುವರು :

" ಗಂಗಾಳ ಪಟಪಟ
ಹಣಗೀ ಲಟಲಟ ।
ಸಂಸಾರ ಲಟಪಟ
ಗುಂಡಪ್ಪ ಸಟಸಟ । "

ಹೀಗೆ ಹಾಡುತ್ತ ತಾಸುಗಟ್ಟಲೆ 'ಧುಡುಂ ಧುಡುಕಿ' ಆಡಬಲ್ಲರು. ಇದೇ ಬಗೆಯಲ್ಲಿ 'ಜೀಕಮುಕ' ಆಟವೂ ಬಳಕೆಯಲ್ಲಿದೆ. ಬಂಡಿಯ ಉದ್ದಿಗೆಗೆ ಬಿಗಿದ ನಗದ ಆ ತುದಿಗೆ ಈ ತುದಿಗೆ ಒಬ್ಬೊಬ್ಬ ಹುಡುಗ ಕುಳಿತು ಈ ಆಟ ಆಡುವರು.

" ಧಡಂ ಧುಡಕಿ, ಪಂಚೇರ ಅಡಿಕಿ
ನಮ್ಮ ಆಯಿ ಕೊಟ್ಟಾಳ ಚೂರ್ಚೂರಡಿಕಿ "

ಎಂದು ಹಾಡಿಕೊಳ್ಳುವರು. ಹಳ್ಳಿಯ ಆಟಗಳು ವಿನೋದಕ್ಕೆ ಆಗರ: ವ್ಯಾಯಾಮಕ್ಕೆ ಸಾಗರ.

'ಲೇಸು-ಪಾಸು' ಹುಡುಗೆಯರಾಡುವ ಮತ್ತೊಂದು ಹೊಸ ಆಟ. ಅಲ್ಲಿ

ಇಬ್ಬರು ಹುಡುಗೆಯರು ಇದಿರು-ಬದಿರಾಗಿ ನಿಂತು, ಕೈಕೈಹಿಡಿದು ತಿರುವು-ಮುರುವು ತಿರುಗುತ್ತ ಕೆಳಗಿನ ಪದ್ಯವನ್ನು ಹಾಡುವರು.

"ಉಳ್ಳಿ ಉಳ್ಳಿ ಲೇಸು ।
ಉಳ್ಳಾಗಡ್ಡಿ ಲೇಸು ॥
ಯಾತಗಿರಿ ಪಟ್ಟಣದಾಗ ।
ಗಾಳಿಧೂಳಿ ಲೇಸು ॥"

ಇಲ್ಲಿ ಹಾಡು ಮಹತ್ವದ್ದು; ಅವರಲ್ಲಿರುವ ಅರ್ಥ ಮುಖ್ಯವಲ್ಲ.

'ಗಂಗಾಳ ಮುರಿಗಿ' ಆಡದ ಮಕ್ಕಳೇ ಇಲ್ಲೆನ್ನಬೇಕು. ಅಷ್ಟೊಂದು ಪ್ರಚಾರದಲ್ಲಿದೆ ಈ ಆಟ. ಹೆಣ್ಣುಹುಡುಗರು ಗಂಗಾಳದ ಆಕಾರದಲ್ಲಿ ದುಂಡಗೆ ನಿಂತು ಹೆಜ್ಜೆ ಹಾಕುತ್ತ, ಒಳಗೊಮ್ಮೆ ಹೊರಗೊಮ್ಮೆ ಇಣಿಕಿ-ಹಣಿಕಿ, ಬಾಗಿ-ಬಳುಕಿ ಸುತ್ತುತ್ತಿರುಗುವರು. ಕೊನೆಗೆ ತನ್ನ ಹುದ್ದರಿಯೊಡನೆ ಕೈಯಲ್ಲಿ ಕೈಗೊಟ್ಟು ಗಂಗಾಳ ಮುರಿಗೆ ಆಡುವುದುಂಟು. ಈ ಸಂದರ್ಭದಲ್ಲಿ ಉದ್ದುದ್ದ ಹಾಡು ಹೇಳುತ್ತಾರೆ. ಇದನ್ನು ಗಮನಿಸಿದರೆ ಮಕ್ಕಳ ಆಟಕ್ಕೂ ಪಾಟಕ್ಕೂ ಲೆಕ್ಕವಿಲ್ಲದ ಗಂಟು ಬಿದ್ದುದು ಒಡೆದುಕಾಣುತ್ತದೆ.

ಹುಡುಗೆಯರು ಆಡಿದ್ದೇ ಆಟ. ಒಮ್ಮೊಮ್ಮೆ ಚಪ್ಪಾಳೆ ತಟ್ಟುತ್ತ ಕುಣಿಯುತ್ತ ಹಾಡು ಆರಂಭಿಸುತ್ತಾರೆ. ಉಸಿರು ಬಿಡದೇ ಹೇಳುತ್ತಾರೆ:

"ತಾಳೀಕೋಟಿ ಗಾಳೀಪಟ ।
ಮುದ್ದೇಬಾಳ ಮುತ್ತಿನ ಚಂಡ ।
ನಾಲತವಾಡ ನಂದೀಕೋಲ ।
ಉತ್ತತ್ತೆವ್ವ ಊದಿನಕಡ್ಡಿ ।
ಬೊಳ್ಳೊಳ್ಳೆವ್ವ ಬಳಗಾನೂರ ।
ಚೀಟಿನ ಕುಬುಸಾ ಚಿಟಗ್ಗುರಿಲೆವ್ವ ।
ಜೈತಲಿಬಣ್ಣ ಬಗ್ಗರಿಲೆವ್ವ ।
ಬಿಳಿಕುದರಿ ಬಿಳುಪ ನೋಡ ।
ಕಾಜಿನಗೊಂಬಿ ಮೋಜನೋಡ ।"

ಚಿಕ್ಕಮಕ್ಕಳಿಗೆ ಚಂದಪ್ಪನನ್ನು ಕಂಡರೆ ಎಲ್ಲಿಲ್ಲದ ಅಕ್ಕರೆ. ಅವನನ್ನು ನೋಡಿ ಆನಂದ ಉಕ್ಕೇರಿದಾಗ :

"ಚಂದಪ್ಪ ಚಂದಪ್ಪ ಚಲುವ
ಚುಂಗು ಬಿಟಗೊಂಡು ಬಂದಾನ

ಎಂದು ಅವನನ್ನು ಸ್ವಾಗತಿಸುತ್ತವೆ. ಮತ್ತೊಂದು :

ಚಂದಪ್ಪ ಚಂದಪ್ಪ ಚಾರೀಕಾಯಿ
ಬಟ್ಟಲ ತುಂಬ ಬಾರೀಕಾಯಿ
ಆಸಿ ಬಟ್ಟು ಅಂಗಾರ ಬಟ್ಟು
ದೇಶಕ್ಕೆಲ್ಲ ಒಂದೇ ಬಟ್ಟು"

ಎಂದು ಅವನನ್ನು ಬಣ್ಣಿಸಿ, ಅವನ ಅಂದಕ್ಕೆ ಮಾರುಹೋಗಿ.

"ಸಕ್ಕರೇನ ? ಮುಕ್ಕಲೇನ ?
ಕಟಾಣೇನ ? ಕಟಿಗೊಳ್ಳೇಳ ?
ಯಾಕೋಳೇನ ? ಹಾಕ್ಕೊಳ್ಳೇನ ?"

ಎಂದು ಕೇಳುವಷ್ಟು ಚಂದ್ರ ಅವರ ಮನದ ಮಂದಿರದಲ್ಲಿ ಕೂತಿದ್ದು ಕಂಡುಬರುತ್ತದೆ. ಅಂತಹ ಹುರುಪಿನಲ್ಲಿ ಅವರಿಗೆ 'ಕಂಬಕಂಬ ಆಟ' ಆಡಲು ಮನಸ್ಸಾಗುವುದು ಸಹಜ.

"ಕಂಬ ಕಂಬ ಆಟಾ । ಲಿಂಬಿ ತ್ವಾಟಾ ॥
ತೆಗ್ಗು ತೆಂಬ ಎಲ್ಲ್ಯಾದ ? ಅಗಸರ ಬಂಡಿ ಎಲ್ಲ್ಯಾದ ?

ಎಂದು ತೆಗ್ಗಿನ ಸುತ್ತಲು ಹಂತಿ ತಿರುಗುತ್ತವೆ.

ಹೀಗೆ ಹುಡುಗೆಯರು. ಆಟಕ್ಕೊಂದು ಹಾಡು ಹೇಳುವುದು ಜನಪದದಲ್ಲಿ ಪ್ರಸಿದ್ಧವಾಗಿದೆ. ಒಮ್ಮೊಮ್ಮೆ ಕೂತಲ್ಲಿಯೇ ಕುಣಿದಾಡುತ್ತ ಹೇಳುವ ಹಲವು ಹಾಡುಗಳಿವೆ. ಒಂದನ್ನು ಮಾದರಿಯಾಗಿ ನೋಡಬಹುದು :

"ಗುಟಗುಟಗೋಲು, ಗುನ್ನರಿಗೋಲು
ದಾಟಗೋಲು ಧರ್ಮರಗೋಲು
ಅದ್ದಾನಕ್ಕಿ ಗಿದ್ದಾನಕ್ಕಿ
ಎದ್ದಬಾರ ಪಲ್ಲಕ್ಕಿ
ಅಕಿ ನಮ್ಮತ್ತಿ ಚಾಮಲಗಿತ್ತಿ
ಕೊಳ್ಳಾಗ ದಾರ ಕಂಟಿ ಸ್ವರ" ॥ ೧ ॥

"ಹಚ್ಚಣಿಕೆವ್ವ ಚುಚ್ಚಣಿಕೆವ್ವ
ಚೂಜಿ ತಾರ ಮಲ್ಲಯ್ಯ
ಮಲ್ಲಯ್ನ ಗೌಡ ಏನಂದ ?
ಕರೀಕುದರಿ ಕಟ್ಟಂದ
ಬಿಳೀ ಕುದರಿ ಬಿಡಂದ
ಸಣ್ಣ ಬಣ್ಣ ಯಾಲಕ್ಕಿ
ಗೌಡರ ಮನೇಸ ಪಲಕ್ಕಿ
ನಾ ಉಣ್ಣೂದು ನೆಲ್ಲಕ್ಕಿ" ॥ ೨ ॥

ಮಕ್ಕಳ ಹಾಡುಗಳಲ್ಲಿ ವಿಡಂಬನೆಗೂ ಸ್ಥಾನವುಂಟು ಚುಚ್ಚುಮಾತು ಅನ್ಯರನ್ನು ಎಚ್ಚರಿಸುವ ವಿಧಾನವಾದರೆ ಅದೂ ನಮಗೆ ಬೇಕಲ್ಲವೆ ? ಅಂತಹ ಒಂದೆರಡು ಹಾಡು ಇಲ್ಲಿವೆ :

೧

"ಅಡ್ಡಗ್ವಾಡೀಮ್ಯಾಲ ಗಿಡ್ಡ ಬಾಳೀಹಣ್ಣ
ಯಾರ ನುಂಗ್ಯಾರೌ ಬಾವಾ ನುಂಗ್ಯಾನೌ
ಬಾವಾನ ಹೊಟ್ಟಿಕಡೀಲಿ ॥

ನಮ್ಮಪ್ಪ ಸೆಟ್ಟಿ ಬಂಗಾರ ಪಟ್ಟಿ
ಮಲ್ಲಿಗಿ ಸೀರಿ ಮರೆಮಾಡಂದ
ಸೆಟ್ಟಿಯ ತಲಿ ಕೆಡಲಿ ॥
ಪಾನಕ್ಕ ಪೀಯೌ, ಪದ್ದನಕ್ಕ ಪೀಯೌ ॥

ಅಚ್ಚಚೌ ಬೆಳ್ಳಚೌ ಡಾಣಿಕಲ್ಲ ತಾರಚ್ಚೌ
ಇಪ್ಪರ ತಾನಂದ
ಶಾಮಕ್ಕ ಬಸರ ಸಿದ್ದರಾವನ ಹೆಸರ
ಕೋಳೂರ ಮನಿಮುಂದ, ಕೋಳಿಕೂಗಿತೌ
ನಮ್ಮೂರ ಮನಿಮುಂದ, ಬನ್ನಿ ಮುಡಿತೌ ॥ ೨ ॥

ಹುಡುಗರಾಟಗಳು

ಹುಡುಗರು ಆಟಗುಳಿಯೆಂದು ಹೆಸರಾಗಿದ್ದಾರೆ. ಅವರಿಗೆ ಲಂಗು-ಲಗಾಮು ಕಡಮೆ. ಓಣಿ-ಓಣಿ ತಿರುಗಾಡಿ ಆಟವಾಡಿ ಬರುವುದು ಅವುಗಳ ಸ್ವಭಾವವಾಗಿಬಿಟ್ಟಿದೆ. ಅವರ ಆಟವಲ್ಲಿ ದೈಹಿಕಶ್ರಮ ಹೆಚ್ಚು. ಹಾಡುಗಳ ಕಡೆಗೆ ಅವರ ಗಮನ ಕಡಮೆ. ಅವರಾಡುವ ಕೆಲವು ಆಟಗಳನ್ನು ಇಲ್ಲಿ ಹೇಳಬಹುದಾಗಿದೆ.

'ಗುಂಡುಗಜಗ' ಆಡುವುದು ಹುಡುಗರಿಗೆ ಇದ್ದೇ ಇದೆ. ಈ ಆಟದಲ್ಲಿ ಗುರಿಕಟ್ಟಿ ಹೊಡೆಯುವುದೇ ಮುಖ್ಯಕಾರ್ಯ. ಈ ಆಟಕ್ಕಿಂತಲೂ ಹೆಚ್ಚು ಮೋಜಿನ ಆಟ 'ಚಿಣಿಕೋಲು'. ಫಣಿಯಿಂದ ಚಿಣಿಯನ್ನು ಚಿಮ್ಮಿ ದೂರ ಕಳಿಸುತ್ತಾನೆ, ಒಬ್ಬ ಹುಡುಗ. ಮತ್ತೊಬ್ಬ ಆ ಚಿಣಿಯನ್ನು ಅಂತರಲೆ ಹಿಡಿದರೆ ಚಿಮ್ಮಿದವ ಸೋತಂತೆ. ಆದರೆ ಆ ಚಿಣಿ ಕೈಗೆ ಸಿಗದೆ ಹೋದರೆ ಅದನ್ನು ಬಿದ್ದಲ್ಲಿಂದ ಹಿಡಿದು. ಚಿಮ್ಮಿದವನ ಫಣಿಗೆ ಗುರಿಯಿಟ್ಟು ಹೊಡೆಯುತ್ತಾನೆ, ಎದುರಾಳಿ ಹುಡುಗ. ಆಗ ಆ ಚಿಣಿ ಪುಟ್ಟಿಯಿಂದ ದೂರ ಬಿದ್ದರೆ ಚಿಮ್ಮಿದವನು ತನ್ನ ಫಣಿಯಿಂದ ಅಳೆದು ನೋಡಿ ಅಷ್ಟು ಗುಣ ಪಡೆಯುತ್ತಾನೆ. ಆಟ ಮುಗಿದ ಮೇಲೆ ಇತ್ತಂಡದವರು ಗಳಿಸಿದ ಗುಣಗಳ ಆಧಿಕ್ಯದ ಮೇಲೆ ಸೋಲು-ಗೆಲುವು ನಿರ್ಧರಿಸುವರು. ಫಣಿಯ ಅಳತೆಯನ್ನು ತೆಗೆಯುವಾಗ :

"ಏಕೇನ ಪಾವು. ದೋಕೇನ ದೃಷ್ಟಿ, ಮುರುಕಾನ ಮುಷ್ಟಿ, ಚರಕೇನ ಗೌಡ, ಪಚಕಾನ ಪುಚ್ಚಿ. ಚೇಕೇನ ಧೋಳ. ಚುಲ್ಲಾನ ಚಿರ್ ॥" ಎಂದು ಸರಾಗವಾಗಿ ಹೇಳುವುದು ಹಾಡಾಗಿ ಪರಿಣಮಿಸುವುದು.

'ಕಳ್ಳೇಮಳ್ಳಿ' ಆಟವನ್ನು ಹುಡುಗರು ಮಳೆಗಾಲದಲ್ಲಿ ಆಡುವುದು ಕಂಡುಬರುತ್ತದೆ. ತಮ್ಮ ಕೈಗಳನ್ನು ಸೆಟ್ಟಗೆ ಚಾಚಿ ಒಂದೇ ಸಮನೆ ಬುಗರಿಯಂತೆ ತಮ್ಮ ಸುತ್ತು ತಿರುಗುತ್ತಾರೆ. ಕಣ್ಣಿಗೆ ಚಕ್ರ ಬಂದಾಗಲೇ ಅವರ ಆಟ ನಿಲ್ಲುತ್ತದೆ. ಆಡುವಾಗ ಅವರಾಡುವ ಹಾಡಿದು :

“ಕಾರಮಳೆಯೆ ಕಪಾತಮಳೆಯೆ
ಸುಣ್ಣಕೊಡತಿನಿ ಸುರಿಯಲೆ ಮಳೆಯೆ
ಬಣ್ಣ ಕೊಡತಿನಿ ಬಾರಲೆ ಮಳೆಯೆ ॥”

ಮಳೆ ಬರಬಹುದು, ಬರಲಿಕ್ಕಿಲ್ಲ. ಹುಡುಗರ ಆಟಮಾತ್ರ ನಿತ್ಯಸತ್ಯ. ಮೇಲಿನಂತೆ ಅವರು ಹಾಡುವ ಇನ್ನೊಂದು ಹಾಡು :

“ಕಳ್ಳೇಮಳ್ಳೇ ಚಿಪಾಟಿಮುಳ್ಳೇ
ಬಸರಿ ಗಿಡದಾಗ ಬಸಪ್ಪ ಕುಂತಾನ
ಹಚ್ಚಿ ಹಣಿಯಲಿ ಮಳೆಯೇ ॥”

‘ಆನೀಕಿರ್’ ಅಂದ್ರ ಹುಡುಗರು ಆಡುವ ಆಟವಲ್ಲ; ಆ ಆಟಕ್ಕೆ ಬಲಿಷ್ಠರಾದ ವರೇ ಬೇಕು. ಈ ಆಟದಲ್ಲಿ ಸಮಾನ ಹುದ್ದರಿಯುಳ್ಳ ಎರಡು ತಂಡಗಳು ಇರುತ್ತವೆ. ನಾಣ್ಯವೊಂದನ್ನು ತೂರಿ ‘ಚಿತ್ತಪಟ್ಟ’ದ ಮೇಲಿಂದ ಪಕ್ಷದ ಸೋಲು-ಗೆಲುವು ನಿರ್ಣಯ ವಾಗುವುದು. ಸೋತವರು ಗೋಡೆಗೆ ತಲೆಹಚ್ಚಿ ಒಬ್ಬರ ಹಿಂದೊಂದು ಸಾಲಾಗಿ ಒಬ್ಬರನ್ನೊಬ್ಬರು ಹಿಡಿದುಕೊಂಡು ಬಗ್ಗಿನಿಲ್ಲಬೇಕು. ಮತ್ತೊಂದು ಪಕ್ಷದವರು ಸಾಲಾಗಿ ಬಗ್ಗಿನಿಂತವರ ಮೇಲೆ ಹಾರಿಕೂಡ್ರುತ್ತಾರೆ. ಮೇಲೆ ಹತ್ತಿದ ಒಬ್ಬನ ಕಾಲು ನೆಲಕ್ಕೆ ಹತ್ತಿದರೆ ಆ ಪಕ್ಷವೇ ಸೋತಂತೆ. ಸೋತರೆ ಅವರು ಬಗ್ಗಿ ನಿಲ್ಲಬೇಕು. ಉಳಿದ ವರು ಅವರ ಮೇಲೆ ಹಾರಿ ಕೂಡ್ರಬೇಕು. ಬಗ್ಗಿದವರು ಸಾಕಾಗಿ ಆನೆಯಂತೆ ಕಿರುಗುಟ್ಟಿ ದರೆ ಮೇಲಿನವರು ಕೆಳಗಿಳಿದು ಪುನಃ ಅವರ ಮೇಲೆ ಹಾರಿ ಕೂಡ್ರುತ್ತಾರೆ. ಜಿಗಿದು ಕೂಡ್ರುವ ಪಕ್ಷದವರು ಜಿಗಿದು ಹತ್ತುವಾಗ :

“ಅಂಟೋಳ್ ಪಂಟೋಳ ಕಾಯಿ
ನೀರೋಳ ಜಂಭೋಳ ಕಾಯಿ
ಹೂವೋ ಮಗ್ಗ್ಯೋ ಮಕಾದಸ್ ।
ಒಂದಲಕ್ ಧಾಮ ಧೂಮ್
ತತ್ತಿ ಅಮ್ಮಾಕಿ ಗೌಡ ತಮ್ಮಾರೆ ॥”

ಎಂದು ಆಡುತ್ತಾರೆ. ಇದು ಆನೀರ್; ಆಡಿನೋಡಬೇಕು. ಆಗ ತಿಳಿಯುತ್ತೆ ಮೋಜು ಮಜಾ !

‘ಕಾನ್ ಕಾನ್ ಉತ್ತತ್ತಿ’ ಎನ್ನುವುದು ಒಂದು ಬಗೆಯ ಜಿಗಿದಾಟ. ಒಬ್ಬ ಹುಡುಗ ನೆಲದಮೇಲೆ ಕುಳಿತು ಮುಂಗಾಲು ಚಾಚುತ್ತಾನೆ. ಕಾಲ ತುದಿಬೆರಳಮೇಲೆ ಕುಳಿತು ಮುಂಗಾಲು ಚಾಚುತ್ತಾನೆ. ಕಾಲ ತುದಿಬೆರಳಮೇಲೆ ತನ್ನ ಗೇಣು ಜೋಟು ಗಳಿಂದ ನಿಲುವನ್ನು ಏರಿಸುತ್ತಹೋಗುತ್ತಾನೆ. ತುದಿಗೆ ಕಾಲು ತಾಕದಂತೆ ಉಳಿದ ಹುಡುಗರು ಜಿಗಿಯುತ್ತ ಹೋಗುತ್ತಾರೆ. ಇದನ್ನು ಭಾರತೀಯ ‘ಹಾಯ್‌ಜಂಪ್’ ಎಂದು ಕರೆಯಬಹುದು. ಆಗ ಅನ್ನುವ ಹಾಡು;

"ಕಾನ್ ಕಾನ್ ಉತ್ತತ್ತಿ
ದುಡ್ಡಿಗೆ ಸೇರ್ ಬಳ್ಳೊಳ್ಳಿ
ಕಾನ್ ಕಾನ್ ಉತ್ತತ್ತಿ
ಇಲ್ಲಿಗೆ ಬಂತೋ ಸಂಗಯ್ಯ
ಖಾನ್ ಖಾನ್ ಒತ್ತೊತ್ತಿ
ದಿಲ್ಲಿಗೆ ಬಂತೋ ಸಂಗಯ್ಯ ॥"

ಆಟ ಮುಗಿತರಕ್ಕೆ ಬರುವವರೆಗೆ ಇದೇ ಬಗೆಯ ಹಾಡು ಹಾಡುತ್ತಾರೆ.

'ಸರಗೋಲು' ಬಯಲು ಸೀಮೆಯಲ್ಲಿ ಕಾಣಬರುವ ಹುಡುಗರಾಟ. ಜೋಳದ ಸುಗ್ಗಿ ಮುಗಿದಾವ ದಂಟುಸಿಗುತ್ತವೆ. ಅವನ್ನು ಹಿಡಿದು ಹುಡುಗರು ಸರಗೋಲು ಆಡಲು ಆರಂಭಿಸುತ್ತಾರೆ. ಪ್ರತಿಯೊಬ್ಬನು ನಿಯತ ಸಾಲಿನಲ್ಲಿ ನಿಂತು ತಮ್ಮ ಕೈಯೊಳಗಿನ ಕೋಲನ್ನು ನೆಲಕ್ಕೆ ಹಚ್ಚಿ ಮುಂದಕ್ಕೆ ಚಿಮ್ಮಬೇಕು. ಯಾವಕೋಲು ಎಲ್ಲಕ್ಕೂ ಹಿಂದುಳಿಯುವುದೋ ಆ ಕೋಲಿನವ ಸೋತಂತೆ. ಆಗ ಸೋತವನು ತನ್ನ ಎರಡೂ ಕೈಗಳಿಂದ ದಂಟಿನ ಕೋಲನ್ನು ಎತ್ತಿಹಿಡಿಯುತ್ತಾನೆ. ಉಳಿದವರು ಅದನ್ನು ಚಿಮ್ಮುತ್ತಾರೆ. ಅದು ಕೆಳಗೆ ಬಿದ್ದೊಡನೆ ಸೋತವನು ಇತರರನ್ನು ಮುಟ್ಟಲು ಹೋಗುತ್ತಾನೆ. ಕೋಲನ್ನು ಅನ್ಯರು ಚಿಮ್ಮದಂತೆ ನೋಡಿಕೊಂಡು ಮುಟ್ಟಬೇಕಾದುದು ನಿಯಮ. ಮುಟ್ಟಹೋದಾಗ ದಂಟನ್ನು ಇತರರು ತಮ್ಮ ಕೈಗೋಲಿನಿಂದ ಅದನ್ನು ಚಿಮ್ಮಿ ದೂರ ಕಳಿಸುತ್ತಾರೆ. ಈ ಆಟ ಬಹಳ ತುರುಸಿನಿಂದ ನಡೆಯುತ್ತದೆ. ಮತ್ತೊಬ್ಬ ಮುಟ್ಟಿಸಿಗೊಂಡಾಗಲೇ ಆಟಕ್ಕೊಂದು ನಿಲುಗಡೆ. ಆಗ ಸೋತ ಕೋಲಿನವನು ಅಲ್ಲಿಂದ ಮೊದಲಿನ ಪಾಜಾ ಗಟ್ಟಿಯವರೆಗೆ ಕುಂಟುತ್ತ ಬರಬೇಕು; ಆಗ ಉಳಿದವರು ಹೀಗೆ ಹಾಡುವರು :

"ಕುಂಟಗಾಲ, ಕೂರಗಾಲ
ಲಗಾ ಒಗಿಯೋ ತಿಮ್ಮಯ್ಯ ।
ಎಣ್ಣೆ ಎಣ್ಣೆ ಬಾರಕೋಲ
ಜೆಜ್ಜಿರೊಟ್ಟಿ ಚಾರಕೋಲ ॥"

ತಿಳ್ಳಿ, ಸಾರಂಗಪಟ್ಟಿ ಮುಂತಾದ ಆಟಗಳು ಇತ್ತಿತ್ತಲಾಗಿ ಕಲಿತವರನ್ನೂ ಆಕರ್ಷಿಸಿ. ಹಳ್ಳಿಯನ್ನು ಬಿಟ್ಟು ದಿಳ್ಳಿಯವರೆಗೂ ಸಾಗಿವೆ. ಈ ಬಗೆಯ ಮಕ್ಕಳಾಟ-ಪಾಟಗಳು ಹಳ್ಳಿಯ ಜೀವನದಲ್ಲಿ ಹಾಸು-ಹೊಕ್ಕಾಗಿ ಬೆಳೆದು ಬಂದಿವೆ. ಎಲ್ಲ ಆಟಗಳನ್ನು ಹೇಳುವುದಕ್ಕೆ ಇಲ್ಲಿ ಅವಕಾಶವಿಲ್ಲ. ಉಳಿದವರು ಸಂಗ್ರಹಿಸಿ ಹೇಳಿದರೆ ಜನಪದ ಬದುಕಬಲ್ಲದೆಂದು ನನ್ನ ನಂಬುಗೆ.

ಕವಿಕಲ್ಪನೆಯಲ್ಲಿ ಚಂದ್ರ

ಎಂ. ಎಸ್. ಮಹಾಂತಯ್ಯ

"ರಜನಿಗಾ ಚಂದ್ರಂ ಮಹಾ ಭೂಷಣಂ"

—ಸೋಮೇಶ್ವರ

ಮಾನವ ಇತಿಹಾಸ ಏರ್ಪಟ್ಟಂದಿನಿಂದ, ಮರ್ತ್ಯದ ಮಾನವನಿಗೂ ಆಗಸದ ಚಂದ್ರನಿಗೂ ನಂಟು ಉಂಟಾಗಿದೆ. ಬೆಣ್ಣೆಯಂತೆ ಕಣ್ಗೆ ಹಿತಕರನಾದ ಚಂದ್ರನನ್ನು ಮನುಕುಲ, ಬಾಲ್ಯದಿಂದಲೂ ಬಯಸುತ್ತ ಬಂದಿದೆ. ಚಂದ್ರನನ್ನು ಸಮೀಪದಿಂದ ಅರಿಯುವ ಕುತೂಹಲ ವಿಜ್ಞಾನಿ ಮಾನವನಿಗಿದ್ದರೆ, ಕವಿಪ್ರತಿಭೆಯು ಮಾನವನಲ್ಲಿ ಚಂದ್ರನ ರೂಪ, ಕಲ್ಪನೆ ಸತ್ಯದೂರವೆನಿಸಿದರೂ ಸುಂದರ ಹಾಗೂ ಸಾನಂದವಾದಂದಾಗಿದೆ.

"ವಿದ್ವತ್ಕವಯಃ ಕವಯಃ" ಎಂದರೆ ವಿದ್ವತ್ತಿನಿಂದ ಕೂಡಿದ ಕವಿಗಳೇ ನಿಜವಾದ ಕವಿಗಳು. ಈ ಮಾತು, ಕನ್ನಡ ಸಾಹಿತ್ಯದಲ್ಲಿ ಪಂಪನಿಂದ ಕುವೆಂಪುವರೆಗಿನ ಎಲ್ಲ ಕವಿಗಳಿಗೂ ಅನ್ವಯಿಸುತ್ತದೆ ೧೦ನೆಯ ಶತಮಾನದ ಪಂಪ ಮಹಾಕವಿಯಿಂದ ೨೦ನೆಯ ಶತಮಾನದ ಕವಿವರ್ಯ ಕುವೆಂಪುವರೆಗಿನ ಕವಿಗಳು—ಇಂದಿನ ನವ್ಯ ಕವಿಗಳೂ ಸೇರಿ—ಚಂದ್ರನನ್ನು ತಮ್ಮ ಕಾವ್ಯಗಳಲ್ಲಿ ಅನೇಕ ವಿಧವಾಗಿ ಬಣ್ಣಿಸಿದ್ದಾರೆ. ಬಹಳವಟ್ಟಿಗೆ ಎಲ್ಲ ಕವಿಗಳ ವರ್ಣನೆ "ಕವಿ ಸಮಯ"ಕ್ಕೆ ಒಳಪಟ್ಟಿದ್ದರೂ. ಪ್ರತಿಯೊಬ್ಬ ಕವಿ ಚಂದ್ರನ ವರ್ಣನೆಯಲ್ಲಿ ನವ್ಯತೆಯನ್ನು ಕಾಣಿಸಲು ಪ್ರಯತ್ನಿಸಿದ್ದಾನೆ.

ಪೂರ್ವಕವಿಗಳಲ್ಲಿ ಅಷ್ಟಾದಶವರ್ಣನೆಗಳ ಆವಶ್ಯಕತೆಯಿತ್ತು. ಆ ಹದಿನೆಂಟು ವರ್ಣನೆಗಳಲ್ಲಿ ಚಂದ್ರೋದಯ ವರ್ಣನೆಯೂ ಒಂದು. ಕವಿಗಳು ಪೈಪೋಟಿಯಿಂದ ಚಂದ್ರೋದಯದ ವರ್ಣನೆಯ ನೆಪದಲ್ಲಿ. ಉತ್ತಾನ ಶೃಂಗಾರವನ್ನು ಪ್ರಮುಖವಾಗಿ ಮಾಡಿದ್ದಾರೆ. ಚಂದ್ರನ ಜೊತೆಯಲ್ಲಿ ಸಂಧ್ಯಾ. ರಜನಿ. ನೈದಿಲೆ. ಚಂದ್ರಿಕೆ. ತಾರೆಗಳು ವೇಶ್ಯಾವಾಟಿ—ಇವುಗಳ ಬಣ್ಣನೆ ಕವಿಗಳಲ್ಲಿ ಬಹಳ ಸಹಜ ಮತ್ತು ಸುಂದರವಾಗಿ ಬಂದಿವೆ. ಇದನ್ನು ಹಿನ್ನೆಲೆಯಾಗಿಟ್ಟುಕೊಂಡು "ಕವಿಕಲ್ಪನೆಯಲ್ಲಿ ಚಂದ್ರ" ನನ್ನು ವಿವೇಚಿಸಲಾಗಿದೆ.

ಪಂಪ ಆದಿಕವಿಯಾದರೂ ಆತನಿಗಿಂತ ಪೂರ್ವದಲ್ಲಿ ಕವಿಗಳಿದ್ದರೆಂಬುದು ಸುಳ್ಳಲ್ಲ. ಆದರೆ ಅವರ ಕೃತಿಗಳು ಇನ್ನೂ ದೊರೆತಿಲ್ಲ. ಹಾಗೆ ಪಂಪಪೂರ್ವ ಕವಿ

ಯಾದ ಒಂದನೆಯ ಗುಣವರ್ಮನದೆಂದು ಹೇಳಲಾದ "ಶೂದ್ರಕ" ಕಾವ್ಯದಲ್ಲಿನ ಒಂದು ಪದ್ಯ ಕಾವ್ಯಸಾರದಲ್ಲಿ ಇದೆ.
ಆ ಪದ್ಯ ಹೀಗಿದೆ :

ಒಡನೆ ಸುರಾಸುರರ್ ಕನಕಪರ್ವತಮಂ ಕಡೆಗೋಲಮಾಡಿ ಮೇಣ್
ಪೆಡೆ ಪಲವಲಪ್ಪ ವಾಸುಕಿ ಮಹೋರಗನಂ ಕಡೆಗಣ್ಣಿಮಾಡಿ ಪಾ
ಲ್ಗಡಲನುಪಾಯದಿಂ ಕಡೆಯೆ ರಾಹುಗೆ ವಾಯುಪಥಾಗ್ರಮೆಂಬ ಪೆ
ರ್ಮಡಕೆಯೊಳಿಕ್ಕಿ ಕೊಟ್ಟ ಬೆಣ್ಣೆ ಪೋಲಿರ್ದುದು ಚಂದ್ರಮಂಡಲಂ ॥[1]

ಇಲ್ಲಿ. ಕವಿಪ್ರಜ್ಞೆ ಚಂದ್ರಮಂಡಲವನ್ನು ಹೊಸ ಬೆಣ್ಣೆಗೆ ಹೋಲಿಸಿದುದು ತುಂಬ ಸೊಗಸಾಗಿದೆ.

ಪಂಪ. ತನ್ನ "**ವಿಕ್ರಮಾರ್ಜುನ** ವಿಜಯ"ದಲ್ಲಿ ಅರ್ಜುನನ ವಿವಾಹವನ್ನು ದ್ರೌಪದಿಯೊಡನೆ ಮಣಿಮಯ ಮಂಟಪದ ಚಂದ್ರಕಾಂತದ ಚಂದ್ರಶಾಲೆಯಲ್ಲಿ ಮಾಡಿಸಿ, ಅಂದಿನ ಸಂಜೆಯಂದು "ಪಟುಂಗಾಸಿದ ಪೊನ್ನ ಪುಂಜಿಯವೊಲಿರ್ದುದು ಕಣ್ಗೆ ಹಿಮಾಂಶುಮಂಡಲಂ"[2] ಎಂದು ಚಂದ್ರಬಿಂಬವನ್ನು ಹೊನ್ನಿನುಂಡೆಗೆ ಹೋಲಿಸಿದ್ದಾನೆ. ಮುಂದುವರಿದು ಚಂದ್ರನು ಮದನನ "ಸೋದನ ದೀವಿಗೆ"[3] ಎಂದೂ ಹೇಳಿದ್ದಾನೆ. ಅಲ್ಲದೆ ಕವಿಚಮತ್ಕರಿಸಿ "ಬೆಳ್ದಿಂಗಳನ್ನು ಕಂಡು ರವಿಕಿರಣ ಭ್ರಾಂತಿಯಿಂದಿದ್ದ"ವೆಂಬ ಭ್ರಮಾಲಂಕಾರವನ್ನು ಹೇಳಿದ್ದಾನೆ.[4] ಇವೆಲ್ಲಕ್ಕೂ ಮಿಗಿಲಾದ ಚಂದ್ರನ ವರ್ಣನೆಯೊಂದು ಪಂಪನ "ಆದಿಪುರಾಣ"ದಲ್ಲೂ (೧೨-೬). "ವಿಕ್ರಮಾರ್ಜುನ ವಿಜಯ"ದಲ್ಲೂ (೪-೫೦) ಹೀಗೆ ಬಂದಿದೆ :

ನೆರೆದ್ಯೆ ಸಂಜೆಯೊಳಿಂದು ಕಾಯ್ದೊದೆದೊಡೇನಾತ್ರಾಂಗದೊಳ್ ರೋಹಿಣೀ
ಚರಣಾಲಕ್ತಕರಾಗಮಚ್ಚೆಱದುದೋ ಮೇಣ್ ಕಾಮಿಗಳ್ಗೀವ ಕಾ
ಮರಸಂ ಪೊಣ್ಮೆದುದೋ ತಮೋಗಜದ ಕೋಡೇಱಿಂದೆ ಮೇಣ್ ನೊಂದುದೋ
ಹರಿಣಂ ತಾನೆನಿಸಿತ್ತು ರಕ್ತರುಚಿಯಂ ಬಿಂಬಂ ಸುಧಾಸೂತಿಯಾ ॥

ಹುಣ್ಣಿಮೆಯ ಚಂದ್ರ ಮೂಡುವಾಗ ಕೆಂಪಾಗಿರುವುದು ಸಹಜ. ಆದರೆ ಇಲ್ಲಿ ಪಂಪ ಚಂದ್ರಬಿಂಬ ಕೆಂಪಾಗಿರುವುದಕ್ಕೆ ಕೊಡುವ ಕಾರಣಗಳು ಅನೂಹ್ಯವಾಗಿ ಅಚ್ಚರಿಯನ್ನುಂಟುಮಾಡುವಂತಾಗಿವೆ.

ಶಕ್ತಿಕವಿಯಾದ ರನ್ನನ "ಅಜಿತ ಪುರಾಣ"ದಲ್ಲಿ ದಿಕ್ಕಾಂತೆಯ ಕೈಗನ್ನಡಿಯಾಗಿ ಜಗದಾಲೋಕನ ದರ್ಪಣವಾಗಿ. ಪ್ರಥಮ ದಿಕ್ಕಾಂತಾನನವಾಗಿ. ಕಂತು

1. ಅಭಿನವವಾದಿ ವಿದ್ಯಾನಂದ : ಕಾವ್ಯಸಾರ (೧೯೭೮) ಸಂ : ಎಸ್. ಜಿ. ನರಸಿಂಹಾಚಾರ್, ಮ. ಆ. ರಾಮಾನುಜೈಯಂಗಾರ್.
2. ಪಂಪ : ವಿಕ್ರಮಾರ್ಜುನ ವಿಜಯಂ ೨-೮೧. ಬೆಂಗಳೂರು ಪರಿಷತ್ತು ಮುದ್ರಣ ೧೯೩೧.
3. ಅದೇ ೪-೫೨.
4. ಪಂಪ : ಆದಿಪುರಾಣಂ ೧೨-೯.

ರಾಜಗಜೇಂದ್ರೋದ್ದೀಪನ ಪಿಂಡವಾಗಿ. ಅಂಬುಧಿಯ ಉತ್ತಂಸ ಹಂಸವಾಗಿ. ವಿಯೋಗಿ ಗಣ ಆಕ್ರಾಂತ ಕುರಂಗಪ್ರೋತ ಭಯಂಕೃತ್ಕುಂತೀರವವಾಗಿ ಮೆರೆದಿದೆ, ಹಿಮಾಂಶು ಮಂಡಲ[5]. ಕವಿ, ಮುಂದುವರಿದು ಚಂದ್ರಿಕೆಯನ್ನು ಈ ರೀತಿಯಾಗಿ ಉತ್ಪ್ರೇಕ್ಷಿಸಿದ್ದಾನೆ: "ಬೆಳ್ದಿಂಗಳೆಂಬ ನೀರನ್ನು ಬೊಗಸೆಯಲ್ಲಿ ತುಂಬಿ ಕುಡಿಯಲು. ಕೊಡದಲ್ಲಿ ತುಂಬಲು, ಬಚ್ಚಲ ನೆಲೆದೋಟದಲ್ಲಿ ಹರಿಸಲು. ಹರಿಗೋಲಸಿಕ್ಕಿ ಹಾಯಲು. ಆಳ ವಿಷ್ಟೆಂದು ಒಳಹೊಕ್ಕು ನೋಡಲು. ಧುಮುಕ್ಕೆಂದು ಹಾರಿ ಈಸಾಡಲು. ಅಗ್ಗಲಿಸ ವಲಪಿನಿಂ ಬಗೆಂದುದಂದು ಜನಂ ಘನಚಂದ್ರಿಕಾಂಬುವಂ."[6]

ಒಂದನೆಯ ನಾಗವರ್ಮ "ಇಳೆಯನ್ನು ನೋಡಲು ರಸಾತಳದಿಂದ ಹೊರಹೊರಡುವ ನಾಗರಾಜನ ಹೆಡೆಯಲ್ಲಿ ಹೊಳೆವ ಕೆಂಗಿರಣದ ಮಣಿಸಮೂಹದಂತೆ ಇಂದು ಮಂಡಲ ಶೋಭಿಸಿತು"[7] ಎಂದು ಬಣ್ಣಿಸಿದರೆ, ಮಲ್ಲಿನಾಥ ಪುರಾಣದ ನಾಗಚಂದ್ರ, "ಕೈಯಲ್ಲಿ ನಕ್ಷತ್ರ ಮಾಲೆಯುಳ್ಳವನಾಗಿ ಸಂಧ್ಯಾವಾದ ನಿಯಮಾನುರಕ್ತನಾಗಿ. ಗಿರಿ ಶಿಖರದಲ್ಲಿ ಯೋಗೀಂದ್ರನಂತೆ ಚಂದ್ರನು ಶೋಭಿಸಿದ"ನೆಂದು ಹೇಳಿದ್ದಾನೆ.[8] ಇನ್ನೊಂದೆಡೆ "ರತಿ, ಮದನನಿಗೆ ನೀಡುವ ವಜ್ರದ ಗುರಾಣಿಯಂತೆ ಹಿಮಕರಬಿಂಬವು ತಳತಳಿಸಿತೆಂದು ಬಣ್ಣಿಸಿದ್ದಾನೆ.[9]

ಅತ್ರಿಮುನಿಯ ಮಗ ಚಂದ್ರನೆಂಬ ಅಂಶವನ್ನು ಅಗ್ಗಳನು ತನ್ನ "ಚಂದ್ರಪ್ರಭ ಪುರಾಣ"ದಲ್ಲಿ ಈ ರೀತಿ ಹೇಳಿದ್ದಾನೆ: ಅತ್ರಿಯ ಬಿಂಬವು ರಜನೀಕಾಂತೆಯ ಉರೋಜದ ಮಲಯಜಪತ್ರವೆಂದೂ ರತಿಯ ಕರ್ಣಪತ್ರವೆಂದೂ ಮದನನ ಶುಭ್ರಾತಪತ್ರವೆಂದೂ ಸ್ವರ್ಧುನಿಯಲ್ಲಿ ತೋಳಿಯುವ ಶತಪತ್ರವೆಂದೂ ಕವಿ ಚಿತ್ರಿಸಿದ್ದಾನೆ[10] ನೇಮಿಚಂದ್ರ "ಲೀಲಾವತೀ ಪ್ರಬಂಧ"ದಲ್ಲಿ ಚಂದ್ರಬಿಂಬವನ್ನು ವಿರಹಿಗಳ ಎದೆಯನ್ನು ಸೀಳಿ. ಜಾರಿದ ಕಂದರ್ಪದೇವನ ಚಕ್ರಕ್ಕೆಣೆಯಾಯಿತೆಂದು ಬಣ್ಣಿಸಿದ್ದಾನೆ.[11] ಇದಕ್ಕೂ ಮಿಗಿಲಾಗಿ ಸೋಮೋದಯವನ್ನು ಶ್ಲೇಷೆಯಿಂದ ಹೇಳಿದ ಪದ್ಯ ಮನೋಜ್ಞವಾಗಿದೆ:

5 ರನ್ನ : ಅಜಿತತೀರ್ಥಂಕರ ಪುರಾಣ ತಿಲಕಂ ೭–೪೨ ಸಂ. ಎಚ್. ದೇವೀರಪ್ಪ.
6. ಅದೇ, ೬–೪೫.
7. ನಾಗವರ್ಮ : ಕರ್ಣಾಟಕ ಕಾದಂಬರೀ ಸಂಗ್ರಹ : ಸಂ. ಟಿ. ಎಸ್. ವೆಂಕಣ್ಣಯ್ಯ (೧೯೫೩) ಪದ್ಯ ೭೭.
8. ಕಾವ್ಯಸಾರ : ಪದ್ಯ ೯೨೫.
9. ಅದೇ ಪದ್ಯ ೯೨೨.
10 ಮಲ್ಲಿಕಾರ್ಜುನ : ಸೂಕ್ತಿಸುಧಾರ್ಣವಂ : ಸಂ. ಎಸ್. ಅನಂತರಂಗಾಚಾರ್ (೧೯೪೭) ಪದ್ಯ ೨೨೬.
11. ಅದೇ. ೨೦೧–೧೬೯.

ಸಮದಂ ಸದ್ಗ್ರಹ ಷಡ್ಜ ಷಟ್ಚರಣ ಮಂದ್ರನ್ಯಾಸ ಮುತ್ಕೀರ ಮ
ಧ್ಯಮ ತಾರಂ ಮೃದುತಾಡಿ ತೌಡವ ನವ್ಯೋದ್ಭಿನ್ನ ಪ್ರಸೂನಂ ಸಪಂ
ಚಮ ಚಂಚತ್ಕಳಕಂಠ ಕಂಪಿತರುತಂ ತಾನೆಂಬ ಹಿಂದೋಳ ರಾ
ಗಮೆ ತಾನಾದ ವಸಂತಮೇನೆಸೆದುದೋ ಸಂಪೂರ್ಣ ಸೋಮೋದಯಂ ॥12

ಇಲ್ಲಿ ಬಂದಿರುವ ಷಡ್ಜ, ಮಂದ್ರ, ತಾರ, ಪಂಚಮ, ಹಿಂದೋಳಗಳು ಸಂಗೀತದ ರಾಗಮಾಲಿಕೆಯ ಪದಪುಂಜಗಳಾಗಿವೆ. ಇದರಿಂದ ನೇಮಿಚಂದ್ರ, ಸಾಹಿತ್ಯ-ಸಂಗೀತ ಗಳೆರಡರಲ್ಲೂ ಅಭಿಜ್ಞನಾಗಿದ್ದನೆಂದು ಊಹಿಸಬಹುದಾಗಿದೆ.

ಚಂದ್ರೋದಯದಲ್ಲಿ ಮೊದಲು ಕೆಂಪು, ಬಳಿಕ ನಸುಗೆಂಪು, ಆಮೇಲೆ ಬಿಳುಪು ಮೂಡುವುದು ಸಹಜ. ಇದನ್ನೇ ರುದ್ರಭಟ್ಟನು ಇಂದ್ರನಿಗೆತ್ತಿದ "ಮಾಣಿಕಗೊಡೆ, ಪೊಂಗೊಡೆ, ಬೆಳ್ಗೊಡೆಗಳೆನಿಸಿದುದು ವಿಧುಬಿಂಬಂ" ಎಂದು ನವೀನರೀತಿಯಲ್ಲಿ ಬಣ್ಣಿಸಿದ್ದಾನೆ.[13] ಮುಂದುವರಿದು ಕವಿ ಬೆಳ್ದಿಂಗಳು "ಕರಗಿಸಿದರೆ ಬೆಳ್ಳಿ, ತೆಳ್ಪೊರೆಯೆತ್ತೆ ದುಕೂಲ, ಕಂಡರಿಸೆ ಹಂಸೆ, ಉಂಡೆಮಾಡಿ ಸರಮಾಡಿದರೆ ತಾರಹಾರ, ಅರೆದರೆ ಸೌಧ ಸಂತತಿಗೆ ಪಾಲ್ಗೊಡೆ, ಉಗುರಿಂದ ಉದುರಿಸಲು ಕರ್ಪೂರದ ಹಳುಕು" ಆಗುತ್ತದೆಂದು ಅಸಾಧಾರಣ ಕಲ್ಪನೆ ಮಾಡಿದ್ದಾನೆ.[14]

ಸಂಪ್ರದಾಯ ಶರಣತೆಯನ್ನು ಬದಿಗೊತ್ತಿ ಬಯಸಿದ ಹರಿಹರ ಕವಿ, ತನ್ನ "ಗಿರಿಜಾ ಕಲ್ಯಾಣ" ದಲ್ಲಿ ಇದು ಇಂದ್ರದಿಗ್ವನಿತೆಯ ನಿಟಿಲ ಸಿಂಧೂರಾಂಶಂವೊ, ಪುಷ್ಪಾಯುಧ ಪದ್ಮರಾಗಮುಕುರಪ್ರದ್ಯೋತವೋ. ಕಾಮಾಹೋಮಹುತ ಭುಕ್ಜ್ವಾಲೆಯೊ"[15] ಎಂಬ ಸಂದೇಹಕ್ಕೆಡೆಯಾಗುವಂತೆ, ಪೂರ್ವದಿಕ್ಕಿನಲ್ಲಿ ಚಂದ್ರದ್ಯುತಿಯ ಪ್ರಾಭವವಾಯಿತೆಂದು ಬಣ್ಣಿಸಿದ್ದಾನೆ. ಒಂದೆಡೆ ಮೂಡುವ ಚಂದ್ರನಿಗೆ ರಾಜೋಪ ಚಾರ ಜಪ್ಪಿತ್ತೆಂದು[16], ಮತ್ತೊಂದೆಡೆ ವಿರಹಿಗಳ ಮೇಲೆ ಹೊರಡುವ ಮದನನಿಗೆ ವಸಂತನು ಎತ್ತಿದ ಬೆಳ್ಗೊಡೆ[17] ಎಂದು ಬಣ್ಣಿಸಿದ್ದಾನೆ. ಬೆಳ್ದಿಂಗಳು "ಮಲ್ಲಿಕಾ ಸಮೂಹದಂತೆ, ನವ್ಯಚಂದನದಂತೆ, ಮೌಕ್ತಿಕಾಭರಣದಂತೆ. ಅಮೃತಾಬ್ಧಿಯಂತೆ, ಧವ ಳೋತ್ತರೀಯದಂತೆ, ನವದುಗ್ಧದಂತೆ. ರಜತಾದ್ರಿಯಂತೆ" ತೋರಿತೆಂದು ಹೇಳಿ

---

12. ಅದೇ, ೨೩೩–೧೭೪.
13. ರುದ್ರಭಟ್ಟ : ಜಗನ್ನಾಥ ವಿಜಯಂ. ೧೬–೧೦೬. O. R. I. Mysore (1923),
14. ಅದೇ, ೧೬–೧೦೯.
15. ಹರಿಹರ : ಗಿರಿಜಾಕಲ್ಯಾಣ ಪ್ರಬಂಧಂ. ಸಂ. ಡಾ. ಶಿ. ಚ. ನಂದೀಮಠ (೧೯೬೮) ೪–೯೪.
16. ಅದೇ, ೪–೯೬.
17. ಅದೇ, ೪–೧೦೦.

ದ್ದಾನೆ.[18] ಇಷ್ಟು ಸಾಲದೆನ್ನುವಂತೆ ಅತ್ಯಂತ ಸುಂದರವಾದ ಎರಡು ಪದ್ಯಗಳನ್ನು ಕವಿ ರಚಿಸಿದ್ದಾನೆ. ಇವು ಸಾಂದ್ರಚಂದ್ರಾತಪದ ಸೌಂದರ್ಯವನ್ನು ಹೆಚ್ಚಿಸಿವೆ.

> ಹರನುದ್ಧೂಳಿಸಿದತ್ಯನೂನ ಭಸಿತ ಪ್ರದ್ಯೋತವೋ ಚಂದ್ರಶೇ
> ಖರನಾನಂದಮುಯಾಟ್ಟಹಾಸರುಚಿಯೋ, ಸರ್ವೇಶ ಸತ್ಕೀರ್ತಿಯೋ
> ಪರಮೋತ್ತುಂಗ ಮರುನ್ನದೀಪ್ರಬಳಗೌರಚ್ಛಾಯೆ ಭೂಭಾಗದೊಳ್
> ಪರೆದತ್ತೋ, ಎನೆ ಪರ್ಬಿತುರ್ಬಿಯನಗುರ್ಬಿಂ ಸಾಂದ್ರಚಂದ್ರಾತಪಂ ॥19

ವಿರಹಿಗಳಿಗೆ ಬೆಳ್ದಿಂಗಳು ಕೆಂಡವಾಗುತ್ತದಂತೆ. ಶೈತ್ಯೋಪಚಾರದ ವಸ್ತುಸಮುದಾಯ ತದ್ವ್ಯತಿರಿಕ್ತತೆಯನ್ನುಂಟುಮಾಡುವಂತೆ, ಹರಿಹರ ಅದನ್ನೇ ಸೊಗಸಾಗಿ ನಿರೂಪಿಸಿದ್ದಾನೆ: ವಿರಹದಲ್ಲಿ ಬೇಯುವ ರಮಣಿಯನ್ನು ಕುರಿತು ಸಖಿ ಮತ್ತೊಬ್ಬಳಿಗೆ ಹೇಳುವ ಮಾತಿದು :

> ವಿರಹದೊಳೀಕೆಗಕ್ಕ ಬಿಸಜಂ ವಿಷಜಂ ಹಿಮರೋಜೆ ಸೂಜೆ ಪಾ
> ವರಿ ದರಿ, ಮಾವು ಪಾವು. ಕುಮುದಂ ಕುಮುದಂ, ತನಿಗರ್ಬು ಮುರ್ಬು, ಕ
> ಸ್ತೂರಿ ಯುರಿ, ಗಾಳಿ ದಾಳಿ, ಕುಸುಮಂ ವಿಷಮಂ, ಪೊಸಪಾಳೆ ಬಾಳ್, ವಸಂ
> ತ್ಕರವುರಿ, ಹಂಸೆ ಹಿಂಸೆ, ಮೊರೆವಾಜಿಡಿಯಾಜಿಡಿ, ತಿಂಗಳಿಂಗಳಂ ॥20

ಹರಿಹರನ ವರಸುತ ರಾಘವಾಂಕನು ಕೂಡ ತನ್ನದೇ ಆದ ನವ್ಯಪಂಥದಲ್ಲಿ ಚಂದ್ರೋದಯ ವರ್ಣನೆ ಮಾಡಿದ್ದಾನೆ. ಹರಿಶ್ಚಂದ್ರ ಕಾವ್ಯದಲ್ಲಿ ಒಂದೆಡೆ ಹೀಗಿದೆ : "ವರುಣ ಇಂದ್ರರು ಕಾದಲು ಹಿಡಿದಿರುವ ಕೆಂಪು ಗುರಾಣಿಗಳೊ. ದಿನರಾತ್ರಿ ಒಂದನ್ನೊಂದು ಒತ್ತಿಕೊಳ್ಳಲು ನಡೆಯಲು ಹೊರಗೆ ಹೊಯ್ದ ಮಾಣಿಕದ ಗೂಡಾರಗಳೊ. ಕಡೆಹಗಲ ರವಿಬಿಂಬವಿದಿರಲೊಪ್ಪುವ ಮೂಡಗಡೆಯ ವನಧಿಯೊಳು ಬಿಂಬಿಸಿದುದೋ ಎನ್ನುವಂತೆ ಕೆಂಪಿಡಿದು ಮುಳುಗುವ ರವಿ. ಉದಯಿಸುವ ಇಂದು" ಉಭಯ ದಿಕ್ಕುಗಳಲ್ಲಿ ಶೋಭಿಸಿದರಂತೆ.[21] ಮತ್ತೊಂದೆಡೆ ಹಿಮಕರನು ನವ ರಸೋದಯನೆನಿಸಿದನೆಂದು ಹೇಳಿದರೆ (೩–೮೫). ಮಗುದೊಂದೆಡೆ ಅರ್ಧಚಂದ್ರನ ವರ್ಣನೆಯನ್ನು ಮನೋಹರವಾಗಿ ಹೀಗೆ ಮಾಡಿದ್ದಾನೆ :

> ಮನಸಿಜನ ಬಿಡಿಗೋಲೋ, ಶಿವನು ಸೂಡಿರ್ದ ಚಂ
> ದ್ರನ ಭಾಗವೋ, ರಾಹು ತೋಡಿ ತಿಂದುಳಿದ ಮಿ
> ಕ್ಕಸಿತೋ, ವಿಯೋಗಿಗಳು ವಿರಹವಾರ್ಧಿಯೊಳು ಕೆಡೆವಾಗಳೊಜಗಿದ ಹಡಗೋಲೊ।

18. ಅದೇ, ೪–೧೦೮.
19. ಅದೇ, ೪–೧೦೭.
2 . ಅದೇ, ೪–೧೪೧.
21. ರಾಘವಾಂಕ : ಹರಿಶ್ಚಂದ್ರ ಕಾವ್ಯಂ. ಸಂ : ಎನ್. ಬಸವಾರಾಧ್ಯ. ಪಂಡಿತ ಎಸ್. ಬಸಪ್ಪ (೧೯೫೫) ೩–೭೮.

ಘನತರಾಕಾಶಕೇಶನ ಕಯ್ಯ ಪಾತ್ರೆಯೋ
ವಿನುತ ಪಡುವಣದಿಶಾಂಗನೆಯ ಮುಂದಲೆಯ ಮು
ತ್ತಿನ ಪೆಂಡೆಯೊ ಎನಲರ್ಧಚಂದ್ರನಂ ಬಣ್ಣಿಸುವ್ರೋಪರಿದು ಕಾವ್ಯಂಗಳೊಳಗೆ ॥22

"ಪಾರ್ಶ್ವನಾಥ ಪುರಾಣ"ದ ಪಾರ್ಶ್ವನಾಥ ಪಂಡಿತನು "ಪದ್ಮರಾಗ ಮಣಿ ದರ್ಪಣದಂತೆಸೆದಂ ಸುಧಾಕರಂ"* ಎಂದು ಹೇಳಿದರೆ, ಅಚ್ಚಗನ್ನಡಕವಿ ಆಂಡಯ್ಯನಂ ಚಂದ್ರನನ್ನೇ ನೆಪಮಾಡಿಕೊಂಡು "ಕಬ್ಬಿಗರ ಕಾವಂ" ಎಂಬ ಕೃತಿ ರಚಿಸಿದ್ದಾನೆ. ಕಾಳಗದಲ್ಲಿ ಶಿವನು ಚಂದ್ರನನ್ನು ಸೆರೆಹಿಡಿದೊಯ್ಯಲು, ಸೆರೆಬಿಡಿಸಿತರಲು ನನೆವಿಲ್ಲನು ಶಿವನ ಮೇಲೆ ಯುದ್ಧಕ್ಕೆ ಹೋಗಿ, ಶಾಪಗ್ರಸ್ತನಾಗುವ ಕಥೆ ಬರುತ್ತದೆ.

ಜನ್ನ, "ಅನಂತನಾಥ ಪುರಾಣ"ದಲ್ಲಿ ಚಂದ್ರಮಂಡಲವನ್ನು "ದಿವಿಜಾಶಾಗಿರಿ ಕೂಟಕೇಸರಿ, ವಿಯತ್ ಮಂದಾಕಿನೀ ಹಂಸೆ, ಮಾನವತೀಲೋಚನ ಬಾಣಚಂದ್ರಿಕೆ, ಚಕೋರೀ ಪಾನಲೀಲಾಮೃತಾಪ್ಲವ ಕಾಸಾರ, ಅನಂಗಮಂಗಲ ವಧೂಟೀ ದರ್ಪಣ" ವೆಂದು ಬಣ್ಣಿಸಿದ್ದಾನೆ.[23]

ಕನ್ನಡ ಸಾಹಿತ್ಯದಲ್ಲಿ ಮಲ್ಲಿಕಾರ್ಜುನನ "ಸೂಕ್ತಿಸುಧಾರ್ಣವಂ", ಒಂದು ಅಮೂಲ್ಯವಾದ ಸಂಕಲನಗ್ರಂಥ. ಅದರಲ್ಲಿ ಹಲವು ಸುಂದರವಾದ ಚಂದ್ರೋದಯದ, ಚಂದ್ರಿಕೆಯ, ಚಂದ್ರನೊಳಗಿನ ಕಲಂಕದ ಬಗೆಗಿನ ಪದ್ಯಗಳು ಇವೆ. ಕೆಲವಕ್ಕೆ ಆಕರಗಳು ತಿಳಿದರೂ ಇನ್ನೂ ಹಲವಕ್ಕೆ ಆಕರ ತಿಳಿಯದೆ ಉಳಿದಿವೆ. ಅಂಥ ಪದ್ಯಗಳಲ್ಲಿ ಕೆಲವನ್ನಿಲ್ಲಿ ಕಾಣಬಹುದು:

ಇನನಸ್ತಂಗತನಾಗೆ ಪಾಣ್ಬರಿಪು ಪುಷ್ಪಾಕಾರದಿಂ ರಾಗದಿಂ
ವನಜಾತಂಗಳಮೇಲೆ ಕಯ್ಯನಿಡೆ ಶೀತಂ ಪೊಣ್ಮೆ ಸಂಕೋಚಿತಾ
ನನ ಮಾಗಿದೊಡೆ ನೆಯ್ದಿಲಿಪ್ಪು ನಗುತಂ ಕೇಳ್ ಭಾವ ನೀನೇಕೆ ಪ
ದ್ಮಿನಿಯುಂ ಕೆಂದೊಡೆ ಬೆಳ್ಪನಾಯ್ತು ಮೊಗಮುಂಬಂತಿರ್ದನಾ ಚಂದ್ರಮಂ ॥24

ರವಿ ಮುಳುಗಿದ. ಇಂದು ಮೂಡಿದ. ಕಮಲದ ಮೇಲೆ ಕಯ್ಯನಿಡಲು ಪದ್ಮಿನಿ ಮುದುಡಿಕೊಂಡಳು. ಅದನ್ನು ಕಂಡ ನೈದಿಲೆ 'ಕೇಳ್ ಭಾವ, ನೀನೇಕೆ? ಪದ್ಮಿನಿ ಏಕೆ?' ಎಂದು ಹಾಸ್ಯಮಾಡಲು ಚಂದ್ರನ ಮುಖ ಬೆಳ್ಳಗಾಯಿತು. 'ಕವಿಸಮಯ'ವನ್ನಿಟ್ಟು ಚಿತ್ತಾಕರ್ಷಕವಾದ ರೀತಿಯಲ್ಲಿ ಕವಿ ಚಿತ್ರಿಸಿದ್ದಾನೆ. ಕಮಲ, ನೈದಿಲೆ, ವನಜಾತಗಳು, ಅಕ್ಕ–ತಂಗಿಯರು. ಆದುದರಿಂದ ನೈದಿಲೆ, ಚಂದ್ರನನ್ನು 'ಭಾವ'

22. ಅದೇ ಸಂ. ೩, ಪದ್ಯ ೮೨.
*. ಮಲ್ಲಿಕಾರ್ಜುನ : ಸೂಕ್ತಿಸುಧಾರ್ಣವಂ. ಸಂ : ಎನ್. ಅನಂತರಂಗಾಚಾರ್. ಪು. ೨೦೦.
23. ಜನ್ನ : ಅನಂತನಾಥ ಪುರಾಣ. ೭–೮೨. O.R.I. Mysore.
24. ಮಲ್ಲಿಕಾರ್ಜುನ : ಸೂಕ್ತಿಸುಧಾರ್ಣವಂ ಸಂ. ಅನಂತರಂಗಾಚಾರ್ (೧೯೪೭). ಪು. ೨೩೪.

ನೆಂದು ಅಪಹಸಿಸುತ್ತಾಳೆ. ಆದರೆ ಪದ್ಮಿನಿ, ತನ್ನ ನಿಯಾಮಕನಿವನಲ್ಲವೆಂದು ಮೊಗಮುದುಡಿ ಕೊಳ್ಳುತ್ತಾಳೆ. ಆಗ ವಿಧಿಯಿಲ್ಲದೆ ಚಂದ್ರ ಬೆಳ್ಪೇರುತ್ತಾನೆ.

ಮತ್ತೊಂದು ಪದ್ಯದಲ್ಲಿ ರಾತ್ರಿ, ಚಂದ್ರಮನೆಂಬ ಸುರಭಿಯಿಂದ ಬೆಳ್ದಿಂಗಳೆಂಬ ಹಾಲಿನ ಮಹಾಪೂರವನ್ನು ಬ್ರಹ್ಮಾಂಡ ಭಾಂಡವೆ ಪಳಚ್ಚನೆ ತುಂಬುತ್ತಿರಲು ಕರೆದಳೆಂಬ ಸುಂದರ ವರ್ಣನೆ ಬರುತ್ತದೆ:

ಘನ ಸಂಧ್ಯಾರುಚಿರಜ್ಜುವಿಂದುದಯಶೈಲ ಸ್ತಂಭದೊಳ್ ಕಟ್ಟಿ ತೊ
ಟ್ಟನೆ ಕೈಕೊಳ್ವ ಕಳಂಕವತ್ಸನನಲುಪಿಂದೂಡಿ ತಾರಾ ನಿಬಂ
ಧನದಿಂದಂ ತಳೆಯಿಕ್ಕಿ ರಾತ್ರಿ ಕಱೆದಳ್ ಬ್ರಹ್ಮಾಂಡ ಭಾಂಡಂ ಪಳ
ಚ್ಚನೆ ತೀವುತ್ತಿರೆ ಚಂದ್ರಮಸ್ಸುರಭಿಯಿಂ ಜ್ಯೋತ್ಸ್ನಾಪಯಃ ಪೂರಮಂ ॥25

ಮಗುದೊಂದು ಪದ್ಯದಲ್ಲಿ ಅಚ್ಚಬೆಳ್ದಿಂಗಳಲ್ಲಿ ಕಪ್ಪಾದ ವಸ್ತುಗಳೆಲ್ಲವೂ ಬಿಳುಪಾಗಿ ಕಂಡವೆಂಬ ವರ್ಣನೆ ಹೀಗಿದೆ: "ಲವಣಸಮುದ್ರ ಪಾಲ್ಗಡಲಂತೆ, ಕಾಳಿಂದಿ ಜಾಹ್ನವಿಯಂತೆ, ನೀಲಪರ್ವತ ರಜತಾದ್ರಿಯಂತೆ, ಈ ಭುವನ ಕರ್ಪೂರದಿಂದ ಕಂಡರಿಸಿದಂತೆ, ಕೃಷ್ಣನು ಸದಾಶಿವನಂತೆ" ಇದ್ದನೆಂದು ಹೇಳುವಲ್ಲಿ ಚಂದ್ರಿಕೆಯ ಅತಿಶಯೋಕ್ತಿ ಇದೆ (ಪ. ೨೭೩). ಇನ್ನೊಂದೆಡೆ ಅತ್ಯಂತ ಸುಂದರವಾಗಿ ಹೀಗೆ ಬಂದಿದೆ:

ತಿಮಿರಾತ್ಮದ್ಯುತಿ ಕರ್ಪುದೋರ್ಪತಿಲಕಂ. ತಾರಾಗಣಂ ಬಂದು ನೋ
ಡುವ ಯೂಥಂ, ಮಧುತೆತ್ತಿಗಂ, ವಿರಹಿ ಮಾರಂಕಂ, ನೃಪಂ ಚಿತ್ತ ಸಂ
ಭವ ನಾಗಲ್ಕಡುಕೆಯ್ದು ಕಾಯ್ದು ಕಳನಂ ಬಂದೇಱುವಂತೇಱಿದಂ
ನವಸಂಧ್ಯಾಸುವಿಭಾಸಿ ವಾಸವದಿಶಾಶೈಲೇಂದ್ರಮಂ ಚಂದ್ರಮಂ ॥26

ಇಲ್ಲಿ, ರಾಜನಮುಂದೆ ವೀರನಂತೆ ಚಂದ್ರನು ಪೂರ್ವದಿಕ್ಕನ್ನು ಅಡರಿಬಂದನಂತೆ. ವಿರಹಿಯೆ ಅವನ ಪ್ರತಿದ್ವಂದಿಯಾಗಿದ್ದಾನೆ.

ಹೀಗೆ ಕವಿ ಬೆಳ್ದಿಂಗಳ ಆಧಿಕ್ಯವನ್ನು ಸೂಚಿಸಿ ಪ್ರಾಣಿಗಳಿರಲಿ, ಮಾನವರಾದ ನಾರೀ ಜನಕ್ಕೂ ಅದು ಭ್ರಮೆಯನ್ನುಂಟುಮಾಡಿತೆಂದು:

"ಬೆಳುದಿಂಗಳ ಬಿಳುಪನ್ನು ಹಂಸೆ ಹಾಲೆಂದು ಭಾವಿಸಿದರೆ, ಮಲ್ಲೀಮಾಲೆ ಎಂದು ತುಂಬಿ ಭಾವಿಸಿದರೆ, ಮೃಣಾಲನಾಳವೆಂದು ಕರಿಕಳಭ ಭಾವಿಸಿದರೆ. ಜಾರುವ ದುಕೂಲವೆಂದು ಕಾಂತಾಕದಂಬ ಭಾವಿಸಿತು." ಭ್ರಮಾಲಂಕಾರದಲ್ಲಿ ಅದನ್ನು ಬಣ್ಣಿಸಿದ್ದಾನೆ.27

ನಡುಗನ್ನಡ ಕವಿಗಳಲ್ಲಿ ಕುಮಾರವ್ಯಾಸ ಜಾಜ್ವಲ್ಯಮಾನವಾಗಿ ಬೆಳಗಿದ್ದಾನೆ. ಈ ಹೊತ್ತಿಗಾಗಲೆ ಅಷ್ಟಾದಶವರ್ಣನೆಗಳ ನಿರ್ಬಂಧ ಸಡಿಲಗೊಂಡಿತ್ತು. ಕವಿ

25. ಅದೇ, ಪ. ೨೬೧.
26. ಅದೇ, ಪ. ೨೧೯.
27. ಅದೇ, ೨೭೬.

ಸ್ವತಂತ್ರನಾಗಿ ಒಂದೆರಡು ಪದ್ಯಗಳಲ್ಲಿ ವರ್ಣನೆ ಮಾಡಿ ಮುಗಿಸುತ್ತಿದ್ದ. ರೂಪಕ ಸಾಮ್ರಾಜ್ಯ ಚಕ್ರವರ್ತಿಯಾದ ಕುಮಾರವ್ಯಾಸನು ಕೂಡ ತನ್ನ ಬೃಹತ್ಕೃತಿಯಲ್ಲಿ ವರ್ಣನೆಯನ್ನು ಮೊಟಕು ಮಾಡಿದ. ಆತನ ವಿರಾಟಪರ್ವದಲ್ಲಿ ಬರುವ ಚಂದ್ರನ ವರ್ಣನೆ ಇಂತಿದೆ :

ವರದಿಗಂಗನೆಯಿಟ್ಟ ಚಂದನ
ತಿಲಕವೋ, ಮನುಮಥನ ರಾಣಿಯ
ಕರದಲಿಹ ಕನ್ನಡಿಯೊ, ಮದನನ ಬಿರುದಿನೊಡ್ಡಣವೊ ।
ಸುರತ ವಿರಹಿಯ ಸುಡುವ ಕೆಂಡದ
ಹೊರಳಿಯೋ ಹೇಳೆನಲು ಮಿಗೆ ಹಿಮ
ಕರನು ಜನಿಸಿದ ರಜನಿ ಮಧ್ಯದೊಳವನಿ ತಳತಳಿಸೆ ॥28

ದ್ರೋಣಪರ್ವದಲ್ಲಿ ಬರುವ ಸುಧಾಸೂತಿಯ ವರ್ಣನೆ ಹೀಗಿದೆ :

ವಿರಹಿ ಜನದೆದೆಗಿಚ್ಚು, ಮನುಮಥ
ನರಸು ತನದಭಿಷೇಕ ಘಟ, ತಾ
ವರೆಯ ಕಗ್ಗೊಲೆಕಾರನುತ್ಪಳವನ ವಿದೂಷಕನು ।
ಹರನ ಹಗೆಯಡ್ಡಣ, ವಿಳಾಸಿನಿ
ಯರ ಮನೋರಥ ಫಲವೆನಲು ಮಿಗೆ
ಮೆರೆದನುದಯಾಚಲದ ಚಾವಡಿಯಲಿ ಸುಧಾಸೂತಿ॥29

ವಿದ್ವತ್ಸಭಾನೀರೇರುಹಾಕರದಲ್ಲಿ ಸುಲಲಿತ ಷಟ್ಪದಿಗಳೆಡೆಬಿಡದೆ ಝೇಂಕರಿಸುವಂತೆ ಮಾಡಿದ ಕರ್ನಾಟಕ ಕವಿಚೂತವನಚೈತ್ರ ಲಕ್ಷ್ಮೀಶನು, "ಕನ್ನಡ ಜೈಮಿನಿ ಭಾರತದ"ಲ್ಲಿ ಪರ್ಯಾಯವಾಗಿ ಚಂದ್ರನ ಹಿರಿಮೆಯನ್ನು ಹೇಳಿದ್ದಾನೆ. ಬ್ರಹ್ಮ, ವಿಷ್ಣು, ಲಕ್ಷ್ಮಿ, ರವಿ, ಮದನರಿಗೆ ಬೇಕಾದ ತಾವರೆಗಳು. ಹರೆಯದ ಹೆಣ್ಣುಗಳ ಚೆಲುವಾದ ನಗೆಮೊಗವನ್ನು ನೋಡಿ, ಚಂದ್ರನೆಂಬ ಭ್ರಾಂತಿಯಿಂದ ತಾವ್ + ಅರೆ ಯಾದುವಂತೆ; ಎಂದರೆ ಮುದುಡಿಕೊಂಡವೆಂದು ಕವಿ ಚಮತ್ಕರಿಸಿದ್ದಾನೆ.30

೧೬ನೆಯ ಶತಮಾನದ ಶಿವಕವಿ ಷಡಕ್ಷರದೇವನು, ತನ್ನ "ರಾಜಶೇಖರ ವಿಳಾಸ" ಕೃತಿಯ ಚಂದ್ರೋದಯ ವರ್ಣನೆಯಲ್ಲಿ ನವ್ಯತೆಯನ್ನು ಮೂಡಿಸಿರುವನಾದರೂ ಪೌರಾಣಿಕ ಸನ್ನಿವೇಶಗಳನ್ನು ತಂದು ತಳುಕುಹಾಕದೆ ಬಿಟ್ಟಿಲ್ಲ. "ಕತ್ತಲೆ ಎಂಬ ಯಮನ ದೇಹವನ್ನು ಸುಡಬಯಸಿದ ಕಾಲಶೂಲಿಯ ಕಿಡಿಗಣ್ಣಿಗೆ ಸಮ

---

28. ಕುಮಾರವ್ಯಾಸ: ಕರ್ಣಾಟ ಭಾರತ ಕಥಾಮಂಜರಿ, ಸಂ. ಕುವೆಂಪು, ಮಾಸ್ತಿ (೧೯೫೮) ವಿ. ಪ. ೨–೫೦.
29. ಅದೇ, ದ್ರೋ. ಪ. ೧೭–೧೭.
30 .ಲಕ್ಷ್ಮೀಶ : ಕನ್ನಡ ಜೈಮಿನಿ ಭಾರತ. ಸಂಸ್ಕೃತ ಪ್ರಚಾರಶಾಖೆ ಪ್ರಕಟನೆ (೧೯೫೭) ಸಂಧಿ ೩೦–೯.

ನಾಯಿತು, ಅರುಣ ರುಚಿಯು ವಿಧುಬಿಂಬಂ" ಎಂದು ಕವಿ, ಚಂದ್ರನ ಉದಯದಲ್ಲಿ ಮಾರ್ಕಂಡೇಯನ ಕಥೆಯನ್ನು ನೆನಪಿಗೆ ತರುತ್ತಾನೆ.[31] ಮತ್ತೊಂದು ಪದ್ಯದಲ್ಲಿ ಬ್ರಹ್ಮ, ವಿಷ್ಣುಗಳು ಹಂಸ, ವರಾಹರೂಪಿಗಳಾಗಿ ಆದಿಲಿಂಗದ ಆದ್ಯಂತಗಳ ಪರಿಶೋಧನೆಗೆ ಹೊರಟ ಕಥೆ ನೆನಪಿಗೆ ಬರುವಂತೆ ಚಂದ್ರೋದಯದ ವರ್ಣನೆ ಹೀಗೆ ಬಂದಿದೆ :

ಅಮಿತಾಖಂಡಾಂತರಿಕ್ಷೋನ್ನತನುತ ಶಿವಲಿಂಗಾಂಘ್ರಿಯಂ ನೋಡಲುದ್ಯ
ತ್ತಮುಮೆಂಬಾ ಸೂಕರಾಕಾರದ ಹರಿ ಧರೆಯೊಳ್ಪೊಕ್ಕಪ್ರೋಲ್ತೋರ್ಪ್ಪಂಗೆ ತಳ್ತಿಂ
ಗ ಮಹಾಶೀರ್ಷಾಗ್ರಮಂ ನೋಡುವ ಜವದೆ ಮರಾಳಾಂಗಮಂ ತಾಳ್ದಜಂ ಸಂ
ಭ್ರಮದಿಂ ಪಾರ್ವಂತೆ ಕಣ್ಗೊಪ್ಪಿದನುದಮೃತ ಕಳಾಪೂರಿತಾಂಗಂ ಸುಧಾಂಗಂ ॥[32]

ಹಂಸ ಬಿಳುಪು, ಬ್ರಹ್ಮ, ಹಂಸರೂಪಿಯಾಗಿ ಹಾರಿದಂತೆ ಕಳಾಪೂರಿತಾಂಗನಾದ ಚಂದ್ರ, ಶೋಭಿಸಿದನೆಂದು ಕವಿಯ ಭಾವ. ಮುಂದುವರಿದು ಕವಿ, ಚಂದ್ರನನ್ನು ಮಾಂತ್ರಿಕನಿಗೂ (೧೧-೬೩) ವಟಪತ್ರಕ್ಕೂ (೧೧-೬೨) ಹೋಲಿಸಿ ನವ್ಯತೆಯನ್ನು ರೂಪಿಸಿದ್ದಾನೆ.

ಮತ್ತೊಬ್ಬ ಶಿವಕವಿ ವೀರಭದ್ರನೃಪಾಲ. ಈತನು ತನ್ನ ವೀರಭದ್ರ ವಿಜಯಂದಲ್ಲಿ ಚಂದ್ರೋದಯವನ್ನು ಸುಂದರವಾಗಿ ಹೀಗೆ ಹೇಳಿದ್ದಾನೆ :

ಇದು ಪರಮೇಶ್ವರಂಗೆ ಪದೆದರ್ಧಶರೀರಮನಿತ್ತಗೌರಿ ತಾ
ಳ್ದಿದ ಪೊಸಮುತ್ತಿನೋಲೆಯೊ. ಬಳಿಕ್ಕಿದು ಚಿತ್ತಭವಂಗೆ ಚೈತ್ರನೆ
ತ್ತಿದ ಪೊಳಪಾಂತ ಬೆಳ್ಗೊಡೆಯೊ. ಮೇಣಿದು ದರ್ಪಕ ಕೀರ್ತಿಬೀಜವೋ.
ಇದೆನೆ ಪೊದಳ್ದು ರಂಜಿಸಿತು ಬೆಳ್ಪಡರ್ದಿರ್ದ ಶಶಾಂಕಮಂಡಲಂ॥ [33]

ಪೂರ್ವಕವಿಗಳಿಂದ ಪ್ರಭಾವಿತನಾದ ಈ ಶತಮಾನದ ಆದಿಯಲ್ಲಿದ್ದ ಕವಿ ಮುದ್ದಣ ಚಂದ್ರನನ್ನು "ರಜನೀಮುಖಿ"ನೆಂದು ಕರೆದಿದ್ದಾನೆ.[34]

ಆಧುನಿಕ ಕವಿಗಳಲ್ಲಿ ಪ್ರಸಿದ್ಧರಾದ ಕುವೆಂಪು ಅವರು ತಮ್ಮ ಒಂದು ಕಿರುಕೃತಿಯಲ್ಲಿ ಚಂದ್ರನನ್ನು ಪೆಪ್ಪರಮೆಂಟಿಗೆ ಹೋಲಿಸಿ ಕಾವ್ಯಜಗತ್ತಿಗೆ ಹೊಸ ಮಾದರಿಯನ್ನು ಮೂಡಿಸಿದ್ದಾರೆ. ಅವರ ಇನ್ನೊಂದು ಕೃತಿ "ಕಥನ ಕವನಗಳು". ಅದರಲ್ಲಿ "ಮೂಡವೆಟ್ಟಿನ ಬನದ ನೆತ್ತಿಯೊಳಿರುಳು ಕಣ್ತೆರೆದಂತೆ ಕೆಂಪೇಗೊಯ್ಯನೊಯ್ಯನೆ ತೋರಿ ತೆಕ್ಕನೆ ಸುಧೆಯ ನಿಧಿ ಚಂದಿರನು ಕುಸುಮಿಸಲೊಡನೆ ತಣ್ಣನೆ ವೇಸಿ ತೀವುತೆ

31. ಷಡಕ್ಷರದೇವ : ರಾಜಶೇಖರ ವಿಳಾಸಂ : ಸಂ. ಆರ್. ಸಿ. ಹಿರೇಮಠ (೧೯೬೨) ೧೧–೪೭.
32. ಅದೇ, ೧೧–೫೧.
33. ವೀರಭದ್ರನೃಪಾಲ : ವೀರಭದ್ರ ವಿಜಯಂ ೬೩–೪. O. R. I. Pub. (1930)
34. ಮುದ್ದಣ : ಶ್ರೀರಾಮಾಶ್ವಮೇಧಂ. ಕಾವ್ಯಾಲಯ ಪ್ರಕಟನೆ (೧೯೫೮) ಪು. ೫. ಸಾಲು ೨.

"ಜಗವ ಮುಟ್ಟಿ ನಿಶೆಯಿಂ" ಎಂದು ಚಂದ್ರನ ಉದಯವನ್ನು ಬಣ್ಣಿಸಿದ್ದಾರೆ.[35] ಅವರೇ ತಮ್ಮ ಮೇರುಕೃತಿಯಾದ "ಶ್ರೀ ರಾಮಾಯಣ ದರ್ಶನಂ" ಎಂಬ ಗ್ರಂಥದಲ್ಲಿ ರಾಮ ಚಂದ್ರನು ಶೈಶವದಲ್ಲಿ ಚಂದ್ರನಿಗಾಗಿ ಬೇಡಿ ಅತ್ತುದನ್ನು ಅತ್ಯಂತ ಸುಂದರವಾಗಿ ನಿರೂಪಿಸಿದ್ದಾರೆ. ಮಗನ ರೋದನ ಕಂಡು ತಾಯಿ ಕೌಸಲ್ಯೆ ಸಹಿಸಲಾರದೆ, ಚಂದ್ರ ನನ್ನು ಬಯಸುವ ಸನ್ನಿವೇಶ, ಸಂಸ್ಮರಣೀಯವಾದುದು. ಅದು :

.... ಚಂದ್ರಂಗೆ
ಗೋಗರೆದನಮ್ಮನ ಬಿಡಕ್ಕೆಯುಂ ಕೆಲಕೆಯ್ತ್ತೆ,
ಕೇಳ್ದರಿದೆ ಸುಮ್ಮೆ. ಆರೋದನಕ್ಕರೆ ಬೆರ್ಚಿ
ಚಿತ್ತಮನಂ ಮರುಗೆ, ದೊರೆ ಕನಲ್ದು ತಾನಾಯೆಡೆಗೆ
ಬರೆ, ನೆರೆದ ದಾದಿಯರ್ ಸರಿದರಲ್ಲಿಂದೇನೊ
ಗತಿ ಮುಂದೆ ತಮಗೆಂದು ಬೆದರಿ. ಕೌಸಲೆ, ತಾಯಿ,
ಮಗನುಬ್ಬಿಣ ಸ್ಥಿತಿಗೆ ಕಡಿದು ಕಾತರೆಯಾಗಿ
ಬಿಗ್ಗೆಯುಲರಿಯುದೆಯೆ ಕಂಗೆಟ್ಟು, ದಮ್ಮಯ್ಯ,
ಸುಮ್ಮನಿರೊ, ಓ ನನ್ನ ಕಣ್ಮಣಿಯೆ, ಕಂದಯ್ಯ,
ಕೈಮುಗಿವೆನಳಬೇಡವೆಂದಂದು ಕಂಬನಿಗೂಡಿ
ಮುಂಡಾಡಿ, ರವಿವಂಶದವನೊಬ ಕರುಬಿಂದೆ ನೀಂ
ತ್ರಿಳಿಯದೆಳವಸುಳಿ ಪೀಡಿಸುತಿಹೆಯೆಂದು
ಬೈದಳಾ ಶಶಿಯುಂ ಮನಂ ಮುನಿದು[36]

ಇಲ್ಲಿ "ಸೂರ್ಯವಂಶದವನೆಂಬ ಮತ್ಸರದಿಂದ ಮಗುವನ್ನಳಿಸುತ್ತಿರುವೆ" ಎಂಬ ಕವಿಯ ಭಾವ, ನವೀನವಾಗಿದೆ. ಮುಂದೆ "ದಶಶಿರ ಕನಕಲಕ್ಷ್ಮಿ"ಯಾದ ಲಂಕೆಯಲ್ಲಿ ಆಂಜನೇಯನು ಸೀತಾನ್ವೇಷಣೆಗೆಂದು ಕಾಲಿಟ್ಟಾಗಿನ ಲಂಕಾರಾತ್ರಿಯಲ್ಲಿನ ಚಂದ್ರೋದಯದ ವರ್ಣನೆ, ಕವಿಯ ಅನನ್ಯಸಾಮಾನ್ಯ ಪ್ರತಿಭೆಗೆ ನಿದರ್ಶನವಾಗಿದೆ :

ಆಂಜನೇಯನ ಬರವಿಗಂಜಿ ಲಂಕಾರಾತ್ರಿ
ವಿಕಂಪಿಸುತೆ ಬೆಳ್ವೇರ್ದುದಂ ತೋರ್ಪ ಮಾಳ್ಕೆಯಿಂ
ಶ್ವೇತಮಾದುದು ಮುಖಂ ಶೀತಲ ನಿಶೀಥಿನಿಗೆ
ನಾಥನೈತಹ ನಾಣಗೆಂಬಂತೆ ಇಂದ್ರದಿಶೆ ತಾಂ
ನಸೆಯು ನೀಲಿಯ ನಯನ ನೈದಿಲೆಯನಲರಿಸಲ್
ತಗುಳಿದುದು ಮುಗಿಲಿನಂಚಿಗೆ ಬೆಳ್ಪಿನೀರ್, ಶಶಿಯ
ಚಳಿಗದಿರ್ಗಳ ಕುಳಿರ್ಕಾಂತಿ: ಕಿರುತಾರೆಗಳ್
ಮಿದುಗ್ಗರೆದುವುಳಿದ ಪೇರರಿಲುಗಳ್ ಕಳೆಗುಂದಿ
ವಿನಯದಿಂ ದೂರದೂರಕೆ ಸರಿದು ನಿಂದುವು
ನಿಶಾಕಾಂತನಾಗಮನ ಗೌರವಕೆ"[37].

---

35. ಕುವೆಂಪು : ಕಥನಕವನಗಳು ([illegible]), [illegible] ಪು. ೪೦.
36. ಕುವೆಂಪು : ಶ್ರೀರಾಮಾಯಣ ದರ್ಶನಂ ಸಂ. ೧, ಪು. ೧೯.
37. ಅದೇ, ಪು. ೪೨೦.

ಕುವೆಂಪು ಅವರ ತರುವಾಯ ಅವರಷ್ಟೇ ಹೆಸರಾಂತ ವರಕವಿಗಳು, ಬೇಂದ್ರೆಯವರು. ಅವರು ಜಾನಪದ ದಾಟಿಯಲ್ಲಿ ಚಂದ್ರೋದಯವನ್ನು ಬಣ್ಣಿಸಿದ್ದಾರೆ. ಅವರೇ ಒಂದೆಡೆ "ಆಗಸದಲ್ಲಿ ತೇಲಿ ಬಂತೊ ಚಂದ್ರನ ಹೆಣ" ಎಂದಿದ್ದಾರೆ. ಪು. ತಿ. ನರಸಿಂಹಾಚಾರ್ ಅವರು,

ಚೆಂದಕ್ಕಿಮಾಮನ ತನಿಬೆಳಕೆ,
ಬಾ ಬೆಳುದಿಂಗಳೆ ಅಂಗಳಕೆ
ನೀ ಬೆಳಗುವುದೇ ಬಲು ಚೆಂದ
ನೀನಿಹುದೇ ನಮಗಾನಂದ.

ಎಂದು ತಮ್ಮ "ಬೆಳುದಿಂಗಳ ಹಾಡು" ಎಂಬ ಕವಿತೆಯಲ್ಲಿ ಹಾಡಿದ್ದಾರೆ.[38] ಅವರೇ "ಹಣತೆ"ಯಲ್ಲಿ,

ಇಂದು ಕವಿಗಳ ಹೋಲ್ಕೆ ಅಳಿದವರ ಸೊತ್ತು;
ಹೊಸದಿರದ ಬಣ್ಣನೆಗೆ ನೊಂದು ಬೇಸತ್ತು,
ಅಲೆದೆನ್ನೆ ಅರಸುತ್ತ ಹೊಸದು ಸಾಮ್ಯವನು—
ಪುಸ್ತಕದ ಚಿತ್ರದಲಿ ನನ್ನ ರೂಪವನು
ಆನಂದ ಹೋಲಿಸಲು "ಗೆಜ್ಜೆಸ್ರ" ಕಿಂದು
ನವಿರೆದ್ದು ನಲವುಕ್ಕಿ ಅಳಿದುದ್ದೆ ಕುಂದು[39]

ಎಂದು ಆನಂದಪಟ್ಟ ಚಂದ್ರನೇ ತನ್ನ ಬಗ್ಗೆ ಹೀಗೆ ಹೇಳುವನೆಂಬ ನವೀನ ಭಾವ ಇಲ್ಲಿ ಮೂಡಿದೆ. ಗೆಜ್ಜೆಸರದ ಹೋಲಿಕೆ, ನವ್ಯವೇ ಸರಿ.

ಕಾವ್ಯಾನಂದರು :

ಶ್ರೀಗುರುವಿನ ಹಸ್ತದಂತೆ
ವಿಂಧ್ಯಾದ್ರಿಯ ಮಸ್ತಕದಲಿ
ಚಂದ್ರೋದಯವಾಯಿತು.
ಗುರುಬೋಧೆಯ ಸುಧೆಯ ತೆರದಿ
ಬೆಳುದಿಂಗಳು ಹರಡೆ ಭರದಿ
ಜಗತನ್ಮಯವಾಯಿತು.[40]

ಎಂದು ಅತ್ಯಂತ ನವೀನವಾಗಿ ಹಾಡಿಹರೆ, ಕವಿ 'ವಿನಾಯಕ'ರು ಗ್ರಹಣ ಚಂದ್ರನನ್ನು ಕುರಿತು,

ಕೆನೆವೆಳಕಿನ ಸೊನೆಯ ಚಂದ್ರ
ನಾದನು ಕಪ್ಪಿಡಿದ ಲಾಂದ್ರ[41]

ಎಂದು ಹೊಗೆಯಿಂದ ಕಪ್ಪಾದ ಕಂದೀಲಿಗೆ ಹೋಲಿಸಿದ್ದಾರೆ. ಚಂದ್ರನನ್ನು

---

38. ಪು. ತಿ. ನ : ಶಾರದಯಾಮಿನಿ (೧೯೪೪) ಪು. ೪೪.
39. ಪು. ತಿ. ನ. : ಹಣತೆ (೧೯೫೮), ಆನಂದನ ಗೆಜ್ಜೆಸ್ರ. ಪು. ೩೭.
40. ಕಾವ್ಯಾನಂದ : ಮಾನಸ ಸರೋವರ ([illegible]). ವಿಂಧ್ಯಾದ್ರಿಯಲ್ಲಿ ಚಂದ್ರೋದಯ. ಪು. ೯.
41. ವಿನಾಯಕ : ಅಭ್ಯುದಯ (೧೯೪೬), ಚಂದ್ರಗ್ರಹಣ. ಪು. ೧೭.

ಸುಲಿದಿದ್ ಬಾಳೇಅಣ್ ಇದ್ದಂಗೆ
ತಲೆಮೇಗೌನೆ ಚಂದ್ರ !
ಮುಡಿಸೋಕ್ ಮಡಗಿದ್ ಮಲ್ಲಿಗೆ ದಂಡೆ
ಇದ್ದಂಗೌನೆ ಚಂದ್ರ !
ರತ್ನನ್ಗ್ ಅದನೆ ತಿನ್ನೀಸ್ತಿದ್ದೆ
ಕೈಗಾರ್ ದಿಟಕಿಸ್ತಿದ್ರೆ !
ನಂಜೀಗ್ ಅದನೆ ಮುಡಿಸ್ತಾನಿದ್ದೆ
ಕೈಗಾರ್ ಎಟಕಿಸ್ತಿದ್ರೆ[42]

ಎಂದ ಯೆಂಡಕುಡ್ಕ ರತ್ನ ಕಂಡ ಚಂದ್ರನ ಬಣ್ಣನೆಯಲ್ಲಿ ಹೊಸತನವಿದೆ; ಇಲ್ಲಿ ಜಿ. ಪಿ. ರಾಜರತ್ನಂ ಅವರ ಪ್ರತಿಭೆ ಮನಮೋಹಕವಾಗಿದೆ.

ಎಸ್. ವೆಂಕಟರಾಜರು ಬೆಳದಿಂಗಳ ರಾತ್ರಿಯನ್ನು :

ಮುಗ್ಧ ಮನಃಪ್ರಣಯದ ಮೇಲ್ಸೆರಗನು
ಹೊದ್ದಂತಿಹುದೀ ರಾತ್ರಿ
ಸ್ನಿಗ್ಧ ಶರತ್ಕಾಲದ ರಸಗಂಗೆಯೊ
ಉದ್ದಿದೆ ಪುಣ್ಯಧರಿತ್ರಿ[43]

ಎಂದು ರೋಮಾಂಚಕ ರೀತಿಯಲ್ಲಿ ಬಣ್ಣಿಸಿದ್ದಾರೆ.

ಆಧುನಿಕ ಕವಿಗಳಲ್ಲೊಬ್ಬರಾದ ಇಟಗಿ ರಾಘವೇಂದ್ರ ಅವರು ಬಣ್ಣಿಸಿರುವ ಚಂದ್ರನ ಬೆಡಗೇ ಬೇರೆಯಾಗಿದೆ. ಅರ್ಧಚಂದ್ರನನ್ನು ಬೆಳ್ಳಿಯ ವಂಕಿಗೆ ಹೋಲಿಸಿದ ಸೊಬಗು ಈ ರೀತಿಯಾಗಿದೆ :

ಪಡುವಣ ನುಂಗಿದೆ ಚಿನ್ನದ ಬೆಂಕಿ
ಮೂಡಣ ತೊಡುತಿದೆ ಬೆಳ್ಳಿಯ ವಂಕಿ[44]

ಪಡುವಣ ದಿಶೆ ತಪ್ತಕಾಂಚನದಂತಿದೆ ಎಂದು ಹೇಳಿದರೆ, ಮೂಡಣದಲ್ಲಿ ತೇಲುವ ಅರ್ಧಚಂದ್ರ, ವಂಕಿಯ ಆಭರಣದಂತೆ ಶೋಭಿಸುತ್ತಾನೆ ಎಂದಿದ್ದಾರೆ ಅವರೇ ಇನ್ನೊಂದೆಡೆ,

ನನ್ನ ಬಾಳಿನ ಇರುಳ ಬೆಳಗುತ
ಬಾರೊ ಚೆಲುವಿನ ಚಂದಿರ
ನಿನ್ನ ಪ್ರೇಮಲ ಅಮೃತ ಸ್ಪರ್ಶಕೆ
ಬಗೆಯು ಒಲವಿನ ಮಂದಿರ[45]

ಎಂದು ತಮ್ಮ ಹೃದಯಾಕಾಶಕ್ಕೆ ಚಂದ್ರನನ್ನು ಆಹ್ವಾನಿಸಿದ್ದಾರೆ. ಮತ್ತೊಂದೆಡೆ ಬೆಳ್ದಿಂಗಳನ್ನು ಈ ರೀತಿ ಬಣ್ಣಿಸಿದ್ದಾರೆ :

---

42. ರಾಜರತ್ನಂ ಜಿ. ಪಿ: ರತ್ನನ ಪದಗಳು. ನಂಜಿ-ರತ್ನ.
43. ಹೊಸಗನ್ನಡ ಕಾವ್ಯಶ್ರೀ (೧೯೫೭) : ಬೆಳುದಿಂಗಳಲಿ. ಪು. ೧೦೪.
44. ಇಟಗಿ ರಾಘವೇಂದ್ರ : ಕ್ಷಿತಿಜಕೋದಂಡ (೧೯೬೧). ಹಾಯಾಗಿದೆ ಹೊಂಬಿಸಿಲು. ಪು. ೬.
45. ಅದೇ, ಚೆಲುವಿನ ಚಂದಿರ ಪು. ೫.

ಪ್ರೇಮಾಂಕಿತವಿ ಧಾತ್ರಿ
ಬೆಳುದಿಂಗಳ ಈ ರಾತ್ರಿ
ಕಡಲಾಗಿದೆ ಈ ಹಾಲು ಹೊಳೆ
ಅದರೊಳು ಬೆರೆದಿರೆ ಬಾಳಿನ ಸಕ್ಕರೆ
ಬೆಳುದಿಂಗಳು ಬಾನ್ನೆಲದಕ್ಕರೆ
ಸುಖಶಾಂತಿಯ ಮಧುವನು
ಕುಡಿದಂತೆ ಈ ಧಾತ್ರಿ
ಬೆಳುದಿಂಗಳ ಈ ರಾತ್ರಿ[46]

ಎಂಬಲ್ಲಿ ಬೆಳುದಿಂಗಳು, ಬಾನು ಮತ್ತು ನೆಲದ ಅಕ್ಕರೆ ಎಂದು ಒತ್ತಿಹೇಳಿದ್ದಾರೆ. ಕ. ವೆಂ. ರಾಜಗೋಪಾಲರು 'ಚಂದ್ರವೇದನೆ'ಯಲ್ಲಿ ಚಂದ್ರನನ್ನು ಕುರಿತು "ಏನಾದರೂ ಸರಿಯೆ ಇವನೊಬ್ಬ ಈ ಮಹಾಸೃಷ್ಟಿಯ ಮೂಕ ಪಾಪ" ಎಂದು ಅಂದರೆ, ವೇಣು ಗೋಪಾಲ ಸೊರಬರು "ಸ್ಪರ್ಶಕವಿತೆ"ಯಲ್ಲಿ.

ದೂರದ ಮಾವನಲ್ಲಯ್ಯ ಚಂದ್ರಮ ನೀನೀಗ ನಮಗೆ !
....
ಕುರುಡು ನಂಬಿಕೆಯ ಕೋಟು ಕಳಚಿ, ಹಗುರ ಮಾಡಿದ್ದೇವೆ ಮಾವ,
ಆದರೂ ನಿನ್ನ ಜನ್ಮವೆ ಒಂದು ಅಭೇದ್ಯ ಒಗಟೆ-ಅದೆ ನಮ್ಮನೂ
ನಮ್ಮ ಭೂಮಿಯನೂ ಮುಚ್ಚಿರುವ ವಿಸ್ಮೃತಿಯ ವಿಸ್ಮಯದ ತೊಗಟೆ

ಎಂದಿದ್ದಾರೆ.[47]

ಬಿ. ಆರ್. ಲಕ್ಷ್ಮಣರಾವ್ ಅವರು, ದಯವಿಟ್ಟು.

ನನ್ನ ಕ್ಷೇತ್ರದಲ್ಲೂ ನಿಮ್ಮ ಧ್ವಜ ನೆಟ್ಟು
ನನ್ನ ಬಸಿರಲ್ಲೂ ಒಂದು ವಿಯಟ್ನಾಂ ಬಿತ್ತಬೇಡಿ

ಎಂದು ಚಂದ್ರನು ಮಾನವರಿಗೆ ಮೊರೆ ಇಡಬೇಕಾದರೆ, ಮಾನವರು ಯಾವ ಕೀಳ್ಮಟ್ಟಕ್ಕಿಳಿದಿದ್ದಾರೆಂಬುದನ್ನು ಕವಿ "ಶಶಿಯಮೊರೆ"ಯಲ್ಲಿ ವಿಡಂಬಿಸಿದರೆ. ಚಂದ್ರಶೇಖರ ಕಂಬಾರರು 'ಚಂದ್ರಮುಖಿ' ಎಂದು ತಮ್ಮ ಮಡದಿಯ ಮುದ್ದುಮುಖ ಬಣ್ಣಿಸಿದಾಗ, ಆಕೆಯ ಮುಖ ಬಿಳಿಚಿಕೊಂಡಿತೆಂದು ಹೇಳಿದ್ದಾರೆ. ಚಂದ್ರನ ನಿಜಸ್ವರೂಪ ತಿಳಿದ ಬಳಿಕ ಯಾವ ಹೆಣ್ಣೂ "ಚಂದ್ರಮುಖಿ" ಎನಿಸಿಕೊಳ್ಳಲಾರಳೆಂಬ ಭಾವ ಅವರ ಕವಿತೆಯಲ್ಲಿದೆ.[48]

ಉಪಯುಕ್ತತೆಗೆ ಪ್ರಾಧಾನ್ಯವೀಯುವ ಕವಿ ದಿನಕರ ದೇಸಾಯಿ ಅವರು ವಿಜ್ಞಾನಿ ಮಾನವ. ಚಂದ್ರನ ನಿಜಸ್ವರೂಪ ತಿಳಿಸಿದಾಗ ಈ ರೀತಿ ನುಡಿದಿದ್ದಾರೆ. ಅನ್ವೇಷಕರಿಗೆ

46. ಅದೇ, ಬೆಳುದಿಂಗಳ ಈ ರಾತ್ರಿ. ಪು. ೬೮.
47. ಪ್ರಜಾವಾಣಿ : ದೀಪಾವಳಿ ವಿಶೇಷಾಂಕ (೧೯೬೯) ಪು. ೧೬೩.
48. ಅದೇ, ಪು. ೧೬೭.

ಚಂದಿರನ ಬೆಳ್ಳಿಯೂ ಸಿಗಲಿಲ್ಲ ಪಾಪ !
ಚಂದ್ರಮುಖಿಯರಿಗೆಲ್ಲ ವಿಪರೀತ ಕೋಪ
ಇದರ ಮುಖಬಿಂಬ ಗಾಜಿನ ಬಂಡೆಗಲ್ಲು !
ಭೂಮಿಗಿಳಿದಿದೆ ನೋಡು ಇದರ ಸ್ಯಾಂಪಲ್ಲು[49]

ಎಂದು "ಚಂದ್ರಯಾನದ ಫಲಶ್ರುತಿ"ಯನ್ನು ದಿನಕರ ದೇಸಾಯಿಯವರು ಖಾರವಾಗಿಯೇ ಹಾಡಿದರೆ, ನೆಲವೇ ಚಲುವೆನ್ನುವ ಕವಿ ಜಿ. ಎಸ್. ಶಿವರುದ್ರಪ್ಪನವರು 'ಚಂದ್ರನಿಗೆ'

ಆದರೂ ನನಗೆ ನಿನ್ನನ್ನು ಕುರಿತ ಗೌರವವೀಗ ಎರಡರಷ್ಟಾಯ್ತು !
ಒಂದು, ಬೆಂದ ನಮ್ಮೆದೆಗಳಿಗೆ ನೀಸುರಿವ ಬೆಳುದಿಂಗಳಿನ
ಸಂತೋಷಕ್ಕೆ ಇದೆಲ್ಲದರಿಂದ ಇಲ್ಲ ಏನೂ ಧಕ್ಕೆ.
ಎರಡು, ಏನಾದರೂ ನಿನಗಿಂತ ನಮ್ಮ ಈ ನೆಲವೇ ಚೆಲುವೆಂಬ
ಅನುಭವವನ್ನು ಕೊಟ್ಟುದಕ್ಕೆ ![50]

ಎಂದು ಹೇಳಿದ ಮಾತು ಕೇಳುವಂಥದಾಗಿದೆ. ಹೀಗೆ, ಕನ್ನಡ ಕವಿವರೇಣ್ಯರಲ್ಲಿ ಕೆಲವರನ್ನು ಮಾತ್ರ ಆಧರಿಸಿ, ಅವರಲ್ಲಿ ಚಂದ್ರನ ಬಗೆಗೆ ಬಂದ ಪ್ರಾಚೀನ, ನೂತನಭಾವಗಳನ್ನಿಲ್ಲಿ ಮಾಲೆಯಾಗಿ ಕಟ್ಟುವ ಪ್ರಯತ್ನ ಮಾಡಲಾಗಿದೆ. ರಸಜ್ಞರು ಇದನ್ನು ಸಮಾದರಿಸುವರೆಂದು ಬಯಸುತ್ತೇನೆ.

ಶ್ರೀ ಮನ್ನಾಗೇಂದ್ರ ಭೋಗ ಸ್ಫುರದರುಣಮಣಿದ್ಯೋತಿ ಸಂಧ್ಯಾನಿಬದ್ಧ
ಪ್ರೇಮಂ, ಪ್ರೋದ್ಯತ್ತರಂಗೋಚ್ಛರದಮರನದೀ ಶೀಕರೋದಾರ ತಾರಾ
ರಾಮಂ, ಹೇಮ ಪ್ರಭಾಪ್ರಸ್ಫುರಿತ ಗಿರಿಶ ಚಂಚಿಜ್ಜಟಾಚಾಲ ಜೂಟ
ವ್ಯೋಮ ಪ್ರೋದ್ಭಾಸಿ ಚಂದ್ರಂ, ತ್ರಿಭುವನ ಜನಕಾನಂದಮಂ ಮಾಡುಗೆಂದುಂ ॥

---

49. ಅದೇ, ಪು. ೧೬೫.
50. ಅದೇ, ಪು. ೧೬೫.

ಶಿವರುದ್ರಪ್ಪನವರ 'ಗೋಡೆ'

ಬುದ್ದಣ್ಣ ಹಿಂಗಮಿರೆ

ಗೋಡೆ ಎಬ್ಬಿಸಿಕೊಂಡು ಬದುಕುವುದರಲ್ಲಿ ಈ ಮನುಷ್ಯಜಾತಿಗಿರುವ ರುಚಿ, ಆಶ್ಚರ್ಯಕರವಾದದ್ದು; ವ್ಯಕ್ತಿವ್ಯಕ್ತಿಯ ನಡುವೆ ಅಸೂಯೆ, ಅಹಂಕಾರ, ಪ್ರತಿಷ್ಠೆ, ತಪ್ಪು ತಿಳುವಳಿಕೆಗಳ ಗೋಡೆಗಳು; ಜಾತಿ, ಮತ, ಪಂಥ, ವರ್ಣ, ಭಾಷೆ ಇತ್ಯಾದಿ ಗೋಡೆಗಳು ಜನ–ಜನದ ನಡುವೆ, ದೇಶ–ದೇಶದ ನಡುವೆ.

ಗೋಡೆ, ನನ್ನನಿನ್ನ ನಡುವೆ, ವ್ಯರ್ಥ, ಸಸ್ಯಸುತ್ತ, ನಿಲುವು, ಯಾವುದೀ ಪ್ರವಾಹ–ಇವು ಗೋಡೆಯಲ್ಲಿನ ಯಶಸ್ವಿ ಕವಿತೆಗಳು. ಇಲ್ಲೆಲ್ಲಾ ವ್ಯಕ್ತಿ-ವ್ಯಕ್ತಿಯ ಮಧ್ಯೆ ಬಿಟ್ಟಿರುವ ಬಿರುಕು, ಪರಸ್ಪರರನ್ನು ದೂರವಾಡುವ ದ್ವೇಷ, ಅಸೂಯೆ ಇತ್ಯಾದಿ ಭಾವಗಳು ಯಾವ ಕೃತಕತೆಯಿಲ್ಲದೆ, ಸರಳ ಆವರಣ ನಿರ್ಮಿಸಿಕೊಂಡು ವ್ಯಕ್ತವಾಗಿವೆ. 'ಯಾವುದೀ ಪ್ರವಾಹ ?'–ಎನ್ನುವ ಪದ್ಯ ಗಮನಾರ್ಹವಾಗಿದ್ದು, ಇನ್ನುಳಿದ ಕವಿತೆಗಳ ತಳದಲ್ಲಿ ಈ ಭಾವವೇ ಉಷ್ಣಪ್ರವಾಹದ ಹಾಗೆ ಹರಿದಾಡಿದೆ. ಇಲ್ಲಿ ಎದ್ದಿರುವ ಸಂದೇಹ, ಸಂಶಯಗಳು ಇನ್ನುಳಿದ ಪದ್ಯಗಳಲ್ಲಿ ತಮ್ಮತಮ್ಮ ಮುಖವಾಡ ತೊಟ್ಟುಕೊಂಡು ಕಣ್ಣನ್ನು ಕುಕ್ಕಿಸುತ್ತವೆ, ನೆಮ್ಮದಿಯನ್ನು ಕಲಕುತ್ತವೆ.

ಮನೆಮನಗಳ ಕೊಚ್ಚಿಕೊರೆದು
ಬುಸುಗುಡುತ್ತ ಧಾವಿಸುತಿದೆ
ಯಾವುದೀ ಪ್ರವಾಹವು ?

'ಬುಸುಗುಡುತ್ತ ಧಾವಿಸುವ' ಪ್ರವಾಹ, ಭೀಕರತೆಯ ಸಂಕೇತವಾಗಿ ಅದು ಸರ್ಪದ ಹಾಗೆ ಮುಟ್ಟಿ ಮರೆಯಾಗುತ್ತದೆ. ಅದರ ವಿಷಸ್ಪರ್ಶದ ಪರಿಣಾಮಕ್ಕೆ ಮನಸ್ಸು, ಮನುಷ್ಯ ತುತ್ತಾಗಿ ಮೃತ್ಯುವಿಗೆ ತೀರ ಹತ್ತಿರವಾಗುತ್ತಾನೆ.

ಈ ಪ್ರವಾಹದ ಆಘಾತವನ್ನು, ಜೋರನ್ನು ಸಹಿಸಿಕೊಳ್ಳಲಾಗದೆ ಉರುಳುವ ಗುಡಿ-ಗೋಪುರ, ತೇಲುವ ಹಳೆಯ ಪ್ರತಿಮೆ, ಆರುವ ದೀಪ, ತಂತಿ ಹರಿದು ನರಳುವ ವಾದ್ಯವೃಂದಗಳು–ಇವೆಲ್ಲದರ ವ್ಯಸ್ತತೆಯನ್ನು ಚಿತ್ರಿಸಲಾಗಿದೆ.

ಎಡೆಎದೆಗಳ ನಡುವೆ ಇದ್ದ
ಸೇತುವೆಗಳು ಮುರಿದಿಡೆ

ವ್ಯಕ್ತಿವ್ಯಕ್ತಿಯಲ್ಲಿರುವ ಸಂಬಂಧ ಕಳಚಿ ಹೋಗಿರುವುದನ್ನು, ಈ ಸಾಲುಗಳು ಚೆನ್ನಾಗಿ ಬಣ್ಣಿಸುತ್ತವೆ. ಸ್ನೇಹ, ಪ್ರೀತಿ, ವಾತ್ಸಲ್ಯ–ಈ ಭಾವಗಳು ಇಲ್ಲವಾಗಿ, ವ್ಯಕ್ತಿ-ವ್ಯಕ್ತಿಯ ಮಧ್ಯ ಕಂದರಗಳು ತೆರೆದಿರುವುದನ್ನು ಹಾಗೂ ಭಯ, ಸಂಶಯ, ತಲ್ಲಣಗಳು ಎದೆ

ಎದೆಯಲ್ಲಿ ತಾಂಡವವಾಡುವುದನ್ನು, ಈ ಸಾಲುಗಳು ಸಂಕೇತಿಸುತ್ತವೆ. 'London bridge is falling down' ಎಂಬ ಎಲಿಯಟ್‌ನ ಮಾತನ್ನು ನೆನಪಿಗೆ ತಂದು ಕೊಳ್ಳಬಹುದು. ನಾಗರಿಕತೆ ಮುಗಿಲು ಮುಟ್ಟಿದರೂ ಮನುಷ್ಯನಲ್ಲಿರುವ ಸಂಬಂಧ ಗಳು ಕಳಚಿ ಹೋಗುವುದರಿಂದ ಸಂಭವಿಸುವ ಅಪಾಯ. ಇಲ್ಲಿ ಸೂಚಿತವಾದದ್ದು.

ಯಾವ ಮುಖವನ್ನೂ ನಂಬುವ ಹಾಗಿಲ್ಲ. ಯಾವ ಮುಖವೂ ತನ್ನತನವನ್ನು ಉಳಿಸಿಕೊಂಡಿಲ್ಲ. ಇಡೀ ಬದುಕು ಕೃತಕವಾಗಿರುವುದನ್ನು 'ಮುಖವಾಡ'ಗಳ ರೂಪಕ, ಅರ್ಥಪೂರ್ಣವಾಗಿ ಬಣ್ಣಿಸುತ್ತದೆ.

ಮುಖಮುಖವೂ ಮುಖವಾಡವ
ತೊಟ್ಟು ನಿಂತ ಹಾಗಿದೆ.

ಹೃದಯವೆನ್ನುವುದು ಹೆಸರಿಗೆ ಮಾತ್ರ ಉಳಿದದ್ದು. ಅದರಲ್ಲಿ ಹಾರ್ದಿಕವಾದದ್ದು ಯಾವುದೂ ಇಲ್ಲ. ಸಂಸ್ಕೃತಿಯೇ ಶೂನ್ಯವಾಗಿರುವ ಸ್ಥಳ. ಹೃದಯದಲ್ಲಿ ಪ್ರೀತಿ, ವಿಶ್ವಾಸ. ಶ್ರದ್ಧೆ ಇತ್ಯಾದಿ ಇಲ್ಲದ್ದಕ್ಕೆ ಅದು ಪೊಳ್ಳಾಗಿ ಪರಿಣಮಿಸಿದ್ದು, We are all hallowmen ಎಂದು ಹೇಳಬಹುದಾದಂಥಾದ್ದು. ಹೀಗಾಗಿ ಆಡುವ ಮಾತು ಗಳು ಅರ್ಥಪೂರ್ಣವಾಗಿವೆ. ಹೃದಯ ಖಾಲಿಪಿಪಾಯಿಯಾಗಿರುವುದನ್ನು ಧ್ವನಿ ಸುತ್ತದೆ. ಈ ಪ್ರವಾಹದಲ್ಲಿ ನಾಗರಿಕತೆ. ವಿಜ್ಞಾನ. ದ್ವೇಷ, ಮತ್ಸರ. ಶತ್ರುತ್ವ. ಅನ್ಯಾಯ ಇತ್ಯಾದಿ ಸೇರಿಕೊಂಡು ಬುಸುಗುಡುತ್ತ ಧಾವಿಸುವ ಪ್ರವಾಹ. ಇಡೀ ಮಾನವತೆಯನ್ನು ಕಬಳಿಸುವಂತಾದದ್ದು. ಮಾನವನ ಹಾಗೂ ಮೃತ್ಯುವಿನ ಸಂಕೇತ ದೊಂದಿಗೆ ಪ್ರಾರಂಭವಾಗಿರುವ 'ಯಾವುದೀ ಪ್ರವಾಹ' ಪದ್ಯ, ತುಂಬ ಪರಿಣಾಮಕಾರಿ ಹಾಗೂ ಅರ್ಥವುಳ್ಳದ್ದು. ಅಡಿಗರ 'ಮೋಹನ ಮುರಲಿ' ಪದ್ಯ ಹೇಗೆ ಮಹತ್ವದ್ದೋ ಹಾಗೆ ಶಿವರುದ್ರಪ್ಪ ಅವರ ಈ ಪದ್ಯ, ತನ್ನ ವಿಶಿಷ್ಟ ಅರ್ಥ ಹಾಗೂ ಲಯಗಳಿಂದ ಮನಸ್ಸನ್ನು ವ್ಯಾಪಿಸಿ ನಿಲ್ಲುವುದು. ಇದೊಂದು ಉತ್ತಮ ಭಾವಗೀತೆಯಾಗಿದ್ದರೂ ಅದರೊಳಗಿನ ಅರ್ಥ, ತುಂಬ ಪ್ರಭಾವಯುತವಾದದ್ದು.

ತೂಗಾಡುವ ಕಿರೀಟಗಳಿಗೆ ತಕ್ಕಂತೆ
ತಲೆಯ ಆಕಾರಗಳನ್ನು ಬದಲಾಯಿಸುತ್ತ
ಪರದಾಡವುದು ನನಗೆ ಅಭ್ಯಾಸವಿಲ್ಲ,
ಹೇಗೋ ನನ್ನ ಪಾಡಿಗೆ ನಾನು ಬದುಕುತ್ತೇನೆ.
ಇದ್ದಷ್ಟು ನೆಲವ ಉತ್ತುಬಿತ್ತಿ, ನೀರೆರೆದು
ಮಲಗಿರುವ ಬೀಜಗಳ ಕಣ್ಣು ತೆರಸುತ್ತೇನೆ.

ವಿಷಮಯ ವಾತಾವರಣದ ಮಧ್ಯದಲ್ಲಿ ಬದುಕುವುದೇ ಕಷ್ಟವೆನ್ನಿಸಿದಾಗ. ಮೂಡಿದ ಭಾವನೆಯಿದು. ನಿರಾಶೆಯ ಹೊಗೆ ಕಟ್ಟಿದಾಗಲೂ ಇಚ್ಛೆ. ಬಡವಾಗಿಲ್ಲ. 'ಮಲಗಿರುವ ಬೀಜಗಳ ಕಣ್ಣುತೆರಸುವ' ಕಾರ್ಯದಲ್ಲಿ ಬದುಕನ್ನು ದುಡಿಸಿಕೊಳ್ಳುವ ಆಕಾಂಕ್ಷೆ ಪ್ರಬಲವಾದದ್ದು. ಕವಿಯ ಒಟ್ಟು ಬದುಕಿನ ಮುಖ್ಯ ದೃಷ್ಟಿ ಹಾಗೂ ನಿಲುವು ಇಲ್ಲಿ ವ್ಯಕ್ತವಾಗಿದೆ.

ಹಲವು ಹದಿನೆಂಟು ಬಗೆಯ ಅನುಭವಗಳಲ್ಲಿ ಹಾಯ್ದು ಬಂದಾಗ 'ಗಟ್ಟಿನೆಲ' ಹುಡುಕುವ ಪ್ರಯತ್ನ ಹಾಗೂ ಪ್ರಶ್ನೆಯಾಗಿದ್ದು ಕೊಂಬೆಗಳಿಂದ ಸಂಶಯದ ಹುತ್ತಗಳನ್ನು ತಿವಿದು ಬದುಕಿನ ಅರ್ಥ ಹಾಗೂ ಮೌಲ್ಯಗಳನ್ನು ಕಂಡುಕೊಳ್ಳುವ ಹೋರಾಟದಲ್ಲಿ ಕವಿಗೆ, ಚಾಲನೆ ಸಿಕ್ಕಿದೆ.

ನಿನ್ನ ಎಚ್ಚರದೊಳಗೆ
ಎದ್ದು ಬಂದವರೊಳಗೆ ನಾನೂ ಒಬ್ಬ

ಎಂಬಂಥ ಉಕ್ತಿಗಳು. ಅನುಭವದ ಕಾವನ್ನುಳಿಸಿಕೊಂಡು ಹೊಸ ಅರ್ಥವನ್ನು ಬೆಳಗುವಲ್ಲಿ ಸಾರ್ಥಕವಾಗುತ್ತವೆ. ಬೆಳಕಿನ ಹಂಬಲಕ್ಕಾಗಿ ತಡವರಿಸುವ ಬದುಕಿನ ಕಥೆಯೇ ಇಲ್ಲೆಲ್ಲಾ ಕಾವ್ಯಮಯವಾಗಿ ಉಕ್ತವಾದದ್ದು.

ನಾಗರಿಕತೆಯ ಕಪಿಮುಷ್ಟಿಯಲ್ಲಿ ಸಿಕ್ಕು ನರಳುವುದು 'ನನ್ನ ಸುತ್ತ' ಪದ್ಯದ ವಿಷಯ. ಬರೀ ಮುಖವಾಡಗಳನ್ನು ತೊಟ್ಟು ನಟಿಸುವ ಪರಿವಾರವನ್ನು ಕಂಡು ರೋಸಿ, ಅದರಿಂದ ಪಾರಾಗುವ ಸಮಯಕ್ಕಾಗಿ ದಿನದಿಂದ ದಿನಕ್ಕೆ ಸಣ್ಣಗೆ ಸಾಯುತ್ತಾ ಬಿದ್ದಿರುವ ಅನುಭವ ತೀವ್ರತೆಯನ್ನು ತಟ್ಟಿಸುತ್ತವೆ. ನಂಬಿಕೆಯ ಬೇರುಗಳು, ಹೃದಯದ ಸೇತುವೆಗಳು ಕತ್ತರಿಸಿ ಹೋದವರ ಮಧ್ಯದಲ್ಲಿ ಬದುಕುವುದು ದುಸ್ಸಾಧ್ಯವೆನ್ನಿಸಿ, ಅಂಥ ಗಂಡಾಂತರಗಳಿಂದ ಪಾರಾಗಲು ಸುರಂಗ ಮಾರ್ಗವೊಂದನ್ನು ಪತ್ತೆ ಹಚ್ಚುವುದು ಅನಿವಾರ್ಯವೆನ್ನಿಸಿದೆ.

'ಝಗಝಗ ದೀಪಗಳ ದಾರಿಯಲ್ಲಿ ಡ್ರೈವ್‌ಮಾಡಿ ಕಡೆಗೆಲ್ಲೊ ಕತ್ತಲೆಯ ಗಲ್ಲಿಯಲ್ಲಿ' ಬಿಟ್ಟು ಬಸ್ತಿಮಾಡುವ ವೈಪರೀತ್ಯದಿಂದ ಬದುಕಿನ ಒಟ್ಟು ಅರ್ಥವೆಲ್ಲ ಬುಡಮೇಲಾದದ್ದು ಗಮನಕ್ಕೆ ಬಂದದ್ದು.

ಒಬ್ಬನೇ ತೊಳಲಿ, ಬಳಲುವುದರಿಂದ ಹಿಂದುಮುಂದಿನ ಕೊಂಡಿಗಳು ಕಳಚಿ ಹೋದಂತಾಗಿ. ನಿರ್ಗತಿಕ ಸ್ಥಿತಿ ಪ್ರಾಪ್ತವಾದದ್ದು. ದೀಪಗಳು ಹಾಗೂ ಬೆಳಕಿನ ಬಗ್ಗೆ ಇದ್ದ ಮೋಹ ಕಡಮೆಯಾಗಿ ಕತ್ತಲೆಯ ಸುತ್ತು. ಕತ್ತನ್ನು ಬಿಗಿದುಕೊಂಡಿರುವುದು. ಬದುಕು–ಬೆಳಕುಗಳ ಬಗ್ಗೆ ತೀವ್ರ ಅನುಮಾನ. ಸಂಶಯಗಳು ಹುಟ್ಟಿಕೊಂಡು. ಇನ್ನೊಂದು ಹೊಸ ದಾರಿಯನ್ನು ತೋರಿಸಿವೆ.

ಸಿಕ್ಕಿಸಿಕೊಂಡಿದ್ದೇನೆ ನಾನೂ
ಕೊಳಕು ಮಂಡಲದ ನಡುವೆ.
ಕೊಂಕು ನಗೆ, ನರಿಮಾತು, ಕಪಿಮುಷ್ಟಿ
ವೃಕೋದರಗಳ ಮಧ್ಯೆ.

ಕವಿಯ ಪ್ರಾಮಾಣಿಕವಾದ ಅನುಭವ. ಸ್ಫುಟವಾಗಿ ಪ್ರಕಟವಾಗಿದೆ. ಬದುಕು ಮಿಥ್ಯಾ ಆವರಣಗಳ ಮಧ್ಯೆ ಸಿಕ್ಕು ನರಳುತ್ತಿರುವುದೆಂಬುದನ್ನು 'ನನ್ನ ಸುತ್ತ' ಪದ್ಯ. ಚೆನ್ನಾಗಿ ಬಣ್ಣಿಸುತ್ತದೆ. ಕೊಳಕು ಮಂಡಲ, ಕೊಂಕುನಗೆ, ನರಿಮಾತು, ಕಪಿಮುಷ್ಟಿ, ವೃಕೋ

ಧರ-ಒಂದೊಂದೂ ಅರ್ಥಪೂರ್ಣವಾಗಿದ್ದು ಕ್ರೌರ್ಯ ಹಾಗೂ ಕರಾಳತೆಯನ್ನು ಸಂಕೇತಿಸಲು ಸಮರ್ಥವಾಗಿವೆ.

ಈ ಎಲ್ಲಾ ಅರ್ಥಗಳ ಹಿನ್ನೆಲೆಯಲ್ಲಿ 'ಗೋಡೆ' ಪದ್ಯ ತುಂಬ ಸಾರ್ಥಕತೆಯನ್ನು ಪಡೆಯುವುದು. ವೈಯಕ್ತಿಕ ಅನುಭವದ ಸ್ತರದ ಮೇಲೆ ಅನುಭವ ಗೋಡೆಯ ವಿವಿಧಾರ್ಥಗಳನ್ನು ಬಿಚ್ಚಿಡುತ್ತದೆ.

ಎಲ್ಲಿಂದಲೋ ಏನೊ ಇಟ್ಟಿಗೆಯ ಮೇಲೆ ಇಟ್ಟಿಗೆ ಬಂದು
ಕೂತು, ಕೂತಲ್ಲಿಯೇ ನಮ್ಮನ್ನು ಹೂತು
ಸುತ್ತಲೂ ಗೋಡೆ ಕಟ್ಟುತ್ತವೆ.

ಹೃದಯಹೃದಯದ ಮಧ್ಯೆ ಕಟ್ಟಿಕೊಳ್ಳುವ ಈ ಗೋಡೆಯಿಂದಾಗಿ ವ್ಯಕ್ತಿವ್ಯಕ್ತಿಯ ಸಂಬಂಧವೇ ತಪ್ಪಿಹೋಗುತ್ತದೆ. ಅರ್ಥಕ್ಕೆ ಬದಲು ಅಪಾರ್ಥ, ವಿಶ್ವಾಸಕ್ಕೆ ಪ್ರತಿಯಾಗಿ ಅವಿಶ್ವಾಸ ಹುಟ್ಟಿಕೊಂಡು ಬದುಕು ವಂಚಿತವಾಗುವ ರೀತಿ, ಇಲ್ಲಿ ಸಮರ್ಥವಾಗಿ ರೂಪ ಪಡೆದಿದೆ.

ಎದ್ದ ಗೋಡೆಯು ತುಂಬ ಕೆಂಗಣ್ಣು ಕೆಮ್ಮೀಸೆ ಗೋಡೆಯ ಭೀಕರ ಮುಖದ ಬಣ್ಣನೆ ಚೆನ್ನಾಗಿ ವೇದ್ಯವಾಗಿ ಅದರ ಬಾಯಿ, ಬೆಂಕಿ ಉಗಿಯುವುದನ್ನು ಹೇಳುತ್ತದೆ.

ಹೂವಿನ ತೋಟ ಸೀದು ಹೊಗೆಯಾಡುವ ಪ್ರತಿಮೆ. ಬದುಕಿನ ನಿರರ್ಥಕತೆಗೆ ಸಂಕೇತವಾಗುತ್ತದೆ. ಹೊಗೆಯಲ್ಲಿ ಉಸಿರುಕಟ್ಟಿಕೊಂಡು ಗೋಡೆಯ ಎರಡೂ ಬದಿಗೆ ನರಳಿ ಹೊರಳುವ ಚಿತ್ರಹಿಂಸೆಯ ಅನುಭವ. ಕೈ-ಮೈ ಪಡೆಯುತ್ತದೆ. ಗಾಳಿ. ಕಾರಿರುಳು, ನಕ್ಷತ್ರ ಇತ್ಯಾದಿ ಭೀಕರತೆಯನ್ನು ಕಾರುತ್ತವೆ.

ಹೃದಯಹೃದಯದ ಮಧ್ಯ ಅಚಾನಕವಾಗಿ ಎದ್ದ ಗೋಡೆ. ಕರಗೀತೆಂಬ ಭರವಸೆ ಕಾವ್ಯನಾಯಕನಿಗಿದೆ.

ಗೋಡೆಯ ಆಚೆಗೆ ನೀನು
ಈಚೆಗೆ ನಾನು
ಗೋಡೆ ಕರಗುವದನ್ನೆ ಕಾಯುತ್ತಾ
ಕೂಡುತ್ತೇವೆ.

'ವ್ಯರ್ಥ' ಎನ್ನುವ ಪದ್ಯ, 'ಗೋಡೆ'ಗೆ ತಕ್ಕ ಹಿನ್ನೆಲೆಯನ್ನು ಕಟ್ಟಿದ್ದು. ಹೃದಯ-ಹೃದಯ ಮಧ್ಯದ ಸೇತುವೆ ಮುರಿದು ಅವು ಬೇರ್ಪಟ್ಟದ್ದು. ತಕ್ಕ ಸಂಕೇತಗಳೊಂದಿಗೆ ಅಭಿವ್ಯಕ್ತವಾಗಿದೆ.

ಕತ್ತಲಲ್ಲೇ ತಡಕಾಡಿಕೊಂಡು ಕೈ ಚಾಚುತ್ತೇನೆ
ರಾಂಗ್ ನಂಬರಿಗೆ ಟೆಲಿಫೋನು ಮಾಡಿ
ಉತ್ತರಕ್ಕೆ ಕಾಯುತ್ತ ಕೂಡ್ರುತ್ತೇನೆ.

ಒಟ್ಟು ಬದುಕಿನ ಅಸ್ತವ್ಯಸ್ತ ಸ್ಥಿತಿ, ಬದುಕಿನ ಕೃತಕತೆ. ಪ್ರೇಮ- ಇತ್ಯಾದಿಗಳ ಹಿನ್ನೆಲೆಯಲ್ಲಿ 'ಗೋಡೆ' ಏಳುವುದನ್ನು, ಇಲ್ಲಿಯ ಪದ್ಯಗಳು ವಿಶಿಷ್ಟ ಅರ್ಥದಲ್ಲಿ ಸಂಕೇತಿಸುತ್ತವೆ.

ಮುಕ್ತಕ ಮಾಲೆ

ಎಚ್. ಜಿ. ಲೋಕೂರ

೧. ನೊರೆ

ಪುನರಪಿ ಜನನಂ ಪುನರಪಿ ಮರಣಂ
    ಪುನರಪಿ ಜನನೀ ಜಠರೇ ಶಯನಂ ।
ಇದು ಸಂಸಾರೇ ಬಹು ದುಸ್ತಾರೇ
    ಕೃಪಯಾಪಾರೇ ಪಾಹಿ ಮುರಾರೇ ॥

(ಶಂಕರಾಚಾರ್ಯರ ಭಜಗೋವಿಂದಂ)

ಮತ್ತೆ ಹುಟ್ಟುವುದು, ಮತ್ತೆ ಸಾಯುವುದು,
ಮತ್ತಬ್ಬೆಯೊಡಲಲಿ ಒರಗುವುದು,
ತೀರದೀ ಸಂಸಾರ ದಾಟುವುದಾಗದು
ದಯದಿಂದ ಹರಿಯೇ ಪೊರೆಯುಂವುದು.

೨. ಮಧುರ ಭಕ್ತಿ

ಆಶ್ಲಿಷ್ಯ ವಾ ಪಾದರತಾಂ ಪಿನಷ್ಟು ಮಾಂ
    ಅದರ್ಶನಾತ್ ಮರ್ಮಹತಾಂ ಕರೋತು ವಾ ।
ಯಥಾ ತಥಾ ವಾ ವಿದಧಾತು ಲಂಪಟೋ
    ಮತ್ ಪ್ರಾಣನಾಥಸ್ತು ಸ ಏವ ನಾಪರಃ ॥

(ಚೈತನ್ಯರ ಶಿಕ್ಷಾಷ್ಟಕ)

ಅಡಿಯಲಿರುವಳನಪ್ಪಿ ಅಮುಕಲಿ,
ಅಡಗಿ ಮನಸನೆ ಇರಿಯಲಿ,
ಅಂತೊ ಎಂತೋ ರಸಿಕನೆಸಗಲಿ,
ಜೀವದೊಡೆತನ ಅವನಲಿ.

೩. ಸಜ್ಜನ ಹೃದಯ

ಸಜ್ಜನಸ್ಯ ಹೃದಯಂ ನವನೀತಂ ಯದ್ವದಂತಿ ಕವಯಃ ತದಲೀಕಂ ।
ಅನ್ಯದೇಹವಿಲಸತ್ ಪರಿತಾಪಾತ್ ಸಜ್ಜನೋ ದ್ರವತಿ ನೋ ನವನೀತಂ ॥

(ವಿಶ್ವೇಶ್ವರದತ್ತನ ನೀತಿಸಾರ)

ಸಜ್ಜನರೆದೆಯಂದು ಬೆಣ್ಣೆಯು ಎಂದಂ
ಕವಿಗಳಂ ಎಂಬುದು ಸುಳ್ಳು,
ಬೆಣ್ಣೆಯು ಕರಗದು, ಸಜ್ಜನ ಕರಗುವ-
ರನ್ಯರ ಒಡಲಿನ ತಾಪದೊಳಂ

೪. ದಾರಿದ್ರ್ಯದೋಷ

ಏಕೋ ಹಿ ದೋಷೋ ಗುಣಸನ್ನಿಪಾತೇ
ನಿಮಜ್ಜತೀಂದೋರಿತಿ ಯೋ ಬಭಾಷೇ ।
ನ ತೇನ ದೃಷ್ಟಂ ಕವಿನಾ ಸಮಸ್ತಂ
ದಾರಿದ್ರ್ಯಮೇಕಂ ಗುಣಕೋಟಿ ಹಾರಿ ॥

(ಸುಭಾಷಿತ ರತ್ನಭಾಂಡಾಗಾರ)

'ಒಂದೆ ದೋಷವು ತಾನೆ ಗುಣಗಳ ಗಡಣದಿ
ಚಂದ್ರನ ಕಪ್ಪಿನಂತಡಗುವುದು'
—ಎಂದ ಕವಿ ಕಂಡಿಲ್ಲ ಎಲ್ಲವ, ಬಡತನ
ಒಂದೇ ಗುಣಕೋಟಿಯ ತೊಡೆಯುವುದಂ.

೫. ದುಡ್ಡಿನ ದುಃಖ

ಜನಯಂತರ್ಜನೇ ದುಃಖಂ ತಾಪಯಂತಿ ವಿಪತ್ತಿಷು ।
ಮೋಹಯಂತಿ ಸಮೃದ್ಧೌ ಚ ಕಥಮರ್ಥಾಃ ಸುಖಾವಹಾಃ ॥

(ಸುಭಾಷಿತ ರತ್ನಭಾಂಡಾಗಾರ)

ಗಳಿಸುತಲಿರುವಾಗ ಕಷ್ಟವನೀವುದು.
ಅಳಿದರು ಅಳಲೆ ಆಹುದು.
ಬೆಳೆದರು ಆಸೆಯ ಹುಟ್ಟಿಸುತಿರುವುದು.
ಹಣವೆಂತು ಸುಖವೀವುದು ?

೬. ಆದರ

ಶೂರಾಶ್ಚ ಕೃತವಿದ್ಯಾಶ್ಚ ರೂಪವತ್ಯಶ್ಚ ಯೋಷಿತಃ ।
ಯತ್ರ ಯತ್ರ ಗಮಿಷ್ಯಂತಿ ತತ್ರ ತತ್ರ ಕೃತಾದರಾಃ ॥

(ಸುಭಾಷಿತ ರತ್ನಭಾಂಡಾಗಾರ)

ವೀರರು, ವಿದ್ಯಾವಂತರು, ಅಂತೆಯೆ
ಚೆಂದುಳ್ಳ ಚೆಲುವೆಯರು
ಎಲ್ಲೆಲ್ಲಿ ಹೋಗುವರಲ್ಲಲ್ಲಿ ಎಲ್ಲ
ಆದರ ಹೊಂದುವರು !

೭. ಅನಾದರ

ಸುಲಭಂ ವಸ್ತು ಸರ್ವಸ್ಯ ನ ಯಾತ್ಯಾದರಣೀಯತಾಂ ।
ಸ್ವದಾರ ಪರಿಹಾರೇಣ ಪರದಾರಾರ್ಥಿನೋ ಜನಾಃ ॥

(ಸುಭಾಷಿತ ರತ್ನಭಾಂಡಾಗಾರ)

ಸುಲಭದ ವಸ್ತುವನೆಲ್ಲರು ಆದರ
ಗೈಯದೆ ಇರುತಿಹರು
ತಮ್ಮಯ ಹೆಂಡಿರನುಳಿಯುತ ಹೆರವರ
ಹೆಂಡಿರನೆಳಸುವರು.

೮. ಸುಖಜೀವನ

ಯಾವಜ್ಜೀವಂ ಸುಖಂ ಜೀವೇತ್ ಋಣಂ ಕೃತ್ವಾ ಘೃತಂ ಪಿಬೇತ್ ।
ಭಸ್ಮೀ ಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ॥

(ಚಾರ್ವಾಕ)

ಬದುಕಿರುವನಕ ಸುಖವಾಗಿರುವುದು
ಕಡಮಾಡಿ ತುಪ್ಪವ ಕುಡಿಯುವುದು,
ದೇಹವು ಸುಟ್ಟು ಬೂದಿಯಾದ ಬಳಿಕ
ಎಲ್ಲಿಂದ ಮತ್ತೆ ಮರಳುವುದು ?

೯. ಹಿತಾವಹ

ಕೂಪೋದಕಂ ವಟಚ್ಛಾಯಾ ಶ್ಯಾಮಾಸ್ತ್ರೀ ಚೇಷ್ಟಕಾಲಯಂ ।
ಶೀತಕಾಲೇ ಭವೇದುಷ್ಣಂ ಗ್ರೀಷ್ಮಕಾಲೇ ಚ ಶೀತಲಂ ॥

(ಸುಭಾಷಿತ ರತ್ನಭಾಂಡಾಗಾರ)

ಬಾವಿಯ ನೀರು, ಆಲದ ನೆರಳು.
ಶ್ಯಾಮಲೆ, ಇಟ್ಟಿಗೆ ಮನೆಯು
ಚಳಿಯ ಕಾಲದಲ್ಲಿ ಬೆಚ್ಚಗೆ ಇರುವವು.
ಬೇಸಗೆಗೆ ತಂಪಾಗಿಯು.

೧೦. ಮಹಾಮನ

ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ।
ಲೋಕೋತ್ತರಾಣಾಂ ಚೇತಾಂಸಿ ಕೋ ಹಿ ವಿಜ್ಞಾತುಮರ್ಹತಿ ॥

(ಭವಭೂತಿ)

ವಜ್ರಕಿಂತಲು ಕಠಿಣ, ಹೂವಿಗಿಂತಲು ನವುರು.
ವೈಮೆವಂತರ ಮನವ ಅರಿಯಬಲ್ಲವರಾರು ?

ಕೆಳದಿನೃಪವಿಜಯದಲ್ಲಿ ಕಾಲಾನುಕ್ರಮಣಿಕೆ

ಕೆಳದಿ ಗುಂಡಾಜೋಯಿಸ್

ಕರ್ನಾಟಕದ ಕೆಲವೇ ಐತಿಹಾಸಿಕ ಗ್ರಂಥಗಳ ಸಾಲಿನಲ್ಲಿ ಸೇರಿದ ಕೆಳದಿನೃಪವಿಜಯವು. ಕೆಳದಿ ಅರಸರ ಚರಿತ್ರೆಯನ್ನು ಹೇಳಿದೆ. ಲಿಂಗಣ್ಣಕವಿ ಕೃತ ಈ ಐತಿಹಾಸಿಕ ಕಾವ್ಯವನ್ನು ದಿವಂಗತ ಎ. ಆರ್. ಕೃ. ರವರು ತಮ್ಮ ಉಪೋದ್ಘಾತದಲ್ಲಿ ಇದರ ವೈಶಿಷ್ಟ್ಯತೆಯನ್ನು ಮನಸಾರೆ ಶ್ಲಾಘಿಸಿದ್ದಾರೆ. ಕವಿಲಿಂಗಣ್ಣನು ಕೆಳದಿಅರಸರ ಆಸ್ಥಾನ ಕವಿ: ಈತನ ಇತಿಹಾಸ ಪ್ರೇಮವು ಕ್ರಿ. ಶ. ೧೮ನೆಯ ಶತಮಾನದಲ್ಲಿಯೇ ಪ್ರತಿಬಿಂಬಿಸಿರುವುದು. ಐತಿಹಾಸಿಕ-ಚಾರಿತ್ರಿಕ ರಚನೆಯು ಸಾಧನೆಗಳಲ್ಲಿ ಒಂದೆನಿಸಿದೆ. ಈತನು ಕಲೆಹಾಕಿದ ಭಾರತದ ಇತರ ರಾಜರ ಚರಿತ್ರೆಗಳು, ಬಹುಕುತೂಹಲಕರವಾಗಿವೆ. ಸರಕಾರದ ಅಧಿಕೃತ (ರಿಪೋರ್ಟ್) ವರದಿಯಂತೆ ಕಂಡುಬರುವ ಈ ಐತಿಹಾಸಿಕ ಚಂಪೂ ಕಾವ್ಯವು, ಕೆಳದಿ ಅರಸರ ಆಸ್ಥಾನದಲ್ಲಿಯೇ ರಚಿಸಲ್ಪಟ್ಟಿದೆಯೆಂದು ವಿದ್ವಾಂಸರ ಅಭಿಮತವಾಗಿದೆ. ಈ ಕೃತಿಯಲ್ಲಿ ಉಲ್ಲೇಖಿಸಿದ ಮಾಹಿತಿಗಳು, ತಮ್ಮದೇ ಆದ ನಿಖರತೆಯನ್ನು ಸ್ಪಷ್ಟಪಡಿಸಲು ಪ್ರಯತ್ನಿಸಿವೆ. ಹಲವು ಸಂಗತಿಗಳಂತೂ ಇತಿಹಾಸದಲ್ಲಿ ಅಚ್ಚೊತ್ತಿದಂತೆ ಮೂಡಿಬಂದಿವೆ. ಕುತೂಹಲಕರ ಅಂಶವೆಂದರೆ, ಇದರಲ್ಲಿ ನಿರೂಪಿಸಿದ ಶಕ, ಸಂವತ್ಸರ, ಮಾಸ, ಪಕ್ಷ, ದಿವಸ ಹಾಗೂ ವಾರಗಳು ಆಧುನಿಕ ಸಂಶೋಧನೆಯ ಮೇಲೆ ಹೊಸ ಬೆಳಕನ್ನು ಚೆಲ್ಲಿವೆ. ಕ್ರಿ. ಶ ೧೬ನೆಯ ಶತಮಾನದಿಂದ ೧೮ನೆಯ ಶತಮಾನದ ವರೆಗೆ ಆಳಿದ ಕೆಳದಿ ನಾಯಕರ ಕಾಲಮಾನಾದಿಗಳು. ಕೆಳದಿನೃಪವಿಜಯದಲ್ಲಿ ಉಲ್ಲೇಖಗೊಂಡಿವೆ ಇವುಗಳ ಅಧ್ಯಯನದಿಂದ ಅನೇಕ ಕುತೂಹಲಕರ ಅಂಶಗಳು ವ್ಯಕ್ತವಾಗುತ್ತವೆ.

ಪ್ರಥಮಾಶ್ವಾಸದಿಂದ ಆರನೆಯ ಆಶ್ವಾಸದವರೆಗೆ :

I (a) ಇಂತು ಕೆಳದಿಯ ಚೌಡಪನಾಯಕಂ ತನಗೆ ರಾಜಪಟ್ಟವಾದ ಶಕವರ್ಷ ೧೪೨೨ನೆಯ ಸಿದ್ಧಾರ್ಥಿ ಸಂವತ್ಸರದ ಮಾಘ ಶುದ್ಧ ೩ ಆರಭ್ಯ ಶ್ರೀಮುಖ ಸಂವತ್ಸರದ ಶ್ರಾವಣ ಶುದ್ಧ ೨ ನೆಯ ನೆಲೆಗೆ... (ಕೆ. ನೃ. ವಿ. ಪು. ೨೬.)

(b) ......ಆ ಚೌಡಪ್ಪನಾಯಕರ ತರುವಾಯ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೪೩೬ ನೆಯ ಶ್ರೀಮುಖ ಸಂವತ್ಸರದ ಶ್ರಾವಣ ಶುದ್ಧ ೩ ಯಲ್ಲಿ...... (ಅದೇ, ಪು. ೨೭.)

ಇಲ್ಲಿ ಹೇಳಿದ ೧೪೨೨ನೆಯ ಮತ್ತು ೧೪೩೬ನೆಯ ಶಕವರ್ಷವು ಅನುಕ್ರಮವಾಗಿ ಕ್ರಿ. ಶ. ೧೪೯೯-೧೫೦೦ ಮತ್ತು ೧೫೧೩-೧೪ ಆಗುತ್ತದೆ.

II (a) ...ಈ ಸದಾಶಿವನಾಯಕರ್ ತಮಗೆ ರಾಜ್ಯಪಟ್ಟವಾದ ಶ್ರೀಮುಖ ಸಂವತ್ಸರದ ಶ್ರಾವಣ ಶುದ್ಧ ೩ ಆರಭ್ಯ ವಿಶ್ವಾವಸು ಸಂವತ್ಸರದ ವೈಶಾಖ ಶುದ್ಧ ೪

(ಕೆ. ನೃ. ವಿ. ಪು. ೩೮.)

(b)...ಸದಾಶಿವರಾಯನಾಯಕರ ತರುವಾಯ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೪೬೮ ನೆಯ ವಿಶ್ವಾವಸು ಸಂವತ್ಸರದ ವೈಶಾಖ ಶುದ್ಧ ೫ಯಲ್ಲಿ...

(ಅದೇ, ಪು. ೩೯.)

ಶ್ರೀಮುಖ ಸಂವತ್ಸರವು ಶಾ. ಶ. ೧೪೩೬ ಎಂದರೆ, ಕ್ರಿ. ಶ. ೧೫೧೪ ಮತ್ತು ೧೪೬೮ನೆಯ ಶಕವರ್ಷವು ಕ್ರಿ. ಶ. ೧೫೪೬ ಆಗುತ್ತದೆ.

III (a) ... ಈ ದೊಡ್ಡ ಸಂಕಣನಾಯಕಂ ತನಗೆ ರಾಜಪಟ್ಟವಾದ ವಿಶ್ವಾವಸು ನಾಮ ಸಂಪತ್ಸರದ ವೈಶಾಖ ಶುದ್ಧ ೫ ಯಾರಭ್ಯ ಕಾಳಯುಕ್ತಿ ಸಂವತ್ಸರದ ಆಶ್ವಯುಜ ಶುದ್ಧ ೪ ಯಲ್ಲಿಗೆ...

(ಅದೇ, ಪು. ೫೭.)

(b) ...ಆ ದೊಡ್ಡ ಸಂಕಣನಾಯಕರ ತರುವಾಯ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೪೮೧ ನೆಯ ಕಾಳಯುಕ್ತಿ ಸಂಪತ್ಸರದ ಆಶ್ವಯುಜ ಶುದ್ಧ ೫ ಯಲ್ಲಿ...

(ಅದೇ, ಪು. ೫೮.)

(c) ...ರಾಮರಾಯರ್ ವಿದ್ಯಾನಗರಿಯಿಂ ತೆರಳ್ದು ತುರುಷ್ಕರ ಮೇಲೆ ದಂಡೆತ್ತಿ ಪೋಗಿರಲ್ ರಕ್ತಾಕ್ಷಿ ಸಂವತ್ಸರದ ಮಾಘ ಮಾಸದೊಳ್...

(ಅದೇ, ಪು. ೫೯)

(d) ...ಶಾಲಿವಾಹನ ಶಕವರ್ಷ ೧೪೮೭ನೆಯ ರಕ್ತಾಕ್ಷಿ ಸಂವತ್ಸರದ ಮಾಘ ಬಹುಳದಲ್ಲಿ ರಕ್ಕಸದಂಗಡಿಯೆಂಬ ಸ್ಥಳದಲ್ಲಿ...

(ಅದೇ, ಪು.   )

(e) ...ಚಿಕ್ಕಸಂಕಣನಾಯಕಂ ಇಂತು ತನಗೆ ರಾಜಪಟ್ಟವಾದ ಶಾಲಿವಾಹನ ಶಕಾಬ್ದ ೧೪೮೧ ನೆಯ ಕಾಳಯುಕ್ತಿ ಸಂವತ್ಸರದ ಆಶ್ವಯುಜ ಶುದ್ಧ ೫ ಯಾರಭ್ಯ ಪ್ರಮೋದೂತ ಸಂವತ್ಸರದ ಕಾರ್ತಿಕ ಶುದ್ಧ ೪ ಯಂವರೆಗೆ...

(ಅದೇ, ಪು. ೬೦.)

(f) ...ಅನಂತರಂ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೪೯೩ನೆಯ ಪ್ರಮೋದೂತ ಸಂವತ್ಸರದ ಕಾರ್ತೀಕ ಶುದ್ಧ ೫ ಯಲ್ಲಿ...

(ಅದೇ, ಪು.   )

(g) ...ಇಂತಾ ರಾಮರಾಜನಾಯಕರ್ ತಮಗೆ ರಾಜಪಟ್ಟವಾದ ಶಾಲಿವಾಹನ ಶಕವರ್ಷ ೧೪೯೩ನೆಯ ಪ್ರಮೋದೂತ ಸಂವತ್ಸರದ ಕಾರ್ತೀಕ ಶುದ್ಧ ೫ ಯಾರಭ್ಯ ಚಿತ್ರಭಾನು ಸಂವತ್ಸರದ ಮಾರ್ಗಶಿರ ಶುದ್ಧ ೪ ಯುವರೆಗೆ...

(ಕೆ. ನೃ. ವಿ. ಪು. ೬೧.)

a) ನಲ್ಲಿ ಕಂಡಂತೆ ಶಾ. ಶ. ೧೪೬೮ನೆಯ ವಿಶ್ವಾವಸು ನಾಮ ಸಂವತ್ಸರವು ಕ್ರಿ. ಶ. ೧೫೪೫–೪೬ ಆಗುತ್ತದೆ. (b) ನಲ್ಲಿ ಕಂಡ ಶಾ. ಶ. ೧೪೮೧ನೆಯ ಕಾಳಯುಕ್ತಿ ಸಂವತ್ಸರವು ಕ್ರಿ. ಶ. ೧೮೫೮–೫೯ ಆಗುತ್ತದೆ. (c) ಮತ್ತು (d) ಗಳಲ್ಲಿಯ ಈ ರಕ್ತಾಕ್ಷಿ ಸಂವತ್ಸರವು ಶಾ. ಶ. ೧೪೮೭ ಹಾಗೂ ಕ್ರಿ. ಶ. ೧೫೬೪–೬೫ ಆಗುತ್ತದೆ. (e) ನಲ್ಲಿಯ ಶಾ. ಶ. ೧೪೮೧ನೆಯ ಕಾಳಯುಕ್ತಿ ಸಂವತ್ಸರವು ಕ್ರಿ. ಶ. ೧೫೫೮–೫೯ ಆಗುತ್ತದೆ. ಇಲ್ಲಿ ಹೇಳಿದ ಪ್ರಮೋದೂತ ಸಂವತ್ಸರವು ಶಾ. ಶ. ೧೪೯೩ ಹಾಗೂ ಕ್ರಿ. ಶ. ೧೫೭೦–೭೧ ಆಗುತ್ತದೆ. (f) ಹಾಗೂ (e) ಗಳಲ್ಲಿ ಕಂಡಂತೆ ಈ ಪ್ರಮೋದೂತವು ಶಾ. ಶ ೧೪೯೩ ಹಾಗೂ ಕ್ರಿ. ಶ ೧೫೭೦–೭೧ ಆಗುತ್ತದೆ. (g) ಮೇಲೆಯೇ ಹೇಳಿರುವಂತೆ ಈ ಪ್ರಮೋದೂತ ಸಂವತ್ಸರವು ಕ್ರಿ. ಶ. ೧೫೭೦–೭೧ ಆಗಿದ್ದು, ಚಿತ್ರಭಾನು ಸಂವತ್ಸರವು ಶಾ. ಶ. ೧೫೦೪ ಹಾಗೂ ಕ್ರಿ. ಶ. ೧೫೮೨-೮೩ ಆಗುತ್ತದೆ.

ಇಲ್ಲಿ ಕುತೂಹಲಕರ ಅಂಶವೊಂದನ್ನು ಗಮನಿಸಬಹುದು. (c) ಕಾಲಂ ನಲ್ಲಿ ಕವಿ ಲಿಂಗಣ್ಣನು ಸಾಲು ೧೧ ಮತ್ತು ೧೨ ರಲ್ಲಿ ನಿರೂಪಿಸಿದಂತೆ ಕೇವಲ ಸಂವತ್ಸರದ ಹೆಸರು ಮತ್ತು ಮಾಸ ಮಾತ್ರವನ್ನು ಹೇಳಿ, ಅದೇ ಪುಟದ ೨೭ನೆಯ ಸಾಲಿನಲ್ಲಿ ಕಂಡಂತೆ ರಕ್ತಾಕ್ಷಿ ಸಂವತ್ಸರದ ಶಾಲಿವಾಹನ ಶಕೆ ಹಾಗೂ ಪಕ್ಷವನ್ನು ಉಲ್ಲೇಖಿಸಿದ್ದಾನೆ.[1] ಕಾಲಮಾನ ಗಣನೆಯಲ್ಲಿ ಇದು ಅಚ್ಚುಕಟ್ಟಾಗಿ ಹಾಗೂ ನಿಖರವಾಗಿ ಪ್ರಸ್ತಾಪಿಸಿರುವುದು, ಈ ಕೃತಿಯ ಪ್ರಾಮಾಣಿಕತೆಯನ್ನು ಪ್ರಕಾಶಗೊಳಿಸುತ್ತದೆ. ಹೀಗೆಯೇ (e) ನಲ್ಲಿ ಕಂಡ ಪ್ರಮೋದೂತವನ್ನು (f) ನಲ್ಲಿ ಕಂಡಂತೆ ಶಾಲಿವಾಹನ ಶಕದೊಡನೆ ಹೋಲಿಸಬಹುದಾಗಿದೆ.

IV (a) ...ಶಾಲಿವಾಹನ ಶಕ ವರ್ಷ ೧೫೦೪ ನೆಯ ಚಿತ್ರಭಾನು ನಾಮ ಸಂವತ್ಸರದ ಶುದ್ಧ ೫ ಯಲ್ಲಿ ದೊಡ್ಡ ಸಂಕಣನಾಯಕರ ಜ್ಯೇಷ್ಠಪುತ್ರರಾದ ರಾಮರಾಜ ನಾಯಕರ್ಗೆ....

(ಅದೇ, ಪು. ೭೯.)

(b) ...ಈ ವೆಂಕಟಪ್ಪನಾಯಕರ್ ಚಿತ್ರಭಾನು ಸಂವತ್ಸರದ ಮಾರ್ಗಶಿರ ಶುದ್ಧ ೫ ಯಾರಭ್ಯ ಶುಕ್ಲ ಸಂವತ್ಸರ ಕಾರ್ತಿಕ ಬಹುಳ ೩೦ ಯುವರೆಗೆ...

(ಅದೇ, ಪು. ೭೯.)

1 ಪ್ರಖ್ಯಾತವಾದ ರಕ್ಕಸತಂಗಡಿಯ ಯುದ್ಧದ ಕಾಲವನ್ನು ನಿಖರವಾಗಿ ಪ್ರಸ್ತಾಪಿಸಿರುವುದು ಇಲ್ಲಿ ಗಮನಾರ್ಹವಾಗಿದೆ.

(a) ನಲ್ಲಿ ಕಾಣುವ, ಚಿತ್ರಭಾನು ಸಂವತ್ಸರದ ೧೫೦೫ನೆಯ ಶಾಲಿವಾಹನ ಶಕೆಯು ಕ್ರಿ. ಶ. ೧೫೮೨–೮೩ ಆಗುತ್ತದೆ. ಅದೇ ಕೆ. ನೃ. ವಿ. ದ ಪುಟ ೬೨ರ ಅಡಿ ಟಿಪ್ಪಣಿಯಲ್ಲಿನ (ಗ) ಪ್ರತಿಯಲ್ಲಿ ಚಿತ್ರಭಾನು ಸಂವತ್ಸರದ ಮಾರ್ಗಶಿರ ಶುದ್ಧ ೫ ಆರಭ್ಯ ಶುಕ್ಲ ಸಂವತ್ಸರದ ಕಾರ್ತೀಕ ಬಹುಳ ೩೦ ರ ವರೆಗೆ ಎಂಬುದಾಗಿ ಸ್ಪಷ್ಟ ಉಲ್ಲೇಖವಿದೆ. ಈ ಅಂಶವು, ಕೈಬಿಟ್ಟು ಹೋಗಿದ್ದ ಮಾಸವನ್ನು ತಿರುಗಿ ಉದ್ಧರಿಸಲ್ಪಟ್ಟಿದೆ (b) ನಲ್ಲಿ ಕಾಣುವ ಚಿತ್ರಭಾನು ಸಂವತ್ಸರವು (a) ನಲ್ಲಿಯೇ ಕಂಡಂತೆ ಶಾಲಿವಾಹನ ಶಕ ೧೫೦೫ ಹಾಗೂ ಕ್ರಿ. ಶ ೧೫೮೨–೮೩ ಆಗಿದೆ. ಇಲ್ಲಿ ಕಾಣುವ ಶುಕ್ಲ ಸಂವತ್ಸರವು ಶಾ. ಶ. ೧೫೫೨ (ಕ್ರಿ ಶ ೧೬೨೯-೩೦) ಆಗುತ್ತದೆ.

V (a) ...ಆ ಹಿರಿಯ ವೆಂಕಟಪ್ಪನಾಯಕರ ತರುವಾಯ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೫೫೨ ನೆಯ ಶುಕ್ಲ ಸಂವತ್ಸರದ ಮಾರ್ಗಶಿರ ಶುದ್ಧ ೧ ಯಲ್ಲಿ...

(ಕೆ. ನೃ. ವಿ. ಪು. ೮೨.)

(b) (1) ಅಡಿಟಿಪ್ಪಣಿಯಲ್ಲಿ—ಈ ವೀರಭದ್ರನಾಯಕರು ತಮಗೆ ರಾಜಪಟ್ಟವಾದ ಮೇಲೆ ಶಕವರ್ಷ ೧೫೬೦ ನೆಯ ಈಶ್ವರ ಸಂವತ್ಸರದ ಪುಷ್ಯ ಬಹುಳ ೧೧ ಯ ವರೆಗೆ...

(ಅದೇ, ಪು.)

(2) ...(ಅದೇ)—ಭುವನಗಿರಿಯ ದುರ್ಗದಿಂ ತೆರಳ್ದು ಶಾಲಿವಾಹನ ಶಕ ೧೫೬೧ ನೆಯ ಬಹುಧಾನ್ಯ ಸಂವತ್ಸರದ ವೈಶಾಖ ಶುದ್ಧದಲ್ಲಿ ವೇಣುಪುರದರಮನೆಗೆ ಬಂದು...

(ಅದೇ, ಪು.)

(3) (ಅದೇ)...ತಮಗೆ ರಾಜಪಟ್ಟ ಮಾದ ಶುಕ್ಲ ಸಂವತ್ಸರದ ಮಾರ್ಗಶಿರ ಶುದ್ಧ ೧೧ ಯ ವರೆಗೆ...

(ಅದೇ, ಪು.)

(c) ...ಇಂತು ರಕಾದುಲ್ಲಾಖಾನನ ದಾಳಿಯಿಂ ಶಾಲಿವಾಹನ ಶಕವರ್ಷ ೧೫೬೦ ನೆಯ ಈಶ್ವರ ಸಂವತ್ಸರ ಪುಷ್ಯ ಬಹಳ ದಶಮಿಯ ದಿವಸನೋಳ್ಕೇರಿಯ ಪತ್ತನಂ...

(ಅದೆ, ಪು. ೮೬)

(d) ...ಶಾಲಿವಾಹನ ಶಕ ವರ್ಷ ೧೫೬೧ ನೆಯ ಬಹುಧಾನ್ಯ ಸಂವತ್ಸರದ ಮಾರ್ಗಶಿರ ಮಾಸದಲ್ಲಿ ಬಿದರೂರ ಕೋಂಟೆಯರಮನೆಯೊಳ್...

(ಅದೇ, ಪು.)

(e) ...ಇಂತು ವೀರಭದ್ರನಾಯಕಂ ತನಗೆ ಪಟ್ಟವಾದ[2] ಶಾಲಿವಾಹನ ಶಕ ವರ್ಷ ೧೫೫೨ನೆಯ ಶುಕ್ಲನಾಮಸಂವತ್ಸರದ ಮಾರ್ಗಶಿರ ಶುದ್ಧ ೧೧[3] ಯುವರೆಗೆ...

(ಕೆ. ನೃ. ವಿ. ಪು. ೯೨)

(a) ನಲ್ಲಿ ಹೇಳಿದ ಶಾ. ಶ. ೧೫೫೨ನೆಯ ಶುಕ್ಲಸಂವತ್ಸರವು ಕ್ರಿ. ಶ. ೧೬೨೯-೩೦ ಆಗುತ್ತದೆ. ಇದೇ (b) ೩ನೆಯ ಅಡಿಟಿಪ್ಪಣಿ ಮತ್ತು (e) ನಲ್ಲಿ ಹೇಳಿರುವ ಅಂಶ ಗಳೂ ಇದಕ್ಕೆ ಹೋಲಿಕೆಯಾಗುತ್ತವೆ.

ಕೆಳದಿನೃಪವಿಜಯದ ೮೨ ನೆಯ ಪುಟದಲ್ಲಿ ಹೇಳಿರುವಂತೆ (b) 1 ಅಡಿಟಿಪ್ಪಣಿ ಯಲ್ಲಿ ಉಲ್ಲೇಖಿಸಿದ ಈಶ್ವರ ಸಂವತ್ಸರದ ೧೬೬೦ ನೆಯ ಶಾಲಿವಾಹನ ಶಕೆಯು ಕ್ರಿ ಶ ೧೬೩೭-೩೮ ಆಗುತ್ತದೆ. ಇದು (c) ಕಾಲಂನಲ್ಲಿ ಹೇಳಿದ ಕಾಲಾನುಕ್ರಮಣಿಕೆಗೆ ಸಮನಾಗುತ್ತದೆ. (b) 2 ಅಡಿಟಿಪ್ಪಣಿಯಲ್ಲಿ ಹೇಳಿದ ಶಾ. ಶ. ೧೫೬೧ ನೆಯ ಬಹು ಧಾನ್ಯ ಸಂವತ್ಸರವು ಕ್ರಿ. ಶ. ೧೬೩೮-೩೯ ಆಗುತ್ತದೆ. (d) ನಲ್ಲಿ ಉಲ್ಲೇಖಿತವಾದಂತೆ ಕೆಳದಿನೃಪವಿಜಯದ ಪುಟ ೮೬ ರಲ್ಲಿನ ಶಾಲಿವಾಹನ ಶಕೆಗೂ ಹಾಗೂ ಸಂವತ್ಸರ ಮಾನಾದಿಗಳಿಗೂ ಸಮನಾಗುತ್ತದೆ. ಅದೇ ಅಡಿಟಿಪ್ಪಣಿ (b) 3 ರಲ್ಲಿ ಹೇಳಿದ ಶುಕ್ಲ ಸಂವತ್ಸರದ ಶಾಲಿವಾಹನ ಶಕೆಯು ಕೆಳದಿನೃಪವಿಜಯದ ಪುಟ ೯೨ ರಲ್ಲಿಯೇ ವ್ಯಕ್ತ ಪಟ್ಟಿರುವಂತೆ ಆಗುವ ಶಾ. ಶ. ೧೫೫೨ ನೇ ಸಂವತ್ಸರವು ಕ್ರಿ. ಶ. ೧೬೨೯-೩೦ ಆಗು ತ್ತವೆ. (e) ನಲ್ಲಿ ಇವನ್ನು ಗುರುತಿಸಬಹುದಾಗಿದೆ. ಆದರೆ ಕೆಳದಿನೃಪವಿಜಯದ ೯೨ ನೆಯ ಪುಟದ ಅಡಿಟಿಪ್ಪಣಿಯಲ್ಲಿ ಕಂಡುಬರುವ ಪಾರ್ಥಿವ ಸಂವತ್ಸರವು ಶಾ ಶ. ೧೫೬೮ ಆಗಿದ್ದು ಕ್ರಿ. ಶ. ೧೬೪೫-೪೬ ಆಗುತ್ತದೆ.

ಸಪ್ತಮಾಶ್ವಾಸದಿಂದ ನವಮಾಶ್ವಾಸದ ವರೆಗೆ :

VII (a) ...ಆ ವೀರಭದ್ರನಾಯಕರ ತರುವಾಯ ಸ್ವಸ್ತಿ ಶ್ರೀ ವಿಜಯಾ ಭ್ಯುದಯ ಶಾಲಿವಾಹನ ಶಕವರ್ಷ ೧೫೬೮ ನೆಯ ಪಾರ್ಥಿವ ಸಂವತ್ಸರದ ಮಾರ್ಗಶಿರ ಶುದ್ಧ ೧೨ ಯಲ್ಲಿ ...

(ಅದೇ. ಪು. ೯೩)

ಅಡಿಟಿಪ್ಪಣಿ (1) (ಮು) ಪ್ರತಿ ಈ ಶಿವಪ್ಪನಾಯಕರು ತಮಗೆ ರಾಜಪಟ್ಟ ವಾದ ಪಾರ್ಥಿವ ಸಂವತ್ಸರದ ಮಾರ್ಗಶಿರ ಶುದ್ಧ ೧೨ ಆರಭ್ಯ ಶಾರ್ವರಿ ಸಂವತ್ಸರದ ಆಶ್ವಯುಜ ಶು. ೧ ವರೆಗೆ...

(ಅದೇ. ಪು.)

2. ಅಡಿಟಿಪ್ಪಣಿಯಲ್ಲಿ 1 ವೀರಭದ್ರನಾಯಕರು ತನಗೆ ಪಟ್ಟವಾದಾರಭ್ಯ ಪಾರ್ಥಿವ ...(ಅದೇ. ಪು)
2. ಸಂವತ್ಸರದ ಮಾರ್ಗಶಿರ ಶುದ್ಧ ೧ ದಾರಭ್ಯ ಪಾರ್ಥಿವ ಸಂವತ್ಸರದ ಮಾರ್ಗಶಿರ ಶುದ್ಧ ೧೧...(ಅದೇ, ಪು.).

3. ಅದೇ

(b) ...ಇಂತಾ ಶಿವಪ್ಪನಾಯಕಂ ತಮಗೆ ರಾಜಪಟ್ಟವಾದ ಶಾಲಿವಾಹನಶಕ ವರ್ಷ ೧೫೬೭ನೆಯ ಪಾರ್ಥಿವ ಸಂವತ್ಸರದ ಮಾರ್ಗಶಿರ ಶುದ್ಧ ದ್ವಾದಶಿಯಾರಭ್ಯ ಶಾರ್ವರಿ ಸಂವತ್ಸರದ ಆಶ್ವಯುಜ ಶುದ್ಧ ೧ ರವರೆಗೆ...

(ಕೆ. ನೃ. ವಿ. ಪು. ೧೦೨.)

(c) ...ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೫೮೨ನೆಯ ಶಾರ್ವರಿ ಸಂವತ್ಸರದ ಆಶ್ವಯುಜ ಶುದ್ಧ ೧ ಗುಲ್ಲಿ...

(ಅದೇ, ಪು. ೧೦೩.)

(d) ...ಇಂತೀ ಚಿಕ್ಕವೆಂಕಟಪ್ಪನಾಯಕಂ ತನಗೆ ರಾಜ್ಯಪಟ್ಟವಾದ ಶಾಲಿವಾಹನಶಕ ವರ್ಷ ೧೫೮೨ ನೆಯ ಶಾರ್ವರಿ ಸಂವತ್ಸರದ ಆಶ್ವಯುಜ ಶುದ್ಧ ೧ ಯಾರಭ್ಯ ಪ್ಲವ ಸಂವತ್ಸರದ ಭಾದ್ರಪದ ಶುದ್ಧ ೧೪ ವರೆಗೆ...

(ಅದೇ, ಪು. ೧೦೪.)

ಕಾಲಂ (a). ಅಡಿಟಿಪ್ಪಣಿ (a) 1 ಮತ್ತು (b) ನಲ್ಲಿ ಹೇಳಿದ ಶಾಲಿವಾಹನ ಶಕ ೧೫೬೭ ನೆಯ ಪಾರ್ಥಿವ ಸಂವತ್ಸರವು ಕ್ರಿ. ಶ. ೧೬೪೫-೪೬ ಆಗುತ್ತದೆ. (b) ನಲ್ಲಿ ಹೇಳಿದ ಶಾರ್ವರಿ ಸಂವತ್ಸರವು (c) ನಲ್ಲಿ ಕಂಡಂತೆ ಹಾಗೂ ಕೆಳದಿನೃಪವಿಜಯದಲ್ಲಿನ ಪುಟ ೧೦೩ರಲ್ಲಿ ಉಲ್ಲೇಖಿಸಗೊಂಡಂತೆ ಶಾ. ಶ. ೧೫೮೨ ಅಥವಾ ಕ್ರಿ. ಶ. ೧೬೬೦-೬೧ ಆಗುತ್ತದೆ ಇದು (d) ನಲ್ಲಿ ಕಂಡುಬರುವ ಕಾಲಮಾನಾದಿಗಳಿಗೂ ಸಮನಾಗುತ್ತದೆ.

VIII (a) ಆ ಚಿಕ್ಕ ವೆಂಕಟಪ್ಪನಾಯಕರ ತರುವಾಯ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೫೮೪ ನೆಯ ಪ್ಲವ ಸಂವತ್ಸರದ ಭಾದ್ರಪದ ಶುದ್ಧ ೧೫ ಯಲ್ಲಿ...

(ಅದೇ, ಪು. ೧೦೫.)

(a) 1 ಅಡಿಟಿಪ್ಪಣಿ...ಭದ್ರಪ್ಪನಾಯಕರು ತಮಗೆ ರಾಜ್ಯಪಟ್ಟವಾದ ಪ್ಲವ ಸಂವತ್ಸರದ ಭಾದ್ರಪದ ಶು. ೧೫ ಆರಭ್ಯ ಶೋಭಕೃತು ಸಂವತ್ಸರದ ಫಾಲ್ಗುಣ ಶು. ೧೦ ರ ವರೆಗೆ...

(ಅದೇ, ಪು. ೧೦೫)

(b) ...ಈ ಭದ್ರಪ್ಪನಾಯಕರ್ ತಮಗೆ ಪಟ್ಟವಾದ ಶಾಲಿವಾಹ ಶಕ ವರ್ಷ ೧೫೮೪ ನೆಯ ಪ್ಲವ ಸಂವತ್ಸರದ ಭಾದ್ರಪದ ಶುದ್ಧ ೧೫ ಯಾರಭ್ಯ ಶೋಭಕೃತ್ ಸಂವತ್ಸರದ ಫಾಲ್ಗುಣ ಶುದ್ಧ ೧...

(ಅದೇ, ಪು. ೧೧೦)

(c) ...ಭದ್ರಪ್ಪನಾಯಕಂ ರಾಜ್ಯವಾಳ್ದ ತರುವಾಯ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೫೮೬ ನೆಯ ಶೋಭಕೃತು ಸಂವತ್ಸರದ ಫಾಲ್ಗುಣ ಶುದ್ಧ ೧೦ ಯಲ್ಲಿ ...

(ಅದೇ, ಪು. ೧೧೦)

(d) ...ಆ ಸೋಮಶೇಖರನಾಯಕರ್ ತಮಗೆ ಪಟ್ಟವಾದ ಶೋಭಕೃನ್ನಾಮ ಸಂವತ್ಸರದ ಫಾಲ್ಗುಣ ಶುದ್ಧ ೧೦ ಯಾರಭ್ಯ ವಿರೋಧಿಕೃತ್ ಸಂವತ್ಸರದ ಮಾರ್ಗಶಿರ ಶುದ್ಧ ೧೧ ಯು ವರೆಗೆ...

(ಕೆ. ನೃ. ವಿ. ಪು. ೧೧೧)

(e) ...ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೫೯೪ ನೆಯ ವಿರೋಧಿಕೃತ್ ಸಂವತ್ಸರದ ಫಾಲ್ಗುಣ ಬಹುಳ ೧೦ ಯಲ್ಲಿ...

(ಅದೆ, ಪು. ೧೧೫)

(a) ಅಡಿಟಿಪ್ಪಣಿ (a) 1 ಮತ್ತು (b) ನಲ್ಲಿ ಹೇಳಿದ ಪ್ಲವಸಂವತ್ಸರದ ೧೫೮೪ ನೆಯ ಶಾಲಿವಾಹನ ಶಕೆಯು ಕ್ರಿ. ಶ. ೧೬೬೧-೬೨ ಆಗುತ್ತದೆ. ಇಲ್ಲಿ ಹೇಳಿದ (a) a ಅಡಿಟಿಪ್ಪಣಿಯಲ್ಲಿನ ಶಾ. ಶ. ೧೫೮೬ ನೆಯ ಶೋಭಕೃತ್ ಸಂವತ್ಸರವು ಕ್ರಿ. ಶ. ೧೬೬೩-೬೪ ಆಗಿದ್ದು (b), (c) ಮತ್ತು (d) ಗೆ ಸಮನಾಗುತ್ತದೆ. (d) ಮತ್ತು (e) ನಲ್ಲಿ ಉಲ್ಲೇಖಿಸಿದ ಶಾ. ಶ. ೧೫೯೪ ನೆಯ ವಿರೋಧಿಕೃತ್ ಸಂವತ್ಸರವು ಕ್ರಿ. ಶ. ೧೬೭೧-೭೨ ನೇ ಸಾಲನ್ನು ಒಳಗೊಂಡಿರುತ್ತದೆ.

IX (a) ...ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೫೪೫ ನೆಯ ಪರಿಧಾವಿನಾಮ ಸಂವತ್ಸರದ ಶ್ರಾವಣ ಶುದ್ಧ[4] ಯ ದಿವಸವಾ...

(b) ....ಶಾಲಿವಾಹನ ಶಕ ವರ್ಷ ೧೬೧೨ ನೆಯ ಶುಕ್ಲ[5] ಸಂವತ್ಸರದ ವೈಶಾಖ ಬಹುಳದಲ್ಲಿ ವೇಣುಪುರಕ್ಕೆ ಬಂದಿಳಿದಂ...

(ಅದೇ, ಪು. ೧೪೧)

(c) ...ಶುಕ್ಲ ಸಂವತ್ಸರದಲ್ಲಿ ಏಕಚ್ಛತ್ರಾಧಿಪತಿಯಾದ ಡಿಲ್ಲಿ-ಯಂವರಂಗಜೇಬ ಪಾತುಶಾಹನ ಮೇಲೆ ಕೈಗೆಯ್ದು...

(ಅದೇ, ಪು. ೧೪೪)

(d) ...ಶಾಲಿವಾಹನ ಶಕವರ್ಷ ೧೫೯೪ ನೆಯ ವಿರೋಧಿಕೃತ್ ಸಂವತ್ಸರದ ಫಾಲ್ಗುಣ ಶುದ್ಧ ೧೦ ಆರಭ್ಯ ಈಶ್ವರನಾಮ ಸಂವತ್ಸರದ ಶ್ರಾವಣ ಶುದ್ಧ ೧೪ ವರೆಗೆ...

(ಅದೇ, ಪು. ೧೪೭)

ಇಲ್ಲಿ (a) ನಲ್ಲಿ ಕಂಡ ಶಾ. ಶ. ೧೫೯೫ ನೆಯ ಪರಿಧಾವಿನಾಮ ಸಂವತ್ಸರವು ಕ್ರಿ. ಶ ೧೬೮೨-೭೩ ಆಗುತ್ತದೆ. (b) ನಲ್ಲಿ ಕಂಡ ಶಾ. ಶ. ೧೬೧೨ ನೆಯ ಶುಕ್ಲ ಸಂವತ್ಸರವು ಕ್ರಿ. ಶ. ೧೬೮೯-೯೦ ಆಗುತ್ತದೆ. (c) ನಲ್ಲಿ ಉಲ್ಲೇಖಿಸಿದಂತೆ ಇದೇ ಕಾಲದಲ್ಲಿಯೇ ಚೆನ್ನಮ್ಮಾಜಿಯು ಔರಂಗಜೇಬನೊಡನೆ ಹೋರಾಟ ನಡೆಸಿರುವುದು ವ್ಯಕ್ತಪಟ್ಟಿರುತ್ತದೆ. (d) ನಲ್ಲಿ ಹೇಳಿದ ಶಾ. ಶ. ೧೫೯೪ ನೆಯ ವಿರೋಧಿಕೃತ್

4. ಅ. ಟಿ. ಯಲ್ಲಿ "೪" ಎಂದಿದೆ. (ಮ) (ಕೃತಿ. ಕೆ. ನೃ. ವಿ. ಪು. ೧೧೬)

5. ಅ. ಟಿ. (ಮ) ಕೃತಿಯಲ್ಲಿ ಶುಭಕೃತು ಎಂದಿದೆ. (ಕೆ. ನೃ. ವಿ. ಪು. ೧೪೧)

ಸಂವತ್ಸರವು ಕ್ರಿ ಶ ೧೬೭೧-೭೨ ಆಗುತ್ತದೆ. ಇದು (a) ಕಾಲದಲ್ಲಿ ಕೆಳದಿ ನೃಪ ವಿಜಯದ ಪುಟ ೧೧೬ ರಲ್ಲಿ ಕಂಡಂತೆ ಸರಿಸಮನಾಗುತ್ತದೆ. ಇಲ್ಲಿ ಹೇಳಿದ ಈಶ್ವರ ಸಂವತ್ಸರವು, ೧೬೨೦ ನೆಯ ಶಾಲಿವಾಹನ ಶಕವರ್ಷವೂ ಆಗುತ್ತ ಕ್ರಿ. ಶ ೧೬೯೭-೯೮ಕ್ಕೆ ಸರಿಹೋಗುತ್ತದೆ. ಇದನ್ನು ಕೆಳದಿನೃಪವಿಜಯದ ೧೪೮ ನೆಯ ಪುಟದಲ್ಲಿಯೂ ಕಾಣಬಹುದು.

ದಶಮಾಶ್ವಾಸ

X (1)...ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೬೨೦ ನೆಯ ಈಶ್ವರ ಸಂವತ್ಸರದ ಶ್ರಾವಣ ಶುದ್ಧ ೧೪ ಯಲ್ಲಿ...

(ಕೆ. ನೃ. ವಿ. ಪು. ೧೪೮)

(2) ...ಬಸವಪ್ಪ ನಾಯಕರ್ಗೆ ವೇಣುಪುರದರ ಮನೆಯಲ್ಲಿ ರಾಜಪಟ್ಟ...[6]

(ಅದೇ, ಪು. ೧೪೮)

(3) ...ರಾಜ್ಯ ಪ್ರತಿಪಾಲಿಸಗೆಯ್ಯುತ್ತುಂ ತತ್ಸಂವತ್ಸರದ ಮಾಘಮಾಸದಲ್ಲಿ ಕುಟರಹಳ್ಳಿ ಚನ್ನವೀರವೊಡೆಯರ...

(4) ...ಚೆನ್ನಮ್ಮಾಜಿಯವರ ಕಾಲದಲ್ಲಿ ಪ್ರಜೋತ್ಪತ್ತಿ ನಾಮ ಸಂವತ್ಸರದ ಕಾರ್ತೀಕ ಶುದ್ಧ ೧೦ ಯಲ್ಲಿ ಸೋಮಶೇಖರ ನಾಯಕರ್ ಜನಿಸಿದರೆಂದು[7]...

(ಅದೇ, ಪು. ೧೪೯)

(5) ...ಚೆನ್ನಮ್ಮಾಜಿಯವರ ಗರ್ಭದಲ್ಲಿ ವಿಕ್ರಮಸಂವತ್ಸರದ ವೈಶಾಖ ಶುದ್ಧ ೧ ಯಲ್ಲಿ ವೀರಭದ್ರನಾಯಕರ್ ಜನಿಸಿದರ್[8]....

(ಅದೇ, ಪು.)

(6) ...ಸೋಮಶೇಖರನಾಯಕರ್ಗೆ ಚಿತ್ರಭಾನು ಸಂವತ್ಸರದ ವೈಶಾಖ ಶುದ್ಧ ೧ ಯಲ್ಲಿ ಚಿಲನೂರ ವೀರಪ್ಪನ ಮಗಳ್[9]...

(ಅದೇ, ಪು.)

(7) ...ಸ್ವಾತಂತ್ರ್ಯದಲ್ಲಿ ರಾಜ್ಯವಾಳುತ್ತಿರ್ದ ಪ್ಲವಸಂವತ್ಸರದ ಫಾಲ್ಗುಣ ಶುದ್ಧ ೩ ಯಲ್ಲಿ...

(ಅದೇ, ಪು.)

---

6. ಅ. ಟಿ. ಒಕಗ ಪ್ರತಿಯಲ್ಲಿ ಹೀಗಿದೆ–ಬಳಿಕ ಆ ಬಸವಪ್ಪನಾಯಕರ್ ತಮಗೆ ರಾಜಪಟ್ಟವಾದ ಈಶ್ವರ ಸಂವತ್ಸರದ ಶ್ರಾವಣ ಶುದ್ಧ ೧೪ ಆರಭ್ಯ ಜಯ ಸಂವತ್ಸರದ ಪುಷ್ಯ ಬಹುಳ ೧೦ ವರೆಗೆ ವರ್ಷ ೧೬. ತಿಂಗಳು ೫ ದಿವಸ ೧೧ ಪರ್ಯಂತರಂ ಸತ್ಯ ಧರ್ಮದಿಂ ರಾಜ್ಯಪ್ರತಿಪಾಲನಂಗೈದ ಪರಿ ವಿವರಿಯಿಸಂ ಪದ್ಯರೂಪದಿಂ ಪೇಳ್ದಿಪನದೆಂತೆಂದೊಡೆ ..

7, 8, ಪುಟ 11 ರಲ್ಲಿ ಉಲ್ಲೇಖಿಸಿದ ಸೋಮಶೇಖರನಾಯಕ, ವೀರಭದ್ರನಾಯಕ ಮತ್ತು ಬಸಪ್ಪ ನಾಯಕರ ಜನನ ಕಾಲದ ತೇದಿಗಳು ಗಮನಾರ್ಹವಾಗಿವೆ; ಹಾಗೂ ಕುತೂಹಲಕರವಾಗಿದೆ.

(8) ...ವೀರಭದ್ರನಾಯಕರ್ಗೆ ಸರ್ವಧಾರಿ ಸಂವತ್ಸರದ ಮಾರ್ಗಶಿರ ಬಹುಳ ೫ ಲ್ಲಿ[10]....

(ಅದೇ, ಪು.)

(9) ...ಸೋಮಶೇಖರನಾಯಕರ್ ರಾಜ್ಯವಾಳುತ್ತಿದ್ದ ಕಾಲದಲ್ಲಿ ಪ್ಲವ ಸಂವತ್ಸರದ ಮಾರ್ಗಶಿರ ಶುದ್ಧ ೩ ಯಲ್ಲಿ ಈ ಬಸವಪ್ಪನಾಯಕರ್ ಜನಿಸಿದರ್[11]...

(ಅದೇ, ಪು. ೧೫೦)

(10) ...ತನಗೆ ಪಟ್ಟವಾದ ಈಶ್ವರ ಸಂವತ್ಸರ ಫಾಲ್ಗುಣಮಾಸದಲ್ಲಿ ತಮ್ಮ ಮಾತೃ ಚನ್ನಮ್ಮಾಜಿಯವರ್...

(ಅದೇ, ಪು.)

(11) ...ಚನ್ನಮ್ಮಾಜಿಯವರ ತದ್ದಿವಸದೊಳ್ ಪ್ರತಿವರ್ಷ ಶ್ರಾವಣ ಶುದ್ಧ ೧೪ ಯ ದಿವಸದೊಳನೇಕ ಜಂಗಮಾತಿಥಿ[12]...

(ಅದೇ, ಪು. ೧೫೩)

(12) .... ಈ ಬಸವಪ್ಪನಾಯಕರ್ ತಮಗೆ ಪಟ್ಟವಾದ ಶಾಲಿವಾಹನ ಶಕ ವರ್ಷ ೧೬೨೦ ನೆಯ ಈಶ್ವರ ಸಂವತ್ಸರದ ಶ್ರಾವಣ ಶುದ್ಧ ೧೪ ಯ ಆರಭ್ಯ ಜಯ ಸಂವತ್ಸರದ ಆಶ್ವಯುಜ[13] ...ವರ್ಷ

(ಅದೇ, ಪು.)

(13) ...ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೬೩೬ ನೆಯ ಜಯಸಂವತ್ಸರದ ಪುಷ್ಯ ಬಹುಳ ೧೦ ಯಲ್ಲಿ...

(ಅದೇ, ಪು.)

(14) [14]ವೈರಿಗಳುಪಟಳದಿಂ ಸವ
ಣೂರ ನಬಾಬಂ ಸ್ವದೇಶದೊಳ್ ನಿತ್ತರಿಸ

(ಅದೇ, ಪು. ೧೫೪)

(15) ಚಿಂತನಕಲ್ಲರಸನ ಮದ
ಮಂ ತಗ್ಗಿಸಿ ಧುರದೊಳಾಂತ ಸಿದ್ದೋಜಿಯ ಸ
ದ್ದಂತಿಯುಮಂ ಪಿಡಿದೊಪ್ಪುವ[15]
ಸಂತೆಯಬೆನ್ನೂರ ಕೋಂಟೆಯುಂ ವಶಗೈದಂ ॥

(ಅದೇ, ಪು. ೧೫೮)

---

9. ಮತ್ತು 10 ರ ಉಲ್ಲೇಖಗಳು ಜನನ ತೇದಿ ಮತ್ತು ವಿವಾಹದ ಕರಾರುವಾಕ್ಕು ತೇದಿಗಳನ್ನು ಕೊಟ್ಟಿರುವುದೂ ಕುತೂಹಲಕರವಾಗಿದೆ.
12. ಚೆನ್ನಮ್ಮಾಜಿಯ ಮರಣಕಾಲ 29–3–1697 ಕ್ಕೆ ಮುಂಚೆ ಆಗಿರಬೇಕೆಂದೆನಿಸುತ್ತದೆ. (Assentos, IV. pp. 487–8)
13. ಅ. ಟಿ. (ಮ) ಪ್ರತಿಯಲ್ಲಿ...ವಾರಭ್ಯ ಜಯ ಸಂವತ್ಸರದ ಪುಷ್ಯ ಬ. ೧ ವರೆಗೆ ಎಂಬ ಉಲ್ಲೇಖವಿದೆ.
14. ಅ. ಟಿ. (ಕ) ಪ್ರತಿಯಲ್ಲಿ ಮನ್ಮಥ ಸಂವತ್ಸರದಲ್ಲು ಎಂದಿದೆ.
15. ಅ. ಟಿ. (ಕ) ಪ್ರತಿಯಲ್ಲಿ ಹೇವಿಳಂಬಿ ಸಂವತ್ಸರದ ಮಾಘ ಮಾಸದಲ್ಲಿ ಎಂದಿದೆ.

(16) ತೆರಳಿಸುತುಂ ಪ್ಲವಸಂವ
ತ್ಸರದೊಳ್ ಶೃಂಗೇರಿಯಿಂದೆ ತತ್ಸ್ವಾಮಿಗಳಂ ।
ಬರಿಯಿಸಿ ತಚ್ಚೈತ್ರದ ಭಾ
ಸುರಮೇಚಕಪಕ್ಷದಾ ತ್ರಯೋದಶಿ ದಿನದೊಳ್ ॥

(ಕೆ. ನೃ. ವಿ. ಪು. ೧೫೯)

(17) ...ಬಳಿಕ್ಕಾ ಪ್ಲವಸಂವತ್ಸರದ ಮಾರ್ಗಶಿರ ಶುದ್ಧ ತದಿಗೆಯೊಳ್ ತಮ್ಮನುಜರಾದ ವೀರಭದ್ರನಾಯಕರ್ಗೊರ್ವ ಕುಮಾರನುದಿಸಲಾ ಕುಮಾರಂಗೆ ಬಸವಪ್ಪನಾಯಕನೆಂದು ನಾಮಕರಣಂ ರಚಿಸಿ[16]...

(ಅದೇ, ಪು.)

(18) ...ಮತ್ತಮಾ ಸಂವತ್ಸರದ ಫಾಲ್ಗುಣ ಬಹುಳ ತದಿಗೆಯೊಳ್ ನಿರ್ವಾಣಯ್ಯನವರ ಕುಮಾರಿ ನೀಲಮ್ಮಾಜಿಯುವರನತ್ಯಂತೋತ್ಸವದಿಂ ವಿವಾಹವಾಗಿ ಸುಖಮಿರುತಿರ್ದು...

(ಅದೇ, ಪು.)

(19) ...ಗುತ್ತಳದ ಹನುಮಂತನಾಯಕಂ ಗಗನಮಹಲ ಚಾವಡಿಯೊಳ್ ಬೇಟಿಗೊಂಡು ಸನ್ಮಾನಂ[17] ಬಡಿಸಿ ತೆರಳ್ಚಿಸಿದನಂತರಂ...

(ಅದೇ, ಪು.)

(20) [18]ಶುಭಕೃದ್ವತ್ಸರದೊಳ್ ಭೂ
ವಿಭು ತಾಂ ಕೊಲ್ಲೂರಿಗೈದಿ ಮೂಕಾಂಬಿಕೆಯಂ

(ಅದೇ, ಪು. ೧೬೦)

(21) ಬಳಿಕಲ್ಲಿಂ ಗೋಕರ್ಣ
ಕ್ಕಿಳಿದಾ ಕ್ಷೇತ್ರದ ಮಹಾಬಲೇಶ್ವರನಂ ತಾಂ ।
ನಲವಿಂದರ್ಚಿಸಿ ಕೇರಳ
ಕಿಳಿದೊಡನೆಳ್ತಂದು[19] ವೇಣುಪುರಮಂ ಸಾರ್ದಂ ॥

(ಅದೇ, ಪು. ೧೬೧)

---

16. ೧೬ನೆಯ ದೊರೆಯಾದ ಬಸವಪ್ಪನಾಯಕನ ಜನನ ದಿನಾಂಕವೂ ಕುತೂಹಲಭರಿತವಾಗಿದೆ.

17. ಅ. ಟಿ. (ಕಗ) ಪ್ರತಿಯಲ್ಲಿನ ಉಲ್ಲೇಖವು ಹೀಗಿದೆ. "ತದ್ವ್ರಣಭಾರಮಂ ತೀರ್ಚಿಸಿ ಕಳುಪಲೀ ವಾರ್ತೆಯಂ ಕೇಳ್ದನಂತರಮೈತಂದ ಬಳ್ಕರೆ ಶೋಭಕೃತ್ಸಂವತ್ಸರದ ಆಶ್ವೀಜ ಬಹುಳ ೩ ಯಲ್ಲು ರಾಮಪ್ಪನಾಯಕನನಧಿಕಸನ್ಮಾನಂ"

18. ಅ. ಟಿ. (ಕ) ಪ್ರತಿಯಲ್ಲಿ "ಶುಭಕೃತು ಸಂವತ್ಸರದ ಆಶ್ವೀಜ ಬ. ೫ ಲ್ಲು ವಿಭುತಾಂ" ಹಾಗೂ (ಗ) ಪ್ರತಿಯಲ್ಲಿ "ಶೋಭಕೃತ್ಸಂವತ್ಸರದೊಳ್ ಮಾಪ ನಿರ್ವಾಣಯ್ಯನವರ್" ಎಂಬ ಉಲ್ಲೇಖವೂ ಇರುತ್ತದೆ.

19. ಅದೇ (ಕ) ಪ್ರತಿಯಲ್ಲಿ "ಕ್ರೋಧಿ ಸಂವತ್ಸರದ ವೈಶಾಖ ೩ ಯೊಳ್" ಎಂದಿದೆ.

(22) [20]ರಾಣೋಜೀ ಘೋರ್ಪಡೆಯಂ
ಮಾಣದೆ ತಾಂ ಪೈಜೆಯಲ್ಲಿಖಾನಂ...

(ಕೆ. ನೃ. ವಿ. ಪು.)

(23) ...ಕ್ರೋಧಿ ಸಂವತ್ಸರದ ಆಷಾಢ ಶುದ್ಧ ೧೩ ಯೊಳ್ ಸೀರೆಯಂ ಕೋಟೆಯಂ ಕೊಂಡು....

(ಅದೇ, ಪ್ರ. ೧೬೪)

(24) ಮತ್ತಮದಲ್ಲದೆ ಕ್ರೋಧಿನಾಮ ಸಂವತ್ಸರದ ಫಾಲ್ಗುಣಮಾಸದೊಳ್...

(ಅದೇ, ಪು.)

(25) ...ಮತ್ತಮದಲ್ಲದಾ ಸೋಮಶೇಖರನಾಯಕಂ ರಾಕ್ಷಸಸಂವತ್ಸರದ ಮಾರ್ಗಶಿರ ಶುದ್ಧ ಸಪ್ತಮಿಯಲ್ಲಿ...

(ಅದೇ, ಪು. ೧೬೫)

(26) ...ರಾಜಾಲಯಮಂ ಸಾರ್ದು ವರ್ತಿಸುತ್ತುಮಿರಲ್ ನಳಸಂವತ್ಸರದ ಚೈತ್ರದೊಳ್...

(ಅದೇ, ಪು.)

(27) ...ಮತ್ತಮದಲ್ಲದೆ ಪಿಂತೆ ಪರಾಭವ ಸಂವತ್ಸರದೊಳ್....

(ಅದೇ, ಪು.)

(28) ಕೀಲಕಾಬ್ದದೊಳೆ ತದ್ಭೂ
ಪಾಲಂ ಕೊಲ್ಲೂರಿಗೈದಿ ಮೂಕಾಂಬಿಕೆಯಂ ।

(ಅದೇ, ಪು.)

(29) ....ಪಿಂಗಳಾಬ್ದದೊಳೆ ತನ್ನೃಪ
ಪುಂಗವನುರುಭುವನಗಿರಿಯನ್ವೆದೆ ಬಳಿಕ್ಕಂ ।

(ಅದೇ, ಪು. ೧೬೮)

(30) ಈ ಸೋಮಶೇಖರನಾಯಕರ್ ಪಟ್ಟವಾದ ಶಾಲಿವಾಹನ ಶಕವರ್ಷ ೧೬೩೭ನೆಯ ಜಯ ಸಂವತ್ಸರದ ಪುಷ್ಯ ಬಹುಳ ೧೦ ಆರಭ್ಯ ಸಿದ್ಧಾರ್ಥಿ ಸಂವತ್ಸರದ ವೈಶಾಖ[21] ಬಹುಳ ೩ ಯಲ್ಲಿಗೆ...

(ಅದೇ, ಪು. ೧೭೦)

---

20. ಅದೇ (ಒಕ) ಪ್ರತಿಯಲ್ಲಿ "ಆನಂದ ಸಂವತ್ಸರದಲ್ಲಿ" ಎಂದಿದೆ.

21. (a) ಅ. ಟಿ. (ಮ) ಪ್ರತಿಯಲ್ಲಿ "ಜ್ಯೇಷ್ಠ"ವೆಂದಿದೆ ಹಾಗೂ "ಅಲ್ಲಿಬಿದರೂರ್ಗೆ ತೆರಳ್ಚಿಸಿಕೊಂಡು ಬರಲ್ ಆ ಬಹುಳ ೫ ಗುರುವಾರ ಕೊಪ್ಪಲ ಮಠದಲ್ಲಿ ಸಮಾಧಿಯಾಯಿತು" ಎಂಬ ಉಲ್ಲೇಖ ವಿದೆ.
(b) "ವಿಶ್ವಾವಸು ಸಂವತ್ಸರದ ಜ್ಯೇಷ್ಠ ಬಹುಳ ೨ಯಲ್ಲು ಇವರ ಅನುಜ ವೀರಭದ್ರನಾಯಕರ್ಗೆ ಕೊಪ್ಪಲ ಮಠದಲ್ಲು ಸಮಾಧಿಯಾಯಿತು" ಎಂದಿದೆ. (ಅದೇ, ಪು. ೧೭೦).

(1) ನೇ ಕಾಲಂನಲ್ಲಿ ಹೇಳಿರುವ ಶಾ. ಶ ೧೬೨೦ ನೆಯ ಈಶ್ವರಸಂವತ್ಸರವು ಕ್ರಿ. ಶ. ೧೬೯೭-೯೮ ಕ್ಕೆ ಸಮನಾಗುತ್ತದೆ. (2), (3), (10), (11), (12) ರಲ್ಲಿ ಕೆಳದಿನೃಪವಿಜಯದ ಪುಟ ೮೨ರ ಅ. ಟಿ. ಯಲ್ಲಿ ಲಿಂಗಣ್ಣನು "ವೀರಭದ್ರನಾಯಕರು ತಮಗೆ ರಾಜಪಟ್ಟವಾದ ಮೇಲೆ ಶಕ ವರ್ಷ ೧೫೬೦ನೆಯ ಈಶ್ವರ ಸಂವತ್ಸರದ ..... ಎಂದಿರುವುದು. ಇತರ ಪುಟಗಳಲ್ಲಿ ಕಂಡುಬರುವಂತೆ ಈ ಸಂವತ್ಸರಗಳ ಕಾಲ ಗಣನೆಯು ಲೆಖ್ಖಾಚಾರದಲ್ಲಿ ಹೊಂದಿಕೆಯಾಗಿ ಕಂಡು ಬಂದಿರುವುದು ನಿಜಕ್ಕೂ ಗಮನಾರ್ಹವೂ ಹಾಗೂ ಕುತುಹಲಕರವೂ ಆಗಿದೆ. (13)ರಲ್ಲಿ ಹೇಳಿದ ಜಯ ಸಂವತ್ಸರದ ಶಾಲಿವಾಹನ ಶಕೆ ೧೬೩೬ ರಾಬರ್ಟ್ ಸಿವೆಲ್‌ರವರು ಕ್ರಿ. ಶ. ೧೭೧೪-೧೫ ಆಗುತ್ತದೆ ಎಂದು ಹೇಳಿದ್ದಾರೆ.[22] (30) ರಲ್ಲಿ ಹೇಳಿದ ಶಾ. ಶ. ೧೬೩೭ನೆಯ ಜಯಸಂವತ್ಸರವು ಕ್ರಿ. ಶ. ೧೭೧೪-೧೫ ಆಗುತ್ತದೆ. ಈ ಕಾರಣಗಳಿಂದಲೇ ಕೆಳದಿನೃಪವಿಜಯದಲ್ಲಿ ಪುಟ ೧೫೩ರಲ್ಲಿ ಹೇಳಿದ ಕಾಲವು ಅದೇ ಪುಟ ೧೭೦ರಲ್ಲಿ ಉಲ್ಲೇಖಿಸಿರುವಂತೆ ೧೬೩೭ ಇರಬೇಕೆಂದೆನಿಸುತ್ತದೆ.

ಏಕಾದಶಾಶ್ವಸದಿಂದ ದ್ವಾದಶಾಶ್ವಾಸದವರೆಗೆ

XI (a) ಆ ಸೋಮಶೇಖರನಾಯಕರ ತರುವಾಯ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೬೬೨ನೆಯ ಸಿದ್ಧಾರ್ಥಿಸಂವತ್ಸರದ ಜ್ಯೇಷ್ಠ ಬಹುಳ ೫ ಯೊಳ್....

(ಕೆ. ನೃ. ವಿ. ಪು. ೧೭೧)

(b) ...ಸಂತಸಂಬಡಿಸುತ್ತುಂ ವರ್ತಿಸುತ್ತುಂ ವರ್ತಿಸುತ್ತು ವಿದುರ್ಗ[23] ಮಾರ್ಗಶಿರ ಶುದ್ಧ ಪೂರ್ಣಿಮೆಯೊಳ್...

(ಅದೇ, ಪು. ೧೭೨)

(c) ಭೂರಿಭೂಸ್ವಸ್ಥೆಯಂ ಕಲ್ಪಿಸಿ ದುರ್ಮತಿ ಸಂವತ್ಸರದ ಕಾರ್ತೀಕ ಮಾಸದೊಳ್ ಡುಂಬಳದ ಸಿದ್ಧೇಶ್ವರ ದೇವರ...

(ಅದೇ, ಪು. ೧೭೪)

(d)...[24]ಉಡುಪಿನ ಬಳಿಯೊಳ್ ಮಲಪಿನ
ಪೊಡವಿಯೊಳಂ ಪಶ್ಚಿಮಾಂಬುಧಿಯ ತೀರದೊಳು.

(ಅದೇ, ಪು.)

---

22. Siddhantas and the Indian Calendar P. 302-322 (ಇದು ವಿಜಯ ಸಂವತ್ಸರವೆ ?)
23. ಅ. ಟಿ. (ಕಗ) ಪ್ರತಿಯಲ್ಲಿ ಈ ಭಾಗವಿದೆ.
24. ಅ. ಟಿ. ಯಲ್ಲಿ "ರುಧಿರೋದ್ಗಾರಿ ಸಂವತ್ಸರದೊಳ್" ಎಂದಿದೆ.

(e)...[25]ಮಿರುಗುವಾನಂದಪುರದೊಳ್
ಮುರಿಗೆಯ ದೇವರ್ಗೆ ವರರಥೋತ್ಸವಮಂ ವ...

(ಕೆ. ನೃ. ವಿ. ಪು. ೧೭೬)

(f) ವೆಂಕಟರಾಯನಂ ಪಿಂದೆಗಳಿ ರಾಜ್ಯಂಗೆಯುತ್ತಿ
ರಲತ್ತಂ ರಕ್ತಾಕ್ಷಿ ಸಂವತ್ಸರದ ಪುಷ್ಯ ಮಾಸದೊಳ್

(ಅದೇ, ಪು. ೧೭೭)

(g)...ಬಾಪೂರಾಯನಂ ತೊಲಗಿಸಿ ರಾಜ್ಯವನಾಳುತ್ತುಮಿರಲೊಡನೆ ಪ್ರಭವ ಸಂವತ್ಸರದ ಚೈತ್ರಮಾಸದೊಳ್ಯೆತಂದು...

(ಅದೇ, ಪು.)

(h) ...ಸದಾಶಿವರಾಯನಂ ಪಿಂದೆಗೆಸಲೊಡನಾಂಗಿರಸ ಸಂವತ್ಸರದ ಫಾಲ್ಗುಣ ಮಾಸದೊಳಂ ಮಾಗುಳ್ದು ಭಾವಸಂವತ್ಸರದ ಚೈತ್ರಮಾಸದೊಳಂ ಪೊಳೆಯ ವೊನ್ನಾಳಿಯ ಪ್ರಾಂತಕ್ಕೆತಂದು ನಿಂದು...

(ಅದೇ, ಪು. ೧೭೮)

(i) ...ಬಸವನಾಯಕಂ ಸಿದ್ಧಾರ್ಥಿ ರಕ್ತಾಕ್ಷಿ ಪ್ರಭವ ವಿಭವ ಶುಕ್ಲ ಪ್ರಮೋದೂತ ಪ್ರಜೋತ್ಪತ್ತಿ ಸಂವತ್ಸರಗಳೊಳ್ ಸೈನ್ಯಸಮೇತಂ ವೇಣುಪುರದಿಂ ತಿರಳ್ದು ಕೊಲ್ಲೂರ್...

(ಅದೇ, ಪು.)

(j) ...ರಣದೊಳ್ ಪಡೆಗೆಯ್ದು ಶಿಕ್ಷೆಗೆಯ್ದನ[26]ಮರಾಳಿ ಮೆಚ್ಚಲದಟಿಂ ಬಸವೇಂದ್ರಭೂಮಿಪಂ...

(ಅದೇ, ಪು. ೧೭೯)

(k) ...ಮದೆಕೆರೆನಾಯಕಸುತನಂ
[27]ಸದೆದೋಡಿಸಿ ಜಯಮನಾಂತನಾ ಬಸವನೃಪಂ ।

(ಅದೇ, ಪು.)

(l) ...ರಾರಾಜಿಪ ಗುತ್ತಳದಧಿನಾಥನ[28]

(ಅದೇ ಪು. ೧೮೦)

(m) ಮಾರಿಯಾಪನಂ ಕಳುಹಿ [29]ಮಾಗುಳ್ದುಂ ಪಡೆಗೆಯ್ದುಂ...

(ಅದೇ. ಪು.)

---

25 ಅ. ಟಿ (ಕ) ಪ್ರತಿಯಲ್ಲಿ "ಪ್ರಜೋತ್ಪತ್ತ್ಯಾರಂಭ" ಎಂದಿದೆ.
26. ಅ. ಟಿ. (ಗ) ಪ್ರತಿಯಲ್ಲಿ "ವಿಭವ ಸಂವತ್ಸರದ ಫಾಲ್ಗುಣ ಮಾಸದೊಳ್" ಎಂದಿದೆ.
27 ಅ. ಟಿ. ಯಲ್ಲಿ "ಶುಕ್ಲ ಸಂವತ್ಸರದ ಜ್ಯೇಷ್ಠ ಮಾಸದೊಳ್" ಎಂದಿದೆ.
28. ಅದೇ ಟಿಪ್ಪಣಿಯಲ್ಲಿ "ಪ್ರಜೋತ್ಪತ್ತಿ ಸಂವತ್ಸರದೊಳ್" ಎಂದಿದೆ.
29. ಅದೇ "ಶ್ರೀಮುಖದೊಳ್" ಎಂದಿದೆ.

(n) ಶ್ರೀಮುಖದ ಮಾಘಮಾಸದೊ
ಳಾಮಹಿಪಂ ಸಕಲಜನಹಿತಾರ್ಥಂ ಪರಲೋ
ದ್ದಾಮ ಶಾಸ್ತ್ರೋಕ್ತ ವಿಧಿಯಿಂ
ನೇಮದೊಳಂ ಗ್ರಾಮಶಾಂತಿಯಂ ವಿರಚಿಸಿದಂ ॥

(ಕೆ. ನೃ. ವಿ. ಪು. ೧೮೧)

(o) ...ಆ ತರುವಾಯ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೬೭೭ನೆಯ ಭಾವ ಸಂವತ್ಸರದ ಕಾರ್ತಿಕ ಶುದ್ಧ ೫ ರವಿವಾಸರದೊಳ್[30]...

(ಅದೇ, ಪು.)

(p)...ಸದ್ಧರ್ಮದಿಂ ರಾಜ್ಯವನಾಳುತ್ತುಮಿರಲ್ ಯುವ ಸಂವತ್ಸರದ ಫಾಲ್ಗುಣ ಮಾಸದೊಳ್ ನಾನಾರಾಯನ ಪ್ರೇರಣೆಯಿಂ...

(ಅದೇ, ಪು. ೧೮೨)

(q) ...ರಕ್ಷಿಸಿ ಜಸವನಾಂತನಾ ನೃಪತಿಲಕಂ[31] ...

(ಅದೇ, ಪು. ೧೮೩)

(r) ...ಈ ಚನ್ನಬಸವಪ್ಪನಾಯಕರ್ ತಮಗೆ ಪಟ್ಟವಾದ ಶಾಲಿವಾಹನ ಶಕವರ್ಷ ೧೬೭೭ನೆಯ ಭಾವಸಂವತ್ಸರದ ಕಾರ್ತೀಕ ಶುದ್ಧ ೫ ಯಾರಭ್ಯ ಈಶ್ವರ ಸಂವತ್ಸರದ ಶ್ರಾವಣ ಶುದ್ಧ ೨ಯುವರೆಗೆ....

(ಅದೇ, ಪು. ೧೮೭)

(a) ನಲ್ಲಿ ಹೇಳಿದ ಶಾ. ಶ. ೧೬೬೨ ನೆಯ ಸಿದ್ಧಾರ್ಥಿ ಸಂವತ್ಸರವು ಕ್ರಿ. ಶ. ೧೭೩೯–೪೦ಕ್ಕೆ ಸರಿಸಮನಾಗುತ್ತದೆ. (o) ನಲ್ಲಿ ಹೇಳಿದ ಶಾ. ಶ, ೧೬೭೭ನೆಯ ಭಾವ ಸಂವತ್ಸರವು ಕ್ರಿ. ಶ ೧೭೫೪–೫೫ಕ್ಕೆ ಸಮನಾಗುತ್ತದೆ. ಈ ಹೊಂದಿಕೆಯನ್ನು ಕೆಳದಿ ನೃಪವಿಜಯದ ಪುಟ ೧೮೭ರಲ್ಲಿರುವ ಅಂಶಗಳೊಡನೆ ಅವಲೋಕಿಸಬಹುದಾಗಿದೆ.

XII (a) ...ಆ ತರುವಾಯ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೬೮೦ನೆಯ ಈಶ್ವರಸಂವತ್ಸರದ ಶ್ರಾವಣ ಬಹುಳ ೫ ಗುರುವಾರ ದೊಳ್...

(ಅದೇ, ಪು. ೧೮೮)

(b) ...ಚೆನ್ನವೀರಮ್ಮಾಜಿ ಈಶ್ವರಸಂವತ್ಸರದ ಶ್ರಾವಣ ಬಹುಳ ಪಂಚಮಿ ಗುರುವಾರದೊಳ್....

(ಅದೇ, ಪು.)

---

30. ಅ. ಟಿ. ಯಲ್ಲಿನ (ಕ) ಪ್ರತಿಯಲ್ಲಿ—"ಯಲ್ಲಿ ೫ ಬಿದರೂರು ಭದ್ರರಾಜಪುರದ ಪಟ್ಟದೇವರ ಮಠದ ಭೂಮಿಯಲ್ಲು ಕ್ರಿಯಾಸಮಾಧಿ ಇದೇ ಶುದ್ಧ ಪಂಚಮಿ ರವಿವಾಸರದೊಳ್" ಎಂದಿದೆ.
31. "ಧಾತು ಸಂವತ್ಸರದ ಫಾಲ್ಗುಣದೊಳ್" ಎಂಬುದಾಗಿ ಅ. ಟಿ. ಯಲ್ಲಿನ (ಮ) ಪ್ರತಿಯಲ್ಲಿ ಉಕ್ತವಾಗಿದೆ.

(c) ...ಇಂತಪ್ಪ ಅಭಿನವ ಸಚ್ಚಿದಾನಂದ ಭಾರತೀಸ್ವಾಮಿಯವರಂ ಈಶ್ವರ ಸಂವತ್ಸರದ ಮಾರ್ಗಶಿರ ಬಹುಳ ೧೨ ಯೊಳ್. .

(ಕೆ. ನೃ. ವಿ. ಪು. ೧೯೩)

(d) ಈ ವೀರಮ್ಮಾಜಿ ಸೋಮಶೇಖರನಾಯಕರ್ ರಾಜ್ಯವಾಳಿದುದು ಈಶ್ವರ ಸಂವತ್ಸರದ ಶ್ರಾವಣ ಬಹುಳ ೫ ಯಾರಭ್ಯ ಚಿತ್ರಭಾನುಸಂವತ್ಸರದ ಮಾಘ ಶುದ್ಧ...ವರೆಗೆ...

(e) ...[32]ಶಕವರ್ಷ ೧೬೮೫ನೆಯ ಚಿತ್ರಭಾನು ಸಂವತ್ಸರದ ಮಾಘ ಶುದ್ಧ ೫ ಯೊಳ್....

(ಅದೇ, ಪು.)

(a) ನಲ್ಲಿ ಕಂಡ ಶಾ. ಶ. ೧೬೮೦ನೆಯ ಈಶ್ವರ ಸಂವತ್ಸರವು ಕ್ರಿ. ಶ. ೧೭೫೭–೫೮ ಆಗುತ್ತದೆ. (b),(c) ಮತ್ತು (d) ಗಳಲ್ಲಿ ಕಂಡ ಈಶ್ವರಸಂವತ್ಸರವೂ ಇದಕ್ಕೆ ಸಮನಾಗಿರಬಹುದಾಗಿದೆ. ಈ ಶಕೆ ಹಾಗೂ ಸಂವತ್ಸರವನ್ನು ಕೆಳದಿನೃಪವಿಜಯದ ಪುಟ ೮೨ ಹಾಗೂ ೮೬ರಲ್ಲಿ ಹೇಳಿದ ಶಾ. ಶ. ೧೫೬೦, ಅದೇ ಕೃತಿಯಲ್ಲಿನ ಪುಟ ೧೪೮ ಮತ್ತು ೧೫೩ರಲ್ಲಿ ಹೇಳಿದ ಶಾ. ಶ. ೧೬೨೦ ಮತ್ತು ಪುಟ ೧೮೮ರಲ್ಲಿ ಉಲ್ಲೇಖಿಸಿದ ೧೬೮೦–ಹೀಗೆ ಈ ಮೂರು ಶಕೆ ಹಾಗೂ ಸಂವತ್ಸರಗಳನ್ನು ತುಲನೆ ಮಾಡಲಾಗಿ, ಕಾಲ ಗಣನೆಯ ಲೆಖ್ಖಾಚಾರದ ಪರಿಗಣನೆಯಲ್ಲಿ ಸರಿಸಮನಾಗಿರುವುದು ಗಮನಾರ್ಹವಾಗಿದೆ. ಹೀಗೆಯೇ ಶಾ. ಶ. ೧೬೮೫ನೆಯ ಚಿತ್ರಭಾನು ಸಂವತ್ಸರವು ಕ್ರಿ. ಶ. ೧೭೬೨–೬೩ಕ್ಕೆ ಸರಿಸಮನಾಗಿರುವುದು ವ್ಯಕ್ತವಾಗುತ್ತದೆ.

ಹೀಗೆ ಕೆಳದಿನೃಪವಿಜಯದಲ್ಲಿ ಹೇಳಿದ ಕಾಲಮಾನಾದಿಗಳು ಪ್ರಸಿದ್ಧ ವಿದ್ವಾಂಸರಾದ ರಾಬರ್ಟ ಸಿವೆಲ್‌ರವರ The Siddhantas and the Indian calender ನಲ್ಲಿನ[32] ಕ್ರಿ. ಶ. ದ ಅಂಶಕ್ಕೆ ಸರಿಸಮನಾಗಿ ಹೊಂದಿಕೊಳ್ಳುತ್ತಿರುವುದು ಕುತೂಹಲ ಕರವೆನಿಸಿದೆ. ಈ ದಿಸೆಯಲ್ಲಿ ಮಾಡಬೇಕಾದ ಸಂಶೋಧನೆಗಳು ಹೆಚ್ಚಿನ ಬೆಳಕನ್ನು ನೀಡುತ್ತವೆ. ಕೆಳದಿನೃಪವಿಜಯವು ಪ್ರಾಮಾಣಿಕವಾದ ಐತಿಹಾಸಿಕ ಕೃತಿಯೆಂಬುದನ್ನು ಸಿದ್ಧಪಡಿಸುವ ಸಂಶೋಧನ ಸಾಮಗ್ರಿಗಳಲ್ಲಿ ಇದೂ ಒಂದಾಗಿದೆ.

ಆಧಾರ ಗ್ರಂಥಗಳು :

(೧) ಕೆಳದಿನೃಪವಿಜಯ (ಲಿಂಗಣ್ಣಕವಿ) ಮೈಸೂರು ವಿಶ್ವವಿದ್ಯಾನಿಲಯ. ೧೯೭೩

(2) Siddhantas and the Indian Calendar. Robert Sewell (1924)

32. The Siddhantas and the Indian Calendar. Robert Sewell, M. R. A. S. p. 302–322. ಅನುಬಂಧ II.

ಅನುಬಂಧ ೧.

ಕೆಳದಿ ನೃಪವಿಜಯ ಪುಟ	ಶಾ. ಶ.	ಸಂವತ್ಸರ	ಮಾಸ	ಪಕ್ಷ	ದಿವಸ	ವಾರ	ವಿಶೇಷ ವಿಷಯ
೧	೨	೩	೪	೫	೬	೬	೮
೧೮	೧೪೮೭	ರಕ್ತಾಕ್ಷಿ	...				
೨೫	೧೪೨೨	ಸಿದ್ಧಾರ್ಥಿ	ಮಾಘ	ಶುದ್ಧ	೩		
೨೬	—	ಪ್ರಜೋತ್ಪತ್ತಿ	ಮಾಘ	ಶುದ್ಧ	೫		
,,	೧೪೨೨	ಸಿದ್ಧಾರ್ಥಿ	ಮಾಘ	ಶುದ್ಧ	೩		
,,	—	ಶ್ರೀಮುಖ	,,	ಶುದ್ಧ	೨		
೨೭	೧೪೩೬	,,	,,	,,	೩		
೩೮	—	,,	,,	,,	,,		
,,	—	ವಿಶ್ವಾವಸು	ವೈಶಾಖ	ಶುದ್ಧ	೪		
೩೯	೧೪೬೮	—	,,	,,	೫		
೪೦	—	—	,,	,,	,,		
,,	—	ಕಾಳಯುಕ್ತಿ	ಆಶ್ವಯುಜ	,,	೪		
೪೮	೧೪೮೧	—	,,	ಶುದ್ಧ	೫		
೪೯	—	ರಕ್ತಾಕ್ಷಿ	ಮಾಘ	—	—		

೧	೨	೩	೪	೫	೬	೭	೮
೫೯	೧೪೮೭	ರಕ್ತಾಕ್ಷಿ	ಮಾಘ	ಬಹುಳ	—		
೬೦	೧೮೮೧	ಕಾಳಯುಕ್ತಿ	ಅಶ್ವಯುಜ	ಶುದ್ಧ	೫		
,,	—	ಪ್ರಮೋದೂತ	ಕಾರ್ತೀಕ	ಶುದ್ಧ	೪		
,,	೧೪೯೩	,,	,,	,,	,,		
೬೧	,,	,,	,,	,,	,,		
,,	—	ಚಿತ್ರಭಾನು	ಮಾರ್ಗಶಿರ	ಶುದ್ಧ	೪		
೬೨	೧೫೦೫	,,	—	ಶುದ್ಧ	೫		
,,	—	,,	ಮಾರ್ಗಶಿರ	ಶುದ್ಧ	೫		
,,	—	ಶುಕ್ಲ	ಕಾರ್ತೀಕ	ಬಹುಳ	೩೦		
೭೯	—	ಚಿತ್ರಭಾನು	ಮಾರ್ಗಶಿರ	ಶುದ್ಧ	೫		
,,	—	ಶುಕ್ಲ	ಕಾರ್ತೀಕ	ಬಹುಳ	೩೦		
೮೨	೧೫೫೨	ಶುಕ್ಲ	ಮಾರ್ಗಶಿರ	ಶುದ್ಧ	೧		
,,	೧೫೬೦	ಈಶ್ವರ	ಪುಷ್ಯ	ಬಹುಳ	೧೧		ಅ,ಟಿ,ಯಲ್ಲಿ (ಒಕಗವು) ಪ್ರತಿ
,,	೧೫೭೧	ಬಹುಧಾನ್ಯ	ವೈಶಾಖ	ಶುದ್ಧ	?		,,
,,	—	ಶುಕ್ಲ	ಮಾರ್ಗಶಿರ	ಶುದ್ಧ	೧		,,
,,	—	ಪಾರ್ಥಿವ	ಮಾರ್ಗಶಿರ	ಶುದ್ಧ	೧೧		,,
೮೬	೧೫೬೦	ಈಶ್ವರ	ಪುಷ್ಯ	ಬಹುಳ	೧೦		

೧	೨	೩	೪	೫	೬	೭	೮
೮೬	೧೫೬೧	ಬಹುಧಾನ್ಯ	ಮಾರ್ಗಶಿರ	?	?		
೯೨	೧೫೫೨	ಶುಕ್ಲ	ಮಾರ್ಗಶಿರ	ಶುದ್ಧ	೧೧		
,,	—	ಪಾರ್ಥಿವ	—	—	—		ಅ. ಟಿ. (ಮ) ಪ್ರತಿ
,,	—	ಪಾರ್ಥಿವ	ಮಾರ್ಗಶಿರ	ಶುದ್ಧ	೧೧		,,
೯೩	೧೫೬೮	ಪಾರ್ಥಿವ	ಮಾರ್ಗಶಿರ	ಶುದ್ಧ	೧೨		
,,	—	ಪಾರ್ಥಿವ	ಮಾರ್ಗಶಿರ	ಶುದ್ಧ	೧೨		ಅ. ಟಿ. (ಗ) ಪ್ರತಿ
,,	—	ಶಾರ್ವರಿ	ಆಶ್ವಯುಂಜ	ಶುದ್ಧ	೧		,,
೯೫	—	ಹೇವಿಳಂಬಿ	,,	,,	,,		ಅ. ಟಿ. (ಕ) ಪ್ರತಿ
,,	—	ಸರ್ವಜಿತು	,,	,,	,,		,,
,,	—	ಖರ	,,	,,	,,		,,
೯೬	—	ನಂದೆನ	,,	,,	,,		,,
೯೭	—	ದುರ್ಮುಖಿ	,,	,,	,,		ಒಂದನೆಯಂ ಸಾಲಿನಲ್ಲಿ
೧೦೨	೧೫೬೮	ಪಾರ್ಥಿವ	ಮಾರ್ಗಶಿರ	ಶುದ್ಧ	೧೨		
,,	—	ಶಾರ್ವರಿ	ಆಶ್ವಯುಂಜ	ಶುದ್ಧ	೧		
೧೦೩	೧೫೮೩	,,	,,	,,	,,		
೧೦೪	೧೫೮೩′	,,	,,	,,	,,		
,,	—	ಪ್ಲವ	ಭಾದ್ರಪದ	ಶುದ್ಧ	೧೪		

೧	೨	೩	೪	೫	೬	೭	೮
೧೦೫	೧೫೮೪	ಪ್ಲವ	ಭಾದ್ರಪದ	ಶುದ್ಧ	೧೫		ಅ. ಟಿ. (ಗವ) ಪ್ರತಿ
,,	—	,,	,,	,,	,,		
,,	—	ಶೋಭಕೃತು	ಶೋಭಕೃತಂ	ಶುದ್ಧ	೧೦		
೧೧೦	೧೫೮೪	ಪ್ಲವ	ಭಾದ್ರಪದ	ಶುದ್ಧ	೧೩		
,,	—	ಶೋಭಕೃತು	ಫಾಲ್ಗುಣ	ಶುದ್ಧ	೯		
,,	೧೫೮೬	ಶೋಭಕೃತಂ	ಫಾಲ್ಗುಣ	ಶುದ್ಧ	೧೦		
೧೧೧	—	ಶೋಭಕೃತು	ಫಾಲ್ಗುಣ	ಶುದ್ಧ	೧೦		
,,	—	ವಿರೋಧಿಕೃತ್	ಮಾರ್ಗಶಿರ	ಶುಗ್ಧ	೧೧		
೧೧೫	೧೫೯೪	ವಿರೋಧಿಕೃತ್	ಫಾಲ್ಗುಣ	ಬಹುಳ	೧೦		
೧೧೬	೧೫೯೫	ಪರಿಧಾವಿ	ಶ್ರಾವಣ	ಶುದ್ಧ	೧೪		ಅ. ಟಿ. (ಮ) ಪ್ರತಿಯಲ್ಲಿ ೧೪ಕ್ಕೆ ಬದಲಾಗಿ ೪ ಎಂದಿದೆ.
೧೧೮	—	ಆನಂದ	—	—	—		ಅ. ಟಿ. (ಕ) ಪ್ರತಿ
,,	—	ಕಾಳಯುಕ್ತಿ	ಮಾರ್ಗಶಿರ	—	—		
೧೧೯	—	ರೌದ್ರಿ	—	—	—		ಅ. ಟಿ. (ಕ) ಪ್ರತಿ
,,	—	ದುರ್ಮತಿ	—	—	—		,,
೧೨೭	೧ ? ? ? [1]	ಕ್ಷಯ	—	—	—		

1 ಕೆ. ನೃ. ವಿ. ದ ಪುಟ ೧೨೭. ೧೧ನೇ ಸಾಲಿನಲ್ಲಿ ಶಾಲಿವಾಹನ ಶಕ ವರ್ಷ ೧, ನೆಯ ಕ್ಷಯ......ಎಂದಿದೆ.

೧	೨	೩	೪	೫	೬	೭	೮
೧೪೪೧	೧೬೧೨	ಶುಕ್ಲ	ವೈಶಾಖ	ಬಹುಳ	—		ಅ. ಟಿ. (ಮ) ಪ್ರತಿಯಲ್ಲಿ ಶುಭಕೃತ್ ಎಂದಿದೆ.[2]
೧೪೪೭	೧೫೯೪	ವಿರೋಧಿಕೃತ್	ಫಾಲ್ಗುಣ	ಶುದ್ಧ	೧೦		
,,	—	ಈಶ್ವರ	ಶ್ರಾವಣ	ಶುದ್ಧ	೧೪		
೧೪೪೮	೧೬೨೦	,,	,,	,,	,,		ಅ. ಟಿ. (ಒಕಗ) ಪ್ರತಿ
,,	—	,,	,,	,,	,,		,,
,,	—	ಜಯ	ಪುಷ್ಯ	ಬಹುಳ	೧೦		
,,	—	?[3]	ಮಾಘ	—	—		
೧೪೪೯	ಪ್ರಮೋತ್ಪತ್ತಿ	ಕಾರ್ತಿಕ	ಕಾರ್ತಿಕ	ಶುದ್ಧ	೧೦		
,,	—	ವಿಕ್ರಮ	ವೈಶಾಖ	ಶುದ್ಧ	೧		
,,	—	ಚಿತ್ರಭಾನು	ವೈಶಾಖ	ಶುದ್ಧ	೩		
೧೪೪೯	—	ಪ್ಲವ	ಫಾಲ್ಗುಣ	ಶುದ್ಧ	೩		
,,	—	ಸರ್ವಧಾರಿ	ಮಾರ್ಗಶಿರ	ಬಹುಳ	೫		
೧೪೫೦	—	ಪ್ಲವ	ಮಾರ್ಗಶಿರ	ಶುದ್ಧ	೩		
,,	—	ಈಶ್ವರ	ಫಾಲ್ಗುಣ	—	—		
೧೪೫೩	೧೬೨೦	ಈಶ್ವರ	ಶ್ರಾವಣ	ಶುದ್ಧ	೧೪		

2. ಲೆಕ್ಕಾಚಾರದಲ್ಲಿ ಇದು ಸರಿ ಹೊಂದುವುದಿಲ್ಲ.
3. ತತ್ಸಂವತ್ಸರವೆಂದರೆ ಈಶ್ವರವಿರಬಹುದೇ ? ಕೆ. ನ್ಯ. ವಿ. ಪು. ೧೪೪೮, ಸಾಲು ೨೧, (ದ್ವಿ. ಮು.)

೧	೨	೩	೪	೫	೬	೭	೮
೧೫೩	೧೬೨೦	ಜಯಂ	ಪುಷ್ಯ	?	?		
,,	೧೬೩೬	ಜಯು	ಪುಷ್ಯ	ಬಹುಳ	೧		ಅ.ಟಿ. (ವು) ಪ್ರತಿಯಲ್ಲದೆ
,,	—	ಜಯು	ಆಶ್ವಯುಜ	ಬಹುಳ	೧೦		
೧೫೪	—	ಮನ್ಮಥ	—	—	—		ಅ.ಟಿ. (ಕ) ಪ್ರತಿಯಲ್ಲಿದೆ
೧೫೫	—	ಹೇವಿಳಂಬಿ	ಮಾಘ	—	—		,,
,,	—	ಹೇವಿಳಂಬಿ	ಮಾಘ	—	—		,,
೧೫೯	—	—	—	ಕೃಷ್ಣ	೧೩		
,,	—	ಪ್ಲವ	ಮಾರ್ಗಶಿರ	ಶುದ್ಧ	೩		
,,	—	ಆ ಸಂವತ್ಸರದ4	ಫಾಲ್ಗುಣ	ಬಹುಳ	೩		
,,	—	ಶೋಭಕೃತು	ಆಶ್ವಯುಜ	ಬಹುಳ	೩		ಅ, ಟಿ. (ಕಗ) ಪ್ರತಿ
೧೬೦	—	ಶುಭಕೃತ್	—	—	—		ಅ. ಟಿ. (ಕ) ಪ್ರತಿಯಲ್ಲಿ ಶುಭಕೃತ ಸಂ। ಆಶ್ವೀಜ ಬ. ೫ಲ್ಲಿ ಎಂದಿದೆ
,,	—	ಶೋಭಕೃತು	—	—	—		ಅ. ಟಿ. (ಗ) ಪ್ರತಿ
೧೬೧	—	ಕ್ರೋಧಿ	ವೈಶಾಖ	—	೩		ಅ.ಟಿ. (ಕ) ಪ್ರತಿ
,,	—	ಆನಂದ	—	—	—		ಅ. ಟಿ. (ಒಕ) ಪ್ರತಿ
೧೬೪	—	ಕ್ರೋಧಿ	ಆಷಾಢ	ಶುದ್ಧ	೧೩		

4. ಪ್ಲವ ಸಂವತ್ಸರ ಇರಬಹುದೇ? ಕೆ. ನ್ಯ. ವಿ. ಪುಟ ೧೫೯, ಸಾಲು ೧೪.

೧	೨	೩	೪	೫	೬	೭	೮
೧೬೪	—	ಕ್ರೋಧಿ	ಫಾಲ್ಗುಣ	—	—		
೧೬೫	—	ರಾಕ್ಷಸ	ಮಾರ್ಗಶಿರ	ಶುದ್ಧ	೭		
,,	—	ನಳ	ಚೈತ್ರ	—	—		
,,	—	(ಪಿಂತೆ ಪರಾಭವ)	—	—	—		
,,	—	ಕೀಲಕ	—	—	—		
೧೬೯	—	ಪಿಂಗಳ	—	—	—		
೧೭೦	೧೬೩೭	ಜಯ	ಪುಷ್ಯ	ಬಹುಳ	೧೦		
,,	—	ಸಿದ್ಧಾರ್ಥಿ	ವೈಶಾಖ	ಬಹುಳ	೩		ಅ. ಟಿ. (ಮ) ಪ್ರತಿಯಲ್ಲಿ ಜ್ಯೇಷ್ಠ ಎಂದಿದೆ.
೧೭೧	೧೬೬೨	ಸಿದ್ಧಾರ್ಥಿ	ಜ್ಯೇಷ್ಠ	ಬಹುಳ	೫		
೧೭೨	—	—	ಮಾರ್ಗಶಿರ	ಶುದ್ಧ	೧೫		ಅ. ಟಿ. (ಕಗ) ಪ್ರತಿ
೧೭೪	—	ದುರ್ಮತಿ	ಕಾರ್ತೀಕ	—	—		
,,	—	ರುಧಿರೋದ್ಗಾರಿ	—	—	—		ಅ. ಟಿ.
೧೭೬	—	ಪ್ರಜೋತ್ಪತ್ಯದಾರಂಭ	—	—	—		ಅ. ಟಿ. (ರ) ಪ್ರತಿ
೧೭೭	—	ರಕ್ತಾಕ್ಷಿ	ಪುಷ್ಯ	—	—		
,,	—	ಪ್ರಭವ	ಚೈತ್ರ	—	—		
೧೭೯	—	ಆಂಗಿರಸ	ಫಾಲ್ಗುಣ	—	—		
,,	—	ಭಾವ	ಚೈತ್ರ	—	—		

೧	೨	೩	೪	೫	೬	೭	೮
೧೭೮	—	ಸಿದ್ಧಾರ್ಥಿ					
—	—	ರಕ್ತಾಕ್ಷಿ					
—	—	ಪ್ರಭವ					
—	—	ವಿಭವ					
—	—	ಶುಕ್ಲ					
—	—	ಪ್ರಮೋದೂತ					
—	—	ಪ್ರಜೋತ್ಪತ್ತಿ					
—	-						
೧೭೯	—	ವಿಭವ	ಫಾಲ್ಗುಣ				ಅ. ಟಿ. (ಗ) ಪ್ರತಿ
..	—	ಜ್ಯೇಷ್ಠ	ಜ್ಯೇಷ್ಠ				ಅ. ಟಿ.
೧೮೦	—	ಪ್ರಜೋತ್ಪತ್ತಿ	—				ಅ. ಟಿ. (ಗ) ಪ್ರತಿ
..	—	ಶ್ರೀಮುಖ	—				ಅ. ಟಿ.
೧೮೧	—	ಶ್ರೀಮುಖ	ಮಾಘ				—
..	೧೬೭೭	ಭಾವ	ಕಾರ್ತಿಕ	ಶುದ್ಧ	೫	ರವಿವಾಸರ	ಅ. ಟಿ. (ಕ) ಪ್ರತಿಯಲ್ಲಿ ಯೂ ಕಾರ್ತಿಕ ಶುದ್ಧ ಪಂಚಮಿ ರವಿವಾಸರ ಎಂದಿದೆ.

೧	೨	೩	೪	೫	೬	೭	೮
೧೮೨	—	ಯುವ	ಫಾಲ್ಗುಣ				
೧೮೩	—	ಧಾತು	ಫಾಲ್ಗುಣ				ಅ. ಟಿ. (ಮ) ಪ್ರತಿ
೧೮೭	೧೬೭೭	ಭಾವ	ಕಾರ್ತೀಕ	ಶುದ್ಧ	೫		
..	—	ಈಶ್ವರ	ಶ್ರಾವಣ	ಶುದ್ಧ	೨		
೧೮೮	೧೬೮೦	ಈಶ್ವರ	ಶ್ರಾವಣ	ಬಹುಳ	೫	ಗುರುವಾರ	
..	—	ಈಶ್ವರ	ಶ್ರಾವಣ	ಬಹುಳ	೫	ಗುರುವಾರ	
೧೯೧	—	ಈಶ್ವರ	ಮಾರ್ಗಶಿರ	ಬಹುಳ	೧೨		
೧೯೩	—	ಈಶ್ವರ	ಶ್ರಾವಣ	ಬಹುಳ	೫		
..	—	ಚಿತ್ರಭಾನು	ಮಾಘ	ಶುದ್ಧ	—		
..	೧೬೮೫	ಚಿತ್ರಭಾನು	ಮಾಘ	ಶುದ್ಧ	೫		
..	೧೬೮೫	ಚಿತ್ರಭಾನು	ಚಿತ್ರಭಾನು	ಶುದ್ಧ	೯		ಅ. ಟಿ. (ಕ) ಪ್ರತಿ
..	—	ಶುಭಕೃತ್	ಫಾಲ್ಗುಣ	ಶುದ್ಧ	೧೫		

ಅನುಬಂಧ ೨.

The Siddhantas and the Indian Calendar by Robert Sewell, M. R. A. S. (1924)

Page No. of K.N.V.	Kali	Saka	A. D.	Jovian Samvatsara	
				Southern System	Northern System
1	2	3	4	5	6
25	4601	1422	1499-1500	53. Siddharthin	60. Kshaya
27	4615	1436	1513-14	7. Srimukha	15. Vrisha
39	4647	1468	1545-46	39. Viswavasu	47. Pramadin
58	4660	1481	1558-59	52. Kalayukta	60. Kshaya
59	4666	1487	1564-65	58. Raktaksha	6. Angiras
60	4660	1481	1558-59	52. Kalayukta	60. Kshaya
60	4672	1493	1570-71	4. Pramada	12. Bahu-dhanya
61	4672	1493	1570-71	4. Pramoda	12. Bahu-dhanya
62	4684	1505	1582-83	16. Chitra-dhanya	24. Vikrata
82	4731	1552	1629-30	3. Sukla	12. Bahu-dhanya
82	4739	1560	1637-38	11. Iswara	20. Vyaya
82	4740	1561	1638-39	12. Bahu-bhanu	21. Sarvajit
86	4739	1560	1637-38	11. Iswara	20. Vyaya
86	4740	1561	1638-39	12. Bahu-dhanya	21. Sarvajit
92	4731	1552	1629230	3. Sukla	12. Bahu-dhanya

1	2	3	4	5	6
93	4747	1568	1645–46	19. Parthiva	18. Jaya
102	4747	1568	1645–46	19. Parthiva	28. Jaya
103	4762	1583	1660–61	34. Sarvarin	43. Soumya
104	4762	1583	1660–61	34. Sarvarin	43. Soumya
105	4763	1584	1661–62	35. Plava	44. Sadharana
110	4763	1584	1661–62	35. Plava	44. Sadharana
110	4765	1586	1663–64	37. Sobhana	46. Paridavin
115	4773	1594	1671–72	45. Virodhikrit	54. Raudra
116	4774	1595	1672–73	46. Paridhavin	55. Durmati[1]
141	4791	1612	1689–90	3. Sukla	13. Pramathin
147	4773	1954	1671–72	45. Virodhakrit	54. Raudra
148	4799	1620	1697–98	11. Iswara	21. Sarvajit
153	4799	1620	1697–98	11. Iswara	21. Sarvajit
153	4815	1636	1713–14	27. Vijaya	37. Sōbhana
170	4816	1637	1714–15	28. Jaya	38. Krodhin
171	4841	1662	1739–40	53. Sidharthin	3. Sukla
181	4856	1677	1754–55	8. Bhava	18. Tarana
187	4856	1677	1754–55	8. Bhava	18. Tārana
188	4859	1680	1757–58	11. Iswara	21. Sarvajit[2]
193	4864	1685	1762–63	16. Chitrabhanu	27. Vijaya
193	4864	1685	1762–63	16. Chitrabhanu	27. Vijaya

1. No, 56 Dundhubhi was suppressed in the north.
2. No. 22 Sarvadharin was suppressed in the north.

ವ್ಯೂಹಗಳು

ಎಂ. ವ್ಹಿ. ಶರ್ಮಾ. ತದ್ದಲಸೆ

ವ್ಯಕ್ತಿ ಮತ್ತು ಮಾನವೀಯತೆ ಎಂಬ ವಿಷಯವಾಗಿ ನಡೆದ ನಿನ್ನೆಯ ದಿನದ ಚರ್ಚೆಯನ್ನೇ ಮೆಲುಕು ಹಾಕುತ್ತಾ ಸೈಕಲ್ ತುಳಿಯುತ್ತಿದ್ದೆ. ವಿಚಾರದ ಕಾವಿನಲ್ಲಿ ಏರು ಹತ್ತುತ್ತಾ ಇರುವುದೂ ಗಮನದಲ್ಲಿಲ್ಲ. 'ಎಲ್ಲ ಸಾಮಾಜಿಕ ಮೌಲ್ಯಗಳು, ಎಲ್ಲ ಧಾರ್ಮಿಕ ತತ್ವಗಳು. ಎಲ್ಲ ಇಸಂಗಳು ಮಾನವೀಯತೆಯನ್ನು ತಬ್ಬಿಕೊಳ್ಳಲು ಸಾಹಸ ಮಾಡಿವೆ. ಎಲ್ಲಾ ಮಾನ-ಮರ್ಯಾದೆಗಳನ್ನು ಮೀರಿದ್ದು ಮಾನವೀಯತೆ...' ಎಂಬ ಅಭಿಪ್ರಾಯವನ್ನೇ ಭಾಗ್ವತ್ ಸ್ಪಷ್ಟವಾಗಿ ಉದಾಹರಿಸಿದ್ದು ತುಂಬ ಮೆಚ್ಚಿಗೆಯಾಗಿತ್ತು. ಪರಿವರ್ತನಶೀಲವಾದ ಕಾಲ, ದೇಶ, ಪರಿಸರಕ್ಕೆ ಮಾನವೀಯತೆ ರೂಪಾಂತರಗೊಳ್ಳುವುದನ್ನು ಪರಮಣ್ಣ, ನಾಸುರವರು ವಿವರಿಸಿದ್ದರು. ವಿಷಯದ ಪರ ಹಾಗೂ ವಿರುದ್ಧವಾದ ಹೇಳಿಕೆಗಳನ್ನು ಕುರಿತು ವಿಚಾರಮಾಡತೊಡಗಿದಂತೆ ವಿಷಯವು ಜಟಿಲಗೊಳ್ಳುತ್ತಾ ಹೋಯಿತು. ಗೆಲ್ಲುವ ಹುಮ್ಮಸ್ಸಿನಲ್ಲಿ ತಮ್ಮ ವಾದವು ದುರ್ಬಲವಾಗುತ್ತಿರುವುದೆಂಬುದರ ವಿವೇಕವು ಕೂಡ ಒಮ್ಮೊಮ್ಮೆ ಇರುತ್ತಿರಲಿಲ್ಲ. ವಿಷಯವನ್ನು ಬಿಟ್ಟು ಆಡಿದ ಮಾತುಗಳೇ ಹೆಚ್ಚಾಗುತ್ತಿದ್ದುವು. ಅವುಗಳನ್ನೆಲ್ಲಾ ಒಟ್ಟು ಸೇರಿಸಿ ಸುಸಂಬದ್ಧವಾಗಿ ಜೋಡಿಸುವ ಯೋಗ್ಯತೆ ಕಷ್ಟವಾಗಿತ್ತು. ಪ್ರಯತ್ನ. ಸೈಕಲ್ ತುಳಿಯುವುದರೊಂದಿಗೆ ಓಡಿತ್ತು. ನಾನಿಳಿದುಕೊಳ್ಳುವ ಜಾಗವೂ ಬಂದುಬಿಟ್ಟಿತ್ತು. ನಾನು ಬರುವುದನ್ನೇ ನಿರೀಕ್ಷಿಸುತ್ತಿದ್ದ ಎನ್ನುವ ಹಾಗೇ ಈರ ಎದುರಾದ. 'ಏನು ಪತ್ತೆ' ಕೇಳಿದೆ. 'ನೀನು ಇವತ್ತು ಬರಲೇ ಬೇಕಂತೆ. ಡಾಕ್ಟರರನ್ನು ಕರೆದುಕೊಂಡು ಹೋಗಿಬಿಡು' ಎಂದ. 'ಅಜ್ಜನಿಗೆ ಈಗ ಹೇಗಿದೆ ?' ಕೇಳಿ. 'ಎಂದಿನಂತೆ' ಎಂದಾಗ ಅಸ್ವಸ್ಥತೆಯೂ ಸಹಜವೆನಿಸಿಕೊಂಡು ಬಿಡುತ್ತದೆಯೇನೋ ಎನಿಸಿತು. ಈಗ ನಮ್ಮ ಕ್ರಿಯೆಗಳೇ ಅವರಿಗೆ ಚೈತನ್ಯ ನೀಡಲು ಸಾಧ್ಯವಾದಾವು, ತಡ ಮಾಡಬಾರದು ಎಂದುಕೊಂಡು ಚಿಲ್ಲರೆ ಕೆಲಸಗಳನ್ನೆಲ್ಲ ಗೆಳೆಯ ನಾರಾಯಣನಿಗೆ ಹೇಳಿ ಕಾನಗೋಡಿಗೆ ಹೊರಟೆ. ಡಾಕ್ಟರರನ್ನು ಕರೆದುಕೊಂಡು.

ನನ್ನ ಊರು ಬೇರೆಯಾದರೂ ನಾನು ಹುಟ್ಟಿ ಬೆಳೆದ ಸ್ಥಳ ಕಾನಗೋಡು. ಎಂಥ ಬೇಸರವನ್ನೂ ನಾನಿಲ್ಲಿ ಎದುರಿಸಬಲ್ಲೆ. ಅವರಿಗೂ ಅಷ್ಟೆ. ನಾನೆಂದರೆ ಹಿಗ್ಗು. ನಾಲ್ಕು ದಿನಗಳಿಂದ ಬರದೇ ಹೋದದ್ದಕ್ಕೆ ಎಷ್ಟು ಹೇಳಿಸಿಕೊಳ್ಳಬೇಕೋ ಏನೋ ಎಂಬ ಅಳುಕಿನಲ್ಲಿ ಹಿಂದಿನ ದಿನದ ಘನವಾದ ಚರ್ಚೆಕೂಡ ಹಾರಿಹೋಯಿತು. ನಮ್ಮ ಜೀಪೂ ಬೇಗ ಬಂದಿತು.

ಜೀಪು ನಿಲ್ಲಿಸಿ ಇಳಿದು, ನಡೆದು ಮನೆ ಸಮೀಪಿಸಿದಂತೆ ಮನಸ್ಸಿನ ತಳಮಳ ಏರ ತೊಡಗಿತು. ತೀರ ಸಮಾಧಾನ ತಂದುಕೊಂಡು ಲಹರಿಯಲ್ಲಿರಲು ಸಹಜವಾಗಿರಲಿಲ್ಲ ಸಮಯ. ಆದರೂ ಗಟ್ಟಿಯಾಗಿ ವಿಚಲಿತನಾಗದೇ ಇರಲು ಪ್ರಯತ್ನಿಸುತ್ತಿದ್ದೆ. ಊರ ಕೆಲ ಹುಡುಗರು, ಹೆಂಗಸರು ಎದುರಾಗಿ 'ಹ್ಞ' ಎಂದು ಮಾತನಾಡಿಸಿ, ಕುಶಲ ಕೇಳಿ ಆಪ್ತರೆನಿಸಿಕೊಂಡು ನಡೆದರು.

ನಾವು ಬಂದದ್ದು ತಿಳಿದು, ಸುಬ್ಬಣ್ಣ ಬಾಗಿಲಿಗೆ ಬಂದು 'ಬನ್ನಿ ಬನ್ನಿ' ಎಂದು ಡಾಕ್ಟರರೊಡನೆ ಸ್ವಾಗತಿಸಿ ನನ್ನ ಕೈಯಲ್ಲಿದ್ದ ಚೀಲ ತೆಗೆದುಕೊಂಡ. ಸೀದಾ ಅಜ್ಜನ ಬಳಿಗೆ ಕರೆದುಕೊಂಡು ಹೋದ. ಮನೆಯ ಹುಡುಗರೆಲ್ಲ 'ಭಾವಯ್ಯ ಭಾವಯ್ಯ' ಎಂದು ಕರೆದು ಮುತ್ತಿಕೊಳ್ಳುವವರು, ಡಾಕ್ಟರರು ಬಂದದ್ದಕ್ಕೆ ಭೀತರಾಗಿ ಸುಮ್ಮನುಳಿದರು. ನಾನು ಹಿಂದಕ್ಕೇ ಉಳಿದೆ. ಡಾಕ್ಟರರು ಮಾಮೂಲಾಗಿ ಟೆಂಪರೇಚರ ನೋಡಿ ಇಂಜೆಕ್ಷನ್ ಕೊಟ್ಟು, ಹತ್ತಾರು ನಿಮಿಷದಲ್ಲೇ ಹೊರಟುಹೋದರು. ಈಗ ನಾನು ಅಜ್ಜನ ಹತ್ತಿರಕ್ಕೆ ಕುಳಿತಿದ್ದೆ. ಅಜ್ಜ 'ಏನೋ, ನಿನ್ನೆ ಮೊನ್ನೆ ಬಾದೇ ಇಲ್ಲ. ಇವತ್ತು ಸ್ವಲ್ಪ ಅಶಕ್ತತೆ ಜಾಸ್ತಿ' ಎಂದು ಮಾತು ಮುಂದುವರೆಸುತ್ತಿದ್ದಂತೆ, ಒಳಬದಿಗೆಲ್ಲ ನನ್ನ ಆಗಮನದ ಘೋಷಣೆಯಾಗಿ ದೊಡ್ಡಮ್ಮ-ಚಿಕ್ಕಮ್ಮ ಎಲ್ಲ ನಾನಿದ್ದಲ್ಲಿಗೆ ಬಂದರು. 'ಓಹೋಹೋ ಏನಯ್ಯ ದೊಡ್ಡ ಮನುಷ್ಯ ಆಗಿಬಿಟ್ಟೆ. ಬರದೇ ಇರದೇನೋ ಬಹಳ ಅಪರೂಪ ಆಗಿಬಿಟ್ಟೆ. ಈಗ ಆಸರಿಗೆ (ಉಪಾಹಾರ) ಯಾವುದಕ್ಕೆ' ಎಂದು ವಿಚಾರಿಸಿದರು. 'ಏನಾದರೂ ಸರಿ' ಎಂದಾಗ ಅತ್ತಿಗೆ 'ಚಹಾ ಮಾಡುತ್ತೇನೆಂದು' ಒಳಗೆ ನಡೆದಳು. 'ನಿನ್ನೆ ಯಾವುದೋ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆಯಂತಲ್ಲ' ಎಂದು ಸಮವಯಸ್ಸಿನ ದತ್ತ ಕೇಳಿದಾಗ 'ಹೌದು' ಎಂದು. ಅಜ್ಜನ ಎದುರಿಗೆ ಅದೆಲ್ಲ ಯಾಕಪ್ಪ ಇವನಿಗೆ ಎನಿಸಿತು. ಅಜ್ಜ, ಮನೆ ಬದಿಯ ವಿಚಾರವನ್ನೆಲ್ಲ ಚರ್ಚಿಸಿದ. ಅನಾನಸ್ ಬೇಸಾಯ ಹೇಗೆ ಎಂದು ಕೇಳಿದ. 'ಈ ವರ್ಷದ ಫಸಲು ಸಾಧಾರಣ, ಒಂದು ಮಳೆ ಬಿದ್ದರೆ ಚಲೋ ಆಗಿತ್ತು' ಎಂದೆಲ್ಲ ಹೇಳಿದ ಮೇಲೆ 'ಆರಾಮ ಮಾಡು' ಎಂದೆ. 'ನಿನ್ನೆ ರಾತ್ರಿ ನಿದ್ದೆ ಚಲೋ ಬಂದಿತ್ತು. ಮತ್ತೆ ಈಗ ನಿದ್ರೆ ಬರುವ ಹಾಗೆ ಕಾಣುವುದಿಲ್ಲ'ವೆಂದ. 'ಹೌದಾ' ಎಂದು ಯಾವ ವಿಚಾರ ಮಾತಾಡಲಿ ಎಂದು ಯೋಚಿಸುತ್ತಿದ್ದಂತೆ ಅತ್ತಿಗೆ ಚಹಾ ತಂದಿಟ್ಟಳು. ಕುಡಿದೆ. 'ನಿನಗೂ ಏನೋ ಹುಷಾರಿಲ್ಲ' ಅಂತ ಕೇಳಿದ್ದೆ ಎಂದು ಅವಳನ್ನು ನೋಡಿದಾಗ 'ಹೌದು, ಔಷಧಿ ತೆಗೆದುಕೊಂಡಿದ್ದೀನಿ' ಎಂದಾಗ ಅವಳ ನೋವಿನ ಬಣ್ಣ, ಕಣ್ಣುಗಳಲ್ಲಿ ಕಾಣಿಸಿಕೊಂಡಿತು. ಆ ನೋವಿನ ಅರ್ಥವೂ ಮಿಂಚಿತು. ಅವಳನ್ನು ನೋಯಿಸಬಾರದಿತ್ತು ಎಂದುಕೊಂಡೆ

ಕಾಲುಗಳಿಗೆಲ್ಲ ಧೂಳು ಹತ್ತಿಕೊಂಡಿತ್ತು. ಮುಖ ಬೆವರುತ್ತಿತ್ತು. ತೊಳೆದುಕೊಂಡು ಬರುತ್ತೇನೆಂದು ಎದ್ದು ಬಚ್ಚಲುಮನೆ ಹೊಕ್ಕಾಗ ನನ್ನ ಹಿಂದೆಯೇ ಸುಬ್ಬಣ್ಣ, ದತ್ತ, ದೊಡ್ಡಮ್ಮ ಬಂದರು. ಗೋಡೆಗೆ ಆತು ನಿಂತುಕೊಂಡು ನನ್ನನ್ನೇ ನೋಡುತ್ತ

...ನೋ ಬಹಳ ಸೊರಗಿ ಬಿಟ್ಟು ಹೋಗಿದ್ದಾನೆ. ಎಂದಳು ದೊಡ್ಡಮ್ಮ. 'ಏನಪ್ಪಾ ...ನು ಇಷ್ಟು ಬೇಗ' ಎಂದೆ 'ನನಗೆ ಗೊತ್ತಿಲ್ವೇನೋ. ರಾತ್ರಿ ನಿದ್ದೆಗೆಟ್ಟು ಓದ್ತಾ ...ತೀ ಅವಕ್ಕೆ' ಎಂದು ಕಣ್ಣಲ್ಲಿ ನಕ್ಕಳು. ಅದೇ ಮಾತಿಗೆ ಸುಬ್ಬಣ್ಣ "ಅವನದು ...ದ್ದು ತಲೆಯಲ್ಲ. ವಿಚಾರ ಮಾಡುವುದೇ ಕೆಲಸ. ಮನೆಯಲ್ಲಿ ಇರುವುದೇ ಕಡಿಮೆ. ...ಂಗಾಟ ಮಾಡಿಯೇ ಸೊರಗಿಹೋಗ್ತ" ಎಂದು ಕುರುಮಾಡಿದ. 'ಸಾಕು ...ನಾರಾಯಣ ನಿಲ್ಲಿಸು' ಎಂದೆ.

ಕಾಲು ತೊಳೆದುಕೊಂಡಮೇಲೆ ಒಳಬಂದೆ. ಹಾಕಿದ ಮಣೆಯ ಮೇಲೆ ಕುಳಿತು ...ಂದೆ. ಚಿಕ್ಕಮ್ಮ ಮತ್ತೇನು ಸುದ್ದಿ ಹೇಳು ಎಂದಳು. ಎಂಥ ಸುದ್ದಿ ಕೇಳಿದೆ ? ಅಕ್ಕಯ್ಯ ಈಗಿತ್ತಲಾಗಿ ಬಂದಿತ್ತ' ಕೇಳಿದಳು. 'ಇಲ್ಲ ಅಲ್ಲಿಗೆ ನಾನೇ ಹೋಗಿದ್ದೆ' ...ನ್ನುತ್ತಿದ್ದಂತೆ ದತ್ತು. ಗೋವಿಂದನಿಗೆ ಭಾವ ತಿರುಕೆಂದ ಪದವಿ ಸಿಕ್ಕಿದೆ. 'ಹೌದು ...ಯಸ್ಸು ಅರವತ್ತು ಮೀರಿತು' ಎಂದು ಅಪ್ಪಕ್ಕೇ ಸುಮ್ಮನಾದೆ. 'ನಂದಾಳಿಗೊಂದು ...ದ ಸಿಕ್ಕಿದ್ದಿದ್ರೆ ದೊಡ್ಡ ಕೆಲಸವಾದರೂ ಅದ್ದಾಗಿ ಆಗಿತ್ತು. ಅವಳನ್ನು ನೋಡಲಿಕ್ಕೆ ...ಂದೆ ಮನೆಯವರು ಬಂದಿದ್ದವರು ಆಮೇಲೆ ಬೇಡ ಹೇಳಿದರಂತೆ' ಎಂದಾಗ ನಂದಾಳ ...ತಿಯ ಬಗ್ಗೆ ಮರುಕವಾಯಿತು. ಪಾಪ. ಐದು ವರ್ಷದಿಂದ ಅವಳಿಗಾಗಿ ವರನ ...ನ್ವೇಷಣೆ ನಡೆದಿದೆ. ಅದೇ ಕೊರಗಿನಲ್ಲಿ ನಿಜವಾಗಿಯೂ ಅವಳು ತೆಗೆದುಹೋಗಿ ...ಳು. ಸ್ವಲ್ಪ ಗಿಡ್ಡಕ್ಕೆ ಸುಂದರವಾಗಿದ್ದ ಅವಳು. ಮುದುಕಿಯಾದಂತೆ ಭಾಸವಾಯಿತು. ...ರಿದ್ದು ಬಂದೇನಾನೆ ಆ ಮಳ್ಳ. ಅಷ್ಟೆಲ್ಲ ಓದಿ ಮಾನವನಾಗುವುದಕ್ಕಿಂತ ಮಂಗವಾದ ...ಲ್ಲಿ ಎನಿಸುತ್ತದೆ.

ಆ ಮಾತು ಈ ಮಾತು ಆಡುವ ಹೊತ್ತಿಗೆ ಊಟದ ಹೊತ್ತಾಯಿತು. ನನಗಾಗಿ ...ನೇನೋ ಬಗೆಬಗೆಯ ಅಡಿಗೆ ಮಾಡಿದ್ದಳು. ಬೇಡಬೇಡವೆಂದರೂ ದೊಡ್ಡಮ್ಮ. ಚಿಕ್ಕಮ್ಮನವರ ಬಲವಂತ. ನನಗೋ ಕೈಗೂ ಬಾಯಿಗೂ ಜಗಳ. ಮಧ್ಯ ಮಧ್ಯ ...ನವರುಗಳ ಉಪಚಾರ. ಪಾಯಸ ಹಾಕಿ ಅಮ್ಮ ಅಂದರೆ ತಪ್ಪು. ಸಾರು ಹಾಕಿ ಅಮ್ಮ ...ಂದರೆ ಪಾಯಸ. ಭರ್ಜರಿ ಊಟವಾದ ಮೇಲೆ ಕೈ ತೊಳೆದುಕೊಳ್ಳಲು ಹೋದಾಗ ಚಿಕ್ಕಮ್ಮ ಒಂದೆಯೇ ಬಂದಳು. ನನ್ನಿಂದ ಅವಳಿಗೆ ಏನೋ ತಿಳಿದುಕೊಳ್ಳಬೇಕಾ ...ನೆ. ಬಂದವಳೇ "ತಮ್ಮಾ, ನಂದಕ್ಕಗೆ ಎಲ್ಲಾದರೂ ಒಂದು ಗನಾ ಜಾಗ ನೋಡೋ ...ನಗೆ ರಾತ್ರಿ ಹಗಲ ಪರಿಚಯವಿದ್ದ ಆಗದಾ" ಎಂದಳು. ಅವಳ ಧ್ವನಿಯಲ್ಲಿ ವಿನಯ ...ಕೇಳುತ್ತಿತ್ತು. ಭಾರವಾದ ನಿಟ್ಟುಸಿರು ಬಿಟ್ಟೆ. 'ಆಯ್ತು ನನ್ನ ಪ್ರಯತ್ನ ಮಾಡ್ತೀ ...ನಿ' ಎಂದವನೇ ಬೇಗನಾಗಿ ನಾದಿನಿ ಹತ್ತಿರವಾದ ಕೈ ಕಟ್ಟಿಕೊಂಡು ಕುಳಿತೆ. ...ಮೊಬ್ಬಿಸಿದೆ. ನಂದಾಳ ಕರೆತು. ತಿಂಗಳ ಓದಿ ಅವಳ ಮನೆಗೆ ಹೋದಾಗ "ಮುದು ...ಸ್ಟ್ರೇಚರ್. ಎಷ್ಟೆಲ್ಲ ದಿನಾ ಆಯಿತು ನಿನ್ನನ್ನು ನೋಡದೇ" ಎಂದಿದ್ದಳು. ಅವಳ ಕಣ್ಣಲ್ಲಿ ...ಯರು ಹರಿಯುತ್ತಿತ್ತು. ಒಬ್ಬ ಅಕ್ಕ ಕಲಿತವಳು. ಮುದಾ ತಿಳಿದವಳ ಹಾಗೆ ನನಗೆ ...ಬುದ್ಧಿ ಹೇಳುತ್ತಿದ್ದವಳು. ಅಷ್ಟು ದಿನಗಳ ಮೇಲೆ ನನ್ನನ್ನು ಕಂಡವಳು ನಾನೇನೋ

ಮಹಾ ಸಾಹಿತಿಯಾಗಿರುವಂತೆ ನಡೆದುಕೊಂಡಳು. ಸತ್ತು ಹೋದ ನನ್ನ ತಾಯಿಯ ಸ್ಥಳದಲ್ಲಿ ನಿಂತು, ಆತ್ಮೀಯವಾಗಿ ಹೇಳುವ–ಕೇಳುವ ಅವಳ ಭಾವನೆ, ಎಷ್ಟು ಗಹನವಾದದ್ದು ! ಛೇ ನಾನು ಹೆಣ್ಣಾಗಿ ಹುಟ್ಟಬೇಕಿತ್ತು. ಅವಳ ಹಾಗೆ ಎನ್ನಿಸಿತು. 'ಮಾನವೀಯತೆ'ಗೆ ಅರ್ಥವಾಗಿ ಅವಳು ಕಾಣುತ್ತಾಳೆಂದುಕೊಂಡೆ.

'ಈಗಿತ್ತಲಾಗಿ ಎಂಥ ಬರೆದಿರುವೆ ಎಂದು ತಿಳಿಯಲಿಲ್ಲ' ಎಂದು ಕೇಳಿದ್ದಳು. ಒಂದು ಕ್ಷಣ ಏನು ಹೇಳಬೇಕೆಂದೇ ತಿಳಿಯಲಿಲ್ಲ. ಅಕ್ಕಂದಿರ ಹಾಗೆ ನಾನು ಬರೆದದ್ದೆಲ್ಲ ಮಹಾ ಎಂದು, ಘೋಷಿಸುತ್ತಿದ್ದವಳು ಅವಳು. 'ನೀನು ದೊಡ್ಡ ಸಾಹಿತಿ ಆಗ್ತಿ' ಎಂದು ಸಾರಿದವಳು. 'ಬರೆಯಲಿಕ್ಕೇ ಆಗುವುದಿಲ್ಲ' ಎಂದಾಗ ನೊಂದವಳು.

'ಗೆಳೆಯ ಶಿವರಾಮ್ನ ಕತೆ ಓದಿದ್ದಿಲ್ಯ' ಕೇಳಿದೆ.

'ಬದುಕು ಅಲ್ವ ? ಚೆನ್ನಾಗಿತ್ತು' ಎಂದಿದ್ದಳು.

'ಇನ್ನೂ ಹುಡುಗ ವಯಸ್ಸು. ಭಾವನೆಗಳು ತೀವ್ರವಾಗಿ, ಭಾಷೆ ಕಸುವುಗೊಳ್ಳಬೇಕು ಎಂದೆ. ಅವಳಿಗೇನೂ ಅರ್ಥವಾಗಲಿಲ್ಲ. ಬಹಳ ನಾಟಕೀಯ ನುಡಿ ಅನಿಸಿರಬೇಕು.

'ಎಂಥದೇನೋ ಬರೀತಾ ಇರಿ. ನೀನೂ ನಾಲ್ಕು ಜನರ ಎದುರಿಗೆ ಗಣನೆಗೆ ತೆಗೆದುಕೊಳ್ಳೋ ವ್ಯಕ್ತಿಯಾದರೆ ಸಾಕು' ಎಂದಳು.

ಹೌದು. ವ್ಯಕ್ತಿಯನ್ನು ಗಣನೆಗೆ ತೆಗೆದುಕೊಳ್ಳದೇ ಹೋದದ್ದು ಈ ಶತಮಾನದ ದೊಡ್ಡ ದೋಷವೆಂದುಕೊಂಡು. ಉಸಿರಾಡಿದಷ್ಟು ಸುಲಭವಾಗಿ ಬರೆಯುವುದು. ಬರೆದದ್ದಕ್ಕಿಂತ ಜೀವನ ಸುಲಭವಾಗಿರುವುದು ಎಲ್ಲ ಸೋಜಿಗ. ವಿಪರೀತವಾದ ಭಾವನಾವಶತೆಯಿಂದ ಬುದ್ಧಿಯ ಬಲ ತಪ್ಪಿ, ಅಂತಃಕರಣದ ಆಳವನ್ನು ವ್ಯಕ್ತಪಡಿಸಬಲ್ಲ ಕಲ್ಪನಾಶಕ್ತಿಯೂ ಇಲ್ಲವಾಗಿ, ಜೊಳ್ಳುಪರಿಣಾಮ ಉಂಟಾಗುತ್ತದೆ. ಇವರ ಕೈಗೆಲ್ಲ ಜೀವನ ಅನುಭವವಾಗಿ ಸಿಗದೆ ಕನಸಾಗಿಯೇ ಉಳಿಯಬಹುದಲ್ಲ: ಪಾಪ ಎನಿಸುತ್ತದೆ. ಬರವಣಿಗೆಯಿಂದಲೇ ಇವರನ್ನು ಕ್ರಿಯಾಶೀಲಗೊಳಿಸುವ ಸಾಧ್ಯತೆಯಿದೆ ಎನಿಸುತ್ತದೆ. ಮನೋಹರ ಶೈಲಿಯ ಬರವಣಿಗೆಗಳಿಂದಲೇ ಜೀರೆ ಅರಿವನ್ನೇ ಚಿಂತಿಸಿದಷ್ಟು ದುರ್ಬಲರಾಗಿರುವರೇನೋ ಎಂದು ತೋರುತ್ತದೆ. ನಿಜವಾದ ನೈತಿಕ ಹೊಣೆಗಾರಿಕೆಯುಳ್ಳ ಸಾಹಿತಿಯ ಪ್ರತಿಕ್ರಿಯೆ ಎಷ್ಟು ದಾರುಣವಾಗಬಹುದೆಂದು ಯೋಚಿಸಿದೆ. ಇವಳೆಂದುಕೊಳ್ಳುವ ಹಾಗೆ ನಾಲ್ಕು ಜನರೇಕೆ. ಹತ್ತು ಜನರ ಎದುರಿಗೆ ತಲೆಯೆತ್ತುತ್ತೇನೆ. ದಿನವಿಡೀ ಈ ಬಗ್ಗೆ ಯೋಚಿಸುವ. ಚರ್ಚಿಸುವ ನಿರ್ಣಯಕ್ಕೆ ಬಂದು ಕ್ರಿಯಾಶೀಲನಾಗಿ ಹಮ್ಮಿಕೊಳ್ಳುವುದೆಲ್ಲ ಅವಳಿಗೆ ಹೇಗೆ ತಿಳಿಯಬೇಕು? ನನ್ನ ಕಿರಿಯ ಪ್ರಾಯದಲ್ಲಿ ಯಾವುದನ್ನೂ ಲಕ್ಷಿಸುವ. ಗ್ರಹಿಸುವ ಶಕ್ತಿ ನನಗೆಲ್ಲಿತ್ತು ? ಇಂದಿನ ಜೀವನ ಪದ್ಧತಿ ಬಹುವಾಗಿ ಬದಲಾಗುತ್ತಿರುವುದರಿಂದ. ಈ ಬದಲಾವಣೆ ನಮ್ಮನ್ನು ಸಾಂಸ್ಕೃತಿಕಶೂನ್ಯರನ್ನಾಗಿಸುವ ಸಾಧ್ಯತೆಯಿರುವುದರಿಂದ ನಮ್ಮದು ಬಹುದೊಡ್ಡ ಮನೆತನವೆಂದುಕೊಂಡು

ನಮ್ಮತನ ಉಳಿಸಿಕೊಳ್ಳುವ, ವ್ಯಕ್ತಗೊಳಿಸುವ ಅಸಾಧ್ಯತೆಯಿಂದ ಆದಷ್ಟು ಪರಂಪರೆಯ ಮೌಲ್ಯಗಳೊಂದಿಗೆ ಆತ್ಮಪರಿಶೀಲನೆ ಮಾಡಿ. ನಮ್ಮ ಸಂಸ್ಕೃತಿಯ ಅರಿವನ್ನು ಅಸ್ತಿತ್ವಗೊಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿರುವುದೆಲ್ಲ ಅವಳಿಗೆ ಚೂರೂ ಗೊತ್ತಿಲ್ಲ; ಗೊತ್ತಾಗುವುದೂ ಇಲ್ಲ. ಕೆಲವರಂತೆ ನನಗೂ ಮನೆಯಲ್ಲಿ ಸುಖಕ್ಕೆ ತೊಂದರೆಯಿಲ್ಲವೆಂಬುದಷ್ಟೇ ಅವಳ ತೃಪ್ತಿ. ಹಿಂದೆಲ್ಲ ಚುರುಕಾಗಿ ಅರಿತುಕೊಳ್ಳುತ್ತಿದ್ದ ನಂದಾ. ಈಗ ಯಾಕೆ ಹೀಗೆ ? ನನ್ನ ಹಾಗೆ ಅವಳಿರಲು ಸಾಧ್ಯವಿಲ್ಲ. ನನ್ನ ಹಾಗೆ ಸ್ವತಂತ್ರಳಾಗಿದ್ದರೆ. ಅವಳನ್ನು ಅಬಲೆಯೆಂದು ಅರಿಸಂದೆ ನಾವೆಲ್ಲಾ ಒಂದಾಗಿ. ಎಂದೆಲ್ಲ ಕಲ್ಪಿಸಿಕೊಳ್ಳಲು ಕೂಡ ಈಗಿನ ಅವಳ ಸ್ಥಿತಿ ತಡೆಯೊಡ್ಡುತ್ತದೆ, ಇದು ತಿಳಿದ ಅವಳು ಹೇಳಿದ್ದಳು 'ನೋಡು. ನೀನೇನೋ ದೊಡ್ಡವನಾದೆ. ಎಲ್ಲಿ ಬೇಕಾದರೆ ಅಲ್ಲಿಗೆ ಹಕ್ಕಿಯ ಹಾಗೆ ಹೋಗಿ ಬರ್ತಾ ಇರ್ತೆ. ಆದರೆ ನನಗೆ ಹಾಗೆ ಸಾಧ್ಯವೇ ಹೇಳು ? ನಿಂಗಳೇ ನನ್ನ ಪಾಲಿಗೆ ಪ್ರಪಂಚ. ಆಗಲೇ ಅವಳ ಕಣ್ಣುಗಳು ಹನಿ ತುಂಬಿದ್ದುವು. ಹೌದು. ನಾನು ಈ ಪ್ರಪಂಚವನ್ನೇ ಸುತ್ತಬಹುದು. ಪಾಪ, ಅವಳಿಗೆ ಊರಿನ ಸುತ್ತಮುತ್ತ ಸುಳಿಯುವುದು ಬಿಟ್ಟರೆ ನಮ್ಮಂಥ ನೆಂಟರ ಮನೆಗೆ ಬಂದುಹೋಗುವುದೇ ಜಗತ್ತು. ಇಷ್ಟೇ ವ್ಯಾಸದಲ್ಲೇ ಅವಳ ನೋವು-ನಲಿವು. ಆಸೆ-ಆಕಾಂಕ್ಷೆಗಳ ಆಳ. ಆಗಲ.

ಅಷ್ಟಕ್ಕೆ ದತ್ತ, ಸುಬ್ಬಣ್ಣ. ರಾಮಣ್ಣರು ಊಟ ಮುಗಿಸಿ ನನ್ನ ಬಳಿಗೆ ಬಂದು ಸುತ್ತುಗಟ್ಟಿ ಕುಳಿತರು. ನನ್ನ ನೆನಪುಗಳಿಗೆ ಬ್ರೇಕ್ ಬಿತ್ತು. ಸುಬ್ಬಣ್ಣ ಮಾತಿಗೆ ಶುರು ಮಾಡಿದ. 'ಏನು ಈ ವರ್ಷವಾದರೂ ಮದುವೆ ಆಗ್ತ್ಯಾ' ಎಂದ. ಕುಶಾಲು ಹಿಡಿಸಲಿಲ್ಲ. ಸೀರಿಯಸ್ಸಾಗಿ ಉತ್ತರ ಕೊಡಬೇಕೆಂದೂ ಅನಿಸಲಿಲ್ಲ. ನಂದಕ್ಕನ ಬಗ್ಗೆ ಯೋಚಿಸುತ್ತಿದ್ದೆ. ಇತ್ತೀಚಿನ ಅವಳ ಕೆದರಿದ ಕೂದಲು. ಬಳಲಿದ ಮುಖ. ಕೃತಕ ಲವಲವಿಕೆಯೇ ಕಣ್ಮುಂದೆ ಕಟ್ಟುತ್ತಾ ಇದೆ: ಎನ್ನುತ್ತಿದ್ದಂತೆ ರಾಮಣ್ಣ 'ಹೌದು ಮೊನ್ನೆ ಭಾವ ತೀರಿಕೊಂಡ ಮೇಲಂತೂ ಅವಳಿಗೆ ಅಳುವುದೇ ಕೆಲಸವಾಗಿ ಹೋಗಿದೆ. ಇನ್ನು ಮುಂದೆ ಅವಳ ಬಗ್ಗೆ ಹುಡುಕುವವರು ಯಾರೇನೋ' ಎನ್ನುತ್ತಿದ್ದಂತೆ ಪಥ ಬದಲಿಸಲು ಪ್ರಯತ್ನಿಸಿದೆ. ಸೆಂಟಿಮೆಂಟಲ್ ಆಗುತ್ತ ಹೋಗುವುದು ನಿಷ್ಪ್ರಯೋಜಕ ಸಮಾಜವೇ ನಮ್ಮನ್ನು ಅಪಮಾನಿಸುತ್ತಾ ನಡೆದಿದೆ. ಎನಿಸಬಹುದು. ನನಗೂ ಈಗ ಕೆಲ ತಿಂಗಳುಗಳ ಹಿಂದಿನಿಂದ ಒಬ್ಬಳನ್ನು ಆಯ್ಕೆ ಮಾಡಿಕೊಂಡೆನೆಂದು ಭರವಸೆಯಾಗಿತ್ತು. "ನಿನ್ನ ಸುಖವೇ ನನ್ನ ಸುಖ. ನನಗೆ ನಿನ್ನ ಮೇಲೆ ಎಲ್ಲಿಲ್ಲದ ಅಭಿಮಾನ" ಎಂದೆಲ್ಲ ಸಿನೇಮಾ ಹೀರೋನ ಹಾಗೆ ಹಲುಬಿಕೊಂಡಿದ್ದೆ. ನಿನ್ನ ಅಂತರಂಗದಲ್ಲಿರುವುದನ್ನೆಲ್ಲ ನಾನು ತಿಳಿದುಕೊಳ್ಳಬಲ್ಲೆ. ನಿನ್ನ ಕಣ್ಣುಗಳಲ್ಲಿ ಮಿಂಚುವ ಬೆಳಕಿನಲ್ಲಿ ನಿನ್ನ ಭಾವನೆಗಳನ್ನು ಹಿಡಿಯಬಲ್ಲೆ ಎಂದು ಹೇಳಿದ್ದೆ. ಬರೆದಿದ್ದೆ. ಮೈಮರೆತಿದ್ದೆ ಎಷ್ಟೆಂದರೂ ನಾನು ಸಾಹಿತಿ ಅಲ್ಲವೆ! ನನ್ನ ಜೀವನಕ್ಕೊಂದು ಅರ್ಥ ಬಂತೆಂದು ತಿಳಿದುಕೊಂಡು ಆತ್ಮ ಅರಸುತ್ತಿದ್ದ ಉತ್ತರ, ಅವಳಲ್ಲಿ ಸಿಕ್ಕಿತೆಂದು ನಂಬಿದ್ದೆ. ಎಷ್ಟು ಪ್ರಾಮಾಣಿಕನಾಗಿ ನನ್ನ ವ್ಯಕ್ತಿತ್ವವನ್ನು ತೆರೆದು ತೋರಿದ್ದೆನೇನೋ. ಈಗ ಎಲ್ಲಾ ಮರೆತನೆ ? ಅವಳಿನ್ನೂ

ಲಂಗದಲ್ಲಿರುವಾಗಲೇ ಭವಿಷ್ಯದ ಬಗ್ಗೆ ಸವಿಗನಸು ಕಂಡು, ಅವಳಲ್ಲಿ ಹೊಸ ಜೀವಶಕ್ತಿ ತುಂಬಿ ಹರಿದಾಗ, ಅವಳಪ್ಪ ಬೇರೆ ಯಾರಿಗೋ ಅವಳನ್ನು ಕೊಡುವೆನೆಂದು ನಿರ್ಣಯಿಸಿದಾಗ. ಅವಳು ಹೋದಳೆಂದು ಮನುಷ್ಯತ್ವ ಕಳೆದುಕೊಂಡು, ಕನಸು ಸತ್ತಿತೆಂದು ಜೀವಶಕ್ತಿ ಉರಿದು ಬೂದಿಯಾಯಿತೆಂದು, ಪ್ರೀತಿ ಬರೀ ಊಹೆಯಾಯಿತೆಂದು ಸತ್ತೆನೆ? ನನ್ನ ಅಪೇಕ್ಷೆಯನ್ನೇ ಮೀರಿ ಅವಳ ಬಗೆಗೆ ನಿರ್ಣಯವಾಗಿತ್ತು. ಅವಳ ಪರಿಚಯವಾದಂದಿನಿಂದ ಇಂದಿನವರೆಗೂ ನನ್ನ ಅಂತರಾಳದಲ್ಲಿ ಸದಾ ಮೂಡಿಬರುತ್ತಿದ್ದ ಅವಳ ರೂಪಕ್ಕೆ ಜೀವವಿರುತ್ತಿತ್ತು. ಎಷ್ಟೋ ದಿನ, ಈ ಸಜೀವರೂಪದ ಆಸರೆಯಲ್ಲಿ ನಿಶ್ಚಿಂತೆಯಿಂದ ಉಲ್ಲಸಿತನಾಗಿದ್ದೆ. ಕೊನೆಗೆ ಎಲ್ಲಾದರೂ ಆಗಲಿ ಸುಖವಾಗಿರು ಎಂದು ಆಶಿಸಿ, ಹರಸಿ ಕಳಿಸಿದ್ದೆ. ಕೆಲವು ದಿನಗಳಲ್ಲೇ ಎಲ್ಲ ನೆನಪುಗಳೂ ತುಕ್ಕು ಹಿಡಿಯತೊಡಗಿದ್ದುವು. ನಮ್ಮೊಳಗಿದ್ದ ಶ್ರದ್ಧಾಶಕ್ತಿಗಳನ್ನು ಕಂಡ ನಂದಾ. ಒಂದು ದಿನ ಹೇಳಿದ್ದಳು ಸುಪ್ರಭಾ. ನನ್ನನ್ನು ತುಂಬ ಹಚ್ಚಿಕೊಂಡಿದ್ದಾಳೆ. ಕಳೆದು ಹೋದದ್ದೇನೋ ಸಿಕ್ಕಿಯೇ ಬಿಟ್ಟಿತೆನ್ನುವವರ ಸಂತೋಷ ಅವಳದಾಗಿದೆ. ಅವಳ ಕೈ ಬಿಡಬೇಡ ಮಾತ್ರ' ಎಂದು. 'ನಾವು ಅಂದುಕೊಂಡಹಾಗೆ ಎಲ್ಲವೂ ನಡೆದು ಹೋಗುತ್ತದೆಂದು ತಿಳಿಯುವುದೇ ಮೋಸ. ಅದರಲ್ಲೂ ಸುಪ್ರಭಾ ಮತ್ತು ನನ್ನ ಸಂಬಂಧದ ಕೊನೆಯ ಬಗ್ಗೆ ಕಲ್ಪಿಸಿದಂತೆಲ್ಲ ರೋಮ್ಯಾಂಟಿಕ್ ರೀತಿಯಲ್ಲಿ ನಡೆದುಹೋಗುವುದು ಏನೋ ಏನೋ' ಎಂದು ಮಾತು ನಿಲ್ಲಿಸಿ, 'ಸಮಸ್ಯೆ ಜೀವನದ ಸಂಗಾತಿ. ಭ್ರಮೆಗಳೇ ಇಲ್ಲಿ ನಿಜವಾದ ಸತ್ಯಗಳೇನೋ' ಎಂದಿದ್ದೆ. ವ್ಯಕ್ತಿಯೇ ಸಮಾಜದ ಘಟಕವಾಗಿರುವಾಗ ಬಲವಿದ್ದಷ್ಟಕ್ಕೇ ಬದುಕಿಕೊಳ್ಳಬೇಕಾಗಿದೆ. ಎಲ್ಲರೂ ಈ ದಾರಿಯಲ್ಲಿಯೇ ಮಹಾಜೀವನ ಪ್ರವಾಹದ ಹನಿಯೆಂಬಂತೆ ಅಳಿದು ಹೋಗುವುದೇ ಹಣೆಬರಹವಾಗಿದೆ. ತನ್ನತನ್ನ ಅಳವಿಗೆ ಅನುಗುಣವಾಗಿ ತನ್ನತನ್ನ ಬದುಕನ್ನು ರೂಪಿಸಿಕೊಳ್ಳಲು ಪ್ರಯತ್ನಿಸಬೇಕಾದದ್ದು ಅನಿವಾರ್ಯವೆಂಬುದನ್ನು ಯಾರು ಅರಿಯರು? ಆದರೂ ಅವಳು ಮತ್ತೆ ಕೇಳುತ್ತಾಳೆ. 'ನಿನ್ನಿಂದ ಅವಳು ದೂರವಾದಾಗಲೂ ಏನೂ ಅನಿಸಲಿಲ್ಲವೇ, ನನಗೇ ಅದೆಷ್ಟು ಸಂಕಟವಾಗಿತ್ತು ಗೊತ್ತಾ' ಎಂದು-ಉತ್ತರಿಸಿದ್ದೆ. "ಇಲ್ಲ, ಇಂಥ ಸೆಳೆತಗಳಿಂದ ದೂರವಾದಾಗಲೇ ಶಾಂತ ಬದುಕಿನ ಆಳವನ್ನು ಗ್ರಹಿಸುವುದಾಗುತ್ತದೆ. ನಮ್ಮ ಮನ. ಪೂರ್ವಗ್ರಹ ಮುಕ್ತವಾದಷ್ಟೂ ಅಂತರಂಗದ ಸ್ಪಂದನಗಳು ನಿಚ್ಚಳವಾದಷ್ಟೂ ನಾವು ಹೆಚ್ಚು ಗ್ರಹಿಸಲಿಕ್ಕೂ ವ್ಯಾಪಕವಾಗಲಿಕ್ಕೂ ಸಾಧ್ಯವಾಗುತ್ತದೆ. ಪ್ರತಿಕ್ಷಣವೂ ಹೀಗೆ ಬಿಡುಗಡೆಗೊಂಡ ಮನೋಧರ್ಮದವರಾದಾಗ ಬದುಕು ಸಹನೀಯವಾಗುತ್ತದೆ" ನನಗೆ ಇನ್ನೂ ಸರಳವಾಗಿ, ಮುಗ್ಧವಾಗಿ ಹೇಳಲಾಗದೇ ಹೋಯಿತು. ಅವಳಿಗೆ ಎಷ್ಟು ಅರ್ಥವಾಯಿತೋ ಇಲ್ಲವೋ ಹಾರ್ದಿಕದಾಗಿ ನೋಡುತ್ತಿದ್ದಳಷ್ಟೇ. ಅಲ್ಲಿಂದ ಹೊರಟಾಗಲಂತೂ 'ಎಷ್ಟೋ ದಿವಸದ ಮೇಲೆ ಬಂದವನು ಅವಸರವಾಗಿಯೇ ಹೊರಟುಬಿಡುತ್ತೀಯೆ. ಇವತ್ತು ಉಳಿದುಕೊಳ್ಳಲೇ ಬೇಕು' ಎಂದು ಹಠ ಹಿಡಿಯುತ್ತಾಳೆ ಇನ್ನೊಮ್ಮೆ ಬರುತ್ತೇನೆಂದು ಎಷ್ಟು ಹೇಳಿದರೂ ಅವಳಿಗೆ ನಂಬಿಕೆಯಿಲ್ಲ ನನಗೆ ಹೊರಟುಬರಲೇಬೇಕಾಗಿದ್ದುದರಿಂದ

ಎದ್ದುಬಿಡುತ್ತೇನೆ. ಈಗಂತೂ ಅವಳ ಅಳುಮುಖ ನೋಡಲಿಕ್ಕೇ ಆಗುವುದಿಲ್ಲ. ಅವಳ ದೃಷ್ಟಿಯಲ್ಲಿ ನಾನೊಬ್ಬ ಮಹಾಪುರುಷ ತನ್ನ ಮುಂದಿನ ನೀರವತೆಗಾಗಿ ದುಃಖಿಸುತ್ತಾಳೆ; ಮೌನವಾಗಿ ಅಳುತ್ತಾಳೆ. 'ಮತ್ತೆ ಬರಲೆ ಬೇಕು' ಎಂದು ಧ್ವನಿ ಕಂಪಿಸಿ ನುಡಿಯುತ್ತಾಳೆ. 'ಆಗಲಿ' ಎನ್ನುತ್ತೇನೆ. ಕೃತಕ ನಗೆ ಆಡುತ್ತಾಳೆ. 'ಮುದ್ದಾಂ ಬರುತ್ತೇನೆ' ಎಂದು ದಾಪುಗಾಲು ಹಾಕಿ ಹೊರಬೀಳುತ್ತೇನೆ. ಸ್ವಲ್ಪ ದೂರದವರೆಗೆ ಹಿಂಬಾಲಿಸಿ ಬರುತ್ತಾಳೆ. ಮತ್ತೆ ಧ್ವನಿಯಿಲ್ಲ. ಕಣ್ಣುಗಳಲ್ಲಿ ಮಾತ್ರ ನೀರು ಉಕ್ಕುತ್ತಲೇ ಇರುತ್ತವೆ. ಕರವಸ್ತ್ರ ತೆಗೆದು ಕಣ್ಣಿಗೊತ್ತಿಕೊಂಡು ಸರಸರನೆ ಹೆಜ್ಜೆ ಹಾಕಿರುತ್ತೇನೆ. 'ಬರಲೇಬೇಕು. ಬರಲೇಬೇಕು' ಎಂದು ಅವಳ ಆರ್ತಧ್ವನಿ ಕಿವಿ ತುಂಬಿರುತ್ತದೆ. ಹೃದಯ ಬಿಕ್ಕುತ್ತದೆ. ಪಾಪ, ಹೂವಿನಂತಹವಳು ಬಾಡುತ್ತಾಳೆ, ಬಳಲುತ್ತಾಳೆ.

ಯೋಜನೆಗೆ ಅಡ್ಡವಾಗಿಯೋ ಎಂಬಂತೆ ಮಧ್ಯಾಹ್ನದ ಚಹಾಕ್ಕೆ ಕರೆ ಬಂತು. ಎಲ್ಲರೂ ಎದ್ದೆವು. ಚಹಾ ಕುಡಿಯುತ್ತಿದ್ದಂತೆ ಅಜ್ಜ 'ಮಹಾಬಲೇಶ್ವರ, ನೀನಿವತ್ತು ರಾಮಣ್ಣನೊಂದಿಗೆ ಗೋವಿಂದನ ಮನೆಗೆ ಹೋಗಬೇಕು. ಇವತ್ತು ಸೂತಕದ ಐದನೇ ದಿನ. ಮಾತನಾಡಿಸಿ ಬರೋ ಸಂಪ್ರದಾಯ ಬಿಡಲಾಗದು. ನಿನ್ನಂಥವನು ಇನ್ನು ಒಂದೊಂದೆ ಜವಾಬ್ದಾರಿ ತೆಗೆದುಕೊಳ್ಳಬೇಕು' ಎಂದ. ಸರಿಯೆಂದೆ. ದೊಡ್ಡಮ್ಮ ಕೇಳಿದಳು 'ಅಲ್ಲಿ ಹೋಗಿ ಏನು ಹೇಳ್ತಿ' ಎಂದು. 'ಅಳಲಿಕ್ಕಂತೂ ನನ್ನಿಂದಾಗದು. ಅಳುವೆಲ್ಲ ನನ್ನಲ್ಲಿ ಬತ್ತಿಹೋಗಿದೆ. ಜೀವನದಲ್ಲಿ ಅತ್ಯಂತ ಪ್ರಮುಖವಾದದ್ದು, ಸತ್ಯವಾದದ್ದು ಎಂದರೆ ಮರಣವೊಂದೇ. ಅದನ್ನು ಮೀರಿದ ಅವಿನಾಶಿಯಾಗಿ ನಮ್ಮ ಕ್ರಿಯೆ ನಡೆಯಬೇಕು. ನಗುನಗುತ್ತಾ ಇರಬೇಕಪ್ಪಾ' ಎಂದು ಬುದ್ಧನ ಹಾಗೆ ಮಾತನಾಡಿದೆ. ಅಮ್ಮ-ಚಿಕ್ಕಮ್ಮರೆಲ್ಲ ಕಣ್ತುಂಬವಾಗಿ ನನ್ನನ್ನೇ ದೃಷ್ಟಿಸಿದ್ದರು. ತಟ್ಟನೆ ನನಗೆ ಹಿಂದಿನ ದಿನದ ವ್ಯಕ್ತಿ ಮತ್ತು ಮಾನವೀಯತೆಯ ಚರ್ಚೆಗೆ ಖಚಿತವಾದ ನಿರ್ಣಯ ಒಮ್ಮೆಲೆ ಸಿಕ್ಕಿದಂತಾಗಿ ಭಾರ ಎತ್ತುವವರ ಹಾಗೆ ಎನಿಸಿತಾಗಿ. ಚಕ್ರವ್ಯೂಹ ಪೊಕ್ಕ ಅಭಿಮನ್ಯುವಿನಂತೆ ಭಾಸವಾಗಿ ಹೊರಟೆ.

ಕೋಲುಪದ

ಎಂ. ಎನ್. ವಾಲಿ

ಪಾರ್ವತಿ–ಶಂಕರ ಜೋಡ ನಂದೀ ಏರಿ ।
ಕೈಲಾಸದಿಂದ ಇಳದಾರ ಕೋಲೆನ್ನ ಕೋಲ ॥ ಪ ॥

ಕೈಲಾಸದಿಂದ ಇಳಿದುಂಬರುವ ಹೊತ್ತಿಗಿ ।
ಹಾದರ–ಹಕ್ಕಿ ಇದಿರಾಗಿ ಕೋ ।
ಹಾದರ ಅನ್ನೂದು ಎಂಥಾದ್ಯ ಶಂಕರ ।
ತೋರಿಸಿ ಕೊಡಿರಿ ನಮಗೀಟು ಕೋ ।
ಹಾದರ ಅನ್ನೂದು ಹಾಲವ್ಯಾಲಿನ ಕೆನಿಯು ।
ಅದರಾಗಾದ ಅತ್ರಿ ರುಚಿ ಕೋ ।
ಮುಂಜಾನೆದ್ದು ಶಂಕರ ಹಾಲಾಬಾನಾ ಉಂಡು ।
ಉಕ್ಕಿನುಳಿ ಬಾಚಿ ಹೆಗಲಿಗಿ ಕೋ ।
ಉಕ್ಕಿನುಳಿ ಬಾಚಿ ಹೆಗಲಿಗಿ ಹಾಕೊಂಡು ।
ಹೊಕ್ಕ್ಯಾನ ಬಾಳಿ ಬನಗಳ ಕೋ ।
ಬಾಳಿಯು ಬನದಾಗ ಹೊಕ್ಕ್ಯಾನ ಶಂಕರ ।
ಚೆಂದಾನ ಬಾಳಿ ಕಡದಾನ ಕೋ ।
ಚೆಂದಾನ ಬಾಳಿ ಕಡದು ತಾ ಮಾಡ್ಯಾನ ।
ಇಪ್ಪತ್ತೇಳು ಇಲಿಮರಿಯು ಕೋ ।
ಇಪ್ಪತೇಳು ಇಲಿಮರಿಗಿ ಹೇಳ್ಯಾನ ಶಂಕರ ।
ಸಿರಿಗೌರಿ ಅರಮನಿಗ್ಹೋಗಿರಿ ಕೋ ।
ಮುಂಜಾನೆದ್ದು ಶಂಕರ ತಂಪ್ಪಾಬಾನಾ ಉಂಡು
ಉಕ್ಕಿನುಳಿ ಬಾಚಿ ಹೆಗಲಿಗಿ ಕೋ ।
ಉಕ್ಕಿನುಳಿ ಬಾಚಿ ಹೆಗಲಿಗಿ ಹಾಕೊಂಡು ।
ಹೊಕ್ಕ್ಯಾನ ನಿಂಬಿ ಬನಗಳ ಕೋ ।
ನಿಂಬಿಯು ಬನದಾಗ ಹೊಕ್ಕ್ಯಾನ ಶಂಕರ ।
ಚೆಂದಾನ ನಿಂಬಿ ಕಡದಾನ ಕೋ ।

* ಹಾಡಿದವರು : ಫಾತಿಮಾ ಪಿಂಜಾರ, ಸಾಲೊಟಗಿ

ಚೆಂದಾನ ನಿಂಬಿ ಕಡದು ತಾ ಮಾಡ್ಯಾನ ।
ಇಪ್ಪತ್ತೇಳು ಇಲಿಮರಿಯು ಕೋ ।
ಇಪ್ಪತ್ತೇಳು ಇಲಿಮರಿಗಿ ಹೇಳ್ಯಾನ ಶಂಕರ ।
ಸಿರಿಗೌರಿ ಅರಮನಿಗ್ಹೋಗಿರಿ ಕೋ ॥
ಹತ್ತಕಾಲ ನಿಚ್ಚಣಿಕಿ ಏರ್‍ಯಾಳ ಸಿರಿಗೌರಿ ।
ಮ್ಯಾಗಿನ ಬಿಂಡಿ ಇಳಂವ್ಯಾಳ ಕೋ ।
ಮ್ಯಾಗಿನ ಬಿಂಡಿ ಇಳುವಿ ನೋಡುದರಾಗ ।
ಶಂಕರ್‍ನ ಹೊದಿಕೆಲ್ಲ ನವನುಚ್ಚ ಕೋ ।
ಶಂಕರನ ಹೊದಿಕೆಲ್ಲ ನವನುಚ್ಚ ಆಗ್ಯಾವ ।
ಅವನಿಗೇನುತ್ತರ ಕೊಡಲೆವ್ವ ಕೋ ॥
ಹತ್ತಕಾಲ ನಿಚ್ಚಣಿಕಿ ಏರ್‍ಯಾಳ ಸಿರಿಗೌರಿ ।
ನಡುವಿನ ಬಿಂಡಿ ಇಳುವ್ಯಾಳ ಕೋ ।
ನಡುವಿನ ಬಿಂಡಿ ಇಳುವಿನೋಡುದರಾಗ ।
ಶಂಕರ್‍ನ ಹಚ್ಚಡ ನವನುಚ್ಚ ಕೋ ।
ಶಂಕರನ ಹಚ್ಚಡ ನವನುಚ್ಚ ಆಗ್ಯಾದ ।
ಅವನಿಗೇನುತ್ತರ ಕೊಡಲೆವ್ವ ಕೋ ॥
ನೆರೆಮನಿ ಅವ್ವಗಳಿರಾ ನೆರೆಮನಿ ಅಕ್ಕಗಳಿಗಾ ।
ಸಿಂಪಿಗ ಬಂದರ ಕಳಿಸಿರಿ ಕೋ ।
ಬಲಕಿನ ಕೈಯಲಿ ಸೂಜಿ, ಎಡಗೈಲಿ ಕತ್ತರಿ ।
ಹಾರೂರ ಕೇರಿ ನಡದಾನ ಕೋ ।
ಹಾರೂರ ಕೇರಿ ಹೊಕ್ಕ್ಯಾನ ಶಂಕರ ।
ಮಕ್ಕಳ ಕೊಂಚಿಗಿ ಹೊಲಿಸಿರಿ ಕೋ ॥
ಮಕ್ಕಳ ಕೊಂಚಿಗಿ ನಾವು ನಿನ್ನೆಮೊನ್ನೆ ಹೊಲಿಸೀವಿ ।
ಸಿರಿಗೌರಿ ಅರಮನಿಗ್ಹೋಗಿರಿ ಕೋ ।
ಬಲಕಿನ ಕೈಯಲಿ ಸೂಜಿ, ಎಡಗೈಯಲಿ ಕತ್ತರಿ ।
ಒಕ್ಕಲಗೇರಿ ನಡದಾನ ಕೋ ।
ಒಕ್ಕಲಗೇರಿ ಹೊಕ್ಕ್ಯಾನ ಶಂಕರ ।
ಮಕ್ಕಳ ಅಂಗಿ ಹೊಲಿಸಿರಿ ಕೋ ।
ಮಕ್ಕಳ ಅಂಗಿ ನಾವು ನಿನ್ನೆಮೊನ್ನೆ ಹೊಲಿಸೀವಿ ।
ಸಿರಿಗೌರಿ ಅರಮನಿಗ್ಹೋಗಿರಿ ಕೋ ।
ಹತ್ತಕಾಲ ನಿಚ್ಚಣಿಕಿ ಏರ್‍ಯಾಳ ಸಿರಿಗೌರಿ ।
ಸಿಂಪಿಗೇರಣ್ಣೆಂದು ಕರೆದಾಳ ಕೋ ।

ಅಣ್ಣೆಂದು ಅನಬ್ಯಾಡ ಅರಿವಿಲ್ದ ಸಿರಿಗೌರಿ ।
ಚೆನ್ನಸೆಟ್ಟೆಂತ ಕರಿಯು ಕೋ ।
ಇದ್ದಂಥಾ ಹೊದಿಕೆಯು ಇದ್ದಂತೆ ಮಾಡಿದರ ।
ಬೇಡಿದ ಕೂಲಿ ಕೊಡತೀನಿ ಕೋ ।
ಬೇಡ್ಡಿದ ಕೂಲಿ ಕೊಡತೀನಿ ಅನ್ನುಹಾಂಗ ।
ಸೂಜಿಮುಟ್ಟಿ ಹೇಳ ಗೌರಿ ಕೋ ।
ತಿಪ್ಪಿಮ್ಯಾಲಿನ ಅರಿವಿ ತೀಡಿ ತಾ ತಕ್ಕೊಂಡು ।
ಶಿವನ ಹೊದಿಕ್ಯಿಯು ಹೊಲದಾನ ಕೋ ।
ಬೇಲಿಮ್ಯಾಲಿನ ಅರಿವಿ ಕೋಲಿಲೆ ತಕ್ಕೊಂಡು ।
ಶಿವನ ಹಚ್ಚಡ ಹೊಲದಾನ ಕೋ ।
ಇದ್ದಂಥಾ ಹೊದಿಕೆಯು ಇದ್ದಾಂಗ ಮಾಡೀನಿ ।
ಬೇಡಿದ ಕೂಲಿ ಕುಡುಬಾರ ಕೋ ।
ಅಡಗಿಯು ಮನಿಯಾಗ ಹೊಕ್ಕಾಳ ಸಿರಿಗೌರಿ ।
ಮುತ್ತ ತಂದಾಳ ಮರತುಂಬಿ ಕೋ ।
ಮುತ್ತವು ನಮ್ಮಲ್ಲಿ ಮಂಗ್ಗುಜೋಳಾಗ್ಯಾವ ।
ಮುತ್ತೊಲ್ಲೆ ಹೋಗ ಗೌರಿ ಕೋ ।
ದೇವರ ಮನಿಯಾಗ ಹೊಕ್ಕಾಳ ಸಿರಿಗೌರಿ ।
ಹವಳ ತಂದಾಳ ಮರತುಂಬಿ ಕೋ ।
ಹವಳವು ನಮ್ಮಲ್ಲಿ ಹಳ್ಳಿಜೋಳಾಗ್ಯಾವ ।
ಹವಳೊಲ್ಲೆ ಹೋಗ ಗೌರಿ ಕೋ ।
ಹಾಕಲಕ ಹಸಿಬಿಲ್ಲ ಹೇರಲಕ ಬಸವಿಲ್ಲ ।
ಕಟ್ಟಿಮ್ಯಾಗ ನಿಮ್ಮ ಹಿರಿಯರು ಕೋ ।
ಕಟ್ಟಿಯುಮ್ಯಾಗ ನಿಮ್ಮ ಹಿರಿಯರು ಕಂಡರ ।
ಹೊಟ್ಟಿಯುಮ್ಯಾಗ ಒದ್ದಾರು ಕೋ ॥
ಬೇಡಿದ ಕೂಲಿಯು ಕೊಡಲಾರದಿದ್ದರ ।
ಕತ್ತರಿ ಹಾವಾಗಿ ಹರದೀತ ಕೋ ।
ಬೇಡಿದ ಕೂಲಿಯು ಕೊಡಲಾರದಿದ್ದರ ।
ಸೂಜಿ ಚೇಳಾಗಿ ಕಡದೀತ ಕೋ ॥
ಉಕ್ಕು ಹಾಲಿನಾಗ ಬಟ್ಟಕ್ಕಿ ಬಸ್ತೀನಿ ।
ಹಸ್ತ ಬಂದಣ್ಣ ಉಣ ಏಳ ಕೋ ।
ಅಣ್ಣೆಂದು ಅನಬ್ಯಾಡ ಅರಿವಿಲ್ದ ಸಿರಿಗೌರಿ ।
ಚೆನ್ನಸೆಟ್ಟೆಂತ ಕರಿಯು ಕೋ ।

ಹುಟ್ಟಿದ ಮಗ ನಾನು ಒಬ್ಬನೇ ಉಂಡಿಲ್ಲ ।
ಕೂಡಿ ಉಣಬಾರ ಗೌರಿ ಕೋ ।
ನೀನು ಸಿಂಪಿಗಸೆಟ್ಟಿ ನಾನು ಜಂಗಮರವಳು ।
ಕೂಡಿ ಉಣುವದು ಧರ್ಮಲ್ಲ ಕೋ ।
ಮಂಚವ ಹಾಕೀನಿ ಮಲ್ಲಿಗಿ ಹರವೀನಿ ।
ನಿದ್ದಿ ಬಂದಣ್ಣ ಮಲಗೇಳ ಕೋ ।
ಅಣ್ಣೆಂದು ಅನಬ್ಯಾಡ ಅರಿವಿಲ್ದ ಸಿರಿಗೌರಿ ।
ಚೆನ್ನಸೆಟ್ಟೆಂತ ಕರಿಯು ಕೋ ।
ಹುಟ್ಟಿದ ಮಗ ನಾನು ಒಬ್ಬನೇ ಮಲಗಿಲ್ಲ ।
ಮಡದಿ ಒಡಗೊಂಡು ಬರ ಏಳ ಕೋ ।
ನೀನು ಸಿಂಪಿಗ ಸೆಟ್ಟಿ ನಾನು ಜಂಗಮರವಳು ।
ಕೂಡಿ ಮಲಗೂದು ಧರ್ಮಲ್ಲ ಕೋ ।
ಬಾಗಿಲದಾಗಿರು ಮಾತಿನರಗಿಣಿಗಳಿರಾ ।
ನಲ್ಲ ಬಂದರ ಕಾಯಿರಿ ಕೋ ।
ಹಾದರ ಅಂದರ ಏನೆಂದು ಕೇಳ್ತಿದ್ದಿ ।
ಇದು ಹ್ಯಾಂಗ ಕಲ್ತೆ ಹೊಯ್ಮಾಲಿ ಕೋ ॥

ಪಂಪಭಾರತದ ಪಾಠಾಂತರಗಳು :

ಹೇಮಲತಾ ಪಡಕಿ

ಸಪ್ತಮ ಮತ್ತು ಅಷ್ಟಮಾಶ್ವಾಸಗಳು

೭–೨ ವಚನ : ಪಾಂಡವ–ಕೌರವರ ದ್ಯೂತ ಪ್ರಸಂಗವಿದು. ಧರ್ಮರಾಯ, ಮೊದಲಿನ ಆಟಗಳಲ್ಲಿ ಸೋತು ತಲೆಕೆಳಗೆಮಾಡಿ ಕುಳಿತಿರುತ್ತಾನೆ. ಅಂಥ ಆತನ ಚಿತ್ರಣ, ಈ ವಚನದಲ್ಲಿದೆ. ಪಂ. ಭಾ.ದಲ್ಲಿ "ತಲೆಗವಿವನಲ್ಲದೆಯುಂ" ಎಂಬ ಪಾಠವಿದ್ದರೆ ಖ, ಗ, ಘ ಪ್ರತಿಗಳಲ್ಲಿ "ತಲೆಗವಿಯನಲ್ಲದೆಯುಂ" ಎಂಬ ಪಾಠಾಂತರವಿದೆ. ದೀಪಿಕೆಯಲ್ಲಿ ಕೂಡ ಈ ಖ.ಗ.ಘ ಪ್ರತಿಗಳ ಪಾಠವನ್ನೇ ಸ್ವೀಕರಿಸಲಾಗಿದೆ. ಅಲ್ಲಿ ಈ ರೀತಿ ಅರ್ಥ ವಿವರಣೆಯಿದೆ : ತಲೆಗೆ ಮುಸುಕಿಲ್ಲದವನಾದರೂ ಅಸಮಾಧಾನದಿಂದ ತಲೆಮುಚ್ಚಿ ಕೊಂಡಿದ್ದ, ಧರ್ಮರಾಜ. ಈ ಪಾಠಕ್ಕಿಂತ ಮುದ್ರಿತ ಪ್ರತಿಯಲ್ಲಿದ್ದ ಪಾಠವೇ ಅರ್ಥ ವತ್ತಾದದ್ದೆಂದು ತೋರುತ್ತದೆ. ಧರ್ಮರಾಜ, ಎಂದೂ ತಲೆಗವಿವನಲ್ಲ. ಅಂದರೆ ತಲೆ ಯನ್ನು ಮುಚ್ಚಿಕೊಳ್ಳುವವನಲ್ಲ, ಕೆಳಗೆ ಹಾಕುವವನಲ್ಲ ಅಥವಾ ಮುಖವನ್ನು ಮುಚ್ಚಿ ಕೊಳ್ಳುವವನಲ್ಲ. ಆದರೆ ಅಂದು ತನ್ನ ಸೋಲಿನಿಂದುಂಟಾದ ಅಪಮಾನ. ಅಸಮಾ ಧಾನ, ನಾಚಿಕೆಯಿಂದ ಆತ ತಲೆಗವಿದು ಇರಬೇಕಾಯ್ತು. ಇಂಥ ಸುಂದರ ಅರ್ಥ ವುಂಟಾಗುವುದರಿಂದ ಮುದ್ರಿತ ಪ್ರತಿಯಲ್ಲಿದ್ದ ಪಾಠವೇ ಉಚಿತವೆನಿಸುತ್ತದೆ.

೭–೪೦ : ಧರ್ಮರಾಜ, ಕೌರವರೊಡನೆಯ ಜೂಜಾಟದಲ್ಲಿ ರಾಜ್ಯ. ಧನ ಎಲ್ಲ ವನ್ನೂ ಕಳೆದುಕೊಂಡು ತಮ್ಮಂದಿರೊಡಗೂಡಿ ವನವಾಸಕ್ಕೆ ಬರುತ್ತಾನೆ. ದುರ್ಯೋಧ ನನ ಆಡಳಿತವಾರ್ತೆಯನ್ನು ತಂದ ಧರ್ಮರಾಜನ ದೂತನು ತಾನು ಕಂಡ ವಿಷಯ ವನ್ನು ನಿವೇದಿಸುತ್ತಾನೆ; ಧರ್ಮರಾಜನ ರಾಜ್ಯ ಈಗ ದುರ್ಯೋಧನನ ಸೇವೆಯನ್ನು ಮಾಡುತ್ತಿದೆ. ದುರ್ಯೋಧನನ ಕಾರ್ಯ, ನವರಾಜ್ಯನೀತಿ ಬೃಹಸ್ಪತಿಯನ್ನು ಕೂಡ ಮೀರಿಸುವಂಥದು. ಇಲ್ಲಿ 'ಕೆಯ್ಗೆ ಮಾಡುವ ನಯಮಾ' ಎಂಬ ಪಾಠವನ್ನು ಮುದ್ರಿತ ಪ್ರತಿಯಲ್ಲಿ ಇಟ್ಟುಕೊಳ್ಳಲಾಗಿದೆ. 'ಕೆಯ್ಗೆ' ಎಂಬ ಪಾಠಾಂತರ ಘ. ಪ್ರತಿಯಲ್ಲಿದೆ. ನವನಯಮಾ (ಕ), ...ನಯಮಾ (ಖ), ನಯಮುಮಾ (ಗ), ಸವಿಸಂಡಿಯಿಂ (ಘ) – ಇವು ಪಾಠಾಂತರಗಳು. 'ಧಾರ್ತರಾಷ್ಟ್ರನಾ ಕೆಯ್ಗೆಮಾಡುವ ನಯಮಾ' ಎಂಬ ಪಾಠವನ್ನು ಇಟ್ಟುಕೊಂಡರೆ, ದುರ್ಯೋಧನನು ಆ ಸೇವೆಗೆ ಮಾಡುವ ನಯ ಅಥವಾ ನೀತಿ, ರೀತಿ ಬೃಹಸ್ಪತಿಯನ್ನು ಮೀರಿಸುವಂಥದ್ದು. ಎಂದರ್ಥವಾಗುತ್ತದೆ. ಬೃಹಸ್ಪತಿಯ ಬುದ್ಧಿಯನ್ನು ಮೀರಿಸುವಂಥ ಚಾತುರ್ಯವಾವುದೂ ಇಲ್ಲಿ ಕಾಣಬರುವು ದಿಲ್ಲ. ಇದಕ್ಕಿರುವ ಪಾಠಾಂತರಗಳ ಅವಲೋಕನ ಮಾಡಿದಾಗ, ದೀಪಿಕೆಕಾರರು ಕೆಯ್ಗೆ

ಎಂಬುದನ್ನು ಕೆಯ್ಯಂ ಎಂದು ಪರಿಷ್ಕರಿಸಿ. ಮುಂದೆ ಕ ಪ್ರತಿಯ ಪಾಠವನ್ನು ಸ್ವೀಕರಿಸಿದ್ದಾರೆ. ಇದರಿಂದ ಸಂದರ್ಭಕ್ಕೆ ಉಚಿತವಾದಂಥ ಅರ್ಥವುಂಟಾಗುತ್ತದೆ ದುರ್ಯೋಧನನ ಕಾರ್ಯವೂ ಹೊಸ ರಾಜನೀತಿಯೂ ಬೃಹಸ್ಪತಿಯನ್ನು ಕೂಡ ಮೀರಿಸುವಂಥದ್ದು. ಆದ್ದರಿಂದ ಡಿ ಎಲ್. ಎನ್. ಅವರು ಪರಿಷ್ಕರಿಸಿದ ಹಾಗೂ ಇಟ್ಟುಕೊಂಡ ಪಾಠ ಅರ್ಹವಾದದ್ದೆಂದು ತೋರುತ್ತದೆ.

೭-೮೦ ವಚನ : ಈ ವಚನದಲ್ಲಿ ಅರ್ಜುನನ ತಪಸ್ಸು, ಇತರರ ಮೇಲೆ ಮಾಡಿದ ಪ್ರಭಾವವನ್ನು ಹೇಳಲಾಗಿದೆ ಇತರ ತಪಸ್ವಿಗಳ ತಪಸ್ಸು. ಅರ್ಜುನನ ತಪಃಪ್ರಭಾವದಿಂದ, ತೇಜಸ್ಸಿನಿಂದ ಬೆಂದ ನುಲಿಯಂತೆ ನಿಷ್ಪ್ರಯೋಜಕವಾಯಿತಂತೆ. ಮುದ್ರಿತ ಪ ಭಾ. ದ ಪ್ರತಿಯಲ್ಲಿ 'ವಿತರ್ಕಂ ಮುಟ್ಟಿಲ್ಲದೆ ಮುಟ್ಟಾಗಿದೆ' ಎಂಬ ಪಾಠವಿದ್ದರೆ. ದೀಪಿಕೆಯಲ್ಲಿ ಹಾಗೂ ಕ. ಪ್ರತಿಯಲ್ಲಿ 'ವಿತರ್ಕಂ ಮುಟ್ಟಲ್ಲದ... ಎಂಬ ಪಾಠವಿದೆ. ದೀಪಿಕೆಯಲ್ಲಿ 'ವಿತರ್ಕಂ ಮುಟ್ಟಲ್ಲದ' ಎಂಬುದಕ್ಕೆ ಯಾವುದಕ್ಕೂ ಬೇಡವಾಗದೆ ಎಂದು ಅರ್ಥವಿದೆ. ಯಾವುದಕ್ಕೂ ಬೇಡವಾಗದೆ ನಿಷ್ಪ್ರಯೋಜಕವಾಯಿತು ಎಂದರೆ, ಎಲ್ಲಿಕ್ಕೂ ಬೇಕಾಗಿ ನಿಷ್ಪ್ರಯೋಜಕವಾಯ್ತು ಎಂದರ್ಥ. ಬೇಡ+ಆಗದೆ ಎಂಬ ಎರಡು ನಿಷೇದಾರ್ಥ ಪದಗಳು ಕೂಡಿ, ಇಲ್ಲಿ ಅದಕ್ಕೆ ವಿರುದ್ಧವಾದ ಇನ್ನೊಂದು ಅರ್ಥವೇ ಹೊರಡುತ್ತದೆ. ಅದರ ಬದಲು ಮುಟ್ಟು ಎಂಬ ಪದಕ್ಕೆ ಸ್ಪರ್ಶ ಎಂಬ ರೂಢಾರ್ಥವನ್ನೇ ಇಟ್ಟುಕೊಂಡು 'ಮುಟ್ಟಿಲ್ಲದೆ ಮುಟ್ಟಾಗಿದೆ' ಎಂದರೆ ಯಾವುದಕ್ಕೂ ಸ್ಪರ್ಶವಿಲ್ಲದೆ ಅಸ್ಪೃಶ್ಯವಾಯಿತು ಅವರ ತಪಸ್ಸು. ಎಂದರ್ಥವಾಗುತ್ತದೆ. ಮುಟ್ಟಲ್ಲದೆ ಎಂಬ ಪಾಠವನ್ನಿಟ್ಟುಕೊಂಡರೂ ಇದೇ ಅರ್ಥ ಬರುವುದರಿಂದ ಸ್ವೀಕೃತ ಪಾಠವನ್ನು ಬದಿಗೊತ್ತುವುದು. ಅನವಶ್ಯಕವೆಂದು ತೋರುತ್ತದೆಯಲ್ಲದೇ ಆ ದೀಪಿಕೆಯಲ್ಲಿಯ ಅರ್ಥ. ವಿರೋದಾಭಾಸವನ್ನುಂಟು ಮಾಡುತ್ತದೆ.

೮-೨೧ ವಚನ : ಈ ವಚನದಲ್ಲಿ ನರ-ನಾರಾಯಣರ ಯುದ್ಧದ ವಿಷಯವಿದೆ. ಅವರಿಬ್ಬರೂ ಪಿರಿದುಂ ಪೊಟ್ತು ಸಂತರ್ಪಿನಂ ಯುದ್ಧಮಾಡಿದರಂತೆ. ಮುದ್ರಿತ ಪ್ರತಿಯಲ್ಲಿದ್ದ 'ಸಂತರ್ಪಿನಂ' ಪಾಠವನ್ನು ಪರಿಷತ್ತಿನವರು 'ಸಲ್ತರ್ಪಿನಂ' ಎಂದು ಊಹಿಸಿದ್ದಾರೆ. ಇದೇ ಪಾಠ ಉಚಿತವೆನಿಸುತ್ತದೆ. ಸಲ್ತರ್ಪಿನಂ ಎಂದರೆ ಸಲ್ಲುತ್ತಿರಲು. ಕಳೆಯುತ್ತಿರಲು ಎಂದರ್ಥ. ಬಹಳಷ್ಟು ವೇಳೆ ಕಳೆಯುವವರೆಗೆ ಅವರು ಯುದ್ಧ ಮಾಡಿದರೆಂಬ ಅರ್ಥವುಂಟಾಗುತ್ತದೆ. ದೀಪಿಕೆಯಲ್ಲಿ ಸಂತರ್ಪಿನಂ=ಸಲ್ತರ್ಪಿನಂ ಎಂಬ ಅರ್ಥವಿದೆ. ಆದರೂ ಪರಿಷತ್ತಿನ ಊಹಿತ ಪಾಠವೇ ಉಚಿತವೆನಿಸುತ್ತದೆ.

೮-೨೧ : ನರನಾರಾಯಣ ಯುದ್ಧವನ್ನು ನೋಡಲು. ಆಕಾಶದಲ್ಲಿ ದೇವತೆಗಳೆಲ್ಲ ನೆರೆದರಂತೆ. "ದೇವರೆಲ್ಲರುಮಂಬರತಳದೊಳಿರ್ದು ತಮ್ಮಂ ನೋಟ್ಟಂತೆ ನೋಡೆ" ಎಂಬ ಪಾಠ ಮುದ್ರಿತ ಪ್ರತಿಯಲ್ಲಿದೆ. ತಮ್ಮನ್ನು ನೋಡುವಂತೆ ನೋಡೆ ಎಂದಾಗ ಅದರಲ್ಲಿ ವೈಶಿಷ್ಟ್ಯವೇನೂ ಕಂಡುಬರುವುದಿಲ್ಲ. ಗ ಪ್ರತಿಯಲ್ಲಿ "...ಕಮಂ...." ಘ ಪ್ರತಿಯಲ್ಲಿ "......ಕದನಮಂ......" ಎಂಬ ಪಾಠಾಂತರಗಳಿವೆ. ಈ ಪಾಠಾಂತರಗಳನ್ನು ಅವಲೋಕಿಸಿ

ದಾಗ ಅಲ್ಲಿ ನಡೆಯುವ ಕದನವು, ಅಂಕದ ವಿಷಯವಿದ್ದಂತೆ ತೋರುತ್ತದೆ. ಡಾ. ಡಿ. ಎಲ್. ಎನ್. ಅವರು "ಅಂಬರತಳದೊಳಿ[ರ್ದಿಕಮಂ]...." ಎಂದು ಪರಿಷ್ಕರಿಸಿದ್ದಾರೆ. ಈ ಪರಿಷ್ಕಾರ ಇಲ್ಲಿ ಉಚಿತಾರ್ಥವನ್ನು ನೀಡುವುದರಿಂದ. ಉಳಿದೆರಡೂ ಭಿನ್ನಪಾಠಗಳ ಆಶಯ ಕೂಡ ಇದೇ ಇರುವುದರಿಂದ ದೀಪಿಕೆಯಲ್ಲಿಯ ಪಾಠ ಉಚಿತವೆಂದೂ, ಸ್ವೀಕಾರಾರ್ಹವೆಂದೂ ಹೇಳಬಹುದು.

೮-೬೨: ವಿರಾಟನ ಅರಮನೆಯಲ್ಲಿ ಸುಧೇಷ್ಣೆಯ ಬಳಿ ಊಳಿಗದವಳಾಗಿದ್ದ ದ್ರೌಪದಿಯನ್ನು ನೋಡಿ, ಕೀಚಕ ಮೋಹಿತನಾಗುತ್ತಾನೆ. ಅವಳ ಸೌಂದರ್ಯವನ್ನು ಕೀಚಕ, ಸ್ವಗತದಲ್ಲಿ ಈ ರೀತಿಯಾಗಿ ವರ್ಣಿಸುತ್ತಾನೆ. ಇವಳ ಮಾಸಿದ ರೂಪನ್ನು ನೋಡಿದರೆ ಅರ್ಥಮಾಸಿದ ಚಿತ್ರದ ಸ್ತ್ರೀಯ ರೂಪವನ್ನು ಮಾಸುವಂತೆ ಮಾಡುತ್ತದೆ. ಅಂಥ ರೂಪು ಅತಿಶಯವಾದ ಸೌಂದರ್ಯವನ್ನು ಪಡೆದಿದೆ.

ಇಲ್ಲಿ 'ಮಾಸದಿಕೆ' ಎಂಬ ಪಾಠ ಚಿಂತನಾರ್ಹ. ಮಾಸದಿಕೆ ಎಂದರೆ ಮಾಸದಿರುವಿಕೆ ಎಂದರ್ಥವಾಗುತ್ತದೆ ಅವಳ ಮಾಸಿದ ರೂಪು, ಮಾಸದಿರುವಿಕೆಯನ್ನು ಪಡೆದಿದೆಯೆಂದರೆ ಅರ್ಥ ಯೋಗ್ಯವೆನಿಸುವುದಿಲ್ಲ. ಡಿ ಎಲ್. ಎನ್. ಅವರು ಇದನ್ನು ಮಾಸ[ರಿ]ಕೆ ಇರಬಹುದೆಂದು ಊಹಿಸಿದ್ದಾರೆ. ಪಾಂಚಾಲಿಯ ಸ್ವಯಂವರ ಸಂದರ್ಭದಲ್ಲೂ ಮಾಸರ ಎಂಬ ಪದವೊಂದು ಬಳಕೆಯಾಗಿದೆ. ಮಾಸರ > ಮಾಸರಿಕೆ. ಮಾಸರ ಎಂದರೆ ಸೌಂದರ್ಯ. ಸುಂದರ. ಮಾಸರ. ಮಹಾಸ್ವರದ ತದ್ಭವವೆಂದು ಕಿಟೆಲ್‌ಕೋಶ ಹೇಳುತ್ತದೆ. ಈ ಅರ್ಥ ಹೊಂದುವುದಿಲ್ಲ. ತೆಲುಗಿನಲ್ಲಿ ಮಾಸರಮ್ಮು-ಮಿಶ್ರವಾಗಿ ಎಂಬ ಶಬ್ದವುಂಟು. ಸಂಸ್ಕೃತ ಪದ. ಮಾಧುರದಿಂದ ಮಾಸರ ಆಗಿರಬಹುದೆಂಬ ಡಿ. ಎಲ್. ಎನ್. ಗ್ರಹಿಕೆಗೆ, ಪ್ರಾಚೀನ ಕಾವ್ಯಗಳಲ್ಲಿ ಪ್ರಯೋಗವಾದ ಸಂದರ್ಭ. ಪುಷ್ಟಿಯನ್ನು ಕೊಡುತ್ತದೆ ಇಲ್ಲಿಯೂ ಮಾಸರ > ಮಾಸರಿಕೆಯೇ ಹೊರತು ಮಾಸದಿಕೆ ಇರಲಿಕ್ಕಿಲ್ಲವೆಂದು ತೋರುತ್ತದೆ.

೮-೮೫ : ದುರ್ಯೋಧನ ಪಾಂಡವರ ಜೂಜಾಟದ ಸೋಲನ್ನು. ಅವರ ವನವಾಸವನ್ನು ನೆನೆದು ಅವರು ನಮ್ಮೊಡನೆ ಕೂಡಿರಲು ಸಾಧ್ಯವಿಲ್ಲ. ಅವರು ಮತ್ತೆ ವನವಾಸಕ್ಕೆ ಹೋಗಲೇಬೇಕು ಎಂದು. ಅವರ ಅಜ್ಞಾತವಾಸದ ಅವಧಿಯಲ್ಲಿ ಅವರನ್ನು ಗುರುತಿಸುವ ಉಪಾಯಗಳನ್ನು ಹಾಕತೊಡಗುತ್ತಾನೆ. ಇಲ್ಲಿ. "ಪೋರಟುವಂತೆ" ಎಂಬ ಪಾಠ ವಿಚಾರಾರ್ಹ. ಡಾ. ಡಿ ಎಲ್. ಎನ್. ಅವರು ಶಬ್ದವಿಹಾರದಲ್ಲಿ "ಪೊಜಿಸು" ಪದದ ಬಗ್ಗೆ ದೀರ್ಘವಾಗಿ ವಿವೇಚಿಸಿದ್ದಾರೆ. ಪೊಜಿಸು ಎಂದರೆ ಬಿಳಿಕಪೋತ. ಅದು ವಿನಾಶಕಾರಕ ಪಕ್ಷಿ ಪೊಜಿಸು ಪದಕ್ಕೆ ಈ ಅರ್ಥವಷ್ಟೇ ಅಲ್ಲ. ಸಂದರ್ಭೋಚಿತವಾದ ಬೇರೆ ಅರ್ಥವೂ ಇಲ್ಲ. ಕೌರವರ ಪಾಲಿಗೆ ಪಾಂಡವರ ಅರಸುತನ ಪೊಜಿಸಿನಂತೆ. ಅದು ನಾಶವಾದದ್ದು ಅವರಿಗೆ ಸಂತೋಷಕಾರಕವೇ. ಪೊಜಿಸು ಪದವನ್ನು ಪೂರ್ವಕವಿಗಳು ಬಿಳಿಕಪೋತವೆಂಬ ಅರ್ಥದಲ್ಲಿ ಹಲವಾರು ಕಡೆಗೆ ಬಳಸಿರುವುದರಿಂದ ಇಲ್ಲಿ ಪೊಜಿಸು ಶಬ್ದವೇ ಇದೆಯೆಂದು. ಈ ಪದ್ಯದಲ್ಲಿ ರ, ಜಕಾರಗಳ ಮಿಶ್ರಪ್ರಾಸವಿದೆಯೆಂದೂ ಹೇಳಬಹುದು.

ಮಾನವ ಪ್ರಜ್ಞಾವಿಕಾಸ

ಶಂ. ಬಾ. ಜೋಶಿ

(ಕೆಲವು ಸಾಂಕೇತಿಕ ಪ್ರತಿಮಾ ವಿಚಾರಗಳ ಮೂಲಕ ವಿವರಣೆ)

೧. ಪ್ರಸ್ತಾಪ

'ಕರ್ನಾಟಕ ಭಾರತಿ'ಯ ಅಕ್ಷತೃತೀಯಾ (೧೯೭೪) ಸಂಚಿಕೆಯಲ್ಲಿ ಪ್ರಕಟವಾದ ನನ್ನ ಲೇಖನ ನೋಡಿದೆ. ಒಂದು ವರುಷಕ್ಕೂ ಮುಂಚೆ ಬರೆದದ್ದು. ಆ ಲೇಖನ ಬಹಳ ಸಂಕ್ಷಿಪ್ತವಿದ್ದುದರಿಂದ ಅದರ ಪೂರಕ ಈ ಲೇಖನ.

ಅ-ಬೋಧಿ (: ನ-ಚಿಕೇತ) ಅಗ್ನಿ. ಮತ್ತು ಜಾತವೇದ ಅಗ್ನಿ ಇವೆರಡರ ಬಗೆಗಿನ ವಿವರಣೆಯಲ್ಲಿ ದೋಷವಿಲ್ಲ, ಎಂದು ಈ ಅವಧಿಯಲ್ಲಿ ಆಗಿರುವ ಸಮೀಕ್ಷೆಯಿಂದಲೂ ಕಂಡು ಬಂದಿದೆ. ಮಾನವ ಜೀವನ: ಸಂಸ್ಕೃತಿಯ ಉದ್ಗಮ ಮತ್ತು ಅದರ ವಿಕಾಸ ಹಾಗೂ ಸಂಕೋಚವನ್ನು ಗ್ರಹಿಸಿಕೊಳ್ಳಲು ಪ್ರಯೋಜನಕಾರಿಯಿರುವ ಭಾರತೀಯ ಪುರಾತನ ಗ್ರಂಥವಾದ ಋಗ್ವೇದಸ್ಥ ಅವಶಿಷ್ಟ ಸಾಂಕೇತಿಕಪ್ರತಿಮೆಗಳು ಇವು: **ಅಬೋಧಿ ಅಗ್ನಿ ಮತ್ತು ಜಾತವೇದ ಅಗ್ನಿ.**

ಸಾಂಸ್ಕೃತಿಕ (ವೈಚಾರಿಕ) 'ಸ್ತರ'ಗಳು ನಿಶ್ಚಿತ ರೀತಿಯಲ್ಲಿ ಗೊತ್ತಾಗವೆ. ಸಂಸ್ಕೃತಿಯ ಇತಿಹಾಸವು ಶಕ್ಯವಿಲ್ಲ. ಭೂಮಿಯ ಒಡಲೊಳಗಿನ 'ಸ್ತರ'ಗಳ-ಪದರಗಳ, ಕಾಲಾನುಕ್ರಮವನ್ನು ನಿರ್ದಿಷ್ಟಪಡಿಸುವುದು ಶಕ್ಯವಾಗಿದೆ. ಆದಕಾರಣ.ಈ ಭೂಮಿಯು ಆಕಾರ ಪಡೆಯುತ್ತ ಬಂದ, ಒಂದು ಶಿಷ್ಟ-ಮಾನ್ಯ ಕ್ರಮವನ್ನು ಎಂದರೆ ಇತಿಹಾಸವನ್ನು ಬರೆಯಲು ಶಕ್ಯವಾಗಿದೆ. ಇದೇ ಮೇರೆಗೆ ಮಾನವಸಂಸ್ಕೃತಿಯು ಆಕಾರ ಪಡೆದ ಕ್ರಮ (ಸ್ತರ) ನಿಷ್ಕರ್ಷಿಸಿಕೊಳ್ಳಲು. ಏಕೆ ಶಕ್ಯವಾಗಬಾರದು ?

೨. ಭಾಷೆ ಹಾಗೂ ಸಂಸ್ಕೃತಿ ಎರಡರೊಳಗಿನ ಅನ್ಯೋನ್ಯ

ಭಾಷೆಯಿಲ್ಲದ 'ಸಂಸ್ಕೃತಿ' ದೊರೆಯದು; 'ಸಂಸ್ಕೃತಿ'ಯ ಪಾರ್ಶ್ವಭೂಮಿ ಇಲ್ಲದೆ ಭಾಷೆ ಮೈದಾಳಲಾರದು. 'ಭಾಷೆ'ಗೆ—ಭಾಷಿಕ ಶಬ್ದ ಪ್ರತಿಮಾ: ಸಂಕೇತಗಳಿಗೆ ಇತಿಹಾಸವಿದೆ. ಆದಕಾರಣ. ಭಾಷಿಕ ಪ್ರತಿಮಾ: ಸಂಕೇತಗಳ ಪೂರ್ವೋತ್ತರಗಳ ಸಮೀಕ್ಷೆಯು ಶಕ್ಯವಾದಲ್ಲಿ, ಇದರ ಮೂಲಕ, ಆ ಭಾಷಿಕರ ಸಂಸ್ಕೃತಿಯ ಇತಿಹಾಸವೂ ಕಣ್ಣ

ಳತೆಯಲ್ಲಿ ಬರಲು ಆತಂಕವಿರಲಾರದು: ಇರಬಾರದು. **ಸಮಯ** (: ಕಾಲ) **ಪರಿಸರದ** (Time and space) ಹಿನ್ನೆಲೆಯಿಲ್ಲದ ಯಾವ ಅಭಿವ್ಯಕ್ತಿ. ಅಥವಾ ಅವಿಷ್ಕಾರ ಕಾಣದೊರೆಯದು. ಭಾಷಿಕ ಅಭಿವ್ಯಕ್ತಿಗೂ ಈ ಸೂತ್ರವು ಸರಿಹೋಗುತ್ತದೆ.

ಶಬ್ದಕೋಶಗಳಲ್ಲಿ, ಕಾಲಸೂಚನೆ ಇಲ್ಲದೆ ಕೊಡಲಾಗುವ 'ಅರ್ಥ'ಗಳು. ತುಂಬ ಸಂಭ್ರಮಕ್ಕೆ ಕಾರಣವಾಗುತ್ತ ಬಂದಿವೆ. ನಕ್ಷತ್ರ-ನಕ್ಷತ್ರಗಳಲ್ಲಿ ಸಾವಿರಾರು ಮೈಲಿನ ಅಂತರವಿದ್ದು ಅವೆಲ್ಲ ಅಂತರಿಕ್ಷದಲ್ಲಿ, **ಸಮಾನ ಪಾತಳಿಯ** ಮೇಲೆ ಇದ್ದ-ಇರುವ-ಆಭಾಸನಿರ್ಮಿಸುತ್ತಿವೆ!

ಉದಾಹರಣೆಗಾಗಿ 'ಭಗವದ್ಗೀತೆ'. ಈ ಗೀತೆಯಲ್ಲಿ ಬರುವ '**ಕಾಲಃ ಅಸ್ಮಿ ಲೋಕಕ್ಷಯಕೃತ್ ಪ್ರವೃದ್ಧಃ**'-ಎಂಬ, 'ಭಗ-ವಂತ'ನ ಉಕ್ತಿಯೊಳಗಿನ '**ಕಾಲ**' ಈ ಸಂಕೇತಕ್ಕೆ ಏನು ಅರ್ಥ? ಕೋಶಗಳ ಮೂಲಕ ಇದನ್ನು ನಿರ್ಧರಿಸುವಲ್ಲಿ ಜಾರಿಬೀಳುವನು ನಿಶ್ಚಿತ ಭಾಷ್ಯಗಳನ್ನು ನಂಬಿದರೂ. ಅವು ಒಂದೊಂದು ಸಂಪ್ರದಾಯದಲ್ಲಿ ಪ್ರಚಲಿತ ಅರ್ಥವನ್ನು ಹೇಳಬಲ್ಲುವು. ಆದಕಾರಣ, ಈ '**ಕಾಲ**'ದ ಅರ್ಥವನ್ನು ಗ್ರಹಿಸಿಕೊಳ್ಳಲು ಇದರ ಪ್ರಾಚೀನತಮ ಪ್ರಯೋಗ ಸಿಕ್ಕುವ ಅವಶ್ಯಕತೆಯಿದೆ ಅಥರ್ವವೇದದ '**ಕಾಲ**' ಸೂಕ್ತ, ಇದುವೆ ಸದ್ಯಕ್ಕೆ. ತೀರ ಹಳೆಯ ಪ್ರಯೋಗ-ಎಂದು ಬಗೆಯಲು ಅಡ್ಡಿಯಿಲ್ಲ.

ಗೀತೆಯ ಭಗವಂತನು ತಾನೇ '**ಕಾಲ**' ಎನ್ನುತ್ತಾನೆ. ಅಥರ್ವದ '**ಕಾಲ**' ಸೂಕ್ತದ, '**ಕಾಲ**' ಸಂಕೇತಕ್ಕೂ 'ಭಗವತ್' ಗೀತೆಯ 'ಭಗವಂತ' ತಾನೂ '**ಕಾಲ**' ಎಂದು ಸಾರಿ ಹೇಳುವುದಕ್ಕೂ ಏನಾದರೂ ಸಂಬಂಧವು ಉಂಟೆ? ಎಂಬ ಪ್ರಶ್ನೆ ಬರುತ್ತದೆ '**ಕಾಲ**' ಎಂಬ ಅಥರ್ವದ ಪ್ರಯೋಗದೊಳಗಿನ ಅಭಿವ್ಯಕ್ತಿಯ ಹಿಂದಿನ '**ಸಮಯ**' ಪರಿಸರ. ಹಾಗೂ ಗೀತೆಯ ಭಗವಂತನ ಮಾತಿನ- ಈ ಅಭಿವ್ಯಕ್ತಿಯ '**ಸಮಯ**' ಪರಿಸರ ಸಮಾನವೇ. ಅಥವಾ ಎರಡೂ ಬೇರೆ 'ಸಮಯ'ಗಳೋ? ಎಂಬುದು ಸ್ಪಷ್ಟವಾಗುವ ಅವಶ್ಯಕತೆಯಿದೆ.

೩. 'ಸಮಯ'ದ ಆಕೃತಿಸ್ವರೂಪದಿಂದ ಸಾಂಸ್ಕೃತಿಕ ಸತ್ಯಾನ್ವೇಷಣೆಯ ಶಕ್ಯತೆ

ಗೀತೆಯ ಭಗವಂತನ ಉಕ್ತಿ-ಉಕ್ತಿಗಳಲ್ಲಿಯೇ '**ಸಮಯ**' ವಿಭಿನ್ನತೆಯಿದೆ! ಈ ಗೀತೆಯ i) **ಕೃಷ್ಣನು ಯಾದವ; ವಸುದೇವ ಪುತ್ರ** ಎಂಬ ಭೂಮಿಕೆಯ 'ಸಮಯ'. ಮತ್ತು ಈ 'ಸಮಯ' ಪರಿಸರಕ್ಕೆ ಸುಸಂಗತ ಮಾತುಗಳ ಪಾತಳಿ. ಹಾಗೂ ii) ತಾನು '**ಕಾಲಃ ಅಸ್ಮಿ**' ಎಂಬ ಉಕ್ತಿಯ ಭೂಮಿಕೆಯ '**ಸಮಯ-ಪರಿಸರ**' ಇವೆರಡನ್ನೂ 'ಸಮಾನ' ಭೂಮಿಕೆಯ ಮೇಲಣ ಅಭಿವ್ಯಕ್ತಿ ಎನ್ನಲು ಆಗದು:

ಮೊದಲನೆಯದು ಭೌತಮಾನವ ವ್ಯಕ್ತಿಯ ಪಾತಳಿ. ಎರಡನೆಯದು ಅಮೂರ್ತ, ತಾತ್ತ್ವಿಕ ಭೂಮಿಕೆಯು, ವೈಶ್ವಿಕ ಶಕ್ತಿಯ ಭೂಮಿಕೆಯ ಪಾತಳಿ. ಇದನ್ನು ಅಮಾನ್ಯ ಮಾಡಲಿಕ್ಕಾದೀತೆ? **ಈ ಎರಡನೆಯ ಪಾತಳಿಯ 'ಸಮಯ ಪರಿಸರ'** ಮತ್ತು ಅಥರ್ವದ 'ಕಾಲ'ಸೂಕ್ತದಲ್ಲಿ ವರ್ಣಿತ ತಾತ್ತ್ವಿಕ **ದೈವತ ಶಕ್ತಿಯ ವರ್ಣನೆಯಲ್ಲಿ ಅಭಿಪ್ರೇತ 'ಸಮಯ' ಪರಿಸರ ಇವೆರಡೂ ಸಮಾನವಿರುವ ಶಕ್ಯತೆಯಿದೆ.**

ಅಥರ್ವವೇದದ ಕಾಲಸೂಕ್ತವು ಇಡಿಯಾಗಿ ಅಭ್ಯಸನೀಯವಿದ್ದರೂ ಅದು ಇಲ್ಲಿ ಅಪ್ರಸ್ತುತ. ಆದರೂ ಉಪಯುಕ್ತ ಕೆಲವು ಸಾಲು ಹೇಳುವುದು ಅವಶ್ಯವಾಗುತ್ತದೆ:

ಕಾಲೋ ಅಶ್ವೋವಹತಿ ಸಪ್ತರಶ್ಮಿಃ ಸಹಸ್ರಾಕ್ಷೋ ಅಜರೋ ಭೂರಿರೇತಾಃ ।
ತಮಾರೋಹಂತಿ ಕವಯಃ ವಿಪಶ್ಚಿತಃ ತಸ್ಯಚಕ್ರಾಭುವನಾನಿ ವಿಶ್ವಾ ॥೧॥

....

ಪಿತಾಸನ್ ಅಭವತ್ ಪುತ್ರಃ, ಏಷಾಂ ತಸ್ಮಾದ್ವೈನಾನ್ಯತ್ ಪರಂ ಅಸ್ತಿತೇಜಃ ॥೪॥

ಅಥರ್ವದ (XIX-೫೩) ಈ ಸೂಕ್ತದ **'ಕಾಲ'**ನ ವರ್ಣನೆ **'ಸೂರ್ಯ'**ನದು. ಎಂದು ಸಂಭ್ರಮಿಸಿದವರು ಇದ್ದಾರೆ! ಇಲ್ಲಿ ಮೋಡಿ ಮಾಡಿದ ಮಂತ್ರಗಳಿವೆ! 'ಅಶ್ವ', 'ಸಪ್ತರಶ್ಮಿ', 'ಸಹಸ್ರ-ಅಕ್ಷಃ'-ಎಂಬ ಈ ಸಂಕೇತಗಳ ಸಾಹಚರ್ಯದಲ್ಲಿ 'ಸೂರ್ಯ'ನ ನೆನಪು ಆಗುವುದು ನಿಜ. ಆದರೆ **'ಭೂರೀ ರೇತಾಃ'**=ಭೌತಸೃಜನ ಶಕ್ತಿಯ ದ್ಯೋತಕ ಈ ಪ್ರತಿಮೆ. **'ರಜ'-ನೀನಾಥ, 'ರಾ'-ಜನ್** (ರಜಸ್ ಉತ್ಪಾದಕ) ಎಂದು ಸಾರ್ಥ ಹೆಸರು **ಚಂದ್ರನಿಗೇ** ಸಮರ್ಪಕವಿದೆ. **'ಸಪ್ತ'** ಎಂಬ ಸಂಕೇತ ಜಾಗತಿಕ ಸ್ವರೂಪದ್ದಾಗಿದೆ. 'ಸಪ್ತ' ಇದು ಕ್ರಿಸ್ತ. ಹಿಬ್ರೂ ಈ ಮೋಕ್ಷಪಂಥೀಯ ಚಾಂದ್ರ ಸಂಪ್ರದಾಯಗಳ **Sabbath** 'ಸಪ್ತಮ' ದಿನದ ವ್ರತಸೂಚಕವಿದೆ. ಋಗ್ವೇದದಲ್ಲಿ 'ಸಪ್ತ'-ಸ್ವಸಾ, ಸಪ್ತಸಿಂಧೂ, ಸಪ್ತಹೋತಾಃ ಮುಂತಾದ 'ಸಪ್ತ' ಸಂಕೇತಕ್ಕೆ 'ಏಳು' (೭) ಈ ಅರ್ಥವಿಲ್ಲ! **'ಸರಣಶೀಲ'** (ಸರ್ಪಣಶೀಲ) **ಸರ್ಪ ಸ್ವರೂಪ ಗತಿಯ** (ನದಿ, ಮುಂ) ಸೂಚಕವಾಗಿ 'ಸಪ್ತ' ಸಂಕೇತವಿದೆ! ಸಾಯಣರ ಭಾಷ್ಯ 'ಸರಣಶೀಲ' ಅರ್ಥ ಸ್ವೀಕರಿಸಿದೆ. ಸೂರ್ಯನ ರಥಕ್ಕೆ **ಸಪ್ತ-ಅಶ್ವ** ಎಂದರೆ ಸರ್ಪ ರೂಪೀ ಅಶ್ವ ಎಂದೂ ಧ್ವನ್ಯರ್ಥವಿದೆ! ಸೂರ್ಯನ ಸೂರ್ಯತ್ವವನ್ನು ನಷ್ಟಪಡಿಸುವ ತಂತ್ರವಿದು. **ಜಾತವೇದ ಅಗ್ನಿಯನ್ನು ನೀರಿನೊಳಗಿನ ಅಗ್ನಿ (ಸರ್ಪ)** ಮಾಡಿಲ್ಲವೆ, ಹಾಗೆ!

ಈ ಸಪ್ತರಶ್ಮಿರೂಪಿ ಅಶ್ವವನ್ನೇರಿದ **'ಕಾಲ'**ನ ಸ್ವರೂಪವು. **'ಪಿತಾಸನ್ ಅಭವತ್ ಪುತ್ರಃ'** ('ತಂದೆಯಿದ್ದೂ ಮರಳಿ ಮಗನಾಗಿ ಹುಟ್ಟುತ್ತಾನೆ') ಎಂಬ ವಾಕ್ಯದಲ್ಲಿ ಬಯಲಿಗೆ ಬರುತ್ತದೆ. 'ಪಿತಾಸನ್' 'ತಂದೆಯಿದ್ದೂ (ಅಮವಾಸ್ಯೆಗೆ ಮೃತನಾಗಿ). ಮರಳಿ **(ಪ್ರತಿ) ಪದ** (ಅಡಿ) ಇಡುವ ಈ 'ಕುಮಾರ': **ಬಾಲ-ಚಂದ್ರ** ಮನೇ **ಸರಿ!** ಆ ಕಾರಣ 'ಭೂರಿರೇತಾಃ' ಇರುವನೆಂಬ ಈ ಸಾಂಕೇತಿಕತೆ ಚಂದ್ರ

ನೆಗೇ ಸಲ್ಲುತ್ತದೆ. ಇವನ 'ಅ-ಜರಃ'. 'ನಿತ್ಯಯುವಾ' ಎಂದೂ ವೇದದಲ್ಲಿ ವರ್ಣಿತನಿದ್ದಾನೆ! ಈ ಯುವ(ಕ) ಲೀಲೆಗಳು **ಕವಿ, ವಿಪಶ್ಚಿತರನ್ನು** ಆಕರ್ಷಿಸಿವೆ. ಇವರೂ ಚಂದ್ರಾಶ್ವವನ್ನೇರಿ. ಈ **ವಿಶ್ವಮಂಡಲ** (ಭುವನಾನಿ ವಿಶ್ವಾ) ಚಕ್ರವನ್ನು 'ರವಿಕಾಣದ ಲೋಕವನ್ನು' ಕಾಣಲು ಹೊರಡುತ್ತಾರೆ!

ಗೀತೆಯ '**ಕೃಷ್ಣ**'ನು. ತಾನು '**ಕಾಲಃ ಅಸ್ಮಿ, ಲೊಕಕ್ಷಯ ಕೃತ್ ಪ್ರವೃದ್ಧಃ**' ಎಂಬಲ್ಲಿ **ಪ್ರ-ಲಯ** ಸೂಚಕ: ಅಮಾವಾಸ್ಯೆಯನ್ನು ಪ್ರತಿನಿಧೀಕರಿಸುತ್ತಾನೆ! 'ಪೋಗದಿರು ಎಲವೋ ರಂಗ. ಬಾಗಿಲಿಂದಾಚೆಗೆ' ಎಂಬ ಕೃಷ್ಣನ 'ಬಾಲ್ಯ'ದ ನಿಲುವೆಯು. ಈ 'ಕಾಲ'ನು 'ಸೂರ್ಯ'ನೆಂದಲ್ಲಿ ಸರಿಹೋಗುವುದಿಲ್ಲ! ಅಲ್ಲದೆ ಅಥರ್ವದ 'ಕಾಲ' ಸಂಕೇತದ ಪ್ರಾಥಮಿಕ ಅರ್ಥವು **ಕರಿದು = ಕೃಷ್ಣರೂಪ** ಎಂದೇ. ಎನೆಲ್ಲ ಸಂಸ್ಕೃತ ಕೋಶಗಳಲ್ಲಿಯೂ ದೊರೆಯುತ್ತಿದೆ. ಮೂಲ ಕಂದಮಿಳವರ್ಗದ **ಕಾಜ್** ಶಬ್ದವು ಸಂಸ್ಕೃತದಲ್ಲಿ ಸೇರಿವೆ, ಎಂದು ಎಮಿನೊ ಟಿ-ಬರೋಕೋಶ ಹೇಳುತ್ತದೆ!

೪. ಚಾಂದ್ರಸಮಯದ ಆಕೃತಿವೈಶಿಷ್ಟ್ಯ (ವೃತ್ತಾಕೃತಿ ಹಾಗೂ ವೃಕ್ಷ (ಸ್ತಂಭ)ರೂಪ ಆಕೃತಿ)

ಚಂದ್ರನೊಳಗಿನ (ಪುಲ್ಲಿಂಗ ಸೂಚಿತ ಕೃಷ್ಣ : ಕರಿಯ ಭಾಗವು) ಈ '**ಕಾಲ**'ನು (ಚಂದ್ರನ) ಚಕ್ರಾಕಾರ ಗತಿಯು ಕಾಲಸೂಚಕ ಅವಧಿಯ ಸಂಕೇತ. ಈ ಚಾಂದ್ರ '**ಸಮಯ**' ನಿರ್ಮಿಸುವ ಆ-ಕೃತಿಯು '**ವಿಶ್ವಾ-ಭುವನಾನಿ ಚಕ್ರಾ**' ಸ್ವರೂಪದ್ದು ಆಗಿದೆ. **ಮರಣ** (:ಅಮಾವಾಸ್ಯೆ) **ಜನನ** (ಪ್ರತಿಪದ). (Death and Resurrection). ಈ ಕಲ್ಪನೆ. ಹಾಗೂ ಯುಗಚಕ್ರದ ಕಲ್ಪನೆಗೆ 'ಚಂದ್ರ'ನೇ ಪ್ರೇರಕನು! ಫಾಲ್ಗುಣ(O) = **ಹೋಳೀಹುಣ್ಣಿಮೆ**; ಅಮಾವಾಸ್ಯಾ = ಪ್ರಲಯ: ಬಳಿಕ ಬರುವುದು: **ಯುಗದ** ಆರಂಭದ ಪರ್ವ (ಹಬ್ಬ)! '**ಗುಡಿ**' ನಿಲ್ಲಿಸಿ ಪೂಜಿಸುವ ವಾಡಿಕೆಯ ಗುಹ್ಯಾರ್ಥವು ಚಿಂತ್ಯವಿದೆ. '**ಗುಡಿ**'**ಗಾರ** (ಬಡಿಗ) 'ಪ್ರತಿಮಾ = ಮೂರ್ತಿ' ನಿರ್ಮಿತಿಯ ಅವಶ್ಯಕತೆ ಬೇರೆ ಹೇಳಬೇಕೆ ? ಈ 'ಗುಡಿ' '**ಗಳ**' ಅಥವಾ '**ಕಂಬ**' ರೂಪದ್ದು ಇದ್ದು. 'ತಲೆ' ಕಲಶ (ಕಳಸ) ಆಕಾರ ಬರಲು ಪಾತ್ರೆ ಡಬ್ಬಾ ಹಾಕಿ ನಿಲ್ಲಿಸಲಾಗುತ್ತದೆ. ಬೇವಿನ ಎಲೆ (ಕೊಂಬೆ). ಮಾವಿನ ತಳಿರು ಹಾಕಿ ಗುಡಿಕಟ್ಟುವರು. **ಹೀಗಿದು ಚಾಂದ್ರಸಮಯದ ಆಕೃತಿವೈಶಿಷ್ಟ್ಯ : ವೃತ್ತಾಕೃತಿ ಹಾಗೂ ವೃತ್ತ (ಮಧ್ಯ 'ವೃಕ್ಷ')ದ ಆಕೃತಿ.** 'ವತ್ಸ'-ವತ್ಸರ → **ಸಂ-ವತ್ಸರೋ ವೈ ಪ್ರಜಾಪತಿಃ** (ಪ್ರ. ೪. ೧-೯). ಈ 'ಚಂದ್ರೋಪಸ್ಥಾನ'ದ ಅನುಭಾವದಲ್ಲಿ ಮಾನವನಿಗೆ ಮೊಟ್ಟಮೊದಲಲ್ಲಿ 'ತನ್ನ' ಅರಿವು ತಲೆದೋರಿದೆ. ಬೈಬಲ್ಲಿನ ಆದಂ-ಈವ್ಹರ ಕಥೆಯ 'ಜ್ಞಾನ' ವೃಕ್ಷ. ಇದು 'ಚಂದ್ರ'ವೃಕ್ಷ! ಸರ್ಪವನ್ನೂ ವೃಕ್ಷದಲ್ಲಿಯೇ

ತೋರಿಸುವಮಾಡಿಕೆ[1] ಇದು ಸರ್ಪರೂಪೀ ವೃಕ್ಷ. ಅಥವಾ ವೃಕ್ಷರೂಪೀ ಸರ್ಪ. **'ಚಂದ್ರವೃಕ್ಷ'**ದ ಸಾಂಕೇತಿಕತೆ, ಕಂನಾಡ ಜಾನಪದರೂ ಬಲ್ಲರು.

i) ಅಕ್ಕತ್ಕೊ ! ಮರಹೋದ ಮಾರದಪ್ಯಾರಿನ ಕಾಯಿಹೋದ ! ತಿಂಬವರ ಬಾಯಿನೋಡ !

ii) ಮಾರದಾಗ ಮರಹುಟ್ಟಿ, ಮಾರುಚಕ್ರ ಕಾಯಾಗಿ, ತಿನುವವರ ಹಲ್ಲು ಬಲು ಸಿಹಿ !

ಸಾಂಕೇತಿಕತೆ. ವೇದ, ಗೀತೆ, ಬೈಬಲ್ಲಿನಲ್ಲೂ ಹೇಗೆ ? ಯಾರಿಂದ ಯಾರು ಸ್ವೀಕರಿಸಿದರು? ಅಥವಾ 'ಸಾಹಿತ್ಯವು' ಜೀವನದ ಪ್ರತಿಬಿಂಬ ಎಂಬುದೇ ನಿಜವೋ ?

ಇಂಥ ಜೀವನ : ಸಂಸ್ಕೃತಿಯ ಸತ್ಯಾನ್ವೇಷಣೆಯಲ್ಲಿ, ಅನ್ವೇಷಕನು, ತನ್ನ ವ್ಯಕ್ತಿ ವಿಶಿಷ್ಟ ದೃಷ್ಟಿಕೋನದಿಂದ (attitude) ಪ್ರವೇಶಿಸತಕ್ಕದ್ದಲ್ಲ. ಅವನು ಅನ್ವೇಷಣೆಯ ಸಾಂಸ್ಕೃತಿಕ ಕ್ಷೇತ್ರದ **'ಸಮಯ'** ಪರಿಸರದಲ್ಲಿ ಪ್ರವೇಶ (perspective) ಪಡೆಯಬೇಕು. **ಸಮಸಾಮಯಿಕ ಸಾಂಕೇತಿಕ ಪ್ರತಿಮೆಗಳ ತುಲನಾತ್ಮಕ ಸಮೀಕ್ಷೆಯಲ್ಲಿ, ಆ ಪ್ರತಿಮೆಗಳು ಒಳಗೊಳ್ಳುವ ಅರ್ಥ : ಚಿತ್ರವು ತನ್ನತಾನೇ ಕಣ್ಣೆದುರು ನಿಲ್ಲತೊಡಗುತ್ತದೆ.**

ನಿನ್ನೆ→ಇಂದು→ನಾಳೆ ಸ್ವರೂಪದ ಕಾಲಗತಿಯು ಅವಿಚ್ಛಿನ್ನ ಅ-ವಿಗಲಿತವಿದೆ. ಇದು, ಸೌರ 'ಅಹರ್‌ಸತ್ಯ'ದ ಪಾತಳಿಯ ಮೇಲೆ ಸತ್ಯಾಸತ್ಯದ ದರ್ಶನ ಮಾಡಿಸಬಲ್ಲುದು. ನಿನ್ನೆಗಳೊಳಗಿನ ಅವಶಿಷ್ಟ ನಡೆವಳಿ-ನುಡಿವಳಿಗಳು 'ಇಂದುಗಳಲ್ಲಿ' ಉಳಿಯುತ್ತ ಎಂದಿನವರೆಗೂ ಹೋಗುವ ಶಕ್ಯತೆಯಿದೆ. ಉದಾ : ಜಾನಪದರ ಮಾರದಾಗ ಮರಹುಟ್ಟಿದ ಚಂದ್ರವೃಕ್ಷ, ವೇದಾದಿಗಳ **ವೃಕ್ಷಃ ಸರ್ಪದ** ಈ ನಂಬುಗೆ, ಪಾಶ್ಚಾತ್ಯ ಪರಂಪರೆಯ ಬೈಬಲ್ಲಿನಲ್ಲೂ ಇದೆ. ಗೀತೆಯಲ್ಲಿಯೂ, ಈ ವೃಕ್ಷ : ಸರ್ಪ ಉಂಟು! **'ಕಾಲಃ ಅಸ್ಮಿ'** ಎಂಬ ಕೃಷ್ಣನು, 'ಅಶ್ವತ್ಥೋಸ್ಮಿ ಸರ್ವವೃಕ್ಷಾಣಾಂ' ಎಂದಿದ್ದಾನೆ! ಮತ್ತು **'ನಾಗಶಯನ'** ವಿಷ್ಣು=ನಾರಾಯಣನ ಇನ್ನೊಂದು ರೂಪವೇ ಕೃಷ್ಣ, ಎಂಬಲ್ಲಿ ಈ**ತನು :** 'ಸರ್ಪ'ರೂಪವೂ ಉಂಟು; ವೃಕ್ಷರೂಪ ಮಾತ್ರವಲ್ಲ.

ಸಾಂಸ್ಕೃತಿಕ ಹಾಗೂ ವೈಚಾರಿಕ ಸ್ತರಗಳು ಹೀಗೆ ನಿಶ್ಚಿತವಾದರೆ, ಸಾಂಸ್ಕೃತಿಕ ಇತಿಹಾಸವು ಬೆಳಕಿಗೆ ಬರಲು ಶಕ್ಯವಿದೆ. ಈ ಪ್ರಾಥಮಿಕ **'ಕಾಲ'** ಹಾಗೂ **'ಕೃಷ್ಣ'** ಸಂಕೇತಗಳ ಹಿನ್ನೆಲೆಯ 'ಕಾಲ'ದ ಸಮಯ-ಪರಿಸರದ ಪದರಗಳ ಮೂಲಕವೂ ಕೆಲ ಪ್ರಮುಖ ಇತಿಹಾಸದ ಮಹತ್ವದ ಸಾಂಸ್ಕೃತಿಕ ಅಂಶಗಳು ಬೆಳಕಿನಲ್ಲಿ ಬರಬೇಕು.

೫. ಈ 'ಕಾಲ' ಕೃಷ್ಣನಂತೆ ರುದ್ರನೂ ಕಾಲಕಾಲೇಶ್ವರ!

'ಕಾಲ' ಸೂಕ್ತವು 'ಕೃಷ್ಣ'-ವಿಷ್ಣು ಸಂಪ್ರದಾಯದಂತೆ ಶೈವ ರುದ್ರಶಿವನ

1. ಈ ವಿವರಕ್ಕಾಗಿ ಋಗ್ವೇದ ಸಾರ : ನಾಗಪ್ರತಿಮಾ ವಿಚಾರ ಭಾಗ III ನೋಡಿ. ಮೈಸೂರ ವಿಶ್ವವಿದ್ಯಾಲಯ ಪ್ರಕಟನೆ. (೧೯೭೧)

ಪರಂಪರೆಗೂ ಸಲ್ಲುತ್ತದೆ. **ಶ್ವೇತ ಅಶ್ವತರ** ಉಪನಿಷತ್ತು **'ಏಕೋ ಹಿ ರುದ್ರೋ** ನ ದ್ವಿತೀಯಾಯ ತಸ್ಥುಃ' (೩-೨). ಶೈವ ಸಂಪ್ರದಾಯದ ಏಕಾಂತಿಕ ಸಂಪ್ರದಾಯಕ್ಕೆ ಸಂಬಂಧಪಟ್ಟಿದೆ. ಇದರಲ್ಲಿ ರುದ್ರನಿಗೆ 'ಕಾಲ' ಎಂದಿದೆ (೬, ೧, ೧, ೨.) **'ಕೃಷ್ಣೇ-ಶ್ವರ'** ಹೆಸರಿನ ಶಿವಾಲಯಗಳಿವೆ! ಕೃಷ್ಣ-ಕಣ್ಣ-ಕಣ-ಕಲ್ಲ = **ಮೂಲಸ್ಥಾನ** ಕಲ್ಲೇ-ಶ್ವರ! ಮೂಲಸ್ಥಾನ = ಮೂಲಸ್ತಂಭ ಶಂಭೂ (ನೋಡು : ಕನ್ನಡದ ನೆಲೆ. ರುದ್ರ-ಶಿವನ '**ಕಾಲ**-ಕಾಲೇಶ್ವರ'ನ ಕ್ಷೇತ್ರವು. ಮತ್ತು ಈ ಪರಂಪರೆ 'ಕೃಷ್ಣ' ಸಂಪ್ರದಾಯಕ್ಕಿಂತ ಪ್ರಾಚೀನವಿರುವ ಶಕ್ಯತೆಯಿದೆ. 'ಕಾಲ' ಈ 'ಸಿಲುಮೆ' ಮೊದಲ್ಲಿ ಶೈವರದೋ? ವೈಷ್ಣವರದೋ? i) ಎರಡೂ ಸಂಪ್ರದಾಯಗಳಿಗೂ ಸಾಮಾನ್ಯವಿರುವ ಮೂರನೆಯ ಯಾವುದೊಂದು ಪರಂಪರೆ ಇರಬಹುದು: ii) ಅಥವಾ ಇವೆರಡೂ ಪರಂಪರೆಗಳಲ್ಲಿ. ಒಂದು ಸಂಪ್ರದಾಯವು ಇನ್ನೊಂದರಿಂದ ಈ 'ಕಾಲ' ಸಂಕೇತವನ್ನು ಎರವಲಾಗಿ ಸ್ವೀಕರಿಸಿರಬೇಕು. ಹಾಗಾದರೆ ಇದನ್ನು ನಿಷ್ಕರ್ಷಿಸಿಕೊಳ್ಳಲು ಶಕ್ಯವೋ?

ರುದ್ರ-ಶಿವ ಹಾಗೂ ವಿಷ್ಣು-ಕೃಷ್ಣ ಪರಂಪರೆಯಲ್ಲಿ, ಎರಡರಲ್ಲೂ ಸಮಾನವಿರುವ ಸಾಂಕೇತಿಕ ಪ್ರತಿಮೆಗಳು ಹಲವು ಉಂಟು. ಗಿರಿಶ. ಗಿರೀಶ ಶಿವನ 'ತಿರು-ಮಲೆ' ಆಧುನಿಕ ಎನ್ನಿ. ಯಜುರ್ವೇದದ ರುದ್ರಾಧ್ಯಾಯದಲ್ಲಿ ಗಿರಿಶ. ಗಿರೀಶ ಎರಡೂ ಹೆಸರಿವೆ. ಋಗ್ವೇದದಲ್ಲಿಯೇ **'ಗಿರಿ-ಕ್ಷಿತ್'** ಎಂದು ವಿಷ್ಣುಸೂಕ್ತದ ವರ್ಣನೆಯಲ್ಲಿದೆ (I. ೧೫೪, ೩,) 'ಗಿರಿಷ್ಠ' (೧೫೪. ೨) ವೂ ಉಂಟು. ಅಥರ್ವದ ಸ್ಕಂಭ (<ಸ್ತಂಭ) ಸೂಕ್ತವು ಸುಪ್ರಖ್ಯಾತವಿದೆ. (೧೦. ೭. ೮). 'ಮೂಲಸ್ತಂಭ' ಶಂಭು. ಶಿವನು: ಸ್ತಂಭ ಒಡೆದು ಹೊರಬಂದನೆಂಬ ನಾರ(ನರ) ಸಿಂಹ. ವಿಷ್ಣು-ಕೃಷ್ಣ ಪರಂಪರೆ! ವೈಷ್ಣವ ಸಂಪ್ರದಾಯದಲ್ಲಿ ಈ 'ನಾರಸಿಂಹನು = **ನಾರ(ನರ) ಅಯನನು;** ಅಶ್ವತ್ಥ (ವೃಕ್ಷ) ದೊಡನೆಯೂ ಸಂಬದ್ಧನಿದ್ದಾನೆ! 'ವೃಕ್ಷ' ಮತ್ತು ಸಂಭ>ಸ್ತಂಭ ಇವೆರಡೂ ಪ್ರತಿಮೆಗಳು. ಮೂಲತಃ **ವಿಶ್ವ-ಸೃಜನ ಶಕ್ತಿಯನ್ನು—'ತಂದೆ'** ಎಂಬ ಪರಮ '**ಆ**-ತ್ಮನ್ (ತನು)'ವನ್ನು. ತಮ್ಮ ಅನುಭವ—**ಅನು-ಭಾವದ** ಹಿನ್ನೆಲೆಯಲ್ಲಿ ರೂಪಿಸಿಕೊಂಡಿದ್ದಾಗಿದೆ. ಆದಕಾರಣ. ಈ ವೃಕ್ಷ. ಸ್ತಂಭ ಇವೆರಡೂ ಸಂಕೇತಗಳು ತತ್ತ್ವತಃ ಅಭಿನ್ನ. ಸ್ಕಂಭ>ಸ್ತಂಭ ಕೇವಲ ಕಟ್ಟಿಗೆ-'ಕೊರಡು'! ಪರಮ ಆ-ತ್ಮನ್ ದಿವ್ಯಶಕ್ತಿಯ ಕೃಪೆಯಿಂದ 'ಕೊರಡು ಕೊನರುವುದಯ್ಯಾ' ಎಂಬ ಶ್ರದ್ಧೆಯೂ ಇತ್ತು. ಇನ್ನೆ ಎನ್ನಿ: ಆದರೂ ವೃಕ್ಷ ಮತ್ತು ಖಂಭ-ಕೊರಡು ಇವೆರಡರಲ್ಲಿ ಮೊತ್ತಮೊದಲು 'ವೃಕ್ಷ'ವೇ ಪರಮ **ಆ-ತ್ಮನ್** ಶಕ್ತಿ ಎಂದು ಪೂಜೆಗೊಳ್ಳುತ್ತಿರಲಿಕ್ಕೆಬೇಕು. ಏಕೆಂದರೆ 'ವೃಕ್ಷ', 'ವೃಹ್' ಬೆಳೆದುನಿಲ್ಲುವ ಅಂತಃಶಕ್ತಿಯದು: ಮೇಲಾಗಿ **'ಸರಸ'**ವೂ ಆಹುದು.

೬. 'ಕಾಲ'ನನ್ನು 'ಸೂರ್ಯ'ನನ್ನಾಗಿಸುವ ಹೊಂಚು

'ರೋಹಿತ' ಹೆಸರಿನ **'ಕಾಲ'** ತತ್ತ್ವದ ಸೂಕ್ತಭಾಗಗಳ ಅಥರ್ವದಲ್ಲೇ ಉಂಟು! (೧೩. ೧: ೨: ೧೯. ೨೩ ಮಂ). 'ರೋಹಿತಃ ಕಾಲಃ ಅಭವತ್' (೧೩-೨-

೩೯). ಆದರೆ ಈ 'ರೋಹಿತ' ಸಂಕೇತಕ್ಕೆ ಆ-ರಕ್ತವರ್ಣ ಸೂಚಕ ಅರ್ಥದಿಂದಾಗಿ, ಇವನ್ನೂ '**ಸೂರ್ಯ**'ರೂಪೀ '**ಕಾಲ**' ಸೂಕ್ತ ಎಂದು ಬಗೆದವರಿದ್ದಾರೆ! '**ಕಾಲ**' ಕಪ್ಪು, ಕಾಳ್: ಕಾಳ-ಹುಣ್ಣಿಮೆ ಈ ಹಾಕಿನಲ್ಲಿ ವದತೋವ್ಯಾಘಾತವಿದೆ. ಇದ ರೀತಿ. ಕಾಲಃ ಸೂರ್ಯ, ಅಥವಾ 'ರೋಹಿತ' ಎಂಬಲ್ಲೂ.

'ರೋಹಿತ' ಇದರ ಪ್ರಾಥಮಿಕ=ಸರ್ವಪ್ರಥಮ ಅರ್ಥವು. ರುಹ್>ರೋಹ್ ವರ್ಧಿಸು ಬೆಳೆ ಎಂಬ ರೂಪ ಆಕೃತಿಯದು! ಎಂತಲೆ, **ಕಾಲ** ಸೃಜನ: ವರ್ಧನ **ಗತಿ** ಸೂಚಕ ಅರ್ಥಶಕ್ತಿಯುಳ್ಳದ್ದಾಗಿದೆ. 'ಕೆಂಪು' ಎಂಬ 'ರೋಹಿತ', ಲೋಹಿತ ಈ ಭಾವಾರ್ಥವು. **ತಳಿಗೆಂಪು:** ವೃದ್ಧಿಂಗತ ಶಕ್ತಿಯ ಅಂತರ್ಹಿತ ತತ್ತ್ವವು ಕೆಂಪು ಬಣ್ಣ ಸೂಚಕ! '**ಕಾಲ**' 'ಕರಿಯ'. ಈ ಮೂಲಾರ್ಥದ '**ಕೃಷ್ಣ**' **ರೂಪವನ್ನು** '**ಸೂರ್ಯ**'**ನ ಹಂತಕ್ಕೆ** ಒಯ್ದು ನಿಲ್ಲಿಸುವ ಒದ್ದಾಟ ವೇದಕಾಲದಲ್ಲೆ ನಾನಾ ಬಗೆಗಳಲ್ಲಿ ಬಯಲಿಗೆ ಬರುತ್ತಿದೆ. ಈ ಸೃಜನತತ್ತ್ವ **ಭೂಃ→ಭುವಃ** ಇವೆರಡೂ ಮೂರ್ತ ಮತ್ತು ಅ-ಮೂರ್ತ ಪಾತಳಿಯ ಮೇಲಣ ದೃಶ್ಯ (phenomena). 'ಸೂರ್ಯ'ನು ಪುರಾತನರಿಗೆ, '**ಸ್ವರ್**' ಅಥವಾ '**ಸುವಃ**' = 'ಸ್ವಃ' ಎಂಬ ಆ-**ಕಾಶ : ಪ್ರಕಾಶದ** ಪಾತಳಿಯಲ್ಲಿ ಇರುವುದಾಗಿ ಕಂಡಿದ್ದಾನೆ. 'ಭುವಃ'=ಭುವನ (=ಜಲ) ಪ್ರದೇಶವು '**ಅಂತರಿಕ್ಷ**' ಸಂಕೇತದಿಂದ ಗುರುತಿಸಲಾಗುತ್ತಿದ್ದುದಕ್ಕೆ ವೇದೋಪನಿಷತ್ತಿನಲ್ಲಿ ಬೇಕಾದಷ್ಟು ಪ್ರಮಾಣಗಳಿವೆ! ಆ-ಕಾಶ ಮತ್ತು ಅಂತರಿಕ್ಷ ಇವೆರಡೂ ಸಂಕೇತಗಳಲ್ಲಿ, ವೇದಕಾಲೀನ **ಋಷಿ** ಮತ್ತು **ಮುನಿ-ಯತಿ** ಇವೆರಡೂ ಸಂಪ್ರದಾಯಗಳಲ್ಲಿ, ಮೂಲದಲ್ಲಿ ಇದ್ದ ಅಂತರವೇ ಇದೆ. ಆದರೆ, ಈ ವೇದದಲ್ಲಿಯೇ **ಅಬೋಧಿ** ಹಾಗೂ **ಜಾತವೇದ ಅಗ್ನಿಗಳಲ್ಲಿ ಇದ್ದ,-ಭೂವ್ಯಾಕಾಶಗಳಷ್ಟು ಇದ್ದ-ಅಂತರವು ನಷ್ಟವಾಗಿದೆ! ಸಂಕೇತಗಳ ಆಧಾರಭೂತ 'ಸಮಯ' ಪರಿಸರವು ಬದಲಾಗುತ್ತಲೆ,** ಆ **ಸಂಕೇತಗಳ ಅರ್ಥದಲ್ಲಿಯೂ ಬದಲು ಅಥವಾ ತಿರುವು-ಮುರುವು ಆಗಲೇ ಬೇಕು. ಈ ಅರ್ಥವ್ಯತ್ಯಾಸವು ತತ್ಕಾಲೀನ ಧಾರ್ಮಿಕ, ಸಾಂಸ್ಕೃತಿಕ ಅಥವಾ ರಾಜಕೀಯ ಕ್ಷೇತ್ರದೊಳಗಿನ ಜೀವನ ದೃಷ್ಟಿಯಲ್ಲಿ ಆದ, ಆಗುವ-ಸ್ಥಿತ್ಯಂತರದ ದ್ಯೋತಕವಿರುವ ನಿಶ್ಚಿತ ಪ್ರಮಾಣ ಇದು.** ಇಂಥ ಅತ್ಯಾಧುನಿಕ ಉದಾಹರಣ: '**ಗಾಂಧೀಟೋಪಿ**'. ಮೊದಲಲ್ಲಿ ಶುಭ್ರ=ಸದಾಚಾರಯುಕ್ತ ದೇಶಭಕ್ತಿಯ ಪ್ರತೀಕ. ಗಾಂಧಿಜೀಯವರ ಶುಭ್ರ ಖಾದಿಟೋಪಿ. ಆದರೆ ಒಂದು ಲೆಪಮಾರು ಬದಲಾಗಿ ಮುಂದಿನ ಹಂತದಲ್ಲಿಯೇ ಈ 'ಗಾಂಧೀಟೋಪಿ' ವಿನೋದದ ವಿಷಯವಾಗತೊಡಗುತ್ತದೆ! ಈಗಲಂತೂ ಭ್ರಷ್ಟಾಚಾರ ಮರೆಮಾಚಲು 'ಗಾಂಧೀಟೋಪಿ' ಪ್ರಯೋಜನಕಾರಿಯಾಗುವುದು ಕಾಣಬರುತ್ತದೆ. **ಇದರಿಂದ ಸೂಚಿತವಾಗುತ್ತಿರುವ ಸಾರ್ವಕಾಲಿಕ ನಿಯಮ (: ಋತ ಸ್ವರೂಪೀ): ಸತ್ಯ ಇದು;** ಶಬ್ದಪ್ರತಿಮಾ: ಸಂಕೇತಗಳ

ಅದಿಸಲ್ಲಿ 'ಸಮಯ' ಪರಿಸರದ ಆಧಾರವಿದ್ದಿದೆ. ಈ ಪದಗಳ ಅರ್ಥವು. ಅದರ ತಳಪಾಯದ **'ಸಮಯ' (: ಆಕಾರ)ದ ಆಕೃತಿಯದೇ ಇರಬಲ್ಲುದು!**

೭. ಬಚ್ಚಿಡುವ 'ಸತ್ಯ' ಆ ಜನ-ಜೀವನಸ್ಥ ಅಂತಃಸಂಗತಿಯನ್ನು ಎಂದರೆ 'ಸತ್ಯ'ವನ್ನು ಗ್ರಹಿಸಿಕೊಳ್ಳಲು ಆತಂಕಕಾರಿಯಾಗುತ್ತದೆ. ಆ ಜನವು ಸತ್ಯಕ್ಕೆ ವಂಚಿತವಾಗುತ್ತದೆ! ಬಾಳು ಬರಡು ಆಗುವುದೂ ನಿಶ್ಚಿತ.

ಈ ಸಾರ್ವಕಾಲಿಕ ಸತ್ಯಸೂಚಕ ಈ 'ಸೂತ್ರ'ದ ನಿಯಮದ ಬೆಳಕಿನಲ್ಲಿ ಎಷ್ಟೇ ಪುರಾತನ ಕಾಲದ ಆಗು-ಹೋಗುಗಳಿರಲಿ. ಅವನ್ನು ಪ್ರತಿನಿಧೀಕರಿಸುವ **ಪ್ರತಿಮಾ: ಸಂಕೇತಗಳು ಒಂದಕ್ಕಿಂತ ಹೆಚ್ಚಿಗೆ ದೊರೆತಲ್ಲಿ** ಅಂದಿನ ಆಗುಹೋಗುಗಳನ್ನು ನಿಶ್ಚಿತವಾಗಿ ಗ್ರಹಿಸಿಕೊಳ್ಳುವ ಶಕ್ಯತೆ ಇಲ್ಲದೆ ಇಲ್ಲ.

ಈ ಮಾತು ಬಂದದ್ದು. ವೃಕ್ಷ ಮತ್ತು ರೋಹಿತ ಸ್ವರೂಪೀ ಕಾಲತತ್ತ್ವದ ಹಿನ್ನೆಲೆಯಲ್ಲಿ; **'ಕಾಲ'** ಮತ್ತು **'ರೋಹಿತ'** ಇವನ್ನು ಸೂರ್ಯನ ಆಭಾಸ ನಿರ್ಮಿಸಲು ಮೋಡೀ ಮಾಟಕ್ಕಾಗಿ ಯೋಜಿಸುವ ಸಂಪ್ರದಾಯದ ಹಿನ್ನೆಲೆಯನ್ನು ಗ್ರಹಿಸಿಕೊಳ್ಳುವ ಶಕ್ಯತೆಯನ್ನು ಮನಗಾಣಿಸಿಕೊಡುವ ಸಂದರ್ಭದಲ್ಲಿ. ಈ ಮಾತು ಬಂತು. **ಈ 'ಕಾಲ', 'ಕೃಷ್ಣ'** ರೂಪಿಯಾಗಿದೆ. ಇದು ಭೌತಪಾತಳಿಯ ಮೇಲಣ ಸೃಜನ ಶಕ್ತಿಯನ್ನು ಸೂಚಿಸುವ ಅಪೂರ್ವ 'ಛಂದಃ' ಪಾತಳಿಯ ಮೇಲಣ ಸಾಂಕೇತಿಕ ಪ್ರತಿಮೆ! ಆದರೆ. ಈ 'ಅಂತರಿಕ್ಷ' : ಮಧ್ಯಸ್ಥಾನೀಯ **ಕಾಲತತ್ತ್ವವನ್ನು ಆ-ಕಾಶ** ತತ್ತ್ವದ **'ಸ್ವರ್'** ಹಂತದ ಸೌರಭೂಮಿಕೆಯ **ಕಾಲ-ಗತಿ** ಎಂದು ಧ್ವನಿಪಡಿಸುವಲ್ಲಿ ಇರುವ 'ಉದ್ದೇಶ'ದ ವಿಚಾರ ಸದ್ಯಕ್ಕೆ ಅಪ್ರಸ್ತುತ. ಆದರೆ ಶ್ರೀರಾಮ**ಚಂದ್ರ**ನನ್ನು **'ಸೂರ್ಯ'ವಂಶಲಲಾಮ**ನೆಂಬ ಹಾಗಿನ ನಂಬುಗೆಯನ್ನು ಉಂಟು ಮಾಡಿರುವುದಂತೂ ನಿಜವಷ್ಟೆ? **'ಸತ್ಯ'**: ವಾಸ್ತವ ಸ್ವರೂಪದ್ದು—ಸಂಭವಿಸಿದ್ದು ಇದ್ದರೆ. ಅದನ್ನು ತೊಡೆದುಹಾಕುವ ಪ್ರಯತ್ನಗಳು ಹಾಸ್ಯಾಸ್ಪದವಾಗದೆ ಇರಲಾರವು. ಜಲ್-ರಘನಾಥನ ಒಂದು ವಿಚಾರ ಓದಿದ್ದು ನೆನಪಿದೆ: ಬಚ್ಚಿಡಲಾಗುವ 'ಸತ್ಯ'ವು. ನಾನಾ ವಿಕೃತ ರೂಪಗಳಿಂದ ಆ ಜನಮನವನ್ನು ಕೊರೆಯುತ್ತದೆ. ಪಂಗುವಾಗಿಸುತ್ತದೆ! 'ಭಾರತೀಯರಲ್ಲಿ ನೇರ ಸ್ವತಂತ್ರ ವೈಚಾರಿಕ ದೃಷ್ಟಿ ಕಡಿಮೆಯಿದೆ' ಎಂಬ ಆಕ್ಷೇಪ ತೀರ ಸುಳ್ಳಲ್ಲ.

ವಾಸ್ತವ ಸತ್ಯದ ಒಂದು ಒರೆಗಲ್ಲು: ಸಮ ಸಾಮಯಿಕ ಸಾಂಕೇತಿಕತೆಯೊಳಗಿನ ಅಂತಃಸಂಗತಿ (Consistency) ಮತ್ತು ಸಂಬಂಧ (Coherence) **ದಲ್ಲಿ** ದೊರೆವ **ತಾಳಮೇಳ. ರಾಮ-ಚಂದ್ರ**ನನ್ನು 'ಸೋಮ'ನೆಂದರೂ, ಈ ರಾಮ, ಕೃಷ್ಣ ವಿಷ್ಣುವಿನ ಅವತಾರ ಅಥವಾ ಪರ್ಯಾಯ: ಎಂದರೆ ಈ ಸೂರ್ಯ=ಕೃಷ್ಣವರ್ಣದಯೇ

ಇರಬಲ್ಲ. White lie! ಈ 'ರಾಮ ಅಯನ' ಬರೆದವನು : 'ವಾಲ್ಮೀಕಿ' : ಹುತ್ತಪ್ಪ : ನಾಗ! ನಾಗ = ನಾರ-ಅಯನ : ವೃಕ್ಷ : ಚಂದ್ರನ ಪ್ರತಿಮೆ! ಬೈಬಲ್ ಕಥೆಯ ಸಂದರ್ಭದಿಂದ ವಿವರಿಸಿದ್ದಾಗಿದೆ.

೮. 'ರೋಹಿತ' ಈ ಮೂಲ ಸಾಂಕೇತಿಕ ಪ್ರತಿಮೆಯ ಮೂಲಕ ಬೆಳಕಿನಲ್ಲಿ ಬರುತ್ತಿರುವ; ಬಚ್ಚಿಟ್ಟ 'ಸತ್ಯ'ದ ಒಂದು ಕಥೆ ಹೀಗಿದೆ:

'ರೋಹಿತ' ಸಂಕೇತದ ಹಿಂದಿನ 'ಸಮಯ' ಈ 'ರೋಹಿತ' ಸಂಕೇತದ ತಳಹದಿಯಲ್ಲಿ ಬೆಳಕಿಗೆ ಬರುತ್ತಿದೆ: ಹರಿಃ **ಚಂದ್ರನ** ಸುಪುತ್ರನ ಹೆಸರು **ರೋಹಿತ!** ಈ ಹರಿಃ **ಚಂದ್ರನ ನಲ್ಲೆ ತಾರಾ**-ಮತಿ! ಈ ಹರಿಃ**ಚಂದ್ರನು, 'ಕನಸಿನಲ್ಲಿ'** ಕಾಣುವ-ಕೊಡಲಾಗುವ 'ಸತ್ಯ' ವ್ರತಿ! ಇಲ್ಲಿ ಈ 'ಸತ್ಯ' ರಾತ್ರ = ಚಾಂದ್ರಪಂಥೀಯ ಸತ್ಯ, ಎಂಬುದರ ಸೂಚನೆ ಹೃದ್ಯವಿದೆ. 'ಹರಿಶ್ಚಂದ್ರ ಕಾವ್ಯ' (ಸಂಗ್ರಹ). (ಮೈಸೂರು ವಿಶ್ವವಿದ್ಯಾಲಯ ಪ್ರಕಟನೆ)–ಇದಕ್ಕೆ ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳ ಮುನ್ನುಡಿ. ವೇದದಲ್ಲಿ ಬರುವ 'ಹರಿಶ್ಚಂದ್ರನು', ವರುಣನಿಗೆ ಹೊತ್ತ ಹರಕೆ ಪೂರಯಿಸಲಾರದೆ, ನೆಪ (:ಸುಳ್ಳು) ಹೇಳಿ 'ವಚನ' ಪಾಲಿಸದ ಸ್ವಭಾವದವನು ಇದ್ದುದನ್ನು ಅಲ್ಲಿ ಸಪ್ರಮಾಣವಾಗಿ ಬೆಳಕಿನಲ್ಲಿ ತರಲಾಗಿದೆ. ಆದರೆ ಪುರಾಣ ಕಥೆಗಳ ಹರಿಶ್ಚಂದ್ರನನ್ನು ಮೂರ್ತಿಮಂತ 'ಸತ್ಯವಚನಿ' ಎಂಬ ಚಿತ್ರ!

ಈ ವಿಸಂಗತಿಯನ್ನು–ಇದರಲ್ಲಿ ತಥ್ಯಾಂಶ ಉಂಟೆ? ಎಂಬುದನ್ನು–ನಿಷ್ಕರ್ಷಿಸಿಕೊಳ್ಳದೆ, 'ವಿದ್ಯಾಪೀಠ'ಗಳಲ್ಲಿ ಇಂದಿನವರೆಗೂ ಮೌನ-ಮುಗ್ಧತೆಯನ್ನೇ ಸ್ವೀಕರಿಸಲಾಗಿದೆ. 'ಸತ್ಯಾಸತ್ಯ'ದ ಸಂಶೋಧನೆಯು. (= ಜ್ಞಾನದ ಕ್ಷಿತಿಜಗಳನ್ನು ವಿಸ್ತರಿಸುವ ಕಾರ್ಯವು.) ವಿಶ್ವವಿದ್ಯಾಲಯಗಳ ಆದಿ ಕರ್ತವ್ಯದಲ್ಲಿ ಒಂದು. ಆದಕಾರಣ ಸಾಂಸ್ಕೃತಿಕ 'ಸತ್ಯಾನ್ವೇಷಣೆಯ' ಸಂದರ್ಭದಲ್ಲಿ ನನ್ನ ಅರಿಕೆಗೆ ಬಂದಿರುವ ಈ ಸತ್ಯಾಂಶವು, ವಿಮರ್ಶೆಯ 'ಅಗ್ನಿದಿವ್ಯ'ದೊಳಗಿಂದ 'ಪುನೀತ'ವಾಗಲಿ. ತಥ್ಯಾಂಶವೇ ಇಲ್ಲದಲ್ಲಿ, ಭಸ್ಮವಾಗಲಿ, ಎಂಬ ಉದ್ದೇಶದಿಂದ '**ಕರ್ನಾಟಕ ಭಾರತಿ**'ಗೆ ಈ ಲೇಖನ ಕಳಿಸುತ್ತಿದ್ದೇನೆ.

ಈ 'ಹರಿಶ್ಚಂದ್ರ'ನ ಕಥೆಯ ಆಶಯಸ್ಥ ಅಂತಃಸಂಗತಿಯ ಇನ್ನೊಂದು ಅಂಶದ ಕಡೆಗೂ ಗಮನ ಸೆಳೆಯಬಯಸುತ್ತೇನೆ. ಭಾರತೀಯ ಪುರಾತನಸಂಸ್ಕೃತಿಯೊಳಗಿನ **ಅಬೋಧಿ** (: ನ-ಚಿಕೇತ) **ಅಗ್ನಿ** (= ಚಾಂದ್ರಭೂಮಿಕೆ: ರಾತ್ರಸತ್ಯ ಸೂಚಕ), ಮತ್ತು **ಜಾತವೇದ ಅಗ್ನಿ** (: ಸೌರಭೂಮಿಕೆ. ಅಹಸ್-ಸತ್ಯಸೂಚಕ). ಇವೆರಡೂ ಸಂಪ್ರದಾಯಗಳಲ್ಲಿ ಸಂಘರ್ಷವಿತ್ತು. ಎಂಬುದನ್ನು ವೇದ (ಋ. X. ೫೧. ಮು೦.), ಉಪನಿಷತ್ತು (ಕೇನ. ಕಠ)ಗಳ ಆಧಾರದಿಂದ ವಿವರಿಸಲಾಗಿದೆ (ಈ ಲೇಖವು ಅಕ್ಷತೃತೀಯಾ '೭೪ ಸಂಚಿಕೆಯಲ್ಲಿ ಬಂದಿದೆ.) ಈ ಎರಡು ಅಗ್ನಿಗಳಲ್ಲಿ, ಹರಿಃ**ಚಂದ್ರನು**

'ರಾತ್ರಸತ್ಯ'ದ ಉಪಾಸಕನು. ಚಾಂದ್ರ, **ನ-ಚಿಕೇತಾಗ್ನಿ ಸಂಪ್ರದಾಯದವನಾಗಿ** ಕಾಣುತ್ತಾನೆ; ಮತ್ತು ಈ 'ಹರಿಃ**ಚಂದ್ರ**'. '**ತಾರಾ**-ಮತಿ'. '**ರೋಹಿತ**' ಅವರ ಪುತ್ರ ಈ ಸಾಂಕೇತಿಕ ಕಥೆಯಲ್ಲಿ, ಖಲನಾಯಕನಾಗಿರುವ, ಒಂದು ಕುಟುಂಬವನ್ನೇ ಗೋಳಾಟಕ್ಕೆ ಒಳಗಾಗಿಸಿದ, ಕ್ರೂರ ನರಾಧಮನ ಭೂಮಿಕೆಯಲ್ಲಿ ಕಾಣುವ **ವಿಶ್ವಾ-ಮಿತ್ರ (ವಿಶ್ವ [ದ] ಅಮಿತ್ರ)** ಈ ಪಾತ್ರವು **ಸೌರ**ಭೂಮಿಕೆಯ ಪ್ರತೀಕವಿರುವ ಈ **ಅಂತಃಸಂಗತಿ ವೇದಕಾಲದ 'ಸಮಯ'** (: ಆಚಾರದಲ್ಲಿಯೂ **ಉಂಟು**) ಹರಿಃಚಂದ್ರನ ವಿರೋಧಿಯು ಋಗ್ವೇದದೊಳಗಿನ '**ವೈಶ್ವಾನರಾಗ್ನಿ**' **(ಸೌರ)** ಪೂಜಕನು; '**ಸವಿತೃ**' (ಸೂರ್ಯ) **ಉಪಾಸನೆಯ** 'ಗಾಯತ್ರಿ' ಹೆಸರಿನ ವಿಖ್ಯಾತ ಮಂತ್ರದ ದ್ರಷ್ಟಾರನೆಂಬ ಆತನ ಖ್ಯಾತಿ ಅಂದಿನಿಂದ ಇಂದಿಗೂ ಉಳಿದಿದೆ! ಈತನ ಹೆಸರು, '**ವಿಶ್ವ-ಮಿತ್ರ**' ಎಂದೇ ಇರಬಲ್ಲುದು; ವೈಶ್ವಕ ಪಾತಳಿಯು ಅಪರ್-ಸತ್ಯದ **ಉ**ಪಾಸಕನೆಂಬುದನ್ನು ಗಮನಿಸಬೇಕು. ಈ 'ವಿಶ್ವ-ಮಿತ್ರನ' ವಿರೋಧಿ ಎಂದು 'ವಸಿಷ್ಠ'ನ ಹೆಸರು ಸುಪ್ರಸಿದ್ಧವಿದೆ. ಋಗ್ವೇದದ ವಸಿಷ್ಠ ಮನೆತನದ ಸೂಕ್ತಗಳಲ್ಲಿ (VII-೧೦೪) ಒಂದೆಡೆಗೆ ತನ್ನ ಹಗೆಯನ್ನು. ಹಾಳಾಗಲಿ. ಸುಟ್ಟು ಬೂದಿಯಾಗಲಿ, ಎಂದು ಶಪಿಸುತ್ತಿರುವ ಭಯಂಕರ ಉಗ್ರಮಾತು ಹೊರಹೊಮ್ಮಿವೆ. ಈ ಸೂಕ್ತವನ್ನು ನೋಡಿ ಒಬ್ಬ ಸಂಶೋಧಕನಿಗೆ, ಇದರಲ್ಲಿ ಒಂದು ಸತ್ಯಾಂಶ ಕಂಡಿದೆ: ವಸಿಷ್ಠನಿಗೆ 'ಯಾತುಧಾನ' (=ಗಾರುಡೀ ಮಂತ್ರ ಮಾಟಗಾರ) ಎಂದುದರ ಪರ್ಯಾಯ ಒಪ್ಪಿಗೆಯೇ ಇಲ್ಲಿ ಇರುವ ಶಕ್ಯತೆ ತೋರಿದೆ! ಅವನು 'Lady, you protest too much' ಎಂಬ ಗಾದೆಯನ್ನು ಎತ್ತಿ ಹೇಳುತ್ತಾನೆ. ಇದು ಹಾಗಿರಲಿ. ಒಟ್ಟಿನಲ್ಲಿ ಸುಸ್ಪಷ್ಟವಿದ್ದುದು ಈ ಎಲ್ಲ ಸಾಂಕೇತಿಕತೆಯೊಳಗಿನ ಅಂತಃಸಂಗತಿ! ಶ್ರೀರಾಮ**ಚಂದ್ರನ** ಕುಲಪುರೋಹಿತನೆಂಬೂ ವಸಿಷ್ಠನ ಭೂಮಿಕೆಯೊಂದಿದೆ. ವಸಿಷ್ಠನು ಉರ್ವಶೀ: ಅಪ್ಸರೆಯ ಮಗನು. 'ರಾತ್ರ್ಯಭಿಮಾನೀ ದೇವ'ನೆಂದು ಸಾಯಣರು ಭಾಷ್ಯ ಮಾಡಿರುವ 'ವರುಣ'ನ ಮಗ ವಸಿಷ್ಠ! ಉರ್ವಶಿಯು ನಾರಾ-ಯಣನ ಕನ್ಯೆ ಎಂಬ ಪುರಾಣ ಕಥೆಯುಂಟು ! ಈ '**ವರುಣನೂ**' **ತಾನೇ ಇದ್ದೇನೆ** (: ವರುಣಃ ಯಾದಸಾಂ ಅಹಂ). ಎಂಬ ಭಗವಂತ ಕೃಷ್ಣ : ಚಂದ್ರನು! ಈ ವರುಣನು. "primarily represents the moon, can not be passed over" ಎಂದು, ಎರಡೂ ದಂಡೆಯ ಮೇಲೆ ಕೈಯಿಟ್ಟು ಹೇಳುವ ಸಂಶೋಧಕ ಮ್ಯಾಕಡೊ-ನೆಲ್ಲನೂ ಒಪ್ಪುತ್ತಾನೆ! (Vedic mythology p. 28).

೯) 'ಸಮಯ' 'ಸಮಯ'ಗಳ ತಾರತಮ್ಯ ವಿಚಾರ

ಈವರೆಗಿನ ಸಾಂಕೇತಿಕ ಪ್ರತಿಮೆಗಳ ಹಿನ್ನೆಲೆಯು 'ಸಮಯ ಪರಿಸರ'ದ ವಿಭಿನ್ನತೆಯು. ಅಥವಾ 'ಸಮಯ' 'ಸಮಯಗಳು' ಸಮಾನವೆನಿಸಿದರೂ ಅವುಗಳಲ್ಲಿ ಕಾಣದೊರೆಯುವ ಸೂಕ್ಷ್ಮ ವ್ಯತ್ಯಾಸ-ತಾರತಮ್ಯದ ಅಂತರವು ಬೆಳಕಿನಲ್ಲಿ ತರುತ್ತಿರುವ ಈ 'ಪ್ರಜ್ಞೆ'ಯ ಸಂಕೋಚ-ವಿಕಾಸಗಳ ಸಾರಾಂಶ ಇಷ್ಟು :

ಅ) i) ಅಬೋಧಿಅಗ್ನಿ, ನ-ಚಿಕೇತಾಗ್ನಿ ಇವು ಭೂಃ ಮತ್ತು ಭುವಃ ಈ ಮೂರ್ತ-ಮೂರ್ತ ಪಾತಳಿಯ 'ಸಮಯ'ಗಳ ಆಧಾರದ ಮೇಲೆ ನಿಂತಿದೆ. 'ಭುವಃ' ಇದು **ಅಂತರಿಕ್ಷ:** ಸಮುದ್ರ (Vault) ದ ಸೂಚಕವೇ ಹೊರತು, **ಆ-ಕಾಶ** ಸೂಚಕವಲ್ಲ; ಅವ–ಕಾಶ.

ii) ಜಾತವೇದ ಅಗ್ನಿ, ವೈಶ್ವಾನರಾಗ್ನಿ, ಸವಿತೃ (ಸೂರ್ಯ)–ಎಂಬ ಈ ಸಂಕೇತಗಳ ಸ್ವರ್ ಅಥವಾ ಸುವಃ ಈ ಅಮೂರ್ತ ಪಾತಳಿಯ ಮೇಲಣ 'ಸಮಯ'ದ ಆಧಾರದ ಮೇಲೆ ನಿಂತಿದೆ.

ಚಾಂದ್ರ ಸಮಯದ ಆಕೃತಿ ಸ್ವರೂಪವು. ವರ್ತುಳ ಮಧ್ಯ ವೃಕ್ಷ (: ಸ್ತಂಭ) ಆಕೃತಿಯಂತೇ ಇರಬಲ್ಲುದು; ಇದು ಭೌತಪಾತಳಿಯ ಸೃಷ್ಟಿಗೆ ಸಂಬದ್ಧವಿರುವುದೇ ಈ ಆಕೃತಿ ವೈಶಿಷ್ಟ್ಯದ ಕಾರಣವು. 'ನಚಿಕೇತಾಗ್ನಿ' **ಉಲ್ಬಸ್ಥ** (: ಗರ್ಭ) (O) ಅಗ್ನಿ, ಎಂಬ ಮಾತು, ಈ ನಚಿಕೇತಾಗ್ನಿ ಸೂಕ್ತದಲ್ಲಿಯೇ ಉಂಟು. ಮತ್ತು **'ದೇವಯಾನ'** ಎಂಬ ಇನ್ನೊಂದು ಪ್ರತಿಮೆಯು ಮೂಲಕ ವೃಕ್ಷ : ಸ್ತಂಭದ ಸೂಚನೆ ಅಲ್ಲಿಯೇ ಇದೆ (X . ೫೧. ೨. ೫).

'ಜಾತವೇದ ಅಗ್ನಿ', 'ವೈಶ್ವಾನರಾಗ್ನಿ', 'ಸವಿತೃ', (ಸೂರ್ಯ) ಈ ಸ್ವರ್ ಆ-ಕಾಶದ ಪಾತಳಿಯ 'ಸಮಯ'. ಇದರ ಆಕೃತಿ : ನಿನ್ನೆ → ಇಂದು → ನಾಳೆಯು. ಸ್ವರೂಪದ ಗತಿಮಂತ ಆಕೃತಿ 'ನಿನ್ನೆ → ಇಂದು' 'ನಾಳೆ'ಯತ್ತ ಹೊರಟಿವೆ.

ಚಾಂದ್ರವೃತ್ತ್ಯಾಕೃತಿಯ ಕಾಲದ ಭೂಮಿಕೆಯಲ್ಲಿ **ನಿಜವಾದ 'ನಾಳೆ' ಎಂಬುದು ಇಲ್ಲ ! ನಿನ್ನೆಯು** (ತಂದೆ) **ಇಂದು** (ಮಗನು) ಆಗುತ್ತಾನೆ. 'ಪಿತಾ ಸನ್ ಅ-ಭವತ್ ಪುತ್ರಃ'! 'ಆತ್ಮಾ ವೈ ಪುತ್ರನಾಮಾಸಿ'! ಪುನರಪಿ ಜನನಂ, ಪುನರಪಿ ಮರಣಂ! 'ಸಾಯಂ ಪ್ರಾತಃ ಶಿಶಿರವಸಂತೌ ಪುನರಾಯಾತಃ'! ಈ ಭೂಮಿಕೆಯಲ್ಲಿ 'ನಾಳೆ' = ಭವಿಷ್ಯಕಾಲ ಇಲ್ಲ! ನಿನ್ನೆಗಳೇ ಇಂದು ಆಗಿ ಮರುಳುತ್ತವೆ.

ಕೆಲವು ಭಾಷಿಕರಿಗೆ, ನಿಜವಾದ 'ಭವಿಷತ್ಕಾಲ'ಸೂಚಕ ಸ್ವತಂತ್ರ ಪ್ರತ್ಯಯಗಳು ಅವಶ್ಯವೆನಿಸಿದ್ದು ಕಾಣುವುದಿಲ್ಲ! ಇದು ಅವರು ಚಾಂದ್ರಭೂಮಿಕೆಯ ಜೀವನದೃಷ್ಟಿಯವರೇ ಆಗಿರಬೇಕೆಂಬುದನ್ನು ಸೂಚಿಸುತ್ತದೆ. ಮರಾಠೀ ಭಾಷೆಯಲ್ಲಿ 'ನಿನ್ನೆ' ಎಂಬುದಕ್ಕೆ ಸ್ವತಂತ್ರ ಸಂಕೇತವಿಲ್ಲ. 'ಕಾಲ' ಎಂಬ ತ್ರಿಕಾಲಾರ್ಥದ ಸಂಕೇತವೇ ರೂಢಿಯಲ್ಲಿದೆ! ಹಿಂದಿಯಲ್ಲಿ ನಿನ್ನೆ-ನಾಳೆ ಎರಡಕ್ಕೂ **'ಕಾಲ'** ಸಂಕೇತವೇ ಉಂಟು; ರೂಢಿಯಿಂದ, ಮಾತಿನ ಸಂದರ್ಭದಿಂದ, ಮಾತಾಡುವನಿಗೆ ಅಭಿಪ್ರೇತ 'ಕಾಲ' ಯಾವುದು, ಭೂತವೋ ? ಭವಿಷ್ಯತ್ತೋ ಎಂಬುದನ್ನು ಊಹಿಸಿಕೊಳ್ಳಲಾಗುತ್ತದೆ !

ಆ) ಭ. ಗೀತೆಯೊಳಗಿನ 'ಭಗವಂತ'ನು ತಾನು **'ಕಾಲನು'** ಎಂದುದರ ನಿಜವಾದ ಅರ್ಥವು ಏನು ? ಎಂಬುದನ್ನು ಗೀತೆಯ ಕೃಷ್ಣನ ಮಾತಿನ 'ಕಾಲ' ಸಂಕೇತದ ಹಿಂದಿನ

'ಸಮಯ' ಗ್ರಹಿಸಿಕೊಳ್ಳಲು ಅಥರ್ವವೇದದ 'ಕಾಲ'ಸೂಕ್ತವು ಪ್ರಯೋಜನಕಾರಿಯಿರುವುದು ದೃಢಪಟ್ಟಿತು. **'ತಾನು ಕಾಲ'**ನು ಎಂಬ 'ಕೃಷ್ಣ' ಚಾಂದ್ರ ಭೂಮಿಕೆಯಿಂದ ಮಾತಾಡುತ್ತಾನೆ; ಇವನು, ಯಾದವ ಕೃಷ್ಣನಿದ್ದರೂ ಈ ಪೂರ್ತ ಭೂಮಿಕೆಯಿಂದ ಅವನು 'ಭುವನ' ಪಾತಳಿಯುಪ್ಪೋಲಿನ ಆವೇಶವಾಗಿ ಮಾತಾಡುತ್ತಿದ್ದಾನೆ.

ಸೃಜನಕ್ಕೆ ಕಾರಣರೂಪ ಈ ಕಾಲನು = **ಚಂದ್ರ'ವೃಕ್ಷ':'ಸರ್ಪ'** ಆಕೃತಿಯುವನು ಭೂಲೋಕದಲ್ಲಿ! ಅದಂ ಈಪ್ಡುರ ಕಥೆ ಸಾಕ್ಷಿ ! **ಅಶ್ವತ್ಥ = ನಾರಾಯಣ = ಪುರುಷರೂಪ ವೃಕ್ಷ** ಈ ಕೃಷ್ಣನು; 'ಕಾಲ'ನು ಎಂಬ ಈ ಸಾಂಕೇತಿಕತೆ ಶೈವ ಸಂಪ್ರದಾಯದಲ್ಲೂ ಇದೆ ! ಹಾಗಾದರೆ ಇದನ್ನು ಯಾರು ಯಾರಿಂದ ಸ್ವೀಕರಿಸಿದರು ? ಅಥವಾ ಇವೆರಡೂ ಸಂಪ್ರದಾಯಕ್ಕಿಂತ ಬೇರೊಂದು ಭೂಮಿಕೆಗೆ ಇವರಿಬ್ಬರೂ ಋಣಿಯಾಗಿದ್ದಾರೊ ಎಂಬ ಪ್ರಶ್ನೆಯು ಇತ್ಯರ್ಥವು ಇನ್ನೂ ಆಗಬೇಕು.

ಆದರೆ. **'ಕಾಲ'ನ 'ರೋಹಿತ'** ಭೂಮಿಕೆಯು ಹಿಂದಿನ **'ಸಮಯ'**ದ ಆಕೃತಿಯ ವಿಚಾರವೂ ಅವಶ್ಯವಾಯ್ತು. ರೋಹಿತ : ಕಾಲ, 'ಚಂದ್ರ'ನ ಕಾಲವೇ ಆಗಿದ್ದುದನ್ನು ಖಾತ್ರಿಮಾಡಿಕೊಳ್ಳಲು. ಹರಿ**ಚಂದ್ರನ** 'ಉಪಾಖ್ಯಾನ' ನಡುವೆ ಬಂತು ! ಈ ಉಪಾಖ್ಯಾನದ ಮೂಲಕ ನಿಶ್ಚಿತವಾಗುತ್ತಿರುವ ಸಂಗತಿ :

'ರಾತ್ರಸತ್ಯ' ಸಾಕ್ಷಾತ್ಕಾರೀ. ಚಂದ್ರೋಪಸ್ಥಾನದ ಹಂತದಲ್ಲಿ ಮೊತ್ತಮೊದಲು ಮಾನವರಿಗೆ ಅರಿವು ('ಜ್ಞಾ' ಮೂಡಿದ್ದು. ಈ ಜ್ಞಾನಬೋಧೆ ಆದದ್ದು) **'ಜ್ಯೋತಿರಗ್ರೇ'** ಇರುವ **'ಜ್ಞಾನ'** ವೃಕ್ಷದ ನೆಪದಿಂದ ! ಪಾಶ್ಚಾತ್ಯ ಪರಂಪರೆಯ ಕ್ರಿಸ್‌ಮಸ್ 'ವೃಕ್ಷ' : ಚಂದ್ರವೃಕ್ಷ. ಇದನ್ನು **Candle Light** (ಜ್ಯೋತಿರ್ಲಿಂಗ. ಅಥವಾ ಲಿಂಗ ಜ್ಯೋತಿ) ರೂಪದಲ್ಲಿ ಆರಾಧಿಸುವ ವಾಡಿಕೆಯೂ ಇದಕ್ಕೆ ಪ್ರಮಾಣ.

ವಾನರ→ನರನ ಹಂತದವರೆಗೂ ಪ್ರಚೇತಸ ಪ್ರಾಣಶಕ್ತಿ (Biosphere : ಆಪ : ರಸ : ರೇತ : ಶುಕ್ರದ ಪಾತಳಿ) = ಪ್ರಮಾಧೀ ಇಂದ್ರಿಯ ಶಕ್ತಿ = ಚಾಂದ್ರ ಶಕ್ತಿ, ಆ ಹಂತದಲ್ಲಿ ಇದು ಪ್ರಭಾವಶಾಲಿಯಾಗಿತ್ತು. ಆದರೆ 'ಜ್ಯೋತಿರಗ್ರೇ' 'ಜ್ಞಾನ ಜ್ಯೋತಿಯುಕ್ತ ವೃಕ್ಷ'ದ ಸಾಕ್ಷಾತ್ಕಾರವು ಆದದ್ದು **ನರವರ್ಗಕ್ಕೇ**. ಹೊರತು ವಾನರ ವರ್ಗಕ್ಕಲ್ಲ ! ಈ ಮೊತ್ತಮೊದಲಲ್ಲಿ ಹೊಳೆವ ಅರ್ಥ = ವಿಚಾರ : ಜ್ಞಾನವು. **ಬಳಿಕ** ತರ್ಕಾನುಗಾಮಿ ಎನಿಸಿದರೂ. 'ಹೊಳೆಯುವ ಕ್ರಿಯೆ 'ಫಕ್ಕನೆ' ಯೋಗಾಯೋಗ ! (logical continuam ಅಲ್ಲ).

ಇದೇ ಬಗೆಯ 'ಜ್ಞಾನ'ಪಾತಳಿಯ ಪ್ರಾದುರ್ಭಾವರೂಪೀ ವಿಕಾಸವು (: Emergent Evolution), 'ಫಕ್ಕನೆ ಆದ 'ಪ್ರಜ್ಞಾ'ಸ್ವರೂಪೀ ಪ್ರಾತಿಭ ದೃಷ್ಟಿಯ ಸೌರ ಪಾತಳಿಯ ಉದಯದಲ್ಲೂ ಉಂಟು. **'ಭುವಃ'** ಮತ್ತು **'ಸುವಃ-ಸ್ವಃ'** ಈ ಪಾತಳಿಗಳ ಅಸ್ತಿತ್ವವು ಇದರ ಪ್ರಜ್ಞೆ. ವಾನರಗಳ ವರೆಗಿನ ರಾಜಸ ಪ್ರಾಣಿ

ಗಳಲ್ಲಿಯೂ ಇಲ್ಲ ಎಂದು ಬಗೆಯಬೇಕಾಗುತ್ತದೆ. **ಪ್ರಜ್ಞೋದಯದೊಡನೆ ಭಾಷೆ-ಸಂಸ್ಕೃತಿ ಮೈದೋರಿವೆ !**

ಅ-ಚೇತನದಿಂದ→ ಚೇತನ, ಚೇತಸ. ಚೈತನ್ಯಯುಕ್ತ ಪ್ರಾಣಿವರ್ಗವು ಕಾಣಿಸಿಕೊಂಡಿದೆ. ಚೇತನ-ಚೇತಸ, ಪ್ರಾಣಶಕ್ತಿ ಮತ್ತು **ಪ್ರಜ್ಞಾ, ಉಪಜ್ಞಾ** (consciousness of conciosness or conscience) ಇವೆರಡರಲ್ಲಿಯೂ ಅಂತರವಿದೆ. **ಪ್ರಜ್ಞಾ : ವಿವೇಕ, ಮೂಲ್ಯಗಳ ವಿಚಾರ, ಅರ್ಥಗ್ರಹಣದ ಅಭೀಜಾತ ಗುಣ.** ಇದು ಬೌದ್ಧಿಕ ಲೆಕ್ಕಾಚಾರದ ದೃಷ್ಟಿಗಿಂತ ಬೇರೆ.

ವೇದಕಾಲದಿಂದ ತೊಡಗಿ, ಈ ಜ್ಞಾನಸೂಚಕ ಸಾಂಕೇತಿಕತೆಯನ್ನು ಸಮೀಕ್ಷಿಸುವಾಗ ಜ್ಯೋತಿ (ಅಂತರಿಕ್ಷ), ಪ್ರಕಾಶ (ಆಕಾಶ) ಈ ತಾರತಮ್ಯವು ವೇದಕಾಲದಿಂದಲೇ ಇದೆ. ಜ್ಯೋತಿ ಜೀವನದ 'ರಾತ್ರಿ' ತತ್ತ್ವದ ಪ್ರತೀಕ: ಪ್ರಕಾಶ ಅಹಸ್ಸಿನ ಪ್ರತೀಕ. **'ಚೇತಸ' ಮತ್ತು ಪ್ರಜ್ಞೆ** ಇವೆರಡರಲ್ಲಿಯೂ ಅಭಿಪ್ರೇತ ಸೂಕ್ಷ್ಮಭೇದವು ಮೊದಲು ಗಮನಕ್ಕೆ ಬಂದಿರಲಿಲ್ಲ. (ಚೇತನ-ಚೈತನ್ಯ ಇಂದ್ರಿಯಶಕ್ತಿ !) 'ಚೇತಸ' ಇದು 'ಜ್ಯೋತಿ-ರಶ್ಮಿ' ವೃಕ್ಷದ ಸಂದರ್ಭದ ಅರಿವಿನ ಸೂಚಕಮಾತ್ರ. ಪ್ರಾಣಶಕ್ತಿಯನ್ನು **'ಮಹತಃ ಭೂತಸ್ಯ ನಿಶ್ವಸಿತಂ'** ಇದನ್ನು ಬೃಹಲ್ಲಾಂಗೂಲ : ಮುಖ್ಯ **ಪ್ರಾಣದೇವರ** ರೂಪದಲ್ಲಿ ಆರಾಧಿಸುವಲ್ಲಿ ರಹಸ್ಯಾರ್ಥವಿದೆ! ಹೆಗೆಲ್ಲನ ತತ್ತ್ವಜ್ಞಾನದಲ್ಲಿ ('Geist') ಚೇತಸಕ್ಕೇ ಪ್ರಾಧಾನ್ಯವಿದೆ!(ಪುಣೆ ವಿದ್ಯಾಪೀಠ ಪ್ರಕಟಿಸಿರುವ ಹೆಗೆಲ್ಲನ ಬಗೆಗಿನ ಮರಾಠಿ ಗ್ರಂಥದಲ್ಲಿ ಪ್ರೊ ಡಿ ಕೆ ಬೇಡೇಕರರು Geist ಇದನ್ನು, 'ಚೇತಸ' ಎಂದಿದ್ದಾರೆ)

ಚೇತನ : ಪ್ರಾಣಶಕ್ತಿಯ ಲಕ್ಷಣವು : ಅಮೃತಂ ಚೈವ ಮೃತ್ಯುಃ' ಈ ಉಭಯ ಪರಸ್ಪರ ವಿರೋಧಿ ಭೂಮಿಕೆಯದು. Thesis-Antithesis ಎಂಬ ಪ್ರೇರಣಾ ದ್ವಂದ್ವದ ಹೆಗೆಲ್ಲಿನ ಸಿದ್ಧಾಂತವು ಚೇತಸ = ಪ್ರಾಣತತ್ತ್ವದ ಸೂಚಕವೇ ಇದೆ. ಆದರೆ **ಪ್ರಜ್ಞಾ :ವಿವೇಕಶಕ್ತಿ** ಪ್ರಮಾಥೀ ಪ್ರಾಣಚೇತಸ ಶಕ್ತಿಯನ್ನು ನಿಯಂತ್ರಣದಲ್ಲಿ ಇರಿಸಲು ಹವಣಿಸುವುದು, ಅದರ ಮೂಲಸ್ವಭಾವ! ಸೌರ-ಪ್ರಕಾಶ ಪಾತಳಿಯು, ಚಾಂದ್ರಭೂಮಿಕೆಯ ಪ್ರಚೇತಸ: ಪ್ರಾಣಶಕ್ತಿಗೆ ಅ-ಪಥ್ಯವೆನಿಸುವ ಇಲ್ಲದೆ ಇದು ಹಾಗಿರಲಿ.

೧೦. ಕೃಷ್ಣ-ವಿಷ್ಣು ಪರಂಪರೆಯ ಕೈವಾಡ

ಕೃಷ್ಣ-ವಿಷ್ಣು ಪರಂಪರೆಯ ಸಾಂಕೇತಿಕ ಸಮೀಕ್ಷೆಯಲ್ಲಿ ಇದರ ಎರಡು ಕಡೆಯ ಸಂಘರ್ಷವು ಅರಿಕೆಗೆ ಬರುತ್ತದೆ : ೧) ಚಾಂದ್ರಭೂಮಿಕೆಯನ್ನು ಮರೆಮಾಜಿ 'ಸೌರ' ಹಂತದ ಸಾಂಕೇತಿಕ ಪಾತಳಿಯಾದಾಗಿನ ಪ್ರಯುಕ್ತ ಒಂದೇ ಸಿಟ್ಟಿನಲ್ಲಿ ಕಾಣುತ್ತದೆ. ಉದಾ : ರಾಮ-ಚಂದ್ರನನ್ನು ಸೂರ್ಯವಂಶಿಯನ್ನಾಗಿಸುವುದು: **ಸೂರ್ಯ-ನಾರಾಯಣ**

ಪ್ರತಿಮೆ ರೂಢಿಸಿದ್ದು. **'ಅಪೋನಾರಾಃ'** ಎಂಬ ಅರ್ಥ ಮಹಾಭಾರತದಲ್ಲೇ ಇದೆ. ಆದರೂ ಈ ನಾರ-ಆಯನ=ನಾಗ, ಸೂರ್ಯನ ಪರ್ಯಾಯವಾಗುವ ಹಂತದಲ್ಲಿ ಕಾಣು ತ್ತಾನೆ!

೨) ಇನ್ನೊಂದು ದಿಕ್ಕಿನಲ್ಲಿ ಶೈವಸಂಪ್ರದಾಯದ ಸಾಂಕೇತಿಕತೆಯು ಮೇಲೆ ತನ್ನ ಹಕ್ಕನ್ನು ಪ್ರಸ್ಥಾಪಿಸುವ ಪ್ರಯತ್ನ. ಉದಾ: 'ಪುರುಷ'ಸೂಕ್ತವು ಇಂದು ವಿಷ್ಣುವಿನದೇ ಎಂಬ ಗ್ರಹಿಕೆಯಾಗಿದೆ! ಆದರೆ, ಶ್ವೇತ ಅಶ್ವತರದಲ್ಲಿ ರುದ್ರನಿಗೂ 'ಪುರುಷ' ಎಂದು ಬಗೆಯಲಾಗಿದೆ (೩, ೧೪, ೧೫). ಗಿರಿ. ವೃಕ್ಷ, ನಾಗ ಮುಂ. ಸಂಕೇತ ಗಳು ಸಮಾನ ಇವೆ. ರುದ್ರನು ಗಂಗಾ-ಧರ: ಶಿರದಲ್ಲಿ **ಗಂಗೆ;** 'ವಿಷ್ಣು ಪಾದಾಬ್ಜ ಸಂಭೂತಾ' **ಗಂಗೆ!** ಈ ಸಾಂಕೇತಿಕತೆಯಲ್ಲಿಯೂ ಸ್ಪರ್ಧಾಸೂಚಕ ಕಥೆ ತಲೆಯೆತ್ತಿವೆ. 'ಸ್ತಂಭ' ಭೇದಿಸಿದ ನಾರಸಿಂಹ, ಶೈವ ಹಿರಣ್ಯಕಶಿಪುವನ್ನು ಕೊಂದನೆಂಬ ಕಥೆಗೆ ಪ್ರತಿ ಯಾಗಿ ಶರಭಾವತಾರದ ಕಥೆ ಮೈದಾಳುತ್ತದೆ. ಆದರೆ 'ಗಂಗೆ' ವಿಷ್ಣು **ಪಾದದಿಂದ** ಹೊರಟು ಶಿವನ ಜಡೆಯಲ್ಲಿ ಅಡಗಿದಳು—ಈ ಕಥೆಯು ನೆಪದಿಂದ **ಮೇಲೆಕೆಳಗೆ** ಎಂಬ ಕ್ಷುದ್ರಪ್ರತಿಷ್ಠೆ ಹೆಚ್ಚಿಸಿಕೊಳ್ಳುವ ಮನೋಭಾವವು ಬಯಲಿಗೆ ಬರುತ್ತದೆ. **'ಮೂಲ'** ಸಾಂಕೇತಿಕತೆ ಗಮನಿಸಿದರೆ ಹೊರಬರುವ ಸಂಗತಿಯೇ ಬೇರೆ!

ವಿಷ್ಣು-ಕೃಷ್ಣ 'ಊರ್ಧ್ವಮೂಲ' ವೃಕ್ಷ; ಆದರೆ ರುದ್ರ-ಶಿವ 'ವೃಕ್ಷ ಇವ ಸ್ತಬ್ಧಃ' (ಶ್ವೆ ಉ. ೩-೯). 'ಸಃ ವೃಕ್ಷ ಕಾಲಾಕೃತಿ...' (ಶ್ವೆ. ಉ. ೬-೬). ಈ ಸಂದರ್ಭದಲ್ಲಿ ಮಹತ್ತ್ವದ ಪ್ರಶ್ನೆ: ೧) ವೃಕ್ಷ. ಮತ್ತು ೨) ಊರ್ಧ್ವಮೂಲ (ತಿರುವು-ಮುರುವು) [**ತುದಿ ಕೆಳಗೆ,** ಮತ್ತು ತಳ (ಬುಧ್ನ, ಬುಡ) ಮೇಲೆ] ಇವೆರಡರಲ್ಲಿ ಯಾವುದು ನೈಸರ್ಗಿಕ? 'ತಿರುವು-ಮುರುವು' ಸುಧಾರಿಸಿದ ಆವೃತ್ತಿ!

ಶಿವನ **ಗಂಗಾ**-ಧರ ಅಥವಾ **ಚಂದ್ರ** (ಚಂದ್ರಾ) **ಶೇಖರ** ಎಂಬ ಈ ನಿಲುವು ಮೊದಲಿನದು: ವಿಷ್ಣುವಿನ (ತೃತೀಯ) ಪಾದದಿಂದ ಗಂಗೆಯ ಉಗಮ. ಈ ಕಥೆ ಎರಡನೆಯ ಹಂತದ್ದು, ಇದು ನಿಶ್ಚಿತವಿದೆ. ಋಗ್ವೇದದ 'ವಾಗಾಂಭೃಣೀ' **ರಸ-ಸ್ವರೂಪೀದೇವಿ.** ತಾನು ತನ್ನ ತಂದೆಯ **ಶಿರದಿಂದ** ಹುಟ್ಟಿರುವೆ ಎಂದು ಹೇಳಿ-ದ್ದಾಳೆ (X. ೧೨೫). ಗ್ರೀಕ **ಅಥೆನಾ** ದೇವಿ ಎಲ್ಲ ಬಗೆಯಿಂದಲೂ ವೇದದ ವಾಗಾಂಭೃಣಿಯನ್ನು ಹೋಲುತ್ತಿದ್ದಾಳೆ. ಈ ದೇವಿಯೂ **ಝೀವೂಸನ ತಲೆ ಯಿಂದಲೇ ಹುಟ್ಟಿದಳು.** ಎಂಬ ಕಥೆ ಸರ್ವಮಾನ್ಯವಿದೆ.

ಇಂತು ಮೂಲ ಶೈವಪ್ರತಿಮೆಗಳನ್ನು ಸುಧಾರಿಸಿ ಸುಸಂಸ್ಕರಿಸಿದ ಸಾಂಕೇತಿಕತೆ ವಿಷ್ಣು-ಕೃಷ್ಣ ಸಂಪ್ರದಾಯದಲ್ಲಿ ಕಾಣದೊರೆಯುತ್ತವೆ.

ಆದರೆ ಚಾಂದ್ರಸಂಪ್ರದಾಯದ ಸಾಂಕೇತಿಕತೆಯು ಇತಿಹಾಸವು. ಸುಮೇರ-ಅಕ್ಕಡ ಭಾಗದಿಂದ ಪ್ರಾರಂಭವಾಗಿರುವುದು ಇಂದು ಸರ್ವಮಾನ್ಯವಿದೆ. ಡಾ. ಫ್ರಾಂಕ-

ಫೋರ್ಟ್ 'Civilization Begins at Near East' ಎಂಬ ಗ್ರಂಥ ಬರೆದಿದ್ದಾರೆ ಡಾ. ಕ್ರೈಮರ್, 'History Begins in Sumer' ಎಂಬ ಗ್ರಂಥ ಪ್ರಕಟಿಸಿದ್ದಾರೆ. ಅತಿ ಪುರಾತನ 'ವೃಕ್ಷ' ಪೂಜೆಯ ಅವಶೇಷಗಳು (ಸಚಿತ್ರ) ಸುಮೇರ ಭಾಗದಲ್ಲಿ ದೊರೆತಿವೆ. ಈ **ಆದಿ ಜೀವನ 'ವೃಕ್ಷ'** 'ಇನನ್ನಾ' ಎಂಬ ಚಂದ್ರದೇವಿಯದು! ಶಿವನಿಗೆ ಪ್ರಿಯವೆಂಬ ಬಿಲ್ವ (ಮೂರೆಲೆ: ತ್ರಿನೇತ್ರ) ವೃಕ್ಷವು. ಶ್ರೀ-ಸೂಕ್ತದಲ್ಲಿ ಲಕ್ಷ್ಮೀದೇವಿಯ ಪ್ರಿಯವೃಕ್ಷ! ಈ ದೇವಿ 'ತ್ರ್ಯಂಬಕೇ' ದೇವಿ ಎಂದು ವಂದಿಸಿಕೊಂಡಿದ್ದಾಳೆ. ಅಶ್ವತ್ಥ ಪುರುಷ : ನಾರ-ಅಯನ ವೃಕ್ಷವಾದದ್ದು ಈ ದೃಷ್ಟಿಯಿಂದ ಅರ್ವಾಚೀನ! ಭಾರತೀಯ ಚಾಂದ್ರ ಪೂಜಾ ಪ್ರತಿಮೆಗಳಲ್ಲಿ 'ಸೀನೀವಾಲೀ' ಯಂಥ ಚಂದ್ರದೇವತಾಸೂಚಕ ನಾಮವು ಋಗ್ವೇದದಲ್ಲಿ **ಸುಮೇರಿನತ್ತಣದು!**

ಸಾರಾಂಶವಿಷ್ಟು : ಭಾಷಿಕ ಸಂಕೇತಗಳ ಹಿಂದಿನ **'ಸಮಯ'** ಅರಿಕೆಗೆ ಬಂದಲ್ಲಿ, ಆ ಭಾಷಿಕರ ಸಂಸ್ಕೃತಿಯಲ್ಲಿ ಆದ, ಪ್ರಜ್ಞಾ-ವಿಕಾಸ ಹಾಗೂ ಸಂಕೇತದ ಇತಿಹಾಸವನ್ನು ಗ್ರಹಿಸಿಕೊಳ್ಳುವುದು ಅಶಕ್ಯವಲ್ಲ, ●

ಮೈಸೂರುಪ್ರದೇಶದ ಪ್ರಕಟಿತ ಶಾಸನಗಳ ಸಮೀಕ್ಷೆ ಮತ್ತು ಅಪ್ರಕಟಿತ ಶಾಸನಗಳ ಸೂಚಿ

(ಕಳೆದ ಸಂಚಿಕೆಯಿಂದ)

(೧೯೧೩–೧೯೧೬)

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೦೧	ಬೆಂಡಿಗಾನಹಳ್ಳಿ	ಹೊಸಕೋಟೆ	ಬೆಂಗಳೂರು	ಸು. ೪೦೦	ವಿಜಯಕೃಷ್ಣವರ್ಮ	ಗಂಗ	ತಾಮ್ರಶಾಸನ. ವಿಜಯಕೃಷ್ಣವರ್ಮನು ಕಪ್ಪೈಪಟದಲ್ಲಿದ್ದಾಗ. ಪರಟಿಯ ದಳಾಧಿಪತಿಯ ಕೋರಿಕೆಯ ಮೇರೆಗೆ ಮಾತೃಶರ್ಮನಿಗೆ ಕುಕಾರ ಗ್ರಾಮವನ್ನು ಬ್ರಹ್ಮದಾಯವೆಂದು ಕೊಟ್ಟನು.	ಆ. ಸ ಮೈ. ಆ. ರಿ ೧೯೧೫. ಪ್ರ. ೩೯
೧೦೨	ಶೃಂಗೇರಿ	ಶೃಂಗೇರಿ	ಚಿಕ್ಕಮಗಳೂರು	ಆಳ್ವಿಕೆಯ ಎರಡನೆಯ ವರ್ಷ	ಕೊಂಕಣಿವರ್ಮ	,,	ಕೊಂಕಣಿವರ್ಮನು ಸ್ವಕಲ್ಯಾಣಕ್ಕಾಗಿ ದಾನಪುರ ಗ್ರಾಮವನ್ನು ಕೇಶವಶರ್ಮನಿಗೆ ಕೊಟ್ಟನು.	ಆ ಸ ಮೈ.ಆ.ರಿ. ೧೯೧೬. ಪ್ರ. ೪೪.
೧೦೩	,,	,,	,,	,,	,,	,,	ಕೊಂಕಣಿರಾಜನ ಹಿರಿಯ ರಾಣಿ (ಬೃಹದ್ದೇವಿ)ಯು ಕೊಳ್ಳಪಳ್ಳಿಯ ೧೦ಖಂಡುಗ ಭೂಮಿಯನ್ನು ಗೋವಿಂದಶರ್ಮನಿಗೆ ದಾನ ನೀಡಿದಳು.	,,

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೦೪	ದೇವಲಾಪುರ	ಮೈಸೂರು	ಮೈಸೂರು	ಸು. ೭೭೦	ಶ್ರೀಪುರುಷ	ಗಂಗ	ಅರಟ್ಟೀ ಶೀರಾರ್ಸಂ ಗೊಟ್ಟೆವಂಡಿ ಒಡೆಯರ್ ನೊಕ್ಕಿಯೂರ್‌ನ ಪ್ರಜೆ ಯೊಬ್ಬನಿಗೆ ಕೊಟ್ಟ ಭೂದತ್ತಿಯ ಉಲ್ಲೇಖ.	ಅದೇ, ಪು ೪೫
೧೦೫	ಕುಪ್ಪೇಪಾಳ್ಯ	ಮಾಗಡಿ	ಬೆಂಗಳೂರು	ಸು. ೮೦೦	,,	,,	ಸವಕಲು ಶ್ರೀಪುರುಷನ ಆಜ್ಞೆಕೆಯಲ್ಲಿ. ಕತ್ತಾಣೆಯು ಬಿಸಿಗೂರಿನ ಜನರಿಗೆ ಕೊಟ್ಟ ವಿಶೇಷ ಸವಲತ್ತುಗಳನ್ನು ಹೆಸರಿಸುತ್ತದೆ. (ಗಂಗ-ಶಿವಮಾರನನ್ನು, ಶಿವಮಾರ್-ಎಱೆಯಪ್ಪೊರ್ ಎಂದು ಉಲ್ಲೇಖಿಸುವ ಏಕಮಾತ್ರ ಶಾಸನವಿದು)	ಆ. ಸ. ಮೈ. ಆ ರಿ. ೧೯೧೫, ಪು. ೪೪
೧೦೬	ಕುಪ್ಪೇಪಾಳ್ಯ	ಮಾಗಡಿ	ಬೆಂಗಳೂರು	—	ಶ್ರೀಪುರುಷ	,,	ತ್ರುಟಿತ. ಅರಸನೊಬ್ಬನಿಂದ ೮೦ ಖಂಡುಗ ಭೂದಾನ.	ಆ. ಸ ಮೈ. ಆ. ರಿ. ೧೯೧೫, ಪು. ೪೫
೧೦೭	ಹಿರಿ ಮಗ ಳೂರು	ಚಿಕ್ಕ ಮಗ ಳೂರು	ಚಿಕ್ಕಮಗ ಳೂರು	ಸು. ೯೦೦	ನೀತಿಮಾರ್ಗ I	,,	ಸವಕಲು. ಕಲಿ...ಯಂ ಮಾಧವ ರಾಜನು ಕರಸ್ವಾಮಿಭಟ್ಟನಿಗೆ ಒಂದು ಮನೆ ಮತ್ತು ಕೆಲವು ಸವಲತ್ತುಗಳನ್ನು......ಯಂ-ವಂಗಳ ಅಗ್ರಹಾರದಲ್ಲಿ ಕೊಟ್ಟನು.	ಆ. ಸ ಮೈ. ಆ. ರಿ. ೧೯೧೭, ಪು. ೪೬

ಅ. ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೦೮	ಬೇಗೂರು	ಬೆಂಗಳೂರು	ಬೆಂಗಳೂರು	—	ನೀತಿಮಾರ್ಗ II	,,	ನಾಗತರನ 'ಮಂನ-ಪಗತಿ' ಪೆರ್ಗ್ಗಣಸೆಟ್ಟಿ ಮತ್ತು ನಾಗತರನ ಮಗ ಬುಟ್ಟಣಪತಿಯಂರು ಬೆಂಗಳೂರಂ ಕದನದಲ್ಲಿ ಸಾವನ್ನಪ್ಪಿದರು.	ಅ. ಸ ಮೈ. ಆ. ರಿ. ೧೯೧೫, ಪು, ೪೫
೧೦೯	,,	,,	,,	೯ನೆಯ ಶತಮಾನ	—	,,	ನಿಶಿಧಿಕಲ್ಲಿಂ. ಮೋನಭಟ್ಟಾರನ ಶಿಷ್ಯ……ಂದಿ ಭಟಾರನ ಮರಣ.	ಅದೇ, ಪು. ೪೬
೧೧೦	ಕಿಕ್ಕೇರಿ	ಕೃಷ್ಣರಾಜ ಪೇಟೆ	ಮಂಡ್ಯ	ಸು. ೧೦೦೦	—	,,	ಚಟ್ಟಸಟ್ಟಿಯು ಬೀಡಿನ ಮಾರಗ ವುಂಡ ಎಂಬ ಪಟ್ಟಣಸ್ವಾಮಿಯು ಉಲ್ಲೇಖ.	ಅದೇ, ಪು. ೪೬
೧೧೧	ಹೆಗ್ಗುಂದ	ನೆಲಮಂಗಲ	ಬೆಂಗಳೂರು	—	—	,,	ಮಸಗಳೆದೇವನು ಗೋಪುರ ಕಟ್ಟಿಸಿದ ಉಲ್ಲೇಖ.	ಅದೇ, ಪು. ೪೬
೧೧೨	ಬೇಗೂರು	,,	—	—	—	,,	ನಿಶಿಧಿಕಲ್ಲಿಂ. ಮಸ್ನಬ್ಬೆಕನ್ತಿ ಎಂಬ ಜೈನ ಸನ್ಯಾಸಿನಿಯು ಸಾವನ್ನು ಹೇಳುತ್ತದೆ.	ಅದೇ. ಪು. ೪೬
೧೧೩	ವರುಣ	ಮೈಸೂರು	ಮೈಸೂರು	—	ದುರ್ಗ	ಚಾಳುಕ್ಯ	ದುರ್ಗನು ಭೂತೇಶ್ವರ ದೇವಾಲಯಕ್ಕೆ ತೊರೆವಳ್ಳಿಯನ್ನು, ನನ್ನಿ ಕರ್ತಾರಭಟ್ಟನಿಗೆ ಎರಡು ಖಂಡುಗ ಭೂದತ್ತಿಯನ್ನು ಕೊಟ್ಟನು.	ಅ. ಸ. ಮೈ. ಆ. ರಿ. ೧೯೧೬. ಪು. ೪೭

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸು	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೧೪	ವರುಣ	ಮೈಸೂರು	ಮೈಸೂರು	ಸಂ. ೯೦೦	ಗೊಗ್ಗಿ	ಚಾಳುಕ್ಯ	ಮಹಾಸಾಮಂತ ಗೊಗ್ಗಿಯು ಭೂತೇಶ್ವರ ದೇವಸ್ಥಾನಕ್ಕೆ ಎಡಗೋಡು ಪಳ್ಳಿಯನ್ನು ಸ್ಥಾನಪತಿ ನನ್ನಿಕರ್ತಾರ ಭಟ್ಟನಿಗೆ ದಾನ ನೀಡಿದನು.	ಅ. ಸ. ಮೈ. ಆ. ರಿ. ೧೯೧೬, ಪು. ೪೬.
೧೧೫	ಐಗಂಡಪುರ	ಬೆಂಗಳೂರು	ಬೆಂಗಳೂರು	—	ರಾಜೇಂದ್ರ ಚೋಳ	ಚೋಳ	ಸಂಸ್ಕೃತ ಶಾಸನ ವಾಮನನ ಸಹಾಯದಿಂದ ಮದನಾರ್ಯನಿಂದ ಶಂಭುವಿನ ಪೀಠ ನಿರ್ಮಾಣ.	ಅದೇ, ಪುಟ, ೪೮
೧೧೬	ವರನಾಯಕನ ಹಳ್ಳಿ	ನೆಲಮಂಗಲ	,,	೧೦೫೦	ರಾಜಾಧಿರಾಜ	,,	ಕೇಸೂರಿನ ಒಡೆಯ–ಮಾರ್ತಾಂಡ ವೇಳರ್, ಗಂಗೆಗೊಂಡ ಚೋಳಿ ಗಾವುಂಡ ಮತ್ತು ದೋರಯ್ಯರ ವೀರಮರಣ.	ಅ. ಸ. ಮೈ. ಆ. ರಿ. ೧೯೧೫, ಪು. ೪೬.
೧೧೭	ಐಗಂಡಪುರ	ಬೆಂಗಳೂರು	,,	—	ರಾಜೇಂದ್ರ ಚೋಳ	,,	ತುಂಡು, ತಮಿಳು ಶಾಸನ. ರಾಜೇಂದ್ರ ಚೋಳನ ವರ್ಣನೆ.	ಅ. ಸ. ಮೈ. ಆ. ರಿ. ೧೯೧೬, ಪು. ೪೭.
೧೧೮	ಅಂಗರೇಕನ ಹಳ್ಳಿ	ಚಿಕ್ಕಬಳ್ಳಾಪುರ	ಕೋಲಾರ	೧೧೦೪	ಕುಲೋತ್ತುಂಗ ಚೋಳ I	,,	ಇಮ್ಮಡಿ ಕೋಟಿಗಾಮುಂಡನ್, ರಾಜುಮಾಣಿಕ್ಯ-ವೇಟಾನ್ ಮತ್ತಿತರರು ಕೆರೆಯ ತೂಬನ್ನು ಕಟ್ಟಿಸಿದರು.	ಅ. ಸ. ಮೈ. ಆ. ರಿ. ೧೯೧೪, ಪು. ೪೨.

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೧೯	ಐಗಂಡಪುರ	ಬೆಂಗಳೂರು	ಬೆಂಗಳೂರು	—	,,	,,	ತುಂಡು. ತಮಿಳು ಶಾಸನ. ಕುಲೋತ್ತುಂಗ ಚೋಳನ ಶಾಸನಗಳಲ್ಲಿ ಬರುವ ಐತಿಹಾಸಿಕ ವಿಷಯಗಳ ವರ್ಣನೆ.	ಆ. ಸ ಮೈ. ಆ. ರಿ. ೧೯೧೬, ಪು. ೪೭.
೧೨೦	ದರ್ಗಪುರ	ದೊಡ್ಡ ಬಳ್ಳಾಪುರ	,,	೯ನೆಯ ಶತಮಾನ	ವೀರ ಪೆರ್ಬಾಣ	ಬಾಣ	ಕಡಿತಲೆ ಮಂಡೆವಾರಿ ಜಯಕಾಮನ್ ವೀರಪೇರ್ಬಾಣನ್ ೯೫ ಮಂದಿಯುನ್ನು ಕೊಂದ.	
೧೨೧	ತೊಣಶಿ	ಕೃಷ್ಣರಾಜ ಪೇಟೆ	ಮಂಡ್ಯ	೧೦೪೭ (?)	ವಿನಯಾದಿತ್ಯ	ಹೊಯ್ಸಳ	ತಲಕಾಡಿನ ಆರುಸಾವಿರ....... ಕಿಱುನಗರದ ಸಾವಿರ ಮತ್ತು ಹದಿನೆಂಟು ನಾಡಿನ ದೇಸಿಯರು ಕೂಡಿಕೊಂಡು ಅಂಕಕಾಱದೇವ ಮತ್ತು ನಗರೇಶ್ವರ ದೇವರಿಗೆ ಕೊಟ್ಟ ದಾನ.	ಆ ಸ. ಮೈ. ಆ. ರಿ. ೧೯೧೬, ಪು. ೪೭.
೧೨೨	,,	,,	,,	—	,,	,,	ತೊಳಂಚೆಯ ಮೆದಕ್ಕೆವೆಗ್ಗಡೆ ಚಟ್ಟಯ್ಯ ಮತ್ತು ಗೋಲಗಾವುಂಡರು ಅಂಕಕಾಱದೇವನಿಗೆ ಕೊಟ್ಟ ದತ್ತಿ	ಅದೇ. ಪು ೫೦.
೧೨೩	ಮಾರುಗೋನಹಳ್ಳಿ	,,	,,	೧೧೦೨	ಬಲ್ಲಾಳ I	,,	ಬಾಚಿಗವುಂಡನ ಹೆಂಡತಿ ಬಾಗಿಯಬ್ಬೆಯ ಮರಣ.	,,
೧೨೪	ಮಂರಲೆ	ಚಿಕ್ಕ ಮಗಳೂರು	ಚಿಕ್ಕ ಮಗಳೂರು	೧೧೧೦	ವಿಷ್ಣುವರ್ಧನ	,,	ತುಂಡು. ವ್ಯಕ್ತಿ (?) ಒಬ್ಬನ ಮರಣ.	ಆ. ಸ. ಮೈ. ಆ ರಿ. ೧೯೧೬. ಪು. ೫೩.

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೨೫	ಕಿಕ್ಕೇರಿ	ಕೃಷ್ಣರಾಜ ಪೇಟೆ	ಮಂಡ್ಯ	೧೧೧೧	ವಿಷ್ಣುವರ್ಧನ	ಹೊಯ್ಸಳ	ವಿಷ್ಣುವರ್ಧನನ್ನು ಪೊಯ್ಸಳದೇವ ನೆಂದು ಹೆಸರಿಸುತ್ತದೆ.	ಎ. ಸ. ಮೈ. ಆ. ರಿ. ೧೯೧೫, ಪು. ೫೦.
೧೨೬	ಬಿರಿಕಳಲೆ	,,	,,	೧೧೧೩	,,	,,	ಚಿಣ್ಣನಂಬ ಅಧಿಕಾರಿ ಸ್ವಯಂಭು ಅಂಕಕಾಜಿ ದೇವರಿಗಾಗಿ ಸೋಮ ರಾಶಿ ಜೀಯನಿಗೆ ನೀಡಿದ ದಾನ.	ಅದೇ, ಪು. ೫೦.
೧೨೭	ತೊಣಚಿ	,,	,,	೧೧೧೭	,,	,,	ತೊಣಚಿಯ ಮಹಾದೆ ವರಿಗೆ ಸುಂಕದ ಅಧಿಕಾರಿ ನಾರಣವೆಗ್ಗಡೆ ಯಿಂದ ಗಾಣದ ಸುಂಕ ವಿಮುಕ್ತತೆ.	ಅದೇ, ಪು. ೫೦.
೧೨೮	ತೊಣಚಿ	ಕೃಷ್ಣರಾಜ ಪೇಟೆ	ಮಂಡ್ಯ	೧೧೧೮	ವಿಷ್ಣುವರ್ಧನ	ಹೊಯ್ಸಳ	ದೇಯಿಕಬ್ಬೆ ಕತ್ತರಿ ಘಟ್ಟದಲ್ಲಿ ಬಸ ದಿಯನ್ನು ಕಟ್ಟಿಸಿ, ಶುಭ ಚಂದ್ರಸಿದ್ಧಾಂತದೇವನಿಗೆ ಕೊಟ್ಟ ಭೂದತ್ತಿ.	ಎ. ಸ. ಮೈ. ಆ. ರಿ. ೧೯೧೫, ಪು. ೫೧.
೧೨೯	ಛಪ್ಪನ ಕೊಪ್ಪಲು	,,	,,	೧೧೨೦	,,	,,	ತೊಳಚಿಯ ಅಂಕಕಾಜಿದೇವನಿಗೆ ನಂಗಲಿಯ ಶ್ರೀಮ......ದೇವನು ಕೊಟ್ಟ ದತ್ತಿ.	ಅದೇ, ಪು. ೫೧.
೧೩೦	ಸಾಸಲೆ	,,	,,	೧೧೨೧	,,	,,	ಸಾಸಲಿನ ದೇವಾಲಯದ ಸ್ಥಾನ ಪತಿ ಕಱಿಕಂಠಜೀಯನಿಗೆ ಕೊಟ್ಟ ದತ್ತಿ.	ಅದೇ, ಪು. ೫೧.

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೩೧	ವರನಾಯಂಕನ ಹಳ್ಳಿ	ನೆಲಮಂಗಲ	ಬೆಂಗಳೂರು	ಸು. ೧೧೨೮	,,	,,	ವೀರಗಲ್ಲು. ಬೇಲೂರಿನ ಶೀಲಗಾ ಮುಣ್ಡನ ವೀರಮರಣ.	ಅದೇ, ಪು. ೫೧.
೧೩೨	ನಾರಾಣಪುರ	ಟಿ. ನರಸೀಪುರ	ಮೈಸೂರು	೧೧೩೩	,,	,,	ಛೆಪ್ಪಯ್ಯನಿಂದ ಬೆಟವಾಡಿಯ ಮಹಾದೇವರಿಗಾಗಿ. ತೊರೆನಾಡಿನ ಕಜಿಕಂತಜೀಯನಿಗೆ ನೀಡಿದ ದತ್ತಿ.	ಆ. ಸ. ಮೈ. ಆ. ರಿ. ೧೯೩೧, ಪು. ೩೬.
೧೩೩	ಮರಲೆ	ಚಿಕ್ಕ ಮಂಗಳೂರು	ಚಿಕ್ಕ ಮಗಳೂರು	೧೧೩೬	,,	,,	ವೀರಗಲ್ಲು. ಮಲೆಹರು ಹೆಂಗಸರ ಉಡೆವ್ರಚ್ಚುವಾಗ, ಅವರನ್ನೆದುರಿಸಿದ ಬಮ್ಮನ ವೀರಮರಣ.	ಆ. ಸ. ಮೈ ಆ. ರಿ. ೧೯೧೬. ಪು. ೫೩.
೧೩೪	ತೆಂಗಿನಗಟ್ಟ	ಕೃಷ್ಣರಾಜಪೇಟೆ	ಮಂಡ್ಯ	೧೧೭೨	ನರಸಿಂಹ II	ಹೊಯ್ಸಳ	ಕಾವಣ್ಣ, ಕಾಟಿಯನಾಯಕ ಮತ್ತು ಹೆಗ್ಗಡೆ ಮಂಜಯ್ಯರು ಹೊಯ್ಸಳೇಶ್ವರ ದೇವಸ್ಥಾನವನ್ನು ಕಟ್ಟಿಸಿ ಭೂದತ್ತಿ ಕೊಟ್ಟರು ಮತ್ತು ಕೆರೆಯೊಂದನ್ನು ಕಟ್ಟಿಸಿದರು.	ಆ. ಸ. ಮೈ. ಆ. ರಿ. ೧೯೧೫, ಪು. ೫೧
೧೩೫	ಉಪ್ಪಹಳ್ಳಿ	ಚಿಕ್ಕಮಗಳೂರು	ಚಿಕ್ಕ ಮಗಳೂರು	೧೧೪೫	,,	,,	ಬಿಮ್ಮಣ ಮತ್ತು ಇತರರು ಮನೆವರ್ಗ್ಗಡೆ ಜಲುಮೆಯನಿಗೆ ಸೇರಿದ ಉರ್ವ್ವಳ್ಳಿಗೆ ದಾಳಿಯಿಕ್ಕಿದಾಗ ಹರಿಯಣನ ವೀರಮರಣ.	ಆ. ಸ. ಮೈ. ಆ. ರಿ. ೧೯೧೬. ಪು. ೫೩

ಅ. ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೩೬	ಶಿವಗಂಗೆ	ನೆಲಮಂಗಲ	ಬೆಂಗಳೂರು	೧೧೫೫	,,	,,	ಕೊಟ್ಟಾರದ ಕೂಸು-ಬಸವಣನು ಶಿವಗಂಗೆ ಗುಡ್ಡದ ಮೇಲೆ ದೀಪಸ್ತಂಭವನ್ನು ನಿಲ್ಲಿಸಿ, ಭೈರವನ ಗುಡಿ ಕಟ್ಟಿಸಿದ.	ಆ.ಸ ಮೈ.ಆ.ರಿ. ೧೯೧೫, ಪು, ೫೨
೧೩೭	,,	,,	,,	,,	,,	,,	ತೀರ್ಥಸ್ತಂಭದ ನಾಲ್ಕು ಕಡೆಗಿರುವ ಈ ಶಾಸನಗಳು, ಕೊಟ್ಟಾರದ ಕೂಸು ಬಸವಣನು ಸ್ತಂಭವನ್ನು ನಿಲ್ಲಿಸಿದನೆಂದು ತಿಳಿಸುತ್ತವೆ.	ಅದೇ. ಪು. ೫೨
೧೩೮	ಹೊಸ ಹೊಳಲು	ಕೃಷ್ಣರಾಜಪೇಟೆ	ಮಂಡ್ಯ	೧೧೬೨	,,	,,	ಮೊದಲನೆಯ ನರಸಿಂಹ ಮತ್ತು ಕಳಚೂರ್ಯ ಬಿಜ್ಜಳರ ನಡುವೆ ನಡೆದ ಕದನ. ಹೊಸಳಲಿನ ಭೀಮೆಯ ನಾಯಕನ ಮರಣ ಅವನ ಮಗ ಬಾಚ ಮತ್ತು ಇತರರಿಂದ ಭೀಮೇಶ್ವರ ದೇವರ ಪ್ರತಿಷ್ಠಾಪನೆ.	ಅದೇ, ಪು. ೫೧
೧೩೯	ಶಿವಗಂಗೆ	ನೆಲಮಂಗಲ	ಬೆಂಗಳೂರು	—	ನರಸಿಂಹ II	ಹೊಯ್ಸಳ	ಸರ್ವಾಧಿಕಾರಿ ಚೊಕಿಮಯ್ಯನು ತನ್ನ ತಾಯಿ ಮಲ್ಲಿಕವ್ವೆಗೆ ಪುಣ್ಯವಾಗಲೆಂದು ಮಂಟಪವನ್ನು ಕಟ್ಟಿಸಿದ.	ಆ.ಸ.ಮೈ.ಆ.ರಿ. ೧೯೧೫, ಪು. ೫೨

ಅ.ಸು.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೪೦	ಸಂಕಿಗಟ್ಟ	ಮಾಗಡಿ	,,	—	,,	,,	ತ್ರುಟಿತ. ವಿನಯಾದಿತ್ಯನಿಂದ ಮೊದಲನೆಯ ನರಸಿಂಹನವರೆಗೆ ಹೊಯ್ಸಳ ವಂಶಾವಳಿಯಿದೆ. (ಈ ಶಾಸನವನ್ನು ಒಡೆದು ವರ್ಧಮಾನನ ವಿಗ್ರಹವನ್ನು ಕಟೆದಿದ್ದಾರೆ)	ಅದೇ. ಪು. ೫೨
೧೪೧	ವಂರಲೆ	ಚಿಕ್ಕಮಗಳೂರು	ಚಿಕ್ಕ ಮಗಳೂರು	—	,,	,,	ವೀರಗಲ್ಲು. ಚಿಟ್ಟಿಸೆಟ್ಟಿಯ ವೀರಮರಣ. ಹೆಂಡತಿ ಚಾಕಬ್ಬೆ ಸೆಟ್ಟಿತಿಯಿಂದ ಶಿಲಾಸ್ತಂಭ ಸ್ಥಾಪನೆ.	ಆ.ಸ.ಮೈ.ಆ.ರಿ. ೧೯೧೬, ಪು. ೫೩
೧೪೨	ಅಗ್ರಹಾರ	ಕೃಷ್ಣರಾಜಪೇಟೆ	ಮಂಡ್ಯ	೧೧೭೯	ಬಲ್ಲಾಳ II	,,	(ಕಳಚುರ್ಯ) ಸಂಕಮದೇವನ ಸೈನ್ಯವನ್ನು ಎದುರಿಸಿದ ಬಬ್ಬೆಯ ನಾಯಂಕನ ವೀರಮರಣ.	ಆ.ಸ ಮೈ ಆ.ರಿ. ೧೯೧೫. ಪು ೫೩
೧೪೩	ತೊಣಚಿ	,,	,,	೧೧೯೧ (?)	,,	,,	ಒರತಲೆಯ ಮಾಳಯ ಸಾಹಣಿ ಕಟ್ಟಿಸಿದ ಸಿದ್ಧನಾಥನ ದೇವಾಲಯಕ್ಕೆ ಸಕಲ ಪ್ರಭು ಗಾವುಂಡಗಳಿಂದ ಭೂದತ್ತಿ.	ಅದೇ, ಪು. ೫೩

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ ಅರಸು ಮನೆತನ		ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೪೪	ಅಗ್ರಹಾರ ಬಾಚಹಳ್ಳಿ	ಕೃಷ್ಣರಾಜ	ಮಂಡ್ಯ	—	ಬಲ್ಲಾಳ II	ಹೊಯ್ಸಳ	ಬಬ್ಬೆಯ ನಾಯಕನ ಮಗ ಮಹಾದೇವ ನಾಯಕನ ಮರಣ ಪ್ರಸಂಗದಲ್ಲಿ ಮಡದಿ ಬಿಬೊವೆ ನಾಯಕಿತಿಯ ಸಹಗಮನ.	ಆ.ಸ ವೈ ಆ ರಿ. ೧೯೧೫, ಪು. ೫೩
೧೪೫	ಜಕ್ಕಸಂದ್ರ	ಬೆಂಗಳೂರು	ಬೆಂಗಳೂರು	೧೨೪೨	ಸೋಮೇಶ್ವರ	,,	ನಂಬಿ ಇರವಿಯಂ ತಾಮರೈಕಿಜ್ಞೈನ ಶೇಂಬೀಚ್ಚುರ ದೇವಸ್ಥಾನದ ವಿಮಲ ಶಿವರ್ಸಿಗೆ ಭೂಮಿಯೊಂದನ್ನು 'ಮಾದಪ್ಪುಱಂ' ಆಗಿ ಕೊಟ್ಟನು.	ಅದೇ, ಪು. ೫೫
೧೪೬	,,	,,	,,	,,	,,	,,	ಬಾಚಹಳ್ಳಿಯ ಕಣ್ಣಯನಾಯಕನು ಸಿಗಳನನ್ನು ಎದುರಿಸಿದ ಕಾಳಗದಲ್ಲಿ ಪಟ್ಟಣಸ್ವಾಮಿ ಮಲೆಯನ ವೀರಸ್ವರ್ಗ. ಅವನ ಅಕ್ಕ ಮಾಳವೆಯಿಂದ ಶಾಸನ ನಿರ್ಮಾಣ.	ಅದೇ, ಪು. ೫೫
೧೪೭	ಹಳೇ ವಿಜಕಲ್	ನೆಲಮಂಗಲ	,,	೧೨೮೦	ನಾರಸಿಂಹ III	,,	ಅರಸನ ಸಾಮಂತನೊಬ್ಬ ಬಿಟ್ಟ ದತ್ತಿಯ ಉಲ್ಲೇಖ.	ಅದೇ, ಪು. ೫೫
೧೪೮	ಅಗ್ರಹಾರ ಬಾಚಹಳ್ಳಿ	ಕೃಷ್ಣರಾಜ ಪೇಟೆ	ಮಂಡ್ಯ	೧೨೯೧	,,	,,	ಹೊಯ್ಸಳ ಅರಸರೊಂದಿಗೆ ಪ್ರಾಣ ನೀಗಿದ ರಂಗಯ್ಯ ಹಾಗೂ ಆತನ ವಂಶಜರ ವರ್ಣನೆ.	ಅದೇ, ಪು. ೫೫

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೪೯	,,	,,	,,	೧೨೯೧ (?)	,,	,,	ಅರಸನ ಸೇವಕನಾಗಿದ್ದ ಸೋಮನು ಗರುಡನಾದ ಉಲ್ಲೇಖ.	ಅದೇ, ಪು. ೫೬
೧೫೦	ನಾಗಲಾಪುರ	ಮರುವೇಕೆರೆ	ತುಮಕೂರು	೧೩ನೆಯ ಶತಮಾನ	ನಾರಸಿಂಹ III	ಹೊಯ್ಸಳ	ತುಂಡುಗಳು. ರೂವಾರಿ ಬೈಚೋಜನ ಉಲ್ಲೇಖ.	ಅ.ಸ.ಮೈ.ಆ.ರಿ. ೧೯೧೭, ಪು. ೫೫
೧೫೧	,,	,,	,,	—	,,	,,	ತುಂಡು. ಬಲೋಜನ ಉಲ್ಲೇಖ.	ಅದೇ, ಪು. ೫೫
೧೫೨	,,	,,	,,	—	,,	,,	ತುಂಡು. ಸಿಗೋಜನ ಉಲ್ಲೇಖ.	,,
೧೫೩	,,	,,	,,	—	,,	,,	ಬಹುಶಃ, ದ್ರೋಜನ ಉಲ್ಲೇಖ.	,,
೧೫೪	ವಿರುಪಾಪುರ	ಮಾಗಡಿ	ಬೆಂಗಳೂರು	೧೨೯೬	ಬಲ್ಲಾಳ III	,,	ಗುರುಪಸು ಗಂಗಿದೇವ ಒಡೆಯರಿಗೆ. ರಾಮಯ್ಯ ದೇವರನ್ನು ಮತ್ತು ತನ್ನ ಸ್ವಂತ ಜಮೀನುಗಳನ್ನು ವಹಿಸಿ ಕೊಟ್ಟ.	ಅ.ಸ.ಮೈ.ಆ ರಿ. ೧೯೧೫. ಪು. ೫೬
೧೫೫	,,	,,	,,	೧೩೦೦ (?)	,,	,,	ಬಲ್ಲಾಳನ ವರ್ಣನೆ. ಅವನು ಹುಲಿಕರನ ರಾಮನಾಥ ದೇವರಿಗೆ ಹಳೆಯನ ಹಳ್ಳಿಯಲ್ಲಿ ಕೊಟ್ಟ ಭೂದತ್ತಿ.	ಅದೇ. ಪು. ೫೬

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಆರಸ	ಅರಸು ಮನೆತನ	ಶಾಶನದ ವಿವರ	ವರದಿ ಮತ್ತು ಉಲ್ಲೇಖ.
೧೫೬	,,	,,	,,	,,	,,	,,	ಬಲ್ಲಾಳನು ವೀರೇಶ್ವರ ದೇವರಿಗೆ ಕೊಟ್ಟ ದತ್ತಿ.	ಅದೇ, ಪು. ೫೬
೧೫೭	ಚಿಕ್ಕಜಾಲ	ದೇವನಹಳ್ಳಿ	,,	—	,,	,,	ತಮಿಳು ಶಾಸನಗಳು. ಸ್ತಂಭಗಳನ್ನು ದಾನವಾಗಿತ್ತ ಹಲವರು ದಾನಿಗಳ ಉಲ್ಲೇಖ.	ಆ.ಸ.ಮೈ.ಆ ರಿ. ೧೯೧೬, ಪು. ೫೫
೧೫೮	ವಿರುಪಾಪುರ	ಮಾಗಡಿ	,,	—	,,	,,	ಬೊಮಣನು ಕೊಟ್ಟ ದತ್ತಿ	ಆ.ಸ.ಮೈ.ಆ ರಿ. ೧೯೧೫, ಪು. ೫೬
೧೫೯	ಹೊಸ ಹೊಳಲು	ಕೃಷ್ಣರಾಜ ಪೇಟೆ	ಮಂಡ್ಯ	೧೩೦೬	,,	,,	ಸೋಮನಾಥ ದೇವರಿಗೆ ಹೊಸ ಹೊಳಲಿನ ಮಹಾಜನರು ಮತ್ತು ಇತರ ಮುಖ್ಯರು ಕೊಟ್ಟ ದತ್ತಿ.	ಅದೇ, ಪು. ೫೬
೧೬೦	ನಾರಣಕೆರೆ	ಹೊಸಕೋಟೆ	ಬೆಂಗಳೂರು	೧೩೧೬	,,	,,	ಸೋಯಿನಾಯಕನು ಕೊಟ್ಟ ದತ್ತಿ.	ಆ.ಸ.ಮೈ.ಆ.ರಿ. ೧೯೧೪, ಪು. ೪೫
೧೬೧	ಜೋಡಿಲು-ದಾನಹಳ್ಳಿ	ದೊಡ್ಡಬಳ್ಳಾಪುರ	ಬೆಂಗಳೂರು	೧೩೨೮	ಬಲ್ಲಾಳ III	ಹೊಯ್ಸಳ	ಮಾದಯ ಸಣ್ಣಾಯಕನಿಂದ ಇಲಾಬಿಜೀಯ ಮತ್ತು ನಂದಿಜೀಯರಿಗೆ ಕೆಲವು ಭೂಮಿಗಳ ಕೊಡುಗೆ.	ಆ. ಸ. ಮೈ. ಆ. ರಿ. ೧೯೧೪, ಪು, ೫೭

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ಪರಿ ಮತ್ತು ಉಲ್ಲೇಖ
೧೬೨	ಬಿನ್ನಮಂಗಲ	ನೆಲಮಂಗಲ	,,	೧೩೩೫	,,	,,	ಮೈಯಿಲೆಯ ನಾಯಕ ಮತ್ತು ಇತರರಿಂದ ದತ್ತಿ.	ಅದೇ. ಪು. ೫೭
೧೬೩	ಏರಂಪಾಪುರ	ಮಾಗಡಿ	,,	—	,,	,,	ಸವಕಲು. ಗುರುಚಿತ್ತ ದೇವನಿಂದ ದತ್ತಿ.	ಅದೇ. ಪು, ೫೬
೧೬೪	ಎಕ್ಸಾಂಬಿ	ಚಿಕ್ಕೋಡಿ	ಬೆಳಗಾಂ	೧೧೬೫	ವಿಜಯಾದಿತ್ಯ	ಕರಾಡದ ಶಿಲಾಹಾರರು	ಸೇನಾಧಿಕಾರಿ ಕಾಲಣನ ವಂಶಜರ ವರ್ಣನೆ. ಅವನು ಎಕ್ಕಸಂಬುಗೆಯಲ್ಲಿ ನಿರ್ಮಿಸಿದ ನೇಮಿನಾಥ ಬಸವನಿಗೆ ಕಾರ್ತವೀರ್ಯನಿಂದ ದತ್ತಿ.	ಅ. ಸ ಮೈ. ಅ. ರಿ. ೧೯೧೬. ಪು ೪೮
೧೬೫	,,	,,	,,	,,	,,	,,	ಕಲಿಯಣ್ಣನು ನೇಮಿನಾಥನ ಬಸದಿಯನ್ನು ಮತ್ತು ವಿಗ್ರಹವನ್ನು ನಿರ್ಮಿಸಿದ.	ಅದೇ. ಪು. ೫೦
೧೬೬	ಬೊಮ್ಮನಹಳ್ಳಿ	ನೆಲಮಂಗಲ	ಬೆಂಗಳೂರು	೧೩೪೭	ಬುಕ್ಕ I	ಸಂಗಮ	ಪ್ರಜೆ (?) ಯೊಬ್ಬನು ಕೊಟ್ಟ ದತ್ತಿ.	ಅ. ಸ. ಮೈ. ಅ. ರಿ. ೧೯೧೮, ಪು. ೫೭
೧೬೭	ಬಾಳೇಹಳ್ಳಿ	ಶೃಂಗೇರಿ	ಚಿಕ್ಕಮಗಳೂರು	೧೩೬೯	,,	,,	ಮಾದರಸನಿಗೆ ಕೊಟ್ಟ ದತ್ತಿ.	ಅ. ಸ. ಮೈ. ಅ. ರಿ. ೧೯೧೬, ಪು. ೫೬
೧೦೮	ಅಜ್ಜನಹಳ್ಳಿ	ಮಾಗಡಿ	ಬೆಂಗಳೂರು	೧೩೭೩	,,	,,	ಮಲ್ಲಿ ಒಡೆಯನಿಂದ ಬೇಲೂರಿನ ಚೆನ್ನಕೇಶವನಾಥನಿಗೆ ದತ್ತಿ.	ಅ. ಸ. ಮೈ. ಅ. ರಿ. ೧೯೧೫. ಪು. ೫೯

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೬೯	ಶೃಂಗೇರಿ	ಶೃಂಗೇರಿ	ಚಿಕ್ಕಮಗ ಳೂರು	—	ಹರಿಹರ II	,,	ಕವಿತ ಹಿರಿಯ ಹರಿಯಪ್ಪ ಒಡೆಯ, ಬುಕ್ಕರಾಯ ಮತ್ತು ಚಿಕ್ಕ ರಾಯರಿಂದ ದತ್ತಿ.	ಆ.ಸ ವೈ. ಆ.ರಿ. ೧೯೧೬. ಪು. ೫೬
೧೭೦	ಬತಮನ	ನೆಲಮಂಗಲ	ಬೆಂಗಳೂರು	೧೩೮೩	ಬುಕ್ಕ II	,,	ಅಲ್ಲಿಪ್ಪನಾಯಕನ ವರ್ಣನೆ. ಆತನ ಮಕ್ಕಳ ಅಪ್ಪಣೆಯಲ್ಲಿ ಚಿಟ್ಟೆಯ ನಾಯಕನು ಮೂರು ವರ್ಷ ಜಾತ್ರೆಯನ್ನು ಏರ್ಪಡಿಸಿದ.	ಆ.ಸ ವೈ ಆ ರಿ, ೧೯೧೫. ಪು. ೫೯
೧೭೧	,,	,,	,,	—	,,	,,	ಅಪೂರ್ಣ ಶಾಸನ.	
೧೭೨	—	—	—	೧೪೩೨	ದೇವರಾಯ II	ಸಂಗಮ	ತಾಮ್ರಶಾಸನ. ಇಮ್ಮಡಿ ದೇವ ರಾಯನ ವರೆಗಿನ ವಂಶಾವಳಿ ಮತ್ತು ಅರನಿಂದ ಮುಂಜುಗಣಿ ಗ್ರಾಮದ ದಾನ.	ಆ.ಸ.ವೈ.ಆ.ರಿ. ೧೯೧೬. ಪು. ೬೦
೧೭೩	—	—	—	,,	,,	,,	ಬುಕ್ಕನಿಂದ ಇಮ್ಮಡಿ ದೇವರಾಯನ ವರೆಗಿನ ವಂಶಾವಳಿ ಮತ್ತು ದೇವ ರಾಯನಿಂದ ಕೆಳಕುಂದಣಿ, ಕೈಗೆ ಗ್ರಾಮ ಮತ್ತು ಇತರ ಐದು ಹಳ್ಳಿ ಗಳ ದತ್ತಿ.	ಅದೇ, ಪು. ೬೧

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೭೪	ಕುಲವನಹಳ್ಳಿ	ನೆಲಮಂಗಲ	ಬೆಂಗಳೂರು	೧೫೦೬	—	ತುಳುವ	ಗವುಡ ಪ್ರಜೆಗಳಿಂದ ದತ್ತಿ.	ಆ.ಸ.ಮೈ.ಆ.ರಿ. ೧೯೧೫, ಪು. ೬೦
೧೭೫	ದೇವಗಾನ ಹಳ್ಳಿ	,,	,,	೧೫೦೭	—	,,	ಕೆಂಚಸೋಮಣನಾಯಕನಿಂದ ವೀರ ಶೈವ ಗುರು ಸಿದ್ಧರಾಮೇಶ್ವರನಿಗೆ ದೇವಗೊಂಡನ ಹಳ್ಳಿಯ ದಾನ.	ಅದೇ. ಪು. ೬೦
೧೭೬	ನೆಲಮಂಗಲ	,,	,,	೧೫೧೧	ಕೃಷ್ಣದೇವರಾಯ	,,	ಅರಸನಿಂದ ಶಿವಗಂಗೆಯ ಕಕುದ್ಗಿರಿ ಗಂಗಾಧರ ದೇವರಿಗೆ ಕೊರಟಿಕೆರೆ ಮತ್ತು ಇತರ ೨೨ ಹಳ್ಳಿಗಳ ದಾನ.	ಅದೇ. ಪು. ೬೦
೧೭೭	ದಾಸನಪುರ	,,	,,	೧೫೨೨	,,	,,	ಸವಕಲು. ದಾಸನಪುರದ ಒಡೆತನ ಕೊ...ಮ-ನಾಯಕನಿಗೆ ಇದ್ದಿತು ಮತ್ತು ನಾರಾಯಣರಸನಿಂದ ದತ್ತಿ.	ಅದೇ. ಪು. ೬೦
೧೭೮	ಚಿಕ್ಕಮಾರನ ಹಳ್ಳಿ	,,	,,	೧೫೨೩	,,	,,	ಮಲ್ಲರಸಯ್ಯನಿಂದ ಚಿಕಮಾರನ ಹಳ್ಳಿಯ ದಾನ.	ಆ.ಸ ಮೈ ಆ ರಿ. ೧೯೧೫, ಪು. ೬೦
೧೭೯	ಶಿವಗಂಗೆ	,,	,,	೧೫೨೮	,,	,,	ಜನ್ನಣಸೆಟ್ಟಿಯು ದೇವರನ್ನು ಪಲ್ಲಕ್ಕಿಯಲ್ಲಿರಿಸಿ ದೇವಾಲಯದ ಸುತ್ತ ಪ್ರದಕ್ಷಿಣೆ ಪಥವನ್ನು ಮಾಡಿಸಿದ.	ಅದೇ. ಪು. ೬೦

ಅ. ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೮೦	ಮಾಗಡಿ	ಮಾಗಡಿ	,,	,,	,,	,,	ದಳವಾಯಿಯೊಬ್ಬನಿಂದ ಪಾಯಪನ ಹಳ್ಳಿಯು ದಾನ.	ಅದೇ, ಪು ೬೦
೧೮೧	ಹಳೇನಿಜುಗಲ್	ನೆಲಮಂಗಲ	ಬೆಂಗಳೂರು	೧೫೩೩	—	ತುಳುವ	ಕೆಂಚಸೋಮಣನಾಯಕನಿಂದ ದತ್ತಿ.	ಆ.ಸ.ಮೈ.ಆ.ರಿ. ೧೯೧೫, ಪು. ೬೧
೧೮೨	ಹೆಸರುಘಟ್ಟ	,,	,,	೧೫೩೫	ಅಚ್ಯುತರಾಯ	,,	ವಿರುಪಣ್ಣನಿಂದ ತಜಿಟನಹಳ್ಳಿ ಮತ್ತು ಗೋವಿಂದನ ಹಳ್ಳಿಗ್ರಾಮ (ಅಚ್ಯುತಮಲಾಪುರ)ಗಳ ದಾನ. ಅಲ್ಲದೆ, ನಮಶಿವಾಯನು ಚಂದ್ರ ಮೌಳೀಶ್ವರ ದೇವರ ಗುಡಿಯುನ್ನು ಕಟ್ಟಿಸಿದ.	ಆ.ಸ.ಮೈ.ಆ,ರಿ. ೧೯೧೬, ಪು. ೬೨
೧೮೩	ಹೊಸ ಹೊಳಲು	ಕೃಷ್ಣರಾಜ ಪೇಟೆ	ಮಂಡ್ಯ	೧೫೪೪	ಸದಾಶಿವರಾಯ	,,	ಅರಸನೊಬ್ಬನಿಂದ ಕ್ಷೌರಿಕರಿಗೆ ದತ್ತಿ.	ಆ ಸ.ಮೈ. ಆ.ರಿ. ೧೯೧೫. ಪು. ೬೧
೧೮೪	ದೊಡ್ಡ ಬಳ್ಳಾಪುರ	ದೊಡ್ಡ ಬಳ್ಳಾಪುರ	ಬೆಂಗಳೂರು	೧೫೪೫	,,	,,	ಕಾಮಗೌಡ ವೀರಣನಾಯಕನಿಂದ ದಾಸಗೊಂಡನ ಹಳ್ಳಿಯು ದತ್ತಿ.	ಆ.ಸ.ಮೈ.ಆ.ರಿ. ೧೯೧೪, ಪು. ೪೮
೧೮೫	ಸುಗ್ಗನಹಳ್ಳಿ	ಮಾಗಡಿ	,,	೧೫೫೭	,,	,,	ಇಮ್ಮಡಿ ನಾಯಕನಿಂದ ದತ್ತಿ.	ಆ.ಸ ಮೈ.ಆ ರಿ. ೧೯೧೫, ಪು. ೬೧

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸು ಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೮೬	ಕನ್ನಮಂಗಲ	,,	,,	೧೫೬೦	,,	,,	ಸವಕಲು. ದತ್ತಿಯೊಂದರ ಉಲ್ಲೇಖ.	ಅದೇ. ಪು. ೬೧
೧೮೭	ಕಿಕ್ಕೇರಿ	ಕೃಷ್ಣರಾಜ ಪೇಟೆ	ಮಂಡ್ಯ	—	,,	,,	ಮಹಾಮಂಡಳೇಶ್ವರ ಚನ್ನದೇವ ಚೋಳನಿಂದ ದತ್ತಿ	ಅದೇ. ಪು ೬೧
೧೮೮	ಮಾಗಡಿ	ಮಾಗಡಿ	ಬೆಂಗಳೂರು	೧೬೩೧	ಶ್ರೀರಂಗರಾಯ II	ಅರವೀಡು	ಇಮ್ಮಡಿ ಕೆಂಪೇಗೌಡನು ಕಲ್ಯ. ಪಾಡ ಬಳು, ತಿರುಮಲೆ, ಹರತಿ ಮತ್ತು ಮಾಗಡಿಗಳಲ್ಲಿ ಪಂಚಾಂಗ ನೋಡುವ ಹಕ್ಕನ್ನು ಅಪುಬಳ–ನರಸಿಂಹನಿಗೆ ನೀಡಿದ.	ಆ ಸ ಮೈ ಆ ರಿ. ೧೯೧೬. ಪು. ೬೨
೧೮೯	ಶೃಂಗೇರಿ	ಶೃಂಗೇರಿ	ಚಿಕ್ಕಮಗಳೂರ	೧೬೬೧	,,	,,	ಅರಸನಿಂದ ಗೋಪಾಲದೇವರಿಗೆ ಸುರಪುರದ ದಾನ.	ಅದೇ, ಪು. ೬೩
೧೯೦	ಅಂಕನಹಳ್ಳಿ	ಕೃಷ್ಣರಾಜ ಪೇಟೆ	ಮಂಡ್ಯ	೧೪೯೦	ನಂಜರಾಜ ಒಡೆಯಂ	ಉಮ್ಮತ್ತೂರ್	ಅಪ್ಪಣನಾಯಕನಿಂದ ದತ್ತಿ.	ಆ.ಸ ಮೈ.ಆ.ರಿ. ೧೯೧೫. ಪು. ೬೧
೧೯೧	ಶಿವಗಂಗೆ	ನೆಲಮಂಗಲ	ಬೆಂಗಳೂರ	೧೫೬೨	ಷಾಹಜಿ	ಮರಾಠ	ಪಾರುಪತ್ಯಗಾರ ತುಕಾರಾಮನಿಂದ ಕಣ್ಣತೀರ್ಥದ ನಿರ್ಮಾಣ.	ಅದೇ. ಪು. ೬೧
೧೯೨	ಶೃಂಗೇರಿ	ಶೃಂಗೇರಿ	ಚಿಕ್ಕಮಗಳೂರು	೧೮೦೦	ಪಂಡಿತ ಬಾಜಿರಾವ್ ಬಲ್ಲಾಳ್	,,	ಸಚ್ಚಿದಾನಂದ ಭಾರತಿಗೆ ಪತ್ರ. ಯಾವುದೇ ಧಾರ್ಮಿಕ ಸಭೆಕೂಡಿ ದಾಗ ಶೃಂಗೇರಿ ಮಠಕ್ಕೆ ಅಗ್ರಪೂಜೆ ಸಲ್ಲಬೇಕಂ.	ಆ.ಸ.ಮೈ.ಆ.ರಿ. ೧೯೧೬. ಪು. ೭೧

(ಮುಂದುವರೆಯುವುದು)

ಒರೆಗಲ್ಲು

'ಅಜ್ಜರ' [='ಅಜ್ಜೆಱೆ'?] ಎಂದರೇನು ?

'ಅಜ್ಜೆಱೆ' ಎಂಬ ಪದ ಕ್ರಿ. ಶ. ೧೪೧೧ ರ ಹಂಪೆಯ ಲಕ್ಷ್ಮೀಧರಾಮಾತ್ಯನ ಶಾಸನದಲ್ಲಿ ದೊರಕುತ್ತದೆ. ಮಧುರ ಕವಿಯಿಂದ ರಚಿತವಾದ ಆ ಶಾಸನದ ಒಂದು ಪದ್ಯ[1] ಸುಪ್ರಸಿದ್ಧವಾಗಿದೆ :

> 'ಕೆಱೆಯುಂ ಕಟ್ಟಿಸು ಬಾವಿಯುಂ ಸವಿಸು ದೇವಾಗಾರಮಂ ಮಾಡಿಸ
> ಜ್ಜೆಱೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದ
> ರ್ಗೆಱೆನೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾ
> ಯೆಱೆದಳ್ ಪಾಲೆಱೆವಂದು ತೊಟ್ಟು ಲಕ್ಷ್ಮೀಧರಾಮಾತ್ಯನಾ ॥

ಇಲ್ಲಿ 'ಅಜ್ಜೆಱೆ' ಎಂಬ ಮಾತು, ಗಮನವನ್ನು ಸೆಳೆಯುತ್ತದೆಯಾದರೂ ಅದರ ಅರ್ಥವನ್ನು ಬಿಡಿಸಲಾರದೆ ವಿದ್ವಾಂಸರು ಊಹೆಗಳನ್ನು ಮಾಡಿರುವುದನ್ನು ಸಂಭಾಷಣೆಗಳಲ್ಲಿ ಕೇಳಿದ್ದೇನೆ ಕನ್ನಡ ಸಾಹಿತ್ಯ ಪರಿಷತ್ತಿನ **ಕನ್ನಡ ನಿಘಂಟಿನಲ್ಲಿ**[2] ಅದಕ್ಕೆ "ಬಂಧನ (?)" ಎಂಬ ಅರ್ಥವನ್ನು ಸಂದೇಹದೊಡನೆ ಸೂಚಿಸಿದೆ. ಮತ್ತು ಆ ಪದವನ್ನು [ಅಱ್ ? + ಸೆಱೆ] ಎಂದು ಬಿಡಿಸಿ ತೋರಿಸಿ, ಅಲ್ಲಿಯೂ ಸಂದೇಹವನ್ನು ವ್ಯಕ್ತಪಡಿಸಲಾಗಿದೆ.

ಹೀಗೆ ಬಿಡಿಸಿ ತೋರಿಸಿರುವುದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುವ ಅಗತ್ಯವಿಲ್ಲ. "ಬಂಧನ" ಎಂಬ ಅರ್ಥವನ್ನು ಆ ಪದದ ಸಂದರ್ಭದ ಮೇಲೆ ಊಹಿಸಲಾಗಿದೆ. ಏಕೆಂದರೆ ಅಲ್ಲಿ ಕಷ್ಟ, ತೊಂದರೆ, ಅಡಚಣೆ ಎಂಬರ್ಥಗಳು ಧ್ವನಿತವಾಗುವುದನ್ನು ಯಾರೂ ನಿರಾಕರಿಸಲಾರರು.

ಕನ್ನಡ ನಿಘಂಟುಕಾರರಿಗೆ ಸಿಕ್ಕಿರುವ ಪ್ರಯೋಗ ಅದೊಂದೇ. ಅವರ ಗಮನಕ್ಕೆ ಅದನ್ನು ಹೋಲುವ ಇನ್ನೊಂದು ಪ್ರಾಚೀನ ಪ್ರಯೋಗ ಬಾರದಿರುವುದು ದುರದೃಷ್ಟ. ಆ ಇನ್ನೊಂದು ಪದ ಲಕ್ಷ್ಮೇಶ್ವರದ ಕ್ರಿ. ಶ. ೧೧೬೬ರ ಬಿಜ್ಜಳನ ಶಾಸನದಲ್ಲಿ ಕಾಣಿಸಿಕೊಂಡಿದೆ.[3]

---

1. South Indian Inscriptions, Vol. IV. No. 267.
2. ಮೊದಲನೆಯ ಸಂಪುಟ, ಪು. 109.
3. ಆರ್. ನರಸಿಂಹಾಚಾರ್: 'ಶಾಸನ ಪದ್ಯಮಂಜರಿ, ಅನುಬಂಧ ೫, (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಜುಲೈ ೧೯೩೭ ಪು. ೧೦೦).

ಪರನೃಪರಂಜಿ ತೆತ್ತಧನಮುಂ ವನಿತಾಜನಮುಂ ವಿಭೂಷಣಾಂ
ಬರಗಜವಾಜಿ ಸಂಕುಳಮುಮಲ್ಲದೆ ಮಿಕ್ಕ ನೃಪಾಳರಂತಿರ
ಜ್ಜರ ಪಡೆದಿತ್ತ ರಾಜ್ಯವಿಭವಕ್ಕನುರಾಗದ ಮುಯ್ಯನಾಂಪನೇ
ಸ್ಫುರಿತತರ ಪ್ರತಾಪನಿಧಿ ಭಾಪ್ಪುರೆ ಬಿಜ್ಜಳ ಭೂಮಿಪಾಳಕಂ ॥

ಇಲ್ಲಿ ಬರುವ "ಅಜ್ಜರ" ಎಂದರೇನು ?

ತೆಲುಗಿನಲ್ಲಿ "ಅಚ್ಚಾರಮು" ಎಂಬ ಪದವಿದೆ. ಇದಕ್ಕೆ ಸಂವಾದಿಯಾಗಿ ತಮಿಳು, ಮಲೆಯಾಳಗಳಲ್ಲಿ "ಅಚ್ಚಾರಂ" ಎಂಬ ಪದವಿದ್ದು, ಎಲ್ಲ ಕಡೆಗಳಲ್ಲೂ ಕೊಡಬೇಕಾದ ಹಣಕ್ಕೆ ಮುಂಗಡವಾಗಿ ಕೊಡುವ ಹಣ ಎಂಬರ್ಥವಿದೆ.[4] ಇದು ಎಲ್ಲಿಂದ ಯಾವ ಭಾಷೆಗೆ ಸ್ವೀಕೃತವಾಗಿದೆ ಎಂಬುದು ಸದ್ಯಕ್ಕೆ ಮುಖ್ಯವಲ್ಲ. ರೂಪವನ್ನು ನೋಡಿದರೆ ಇದು ತಮಿಳಿನಿಂದ ತೆಲುಗಿಗೆ ಹೋಗಿರುವಂತಿದೆ. "ಅಚ್ಚಾರಂ" ಪದ, ಮೂಲತಃ "ಅರಿ" (=tax, duty, tribute) ಪದದಿಂದ ಬಂದಂತಹುದು[5] ಎಂಬುದು ಗಮನಾರ್ಹವಾಗಿದೆ. ಈ "ಅರಿ"ಯು ತೆರಿಗೆ, ಸಾಲ, ಅನ್ಯಾಯವಾಗಿ ಕೊಡಬೇಕಾದ ಹಣ, ಒಪ್ಪಕಾಣಿಕೆ ಇತ್ಯಾದಿ ಅರ್ಥಗಳಿರುವ ಬೇರೆಬೇರೆ ಪದಗಳಿಗೆ ಮೂಲವಾಗಿದೆ. ನೋಡಿ **ತಮಿಳು :** ಅರಿ = ಕಂದಾಯ, ಸುಂಕ; ಅಪ್ಪು = ಸಾಲ; **ಕನ್ನಡ :** ಅಚ್ಚು.[6] ಅಜ್ಜಿಕೆ = ಅನ್ಯಾಯವಾಗಿ ಹಣ ತೆರುವಿಕೆ; **ತೆಲುಗು :** ಅಚ್ಚು = ಸಾಲದಲ್ಲಿರು; ಅಚ್ಚುಕೊನು = ಅನ್ಯಾಯವಾಗಿ ಹಣತೆರು; ಅಪ್ಪು = ಸಾಲ. ಅಚ್ಚು. ಅಚ್ಚಾರಮ್ ಪದಗಳ ಅರ್ಥವು ಮುಂಗಡ ಹಣ, ತೆರಿಗೆ, ಸಾಲ, ಅನ್ಯಾಯ, ಕಷ್ಟ ಇತ್ಯಾದಿಗಳನ್ನು ತಮ್ಮ ಪರಿವೇಷಗಳಲ್ಲಿ ಗರ್ಭೀಕರಿಸಿಕೊಂಡಿರುವುದನ್ನು ಗಮನಿಸಬೇಕು.

ತಮಿಳಿನಲ್ಲಿ–ಚ್‌ಚ್‌-ಇದ್ದರೆ, ಅದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ–ಜ್‌ಜ್‌–ಇರುವುದು ಸಾಧ್ಯ. ಹೋಲಿಸಿ–ತಮಿಳು : ಅಚ್ಚನ್. ಕನ್ನಡ : ಅಜ್ಜ, ತಮಿಳು : ಕೆಚ್ಚಿಲ.

---

4. Dravidian Etymological Dictionary, p. 16
5. ಅದೇ.
6. ಕನ್ನಡ ಶಾಸನಗಳಲ್ಲಿ 'ಅಜ್ಜುಪನ್ನಾಯ'ದ ಅಧಿಕಾರಿಗಳ ಹೆಸರುಗಳು ಕಾಣಸಿಕೊಳ್ಳುತ್ತವೆ. (ಉದಾ : EKI. I.ii. 150, 1102 A. D. ಇಲ್ಲಿ ಬರುವ ಭೀಮಯ್ಯ ಎನ್ನುವ ಮಂತ್ರಿ). "ಪನ್ನಾಯ" ಎಂಬುದು "ಪರ್ಣಾಯ"ದ ತದ್ಭವವೆಂದು ಊಹಿಸಿ ಅದಕ್ಕೆ "ವೀಳೆಯದೆಲೆ ಮೇಲೆ ಹಣದ ರೂಪದಲ್ಲಿ ವಸೂಲು ಮಾಡುತ್ತಿದ್ದ ಸುಂಕ" ಎಂದು ಅರ್ಥ ಊಹಿಸಿ, ಸಂದೇಹ ವ್ಯಕ್ತಪಡಿಸಲಾಗಿದೆ. ಕನ್ನಡ ನಿಘಂಟಿನಲ್ಲಿ (ಪು. ೧೦೦) ಅದರ ಹಿಂದೆ ಬರುವ "ಅಜ್ಜು" ಎಂಬುದು ಬಹುಶಃ ತೆರಿಗೆಯನ್ನು ಸೂಚಿಸುತ್ತದೆ. "ಪಣ್ಯಾಯ" ಎಂಬುದು (ಪಣ್ಯ + ಆಯ) ವ್ಯಾಪಾರ ಸಾಮಗ್ರಿಗಳಿಂದ ಬರುವ ಆದಾಯವನ್ನು ಸೂಚಿಸುವಂತೆ ಕಾಣುತ್ತದೆ. ವೀಳೆಯದೆಲೆಗಳ ಮೇಲೆ ಸುಂಕದ ರೂಪದಲ್ಲಿ ಬರುವ ಹಣವನ್ನು ಸಂಗ್ರಹಿಸಲಿಕ್ಕಾಗಿಯೇ ಮಹಾಪ್ರಧಾನರಂತಹ ದೊಡ್ಡ ಅಧಿಕಾರಿಗಳು ನಿಯುಕ್ತರಾಗಿರುತ್ತಿದ್ದರೆಂದು ಊಹಿಸುವುದು ಕಷ್ಟ. ಆದ್ದರಿಂದ ಪನ್ನಾಯ = ಪರ್ಣಾಯ ಎಂಬ ಊಹೆ ತಿರಸ್ಕೃತವಾಗುತ್ತದೆ. ವ್ಯಾಪಾರ ಸಾಮಗ್ರಿಗಳ ಸುಂಕವು ರಾಜ್ಯದ ಆದಾಯದ ಗಮನೀಯ ಭಾಗವಾಗಿತ್ತು.

ಕನ್ನಡ : ಗೆಜ್ಜೆ, ತಮಿಳು : ಕೊಚ್ಚು, ಕನ್ನಡ : ಗೊಜ್ಜು. ತಮಿಳು : ಮಂಚ್ಚೈ, ಕನ್ನಡ: ಮಜ್ಜಿಗೆ. ಆದ್ದರಿಂದ ಭಾಷಿಕವಾಗಿ ತಮಿಳಿನ 'ಅಚ್ಚರಮ್' ಎಂಬುದು ಕನ್ನಡದ 'ಅಜ್ಜರ'ಕ್ಕೆ ಸಮಾದಿಯಾಗುವ ಸಾಧ್ಯತೆಯಿದೆ. 'ಅಜ್ಜರ'ವು ಸಾಲ. ತೆರಿಗೆ, ಕಪ್ಪಕಾಣಿಕೆಗಳಿಗೆ ಸಂಬಂಧಿಸಿದ ಪದವಾಗುತ್ತದೆ.

ಇದನ್ನು ಒಪ್ಪುವುದಾದರೆ. ಆಗ ಲಕ್ಷ್ಮೇಶ್ವರ ಶಾಸನದ 'ಅಜ್ಜರ' ಪದದ ಅರ್ಥ ಸ್ಪಷ್ಟವಾಗುತ್ತದೆ. ಅಧಿರಾಜನಾದ ಬಿಜ್ಜಳ. ತನ್ನ ಶೌರ್ಯದಿಂದ ಶತ್ರುರಾಜರನ್ನು ('ಪರನೃಪರ್') ಹೆದರಿಸಿ ಅವರಿಂದ ಹಣ, ಸ್ತ್ರೀಯರು, ಒಡವೆ, ವಸ್ತ್ರ, ಆನೆ. ಕುದುರೆಗಳನ್ನು ಕಾಣಿಕೆಯಾಗಿ ಪಡೆಯುತ್ತಿದ್ದ. ಅವನು ಬಯಸುತ್ತಿದ್ದುದು ಅಂತಹ ವೈಭವವನ್ನು ಮಾತ್ರ; ಆ ವೈಭವ ತನ್ನ ಶಕ್ತಿ ಸಾಮರ್ಥ್ಯದ ಫಲವಾಗಿ ಲಭ್ಯವಾದದ್ದು. ಆದರೆ ಬೇರೆ ಅಧಿರಾಜರು (ಮಿಕ್ಕ ನೃಪಾಳರ್) ತಮ್ಮ ಅಧೀನದಲ್ಲಿರುವ ಸಾಮಂತರು ಕಪ್ಪಕಾಣಿಕೆಗಳನ್ನು ಕೊಡಬೇಕೆಂದು ಒತ್ತಾಯಪಡಿಸಿದಾಗ ಆ ಸಾಮಂತ ದೊರೆಗಳು ತಮ್ಮ ಪ್ರಜೆಗಳ ಮೇಲೆ ತೆರಿಗೆ. ಕಂದಾಯಗಳನ್ನು ('ಅಜ್ಜರ') ಹಾಕಿ, ಅದನ್ನು ತಂದು ತಮ್ಮ ಅಧಿರಾಜರಿಗೆ ಒಪ್ಪಿಸುತ್ತಿದ್ದರು. ಈ ಅಧಿರಾಜರು ಬಯಸುತ್ತಿದ್ದುದು. ಹೀಗೆ ತಮಗೆ ಅನಾಯಾಸವಾಗಿ ದೊರೆತ ಐಶ್ವರ್ಯದ ಅನುಭವವನ್ನು ಇಲ್ಲಿ ಅಧೀನರಾಜರನ್ನು ಅಧಿರಾಜ ತನ್ನ ಶೌರ್ಯದಿಂದ ಗೆದ್ದಿರಬೇಕಾಗಿಲ್ಲ. ತಲೆತಲಾಂತರದಿಂದ ಅವರು ತಮ್ಮ ಅಧಿರಾಜನಿಗೆ ಕಪ್ಪಕಾಣಿಕೆ ಕೊಡುತ್ತಾ ಬಂದಿದ್ದಾರೆ. ಎಂದರೆ, ಇಲ್ಲಿ ಅಧಿರಾಜರು ತಮ್ಮ ಶೌರ್ಯದಿಂದ ಪಡೆದ ವೈಭವವಿಲ್ಲ. ಬಿಜ್ಜಳ ತನ್ನ ಸಾಧನೆಯಿಂದ. ಕಾರ್ಯೋದ್ಯೋಗದಿಂದ ಸಂಪಾದಿಸಿದ ವೈಭವವನ್ನು ಮಾತ್ರ ಬಯಸತಕ್ಕವನು.

ಅಧೀನರಾಜರು 'ಅಜ್ಜರ ಪಡೆದು' ಕೊಟ್ಟುದು: ಅಧಿರಾಜರು ಅದನ್ನು ಸ್ವೀಕರಿಸಿ ತಮ್ಮ ರಾಜವೈಭವವನ್ನು ಮೆರೆದರು. ಬಿಜ್ಜಳ ಅಂತಹ ರಾಜ್ಯವೈಭವಕ್ಕೆ ಮನಸೋಲುವವನಲ್ಲ. ಇಲ್ಲಿ ಒಂದು ಚಾರಿತ್ರಿಕಾಂಶವೂ ಸೂಚಿತವಾಗಬಹುದು. ಬಿಜ್ಜಳ ಕಲ್ಯಾಣ ಚಾಲುಕ್ಯರ ದೊರೆ ಮೂರನೆಯ ತೈಲಪನನ್ನು ಕೊಂದು ಸಿಂಹಾಸನವನ್ನು ಆಕ್ರಮಿಸಿದನು. ಕಲ್ಯಾಣಚಾಲುಕ್ಯರಿಗೆ ತಲೆತಲಾಂತರದಿಂದ ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದ ಸಾಮಂತರು, ಇವನಿಗೆ ಕಪ್ಪಕಾಣಿಕೆ ಕೊಡಲು ಹಿಂಜರಿದಿರಬಹುದು. ಅಂತಹವರನ್ನು ಮತ್ತು ಇತರ ದೊರೆಗಳನ್ನು ಅವನು ಹೆದರಿಸಿ. ಸೋಲಿಸಿ ಅವರು ತನಗೆ ಅಧೀನರಾಗುವಂತೆ ಮಾಡಿರಬೇಕು. ಬಿಜ್ಜಳ ಸ್ವತಃ ಶೂರನಾದುದರಿಂದ, ತಾನೇ ಕೈಯಾರೆ ಸೋಲಿಸಿದ ದೊರೆಗಳಿಂದ ಕಪ್ಪಕಾಣಿಕೆಗಳನ್ನು ಸ್ವೀಕರಿಸುವವನು ಎಂಬ ಮಾತಿಗೆ, ಇತಿಹಾಸದ ಹಿನ್ನೆಲೆಯಲ್ಲಿ ಹೆಚ್ಚಿನ ಅರ್ಥ ಕೂಡಿಕೊಳ್ಳುವುದು ಗಮನಿಸಬೇಕಾದ ಸಂಗತಿ. 'ಇತರ ದೊರೆಗಳಂತೆ ಅನಾಯಾಸವಾಗಿ ಪಡೆದ ರಾಜ್ಯವೈಭವಕ್ಕೆ ಬಿಜ್ಜಳ ಮನಸೋಲುವವನಲ್ಲ' ಎಂಬ ಮಾತಿನಲ್ಲಿ. 'ಇತರ ದೊರೆಗಳು' ಎಂಬುದು ಅವನಿಗಿಂತ ಹಿಂದಿನ ಕಲ್ಯಾಣ ಚಾಲುಕ್ಯ ದೊರೆಗಳನ್ನು ಸೂಚಿಸಿದರೆ ಆಶ್ಚರ್ಯವಿಲ್ಲ. ಬಿಜ್ಜಳ, ಪಟ್ಟಕ್ಕೆ ಬರುವ

ಮುನ್ನ ಕೊಂದುಹಾಕಿದ ತೈಲಪನು ದುರ್ಬಲ ರಾಜನೆಂಬುದನ್ನು ಇಲ್ಲಿ ಜ್ಞಾಪಿಸಿ ಕೊಳ್ಳುವುದು ಅಗತ್ಯವಾಗಿದೆ.

ಲಕ್ಷ್ಮೇಶ್ವರ ಶಾಸನದ 'ಅಜ್ಜರ'ವೂ ಪ್ರಸ್ತುತ ಶಾಸನದ 'ಅಜ್ಜೆಱೆ'ಯೂ ಒಂದೇ ಎಂದು ಭಾವಿಸಲು ಪ್ರಬಲ ಆಧಾರಗಳೇನೂ ಇಲ್ಲ. ಎರಡಕ್ಕೂ ರೂಪಸಾದೃಶ್ಯವುಂಟು; ಸಂದರ್ಭವನ್ನು ನೋಡಿದರೆ ಅರ್ಥಸಾದೃಶ್ಯವೂ ಇರುವಂತಿದೆ. 'ಅಜ್ಜರ'ಕ್ಕೆ ಸಂವಾದಿ ಪದ ತೆಲುಗು, ತಮಿಳು, ಮಲೆಯಾಳಗಳಲ್ಲಿ ದೊರಕುವಂತೆ, 'ಅಜ್ಜೆಱೆ'ಗೆ ಸಂವಾದಿಯಾದ ಱಕಾರ ಸಮೇತವಾದ ಪದ ದೊರಕುವುದಿಲ್ಲ. ವಸ್ತುಸ್ಥಿತಿ ಹೀಗಿರುವುದರಿಂದ, ಅವೆರಡೂ ಒಂದೇ ಎಂದು ಭಾವಿಸುವುದರಲ್ಲಿ ಸಧ್ಯ ಯಾವ ದೋಷವೂ ಕಾಣಿಸದು. 'ಅಜ್ಜೆಱೆಯೊಳ್ ಸಿಲ್ಕಿದನಾಥರಂ ಬಿಡಿಸಿ' ಎಂಬುದಕ್ಕೆ ತೆರಿಗೆ, ಸಾಲಗಳ ಹೊರೆಯಲ್ಲಿ ಸಿಕ್ಕಿಕೊಂಡ ಅನಾಥರನ್ನು ಬಿಡಿಸಿ ಎಂದರ್ಥಮಾಡಬಹುದು. ಮಂತ್ರಿಯಾದವನು ತೆರಿಗೆಗಳ ಹೊರೆ ಕಡಿಮೆಮಾಡಲು ಯತ್ನಿಸಬೇಕೆಂಬ ಬುದ್ಧಿವಾದ ಸಹಜವಾಗಿಯೇ ಇದೆ.

'ಅಜ್ಜೆಱೆ'ಯಲ್ಲಿ ಕೊನೆಯ ಎರಡು ಅಕ್ಷರಗಳಲ್ಲಿರುವ ಎಕಾರ ಮತ್ತು ಶಕಟರೇಫಗಳಿಗೆ ಕಾರಣ, ಬಹುಶಃ ಉಳಿದ ಪಾದಗಳಲ್ಲಿ ಬಂದಿರುವ 'ಕೆಱೆ' ಮತ್ತು 'ಎಱೆ' ಎಂಬ ಪ್ರಾಸಸ್ಥಾನಾಕ್ಷರಗಳಿರಬಹುದು.

ಎಂ. ಚಿದಾನಂದಮೂರ್ತಿ

ಚಿತ್ರದುರ್ಗದಲ್ಲಿಯ ಗುಂಡಬ್ರಹ್ಮಯ್ಯಗಳ ವಿಗ್ರಹ :

ಡಾ. ಬಿ. ಎಸ್. ಗದ್ದಗಿಮಠ, ಡಾ. ಎ ಶಿವಾನಂದ ಮತ್ತು ನಾನು ನಡೆಸಿದ ಸಂಶೋಧನೆಯ ಫಲವಾಗಿ ಬನವಾಸಿ, ಗುಂಡೇನಹಳ್ಳಿ, ಹಾವೇರಿ ಗ್ರಾಮಗಳಲ್ಲಿಯ ಗುಂಡಬ್ರಹ್ಮಯ್ಯಗಳ ಜೋಡುವಿಗ್ರಹ ಬೆಳಕಿಗೆಬಂದುವು. ಡಾ. ಎ ಶಿವಾನಂದ ಅವರು ಗುಂಡೇನಹಳ್ಳಿ ವಿಗ್ರಹವನ್ನು ಬೆಳಕಿಗೆತಂದರು. ಅದನ್ನು ಹೋಲುವ ಇನ್ನೊಂದು ವಿಗ್ರಹ ಚಿತ್ರದುರ್ಗದ ಸಂಪಗೆ ಸಿದ್ಧೇಶ್ವರ ದೇವಾಲಯದಲ್ಲಿರುವುದಾಗಿ 'ಗುಂಡಬ್ರಹ್ಮಯ್ಯಗಳ ಚರಿತ್ರೆ'ಯ ಮುನ್ನುಡಿಯಲ್ಲಿ ಸೂಚಿಸಿದ್ದಾರೆ. ಈ ಎರಡನ್ನು ಹೋಲುವ ಇನ್ನೊಂದು ವಿಗ್ರಹ, ಕನ್ನಡ ಸಂಶೋಧನ ಸಂಸ್ಥೆಯ (ಮೂಲತಃ ಹಾವೇರಿಗೆ ಸಂಬಂಧಿಸಿದ್ದು) ಲ್ಲಿರುವ ಸಂಗತಿಯನ್ನು ಲೇಖನವೊಂದರ ಮೂಲಕ ನಾನು ಪ್ರಕಟಪಡಿಸಿದ್ದೇನೆ. ಹೀಗೆ ಗುಂಡೇನಹಳ್ಳಿ, ಚಿತ್ರದುರ್ಗ ಮತ್ತು ಹಾವೇರಿ ವಿಗ್ರಹಗಳು ರೂಪದೃಷ್ಟಿಯಿಂದ ಒಂದು ವರ್ಗಕ್ಕೆ ಸಂಬಂಧಿಸಿದವೆಂದು ಆ ಲೇಖನದಲ್ಲಿ ನಿರ್ಣಯಕ್ಕೆ ಬರಲಾಗಿದ್ದಿತು. ಆದರೆ ಇತ್ತೀಚೆ ನನ್ನ ಕೈಸೇರಿದ[1] ಚಿತ್ರದುರ್ಗ ವಿಗ್ರಹದ

1. ಈ ಚಿತ್ರಗಳನ್ನು ಪೂರೈಸಿದ ಶ್ರೀ. ಜಿ. ಎಸ್. ಸಿದ್ದಲಿಂಗಯ್ಯ, ಸರಕಾರಿ ಕಾಲೇಜು, ಚಿತ್ರದುರ್ಗ ಅವರಿಗೆ ಕೃತಜ್ಞನಾಗಿದ್ದೇನೆ.



ಗುಂಡಬ್ರಹ್ಮಯ್ಯಗಳ ವಿಗ್ರಹ, ಚಿತ್ರದುರ್ಗ.

ಕೃಪೆ: ಪ್ರಿ. ಜಿ. ಎಸ್. ಸಿದ್ಧಲಿಂಗಯ್ಯ.

ಚಿತ್ರ "ಒಂದು ವರ್ಗಕ್ಕೆ" ಸಂಬಂಧಿಸಿದೆಯೆಂಬ ನನ್ನ, ಅಂದರೆ ಡಾ. ವಿ. ಶಿವಾನಂದರ ಅಭಿಪ್ರಾಯವನ್ನು ಕೈಬಿಡಲು ಹಚ್ಚುತ್ತದೆ.

ಗುಂಡೇನಹಳ್ಳಿ, ಹಾವೇರಿ ವಿಗ್ರಹಗಳು ಶೂಲದ ಮೇಲೆ ಕುಳಿತಿದ್ದರೆ, ಚಿತ್ರದುರ್ಗದ ಈ ವಿಗ್ರಹ ಶೂಲವನ್ನು ಕೈಯಲ್ಲಿ ಹಿಡಿದುಕೊಂಡು ನಿಂತಿದೆ. ಬನವಾಸಿ ವಿಗ್ರಹಗಳು ಹೀಗೆಯೇ ನಿಂತಿದ್ದರೂ ಭಂಗಿ ಬೇರೆಯಾಗಿದೆ. ಕಾರಣ ಶಿಲ್ಪವಿನ್ಯಾಸ ಗುಂಡೇನಹಳ್ಳಿ ಹಾವೇರಿಯವು ಒಂದು ವರ್ಗ, ಬನವಾಸಿ ಇನ್ನೊಂದು ವರ್ಗ, ಚಿತ್ರದುರ್ಗದ್ದು ಮತ್ತೊಂದು ವರ್ಗವೆಂದು ಹೇಳಬೇಕಾಗುತ್ತದೆ. ಎಡಗೈಯಲ್ಲಿ ಇಷ್ಟಲಿಂಗ ವಿರುವುದು, ಗುಂಡಬ್ರಹ್ಮಯ್ಯಗಳ ವಿಗ್ರಹದ ಒಂದು ವೈಶಿಷ್ಟ್ಯವಾಗಿದೆ. ಆದರೆ ಇಲ್ಲಿಯ ಒಂದು ವಿಗ್ರಹ ಲಿಂಗವನ್ನು ಎಡಗೈಯಲ್ಲಿ ಹಿಡಿದಿದ್ದರೆ, ಇನ್ನೊಂದು ಬಲಗೈಯಲ್ಲಿ ಹಿಡಿದಿದೆ. ಎಡಬಲದಲ್ಲಿ ಸಮಾನಾದ ಆಕಾರ ಸಾಧಿಸಲು ಹೀಗೆ ಮಾಡಿರಬಹುದು.

ಇನ್ನೊಂದು ವಿಷಯ : ಈ ಮೂರ್ತಿ ಲಭಿಸಿದುದು, ಬೇಡನಾಯಕರ ರಾಜಧಾನಿಯಾದ ಚಿತ್ರದುರ್ಗದಲ್ಲಿ. ಬೇಡಜನಾಂಗದ ಇನ್ನೊಂದು ರಾಜಧಾನಿಯಾದ ಸುರಪುರದಲ್ಲಿ "ಶೂಲದ ಹಬ್ಬ" ನಿನ್ನೆ-ಮೊನ್ನೆಯವರೆಗೂ ಆಚರಿಸುತ್ತಿದ್ದರಂತೆ. ಗುಂಡಬ್ರಹ್ಮಯ್ಯಗಳು ಬೇಡರಾಗಿ ಹುಟ್ಟಿ, ವೀರಶೈವರಾಗಿ ಬೆಳೆದು ಬೆಳಗಿದುದೇ ಇದಕ್ಕೆ ಕಾರಣವಾಗಿರಬಹುದು. ಕರ್ನಾಟಕದ ತುಂಬ ಅಲ್ಲಲ್ಲಿ ನೆಲೆನಿಂತ ಬೇಡಜನಾಂಗದ ಆಚಾರ, ವಿಚಾರಗಳ ಸಂಶೋಧನೆಯಿಂದ ಗುಂಡಬ್ರಹ್ಮಯ್ಯಗಳ ಚರಿತ್ರೆಯ ಮೇಲೆ ಹೆಚ್ಚಿನ ಬೆಳಕು ಬೀಳಬಹುದಾಗಿದೆ.

ನಂಜುಂಡ ಕೃತ 'ಕುಮಾರ ರಾಮನ ಸಾಂಗತ್ಯ', ಪಾಂಚಾಳ ಗಂಗ ಕೃತ 'ಬಾಲ ರಾಮನ ಸಾಂಗತ್ಯ'ಗಳಲ್ಲಿ ಗುಂಡಬ್ರಹ್ಮಯ್ಯಗಳ 'ಶೂಲದ ಹಬ್ಬ'ದ ವಿಸ್ತಾರವಾದ ವರ್ಣನೆ ಬರುತ್ತದೆ. ಕುಮಾರರಾಮನು ಭಕ್ತಿಯಿಂದ ಈ ಹಬ್ಬವನ್ನಾಚರಿಸಿ ಶೂಲಗಳನ್ನು ಪೂಜಿಸುತ್ತಾನೆ. ಇದು ಹುಟ್ಟಿನಿಂದ ಬೇಡನಾಗಿರಬಹುದಾದ ಕುಮಾರರಾಮನ ವೀರಶೈವತ್ವದ ಸೂಚನೆಯಾಗಿರಬಹುದು. ಹೆಚ್ಚಿನ ಸಂಶೋಧನೆ ನಡೆದಲ್ಲಿ ಗುಂಡಬ್ರಹ್ಮಯ್ಯ, ಕುಮಾರರಾಮ, ಬೇಡಜನಾಂಗ, ವೀರಶೈವ-ಗಳ ಪರಸ್ಪರ ಸಂಬಂಧವನ್ನು ಸೂಚಿಸುವ ವಿವರಗಳು ಬೆಳಕುಕಾಣುವ ಸಂಭವವಿದೆ.

ಎಂ. ಎಂ. ಕಲಬುರ್ಗಿ

ಗ್ರಂಥಾವಲೋಕನ

೧. ಕನ್ನಡ ಗ್ರಂಥಸೂಚಿ. ಸಂ ೧. ಶುದ್ಧ ವಿಜ್ಞಾನಗಳು. ಸಂ: ದೇ. ಜವರೇಗೌಡ. ಇತರರು. ಪ್ರ: ಡೈರೆಕ್ಟರ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ಮೈಸೂರು. ಡೆಮಿ ಕ್ವಾರ್ಟೊ. ಪು. XX + ೨೪೦. ಬೆಲೆ. ರೂ. ೩೦–೦೦

೨. ಕನ್ನಡ ಗ್ರಂಥಸೂಚಿ. ಸಂ. ೩. ಸಾಹಿತ್ಯ, ಕಾವ್ಯ. ಸಂ: ದೇ. ಜವರೇಗೌಡ, ಇತರರು. ಪ್ರ: ಡೈರೆಕ್ಟರ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ಮೈಸೂರು. ಡೆಮಿ ಕ್ವಾರ್ಟೊ. ಪು. XII + ೪೮೮. ಬೆಲೆ. ರೂ. ೬೦–೦೦

ಮೈಸೂರು ವಿಶ್ವವಿದ್ಯಾನಿಲಯ ಕನ್ನಡದ ಕಾರ್ಯವನ್ನು ವ್ಯಾಪಕವಾಗಿ. ವೇಗವಾಗಿ ಮುನ್ನಡೆಸುತ್ತಿರುವುದು ಎಲ್ಲರೂ ಅಭಿಮಾನಪಡಬೇಕಾದ ಸಂಗತಿ. ಕನ್ನಡದ ಬಗ್ಗೆ ನಿರಾಸಕ್ತರಲ್ಲದ ಕುಲಪತಿಗಳು, ಕ್ರಿಯಾಶೀಲರಾದ ಅಧ್ಯಯನ ಸಂಸ್ಥೆಯ ನಿರ್ದೇಶಕರು, ಪ್ರಕಾಶನ ಸಮರ್ಥರಾದ ಪ್ರಸಾರಾಂಗದ ನಿರ್ದೇಶಕರು—ಇಂಥ ಒಂದು ಅನುಕೂಲ ಪ್ರಸಂಗ, ಮೈಸೂರು ವಿಶ್ವವಿದ್ಯಾಲಯಕ್ಕೆ ದೊರೆತುದು ಕನ್ನಡಿಗರ ಸೌಭಾಗ್ಯ. ಈ 'ಪ್ರಸಂಗ'ವನ್ನು ವಿಧಾಯಕ ರೀತಿಯಲ್ಲಿ ಬಳಸಿಕೊಳ್ಳುತ್ತಿರುವುದರ ನಿದರ್ಶನಗಳಾಗಿ ವಿಶ್ವಕೋಶ, ಎಪಿಗ್ರಾಫಿಯ ಕರ್ನಾಟಕ ಸಂಪುಟಗಳು, ವಿಶ್ವವಿದ್ಯಾಲಯದ ಕೀರ್ತಿಕಲಶಗಳಾಗಿ ಬೆಳಕಿಗೆ ಬರುತ್ತಲಿವೆ. ಈ ಕಲಶಗಳ ಸಾಲಿನಲ್ಲಿ ನಿಲ್ಲುವಂತಹುದು ಪ್ರಸಾರಾಂಗದ ನಿರ್ದೇಶಕರಾದ ಡಾ. ಪ್ರಭುಶಂಕರ ಅವರು ಪ್ರಕಟಿಸುತ್ತಿರುವ "ಕನ್ನಡ ಗ್ರಂಥಸೂಚಿ."

ಅಂದಿನ ಪುರಾತನ ಇಲಾಖೆಯ ಎಪಿಗ್ರಫಿಯ ಕರ್ನಾಟಕ. ಮೈಸೂರು ವಿಶ್ವ-ವಿದ್ಯಾಲಯದ ವಿಶ್ವಕೋಶ. ಕರ್ನಾಟಕ ಸಾಹಿತ್ಯ ಸಹಕಾರಿ ಸಂಘದ ಮಕ್ಕಳ ವಿಶ್ವಕೋಶ. ಕರ್ನಾಟಕ ವಿಶ್ವವಿದ್ಯಾಲಯದ ವಚನ ವಾಙ್ಮಯ ಪರಿಷ್ಕರಣ—ಈ ಕೆಲವೇ ಮಹಾ ಯೋಜನೆಗಳ ಸಾಲಿನಲ್ಲಿ ಮನ್ನಿಸಲ್ಪಡಬೇಕಾದ ದೊಡ್ಡ ಕಾರ್ಯವಿದು. ಇದರ ಹಿಂದೆ ದೇಜಗೌ. ಕೆ. ಎಸ್. ದೇಶಪಾಂಡೆ. ಪ್ರಭುಶಂಕರ. ಆರ್. ಎಲ್. ಅನಂತರಾಮಯ್ಯರ ಕಾರ್ಯಶ್ರದ್ಧೆ, ಶಾಸ್ತ್ರಮತಿ, ದೀರ್ಘಶ್ರಮ ಮಡುಗಟ್ಟಿ ನಿಂತಿವೆ. ಇದಕ್ಕಾಗಿ ಪ್ರಸಾರಾಂಗಕ್ಕೆ ನಾಡಿನ ಅಭಿನಂದನೆ ಅವಶ್ಯ ಸಲ್ಲಬೇಕು.

ಗ್ರಂಥರಕ್ಷಣೆಯ ಅವಜ್ಞೆ ಕಾರಣವಾಗಿ ಪಂಪಪೂರ್ವದ ಸಮಸ್ತ ಸಾಹಿತ್ಯಲೋಕವನ್ನು, ಪಂಪೋತ್ತರಕಾಲದ ಸಾವಿರಾರು ಕೃತಿಗಳನ್ನು ಸಾವಿನಡೆಗೆ ಕೈಬಿಟ್ಟವರು ನಾವು. ಹೀಗೆ ೧೯ನೆಯ ಶತಮಾನದವರೆಗಿನ ಬಹಳಷ್ಟು ಹಸ್ತಪ್ರತಿ ಸಂಪತ್ತನ್ನು ಕಳೆದುಕೊಂಡು ಎಚ್ಚರಗೇಡಿಗಳಾದ ನಮಗೆ, ೧೯ನೆಯ ಶತಮಾನದಿಂದೀಚೆಯ ಪ್ರಕಟಿತ ಗ್ರಂಥಗಳನ್ನು ರಕ್ಷಿಸುವ ವಿಚಾರವೂ ಹೊಳೆದಿಲ್ಲ. ರಾತ್ರಿ ಕಂಡ ಬಾವಿಯನ್ನು ಹಗಲು ಬೀಳುವವ

ರಂತೆ ಕಣ್ಣುಮುಚ್ಚಿ ನಡೆದಿದ್ದೆವು. ಇಂಥ ಪ್ರಸಂಗದಲ್ಲಿ ಎತ್ತಿಕೊಂಡ ಈ ಯೋಜನೆ ನಮ್ಮ ಅಪಜ್ಞೆಯ ಸಮುದ್ರದಲ್ಲಿ ಮುಳುಗುತ್ತಲಿದ್ದ ಗ್ರಂಥಲೋಕವನ್ನು ಎತ್ತಿತೋರಿಸುವ ಕೂರ್ಮ ಸಾಹಸವಾಗಿದೆ. ಈ ಯೋಜನೆಯ ಅಂಗವಾಗಿ ಒಟ್ಟು ೭ ಸಂಪುಟಗಳು ಪ್ರಕಟವಾಗಲಿವೆ. ಈಗ ಬೆಳಕಿಗೆಬಂದುವು ೧ ಮತ್ತು ೩ನೆಯ ಸಂಪುಟಗಳು.

ಕನ್ನಡಕ್ಕೆ ನ್ಯಾಯವಾದ ಸ್ಥಾನ ಲಭಿಸದಿರುವುದನ್ನು ನೋಡಿದರೆ, ಕನ್ನಡದ ಬಗ್ಗೆ ಕೆಲವರಾಡುವ ಹಗುರು ಮಾತುಗಳನ್ನು ಕೇಳಿದರೆ ಸಂಕಟವಾಗುತ್ತದೆ. ಅದರಲ್ಲಿಯೂ ಕನ್ನಡದ ದಿಕ್ಪಾಲಕರಾದ ಪ್ರೊ. ದೇಜಗೌಡರಂಥವರಿಗೆ ಹೊಟ್ಟೆಯುರಿಯುತ್ತದೆ. ಅವರು ಈ ತಾಪವನ್ನು "ಕನ್ನಡವೆಂದರೆ ಮೂಗುಮುರಿಯುವ ಜನ ಕನ್ನಡದಲ್ಲೇನಿದೆಯೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದಾರೆಯೇ? ಈ ದಿಸೆಯಲ್ಲಿ ಏನೂ ಪ್ರಯತ್ನ ನಡೆಸದೆಯೇ ಅಪ್ರಗಲ್ಭರಂತೆ ಬೊಬ್ಬೆ ಹಾಕುತ್ತಾರೆ" ಎಂದು "ಮೊದಲಮಾತು"ಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಆದರೆ ಹೀಗೆ ವ್ಯಕ್ತಪಡಿಸುವುದಕ್ಕಿಂತ ಇನ್ನು ಮುಂದೆ ಅಂಥವರನ್ನು ಉಪೇಕ್ಷಿಸುವುದೇ ಒಳ್ಳೆಯದೆನಿಸುತ್ತದೆ.

ಡಾ ಪ್ರಭುಶಂಕರ ಅವರು ಈ ಯೋಜನೆಗಾಗಿ ದುಡಿದವರಿಗೆ "ಬಿನ್ನಹ"ದಲ್ಲಿ ಮುಕ್ತಮನಸ್ಸಿನಿಂದ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ. ಮುಂದಿನ 'ಅಜಿತಪುರಾಣ'ವನ್ನು ಓದಲು ಬಿಡದೆ ಪ್ರಾರಂಭದ 'ಅತ್ತಿಮಬ್ಬೆಯ ಚರಿತೆ'ಯನ್ನೇ ತಿರುತಿರುಗಿ ಓದಲು ಹಚ್ಚುವ ರನ್ನನ ಬರೆವಣಿಗೆಯಂತೆ ಅವರ ಮಾತುಗಳು ತುಂಬ ಸುಂದರವಾಗಿವೆ.

ತರುವಾಯದ "ಮುನ್ನುಡಿ" ಒಂದು ಸ್ವತಂತ್ರ ಗ್ರಂಥದ ಬೆಲೆ ಪಡೆಯುವಷ್ಟು ಪರಿಪೂರ್ಣವೂ ನಿರ್ದುಷ್ಟವೂ ಆಗಿದೆ. ತಮ್ಮ ಯಾವುದೇ ಯೋಜನೆಯನ್ನು ಹೇಗೆ ವಿವರಿಸಬೇಕೆನ್ನುವವರಿಗೆ ಇದು ಒಂದು ಮಾದರಿ.

ಈ ಎರಡೂ ಸಂಪುಟಗಳು ಅಖಂಡ ಯೋಜನೆಯೊಂದರ ಅಂಗ. ಮೇಲಾಗಿ ಎರಡರ ಹಿಂದೆ ಒಂದೇ ಸಂಪಾದಕ ಮಂಡಲ.[1] ಒಂದೇ ಪದ್ಧತಿಯಿರುವುದರಿಂದ ಈ ಉಭಯ ಸಂಪುಟಗಳ ಗುಣದೋಷಗಳನ್ನು ಒಟ್ಟಿಗೆ ವಿವೇಚಿಸುವುದು ಸೂಕ್ತ.

ಮೊದಲನೆಯದು "ಶುದ್ಧ ವಿಜ್ಞಾನ" ಸಂಪುಟ. ಇದರ ಪರಿವಿಡಿಯಲ್ಲಿ ಹೇಳಿದ ಪ್ರಕರಣಗಳಿಗೂ ಒಳಗಿರುವ ಪ್ರಕರಣಗಳಿಗೂ ತಾಳ-ಮೇಳ ತಪ್ಪಿದೆ. ಪರಿವಿಡಿಯಲ್ಲಿ "ಎಂಜನಿಯರಿಂಗ" ತರುವಾಯ ನಮೂದಿಸಿರುವ "ತಾಂತ್ರಿಕ ವಿಜ್ಞಾನ" ಒಳಗೆ ಇಲ್ಲ. ಒಳಗೆ ವಿವರಿಸಿರುವ "ಪ್ರಾಣಿವಿಜ್ಞಾನ" ಪರಿವಿಡಿಯಲ್ಲಿ ಇಲ್ಲ ಪರಿವಿಡಿಯಲ್ಲಿ ವಿಷಯಾನುಕ್ರಮವನ್ನು

ಎಂಜನಿಯರಿಂಗ ೭೫
ತಾಂತ್ರಿಕ ವಿಜ್ಞಾನ ೧೯೦
ರಸಾಯನಶಾಸ್ತ್ರ ೭೯

---

1. ಎರಡನೆಯ ಸಂಪುಟಕ್ಕೆ ಡಾ. ಹಾ. ಮಾ. ನಾಯಕ, ಶ್ರೀ. ಪಿ. ಕೆ. ಪಾಟೀಲ ಹೆಚ್ಚಿನ ಸಂಪಾದಕರು.

ಹೀಗೆ ಕೊಟ್ಟಿದ್ದಾರೆ. ಇಲ್ಲಿ ೭೫ನೆಯ ಪುಟದ ತರುವಾಯ ೧೯೦ನೆಯ ಪುಟ ಬಂದು ಬಳಿಕ ೭೯ನೆಯ ಪುಟ ಬಂದುದು ಅಕ್ರಮವೆನಿಸುತ್ತದೆ.

× × × ×

ಪಠ್ಯದಲ್ಲಿ ಮೆಚ್ಚಬೇಕಾದುದೆಂದರೆ ಪ್ರತಿಯೊಂದು ಪುಸ್ತಕದ ಬಗ್ಗೆ ಕೊಡುವ ಮಾಹಿತಿ. ನಾಲ್ಕು ಬೆರಳಿನಷ್ಟು ಸ್ಥಳದಲ್ಲಿ ಗ್ರಂಥವೊಂದರ ಅಂತರಂಗ ಬಹಿರಂಗಗಳನ್ನು ಇಡಿಯಾಗಿ ಅಡಕಗೊಳಿಸಿದುದು ತುಂಬ ಶಾಸ್ತ್ರಶುದ್ಧವಾಗಿದೆ. ಕರ್ತೃವಿನ ಹೆಸರು, ಜನ್ಮವರ್ಷ, ಕಾವ್ಯನಾಮ, ಕೃತಿನಾಮ, ಸಂಪಾದಕ ಅಥವಾ ಅನುವಾದಕ ಇತ್ಯಾದಿ ಉಪಕರ್ತೃನಾಮ, ಪ್ರಕಟವಾದ ಸ್ಥಳ, ಪ್ರಕಾಶಕರ ಹೆಸರು, ಪ್ರಕಟಿತ ವರ್ಷ, ಹಿಂದಿನ ಆವೃತ್ತಿಗಳ ಉಲ್ಲೇಖ, ಗ್ರಂಥಮಾಲೆ, ಪುಟಸಂಖ್ಯೆ, ಆಕಾರ ರಟ್ಟಿನ ಮಾದರಿ, ಮತ್ತು ಬೆಲೆ, ಕೃತಿ ವಿಷಯವನ್ನು ಸೂಚಿಸುವ ವಿವರಣೆ, ಪುಸ್ತಕವನ್ನು ಪರಿಶೀಲಿಸಿದ ಗ್ರಂಥ ಭಾಂಡಾರ — ಈ ವಿವರಣೆಗಳನ್ನು ನೋಡಿದರೆ ಸಿಬ್ಬಂದಿಗಳು ಪಟ್ಟ ಪರಿಶ್ರಮ ಯಾರಿಗಾದರೂ ಮರುಕವನ್ನು ಹುಟ್ಟಿಸುತ್ತದೆ. ಯಾರ ಪ್ರಶಂಸೆಯನ್ನೂ ಗಳಿಸುತ್ತದೆ. ಇಲ್ಲಿ ಮಾತ್ರ "ಪದವಿಟ್ಟಳುಪದೊಂದಗ್ಗಳಿಕೆ"ಯನ್ನು ಈ ಕೃತಿ ಸಾಧಿಸಿದೆ.

ಆದರೆ ಎರಡೂ ಸಂಪುಟಗಳ ತುಂಬ ಕಂಡುಬರುವ ದೊಡ್ಡ ದೋಷಗಳೆಂದರೆ ಗ್ರಂಥಗಳ ವಿಷಯದ ಅಸ್ತಿತ್ವ ಜ್ಞಾನ, ಮತ್ತು ಗ್ರಂಥಗಳ ವರ್ಗೀಕರಣದ ಅಸಮರ್ಪಕ ವಿಧಾನ. ತಕ್ಕಡಿಯಿಂದ ತೂಗಿದರೂ ಇಂಚುಪಟ್ಟಿಯಿಂದ ಅಳೆದರೂ ಈ ವಿಷಯಜ್ಞಾನ, ವರ್ಗೀಕರಣ ವಿಧಾನಗಳಲ್ಲಿ ದೋಷ ಉಳಿದುಕೊಳ್ಳುವುದು ನಿಜವಿದ್ದರೂ ಇಲ್ಲಿ ಅವರ ಪ್ರಮಾಣ ಅಧಿಕವಾಗಿದೆ. ಇವುಗಳಲ್ಲಿ ಮುಖ್ಯವಾದ ಕೆಲವನ್ನು ನೋಡಬಹುದು :

೧. ಒಂದೇ ಪ್ರಕರಣಕ್ಕೆ ಸಂಬಂಧಿಸಿದುವು ಬೇರೆಬೇರೆ ಪ್ರಕರಣಗಳಲ್ಲಿ ಹರಡಿಹೋಗಿವೆ :

"ಶಿಶುವೈದ್ಯ ಸಂಜೀವಿನಿ" (I-೧೩೩೮) ಯು ವೈದ್ಯವಿಜ್ಞಾನದಲ್ಲಿ ಬಂದರೆ "ಶಿಶುಸಂಗೋಪನ ಹಾಗೂ ಪ್ರಥಮ ಚಿಕಿತ್ಸೆ" (I-೧೩೮೭) ಗೃಹವಿಜ್ಞಾನದಲ್ಲಿ ಬಂದಿದೆ. ಕ್ರೈಸ್ತ ಶೀರ್ಷಿಕೆಯ ಕೆಳಗೆ "ಕ್ರೈಸ್ತರಿಂದ ಕನ್ನಡಕ್ಕೆ ಕಾಣಿಕೆ" (III-೯೨). ಹತ್ತೊಂಬತ್ತನೆಯ ಶತಮಾನ ಶೀರ್ಷಿಕೆಯ ಕೆಳಗೆ "೧೯ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡಸೇವೆ" (III-೫೪) ಉಲ್ಲೇಖಗೊಂಡಿವೆ.

"ಸಂಕೀರ್ಣ" ಶೀರ್ಷಿಕೆಯ ಕೆಳಗೆ ಕಾಮನ ಪದಗಳು (III-೨೮೩೮), "ಹೋಳೀ-ಪದ" ಶೀರ್ಷಿಕೆಯ ಕೆಳಗೆ ಕಾಮವಿಡಂಬನ ಹೋಳೀಪದ (III-೨೮೬೦), "ದುಂದುಮೆ"

ಶೀರ್ಷಿಕೆಯ ಕೆಳಗೆ ಹೋಳೀಕಾಮನ ದುಂದುಮೆ (III–೨೮೭೦). "ಭಾವಗೀತೆ ಸಂಕಲಿತ ಸಂಪುಟಗಳು" ಶೀರ್ಷಿಕೆಯ ಕೆಳಗೆ ಕಾಮನ ಪದಗಳು (III–೩೪೨೦)–ಹೀಗೆ ಬಹುಶಃ ಒಂದೇ ವಿಷಯವನ್ನು ಕುರಿತು ಒಂದೇ ವರ್ಗಕ್ಕೆ ಸೇರುವ ಈ ಗ್ರಂಥಗಳು ನಾಲ್ಕು ಶೀರ್ಷಿಕೆಗಳಲ್ಲಿ ಹಂಚಿಹೋಗಿವೆ. ಕೆಲವುಕಡೆಗೆ ಈ ದೋಷ ಇನ್ನೂ ಬೆಳೆದು ಒಂದೊಂದು ಪುಸ್ತಕಕ್ಕೆ ಒಂದೊಂದು ಶೀರ್ಷಿಕೆ ವಿರಾಜಿಸುತ್ತಲಿದೆ

೨. ಬೇರೆಬೇರೆ ಪ್ರಕರಣಗಳಿಗೆ ಸಂಬಂಧಿಸಿದುವು ಒಂದೇ ಪ್ರಕರಣದಲ್ಲಿ ಬಂದು ಸೇರಿವೆ:

ಗಣಿತವಿಜ್ಞಾನ ವಿಭಾಗದಲ್ಲಿ ಸಂಖ್ಯಾವಿಜ್ಞಾನವನ್ನು ಸೇರಿಸಬಹುದು. ಭೂಮಿತಿಯನ್ನು ಸೇರಿಸಿರುವುದು ಅಷ್ಟು ಸರಿ ಕಾಣುವುದಿಲ್ಲ. ಖಗೋಲ ವಿಜ್ಞಾನ ಸೇರಿಸಿರುವದಂತೂ ತೀರ ಅವೈಜ್ಞಾನಿಕ.

"ಅಲಂಕಾರ" ಶೀರ್ಷಿಕೆಯ ಕೆಳಗೆ ಶಾಸನ ಮತ್ತು ಕಾವ್ಯಗಳಿಂದ ವರ್ಣಿತವಾದ ಕನ್ನಡನಾಡಿನ ವಿವಿಧ ಪ್ರದೇಶಗಳ ಪ್ರಶಂಸನೆಯನ್ನೊಳಗೊಂಡ "ನೃಪತುಂಗ ಮತ್ತು ಶಾಸನಗಳು" (III–೧೬೧) ಎಂಬ ಪುಸ್ತಕದ ಉಲ್ಲೇಖವಿದೆ.

"ನವ್ಯಕಾವ್ಯ" ಶೀರ್ಷಿಕೆಯ ಕೆಳಗೆ ಕಂಬಾರರ ಮುಗುಳು (III–೪೦೩೫), ಗಿರಡ್ಡಿಯವರ ರಸವಂತಿ (III–೪೦೪೨), ಯಲ್ಲಟ್ಟಿಯವರ ನನ್ನಹಾಡು, ರಸಿಕಪಕ್ಷಿ (III–೪೦೯೭–೯೮)–ಕೃತಿಗಳು ಸೇರುವಲ್ಲಿ ರಮ್ಯ-ನವ್ಯಗಳ ಅಂತರ ಅರ್ಥಗಳೆದು ಕೊಂಡಿದೆ.

೩. ಉಪ-ಪ್ರಕರಣಗಳ ರಚನೆಯ ಹಿಂದೆ ಒಂದು ತತ್ವವಾಗಲಿ ಕ್ರಮವಾಗಲಿ ಇಲ್ಲ:

"ಗಣಿತವಿಜ್ಞಾನ" ಪ್ರಕರಣದಲ್ಲಿ ಕೋಶ. ಚರಿತ್ರೆಭಾರತ, ಸಾಮಾನ್ಯ ಪಠ್ಯಪುಸ್ತಕ, ಕೈಪಿಡಿ-ಟಿಪ್ಪಣಿ. ಗಣಿತಶಾಸ್ತ್ರ–ತರ್ಕ. ಅಂಕಗಣಿತ : ಕೈಪಿಡಿ. ಅಂಕಗಣಿತ. ಪಠ್ಯಪುಸ್ತಕ. ಬೀಜಗಣಿತ–ಕೈಪಿಡಿ, ಬೀಜಗಣಿತ : ಪಠ್ಯಪುಸ್ತಕ. ಕಲನಶಾಸ್ತ್ರ. ಅಂತರಾಂಶ ಕಲನಶಾಸ್ತ್ರ. ಪರಿಮಿತ ವಿಕಲನಶಾಸ್ತ್ರ. ತ್ರಿಕೋನಮಿತಿ. ಭೂಮಿತಿ. ರೇಖಾಗಣಿತ : ಪಠ್ಯಪುಸ್ತಕ, ರೇಖಾಗಣಿತ : ಯುಕ್ಲಿಡ ಸಿದ್ಧಾಂತ, ಪೈಥಾಗೋರಾಸನ ಪ್ರಮೇಯ. ಬೀಜರೇಖಾ ಗಣಿತ, ಯಂತ್ರಗತಿಶಾಸ್ತ್ರ. ಖಗೋಳವಿಜ್ಞಾನ : ಸಾಮಾನ್ಯ. ಕಾಲ, ಪಂಚಾಂಗ. ಗ್ರಹಣಗಳು, ಭೂಮಿ, ಸೂರ್ಯ, ಗ್ರಹಗಳು. ನಕ್ಷತ್ರ—ಎಂಬ ಉಪವಿಭಾಗಗಳನ್ನು ಅಡಕಗೊಳಿಸಿದುದು ವಿಷಯಜ್ಞಾನ, ವರ್ಗೀಕರಣ ವಿಧಾನಗಳ ಗೊಂದಲವನ್ನು ತೋರಿಸುತ್ತದೆ.

೪. ವಿವರಣೆಗಳ ಪ್ರಮಾಣದಲ್ಲಿ ತಾರತಮ್ಯ :

ಕೆಲವು ಪುಸ್ತಕಗಳ ವಿಷಯ ವಿವರವನ್ನು ಒಂದು ಕಾಲಂದಷ್ಟು (III ಪು. ೨೨)

ಕೊಟ್ಟರೆ ಕೆಲವು ಪುಸ್ತಕಗಳಿಗೆ ಒಂದಿಷ್ಟು ವಿವರವಿಲ್ಲ. (III ಪು. ೨೩ ಮೇಲಿನ "ಆಯ್ದ ಕನ್ನಡ ಪಾಠಗಳು", "ಆರ್ಯತೇಜ")

೫. ಒಬ್ಬ ಕವಿ ಸಂಬಂಧದ ಉಲ್ಲೇಖದಲ್ಲಿ ಅನ್ಯಕವಿಗಳ ಪ್ರವೇಶ:

"ಒಬ್ಬ ಕವಿಯ ಕೃತಿಗಳು, ಅವುಗಳ ಗದ್ಯ ರೂಪಾಂತರಗಳು, ಸಂಗ್ರಹಗಳು, ವಿಮರ್ಶೆ–ಇವೆಲ್ಲವನ್ನು ಆ ಕವಿಯ ಕರ್ತೃತ್ವದಲ್ಲಿಯೇ ಅಳವಡಿಸಿದೆ" ಎಂಬ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ. ಇದು ಅಭ್ಯಾಸಿಗೆ ಅನುಕೂಲವೇನೋ ನಿಜ. ಆದರೆ,

ಜನ್ನ

ಅನಂತನಾಥ ಪುರಾಣಂ

ಜನ್ನ

ಅನುಭವ ಮುಕುರಂ

ಜವರೇಗೌಡ, ದೇವೇಗೌಡ

ನೋಡಿ: ಷಡಕ್ಷರದೇವ, ಉ. ೪೭೬

ಜವಳಿ, ಬಸವರಾಜ, ಚನ್ನವೀರಪ್ಪ

ನೋಡಿ: ಹರಿಹರ, ಉ. ೪೯೦

ಜನ್ನ

ವಿ: ಸಿ. ಪಿ. ಕೃಷ್ಣಕುಮಾರ್

ಎಂಬ ಕ್ರಮದಲ್ಲಿ (III ಪು. ೩೯) ಜವರೇಗೌಡ, ಜವಳಿಯವರ ಉಲ್ಲೇಖ ಜನ್ನನ ಮಧ್ಯೆ ಬಂದುದು ಉಚಿತವಲ್ಲ. ಇದರಿಂದ ಜನ್ನನ ಮಧ್ಯೆ ಷಡಕ್ಷರದೇವ ಮತ್ತು ಹರಿಹರ ಸೇರಿಕೊಂಡಂತಾಗಿದೆ.

೬. ಪ್ರಕಟಿತ ವರ್ಷಗಳ ಕ್ರಮಪಲ್ಲಟ:

ಒಂದು ಪುಸ್ತಕದ ಆವೃತ್ತಿಗಳನ್ನು ವಿಲೋಮ ಇಲ್ಲವೆ ಅನುಲೋಮ ಕ್ರಮದಲ್ಲಿ ಉಲ್ಲೇಖಿಸಬೇಕು. ಆದರೆ ಈ ಎರಡೂ ಕ್ರಮಗಳು ಇಲ್ಲಿ ಸ್ಥಾನ ಪಡೆದಿವೆ. ಉದಾ: ನೇಮಿಚಂದ್ರನ ನೇಮಿನಾಥ ಪುರಾಣದ ಆವೃತ್ತಿಗಳ ಉಲ್ಲೇಖ, ೧೯೧೪, ೧೯೫೧, ೧೯೬೪ ಹೀಗೆ ಏರಿಕೆ ಕ್ರಮದಲ್ಲಿದ್ದರೆ, ಲೀಲಾವತಿ ಪ್ರಬಂಧದ ಆವೃತ್ತಿಗಳ ಉಲ್ಲೇಖ ೧೯೬೬, ೧೯೩೫, ೧೯೨೪ ಹೀಗೆ ಇಳಿಕೆ ಕ್ರಮದಲ್ಲಿದೆ (III ಪು ೪೨–೪೩).

೭. ಹೆಚ್ಚಿನ ನಮೂದಗಳು:

ಈ ಸೂಚಿಯ ಬಹುಭಾಗ ಅಚ್ಚಾದಮೇಲೆ ಗಮನಕ್ಕೆ ಬಂದಿರಬಹುದಾದ ಕೃತಿಗಳನ್ನು "ಹೆಚ್ಚಿನ ನಮೂದುಗಳು" ಎಂಬ ವಿಭಾಗದಲ್ಲಿ ಸೇರಿಸಿರುವುದು ಅನಿವಾರ್ಯ ಮತ್ತು ಯೋಗ್ಯ. ಆದರೆ "ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ ಕಾವ್ಯದ ಪ್ರಭಾವ" "ಕನ್ನಡದಲ್ಲಿ ಭಾವಗೀತೆ" ಯಂತಹ ಮೈಲುಗಲ್ಲು ಕೃತಿಗಳು ಹೆಚ್ಚಿನ ನಮೂದು ವಿಭಾಗದಲ್ಲಿ ಸೇರಿರುವುದು ತೀರ ಅನವಧಾನತೆಯನ್ನು ಸೂಚಿಸುತ್ತದೆ. ಇವು ಮೂಲ ಪಠ್ಯದಲ್ಲಿ ಬರಬೇಕಿತ್ತು.

೮. ಕೆಲವು ಪ್ರಮುಖ ಗ್ರಂಥಗಳ ಉಲ್ಲೇಖ ಇಲ್ಲದುದು :

ಇಂಥ ಒಂದು ಮಹಾಕಾರ್ಯವನ್ನು ಮಾಡುವಲ್ಲಿ ಕೆಲವು ಗ್ರಂಥಗಳು ಕಣ್ಣು ತಪ್ಪಿಸಿಕೊಳ್ಳುವುದು ಸ್ವಾಭಾವಿಕ. ಸಹಜ. ಆದರೆ ಪ್ರಮುಖ ಗ್ರಂಥಗಳನ್ನೇ ಹೆಸರಿಸದಿದ್ದರೆ ಅದು ಉಚಿತವೆನಿಸಲಾರದು. ಉದಾ :

ಕವಿರಾಜಮಾರ್ಗ (ಮದ್ರಾಸ ಆವೃತ್ತಿ ೧೯೩೦)

ಕಾವ್ಯಾವಲೋಕನ. ಸಂ. ಎಂ. ಎಸ್. ಬಸವಲಿಂಗಯ್ಯ ೧೯೩೯

,, ,, ೧೯೬೭

೯. ಅನುಬಂಧಗಳು :

ಎರಡೂ ಸಂಪುಟಗಳ ಕೊನೆಗೆ ಬಂದ ಗ್ರಂಥಕರ್ತೃಸೂಚಿ, ಕೃತಿಸೂಚಿ ಇತ್ಯಾದಿಗಳು ನಿಜಕ್ಕೂ ಸಮುಚಿತ ಮತ್ತು ಉಪಯುಕ್ತವೆನಿಸಿವೆ. ಆದರೆ ಉದ್ದಕ್ಕೂ ಒಂದೇ ಕ್ರಮ ಕಂಡುಬರುವುದಿಲ್ಲ. ಉದಾ :

ಮಾಳವಾಡ, ಸಂಗಪ್ಪ ಸಂಗನಬಸಪ್ಪ

ಶಾಂತಾದೇವಿ, ಎಸ್. ಮಾಳವಾಡ

ಇಲ್ಲಿ ಶ್ರೀಯುತರಿಗೆ ಅಡ್ಡಹೆಸರು ಮೊದಲು, ಶ್ರೀಮತಿಯವರಿಗೆ ಅಂಕಿತನಾಮ ಮೊದಲು ಬಳಸಲಾಗಿದೆ. ಅದು ಹೋಗಲಿ,

ಶಾಂತಾದೇವಿ ಮಾಳವಾಡ

ಲಿಗಾಡೆ ಜಯದೇವಿತಾಯಿ

ಇಲ್ಲಿ ಒಬ್ಬ ಶ್ರೀಮತಿಯವರಿಗೆ ಅಂಕಿತನಾಮ ಮೊದಲು, ಇನ್ನೊಬ್ಬ ಶ್ರೀಮತಿಯವರಿಗೆ ಅಡ್ಡಹೆಸರು ಮೊದಲು ಬಳಸಲಾಗಿದೆ.

ಇವು ಮಾದರಿಗಾಗಿ ಎತ್ತಿಹೇಳಿದ ಕೆಲವು ದೋಷಗಳು. ಇವುಗಳನ್ನು ಹೋಲುವ ಹಲವು ದೋಷಗಳು ಅಲ್ಲಲ್ಲಿ ನೆಲೆನಿಂತಿವೆ. ಅನ್ಯಥಾಜ್ಞಾನ, ಅನವಧಾನದಿಂದಾಗಿ ನಾನು ಇಲ್ಲಿ ಕೆಲವು ಗುಣಗಳನ್ನೇ ದೋಷಗಳೆಂದು ಭಾವಿಸಿರಬಹುದು, ಅಥವಾ ನನ್ನ ಗಮನಕ್ಕೆ ಬರದೆ ಕೆಲವು ಬೇರೆ ದೋಷಗಳೂ ಇಲ್ಲಿ ಉಳಿದಿರಬಹುದು. ಪ್ರಥಮಸಲ ಇಂತಹ ಒಂದು ಕೃತಿ ರೂಪಗೊಳ್ಳುತ್ತಿರುವಾಗ ಇವು ಅನಿವಾರ್ಯ. ನಾನೇ ಈ ಕಾರ್ಯ ಮಾಡಿದ್ದರೂ ಬೇರೊಂದು ರೀತಿಯ ತಪ್ಪುಗಳುಂಟಾಗುವ ಸಾಧ್ಯತೆಯಿದ್ದಿತು. ಕಾರಣ ಸಾವಿರ ದೋಷಗಳಿದ್ದರೂ ಇದು ಸಾಹಸದ ಕೃತಿ. ಇದರ ಶಿಲ್ಪಕಾರ್ಯವನ್ನು ಕೈಗೆತ್ತಿಕೊಂಡ ಪ್ರಸಾರಾಂಗಕ್ಕೆ, ಮೈಸೂರು ವಿಶ್ವವಿದ್ಯಾಲಯಕ್ಕೆ ನಾಡಿನ ಅಭಿನಂದನೆ ಅವಶ್ಯ ಸಲ್ಲಬೇಕು.

ಎಂ. ಎಂ. ಕಲಬುರ್ಗಿ

ಗುಂಡಬ್ರಹ್ಮಯ್ಯಗಳ ಚರಿತ್ರೆ: ಸಂ. ಡಾ. ವಿ. ಶಿವಾನಂದ. ಪ್ರ: ಅಖಂಡೇಶ್ವರ ಗ್ರಂಥಮಾಲೆ, ಜೇವರಗಿ. ಬೆಲೆ : ಐದು ರೂಪಾಯಿ, ಪುಟ : ೪೦ + ೮೪.

ಇತ್ತೀಚೆ, ಶಿವಶರಣರ ಕುರಿತು ಹೊಸ ಅಂಶಗಳು ಹೊರಬರುತ್ತಲಿರುವುದು ಸಂತೋಷದ ಸಂಗತಿ. ಆ ದಿಶೆಯಲ್ಲಿ ಕೈಕೊಂಡ ಸಂಶೋಧನಾ ಚಟುವಟಿಕೆಗಳು ದಿನ ದಿಂದ ದಿನಕ್ಕೆ ಚುರುಕುಗೊಳ್ಳುತ್ತಲಿವೆ. ಇದರಿಂದ ಶಿವಶರಣರು ಕೇವಲ ಪವಾಡ ಪುರುಷರಲ್ಲ, ಐತಿಹಾಸಿಕ ವ್ಯಕ್ತಿಗಳೆಂಬುದು ದೃಢವಾಗುತ್ತದೆ. ಅಲ್ಲಲ್ಲಿ ದೊರೆಯುತ್ತಿರುವ ಶಿವಸರಣರ ವಿಗ್ರಹ, ಶಾಸನ, ದೇವಾಲಯ ಹಾಗೂ ಜಾನಪದ ಹಾಡುಗಳು– ಜೀವನಚರಿತ್ರೆ ಮತ್ತು ಐತಿಹಾಸಿಕ ಅಂಶಗಳಿಗೆ ಬಲವಾದ ಆಧಾರಗಳನ್ನು ಒದಗಿಸುತ್ತವೆ. ಶಿವಶರಣರನ್ನೇ ಕಥಾವಸ್ತುವನ್ನಾಗಿಟ್ಟುಕೊಂಡು, ಜಾನಪದ ತ್ರಿಪದಿ (ಸುವ್ವಿ) ಯಲ್ಲಿ ಕವಿ ಚೆನ್ನಸಿಂದ ರಚಿತವಾದ "ಗುಂಡಬ್ರಹ್ಮಯ್ಯಗಳ ಚರಿತ್ರೆ" ಯನ್ನು ಡಾ. ವಿ. ಶಿವಾನಂದರು ಸಂಪಾದಿಸಿ, ಇಲ್ಲಿಯವರೆಗೆ ಅಸ್ಪಷ್ಟವಾಗಿದ್ದ "ಗುಂಡಬ್ರಹ್ಮಯ್ಯ" ಗಳ ಜೀವನಚರಿತ್ರೆ ಮತ್ತು ಐತಿಹಾಸಿಕತೆಗಳ ಮೇಲೆ ಹೊಸಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ.

ಉತ್ತರದೇಶದಲ್ಲಿ ಓರುಗಲ್ಲು ಎಂಬ ಪಟ್ಟಣ. ಅದನ್ನಾಳುವವ ಕಾಕತೀಯ ಗಣಪತಿ. ಓರುಗಲ್ಲಿಗೆ ಒತ್ತಿನಲಿರುವ ಶಿವಪುರದಲ್ಲಿ "ಭಾವದೊಳಿಬ್ಬರು ಜೀವವೊಂದಾಗಿ" ಗಂಡುಗಲಿ ಗುಂಡಬ್ರಹ್ಮಯ್ಯಗಳೆಂಬ ಶಿವಭಕ್ತರಿದ್ದರು. "ಕಂಡವರು ಕದ್ದು ಪೋರೆ ಹೊಗಲು ಕೊಡೆನೆಂಬ ಕಾಲ್ಪೆಂಡೆ" ಧರಿಸಿ, ಶೂಲದ ನೇಮಹಿಡಿದ ಇವರ ಬಿರುದಿನ ಕಹಳೆ ಕೈಲಾಸವನ್ನು ಮುಟ್ಟುತ್ತದೆ. ಅಲ್ಲಿರುವ ಪಾರ್ವತಿ, ಗುಂಡಬ್ರಹ್ಮಯ್ಯಗಳ ಕಲಿತನದ ಪಂಥವನ್ನು ಶಿವನಿಗೆ ವಿವರಿಸಲು, ಶಿವ ಅದನ್ನು ಕೇಳಿ ಸಿಟ್ಟಿಗೆದ್ದು ಅವರು ತೊಟ್ಟ ಪಂಥವನ್ನು ಧೂಳಿಪಟಮಾಡುವ ವ್ರತಹಿಡಿದು, ಕಳ್ಳನಾಗಿ ಗಣಪತಿರಾಯನ ಅರಮನೆಯ ಸಂಪತ್ತನ್ನು ಕದ್ದು, ಗುಂಡಬ್ರಹ್ಮಯ್ಯಗಳಲ್ಲಿ ಪೊರೆಹೋಗುವ ಹಂಚಿಕೆ ಹಮ್ಮಿ, ಜಂಗಮರೂಪಿನ ನಾರದನಿಂದ ಕಳ್ಳತನದ ಬೇಹುಗಾರಿಕೆಯ ವಿವರ ತಿಳಿದು ಕೊಳ್ಳುವುದನ್ನು ಪ್ರಥಮ ಸಂಧಿ ಗರ್ಭೀಕರಿಸಿಕೊಂಡಿದೆ.

ಕೈಲಾಸದಲ್ಲಿ ನಡೆದ ಶಿವ–ಪಾರ್ವತಿಯರ ಸಂವಾದ, ಶಿವ ತೊಟ್ಟ ಪಂಥ ವೀರ ಶೈವ ಪುರಾಣ, ಕಾವ್ಯಗಳಂತೆ ಸಾಂಪ್ರದಾಯಿಕವಾಗಿದ್ದರೂ ಶಿವಭಕ್ತರ ಕಥೆಯಲ್ಲಿ ಅವು ಅವಶ್ಯಕ ಎಂಬುದನ್ನು ಕವಿ ಕಂಡುಕೊಂಡಂತೆ ಕಾಣುತ್ತದೆ. ಸಹಜವಾದ ಗತ್ತಿನಿಂದ ಪ್ರಾರಂಭವಾದ ಈ ಕಥೆ, ಹರಿಹರನ 'ರಗಳೆ'ಯಲ್ಲಿ ಬರುವ ಶಿವಭಕ್ತರ ಕಥಾಧಾಟಿ ಯನ್ನು ನೆನಪಿಗೆ ತರುತ್ತದೆ. ಅಂದಿನ ಜನರು ಶಕುನಗಳಲ್ಲಿ ಇಟ್ಟಿರುವ ನಂಬುಗೆ, ಅತಿಥಿ ಸತ್ಕಾರದಲ್ಲಿ ತೋರಿದ ಮನೋಭಾವ, ಅರಮನೆಯ ಪರಿಚಯ, ಓರುಗಲ್ಲು ಕೋಟೆಯ ವರ್ಣನೆಗಳಿಂದ ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಗುರುತಿಸಲು ಸಾಧ್ಯವಾಗುತ್ತದೆ. ಇಲ್ಲಿ ಬರುವ 'ಪಾದಪೆಂಡೆ'ಯನ್ನು ಲಕ್ಷಿಸಬೇಕು.

ಶಿವ, ನಾರದನೊಡಗೂಡಿ ಓರುಗಲ್ಲು ಅರಮನೆಗೆ ಕಳ್ಳತನ ಮಾಡಲು ಬರು ವನು. ಅನೇಕ ಕೋಟೆಗಳನ್ನು ಭೇದಿಸಿ, ಅಲ್ಲಿರುವ ಜನರಿಗೆ ಮಾಯದ ನಿದ್ರೆಯನ್ನು

ಬರಿಸಿ ಅಂತಃಪುರವನ್ನು ಪ್ರವೇಶಿಸುವರು. ಅರಮನೆಯ ಸಂಪತ್ತನ್ನೆಲ್ಲ ಕದ್ದು, ಆನೆಯ ಮೇಲೆ ಹೇರಿಕೊಂಡು ಹೊರಬರುವರು. ದಾರಿಯುದ್ದಕ್ಕೂ ಆ ಸಂಪತ್ತನ್ನು ಚೆಲ್ಲುತ್ತ ಊರ ಜನರಿಗೆ ತಮ್ಮ ಸುಳುಹು ಹತ್ತುವಂತೆ ಮಾಡಿ

ದಾಳಿ ಬರುತಿದೆಯಪ್ಪ ಹೇಳಿರಿ ಬುದ್ಧಿಗಳ
ಆಳು ಮೊದಗಿದರೆ ವಶವಲ್ಲ—ನಮಗೀಗ
ಬಾಳುವ ತಲೆ ಕಾವ ಪರಿ ಹೇಗೆ

ಎಂದು ಬೊಬ್ಬೆಯಿಡುತ್ತ ಗುಂಡಬ್ರಹ್ಮಯ್ಯಗಳ ಮಠದತ್ತ ಧಾವಿಸುವರು. ಇದನ್ನು ಕಂಡ ಗುಂಡಬ್ರಹ್ಮಯ್ಯಗಳು "ನಿಮಗಾಗಿ ಬಾಳುವ ಶಿರವ ಕೊಡುವೆವು" ಎಂಬ ಗಂಡು ಮಾತನ್ನಾಡಿ ಕಳ್ಳರಿಗೆ ಅಭಯ ನೀಡಿದ ವಿಷಯ, ದ್ವಿತೀಯ ಸಂಧಿಯಲ್ಲಿ ಸಿದ್ಧಗೊಂಡಿದೆ.

ಕಳ್ಳತನ ಮಾಡಲು ಬೇಕಾದ ಸಾಮಗ್ರಿಗಳು, ಅವುಗಳ ಸಿದ್ಧತೆ, ವಿವಿಧ ಕೋಟೆಗಳನ್ನು ಒಡೆಯುವ ರೀತಿ, ಅಲ್ಲಿದ್ದ ಪಹರೆಯವರಿಗೆ ಮಾಯದ ನಿದ್ರೆ ಬರಿಸುವಿಕೆಗಳಿಂದ ಅರಮನೆಯ ಕಳವಿನ ನೈಜಚಿತ್ರವನ್ನು ಕಂಡುಕೊಳ್ಳಬಹುದಾಗಿದೆ. ಅರಮನೆಯಲ್ಲಿರುವ ಸೆಳೆಮಂಚ, ಕುಸುರಿಮಂಚ, ತೂಗುಮಂಚ, ವಿವಿಧರೀತಿಯ ಉಡಿಗೆ–ತೊಡಿಗೆ, ಆಯುಧ ಮತ್ತು ಗೋಡೆಗಳ ಮೇಲೆ ತೂಗುಹಾಕಿದ್ದ ನುಲಿಯಚಂದಯ್ಯ, ಶಂಕರದಾಸಿಮಯ್ಯ, ಮೈದುನ ರಾಮಯ್ಯ, ಸಿರಿಯಾಳ–ಚೆಂಗಳೆಯರ ಚಿತ್ರಪಟಗಳು ಇಲ್ಲಿ ಗಮನಿಸಬೇಕಾದ ಅಂಶಗಳಾಗಿವೆ.

ನಿದ್ರೆಯಿಂದ ಎದ್ದ ಮಹಾರಾಜನು, ತನ್ನ ಭಂಡಾರ ಖಾಲಿಯಾದುದನ್ನು ಕಂಡು ರೋಷಿ, ಪತ್ತೆಹಚ್ಚಲು ಸೇವಕರನ್ನು ವಿವಿಧ ಸ್ಥಳಗಳಿಗೆ ಅಟ್ಟಿದನು. ಕಳ್ಳರನ್ನು ಶೋಧಿಸಿದ ಸೇವಕರು, ರಾಜನಲ್ಲಿಗೆ ಬಂದು ಅವರಿರುವ ಸ್ಥಳವನ್ನು ತಿಳಿಸುವರು. ಗಣಪತಿ ಮಹಾರಾಜನು "ಕದ್ದ ಕಳ್ಳರನ್ನು ಬಿಡಬೇಕು ಅಥವಾ ಶರಣರು ನಾನು ಕೊಡುವ ಶೂಲದ ಶಿಕ್ಷೆಗೆ ಗುರಿಯಾಗಬೇಕು" ಎಂದು ರಾಜಾಜ್ಞೆ ಹೊರಡಿಸುವನು. ಗುಂಡಬ್ರಹ್ಮಯ್ಯಗಳು ಕಳ್ಳರನ್ನು ಬಿಡದೆ, ಶೂಲವೇರಲು ನಿರ್ಧರಿಸುವರು. ಶೂಲದ ಮೇಲಿದ್ದೂ ಲಿಂಗಪೂಜೆಮಾಡುವ, ಶೂಲಗಳು ನೆಡದ ಈ ಶಿವಭಕ್ತರನ್ನು ಕಂಡು ಗಣಪತಿರಾಯ ಪಶ್ಚಾತ್ತಾಪಪಡುವುದು; ಗುಂಡಬ್ರಹ್ಮಯ್ಯರನ್ನು ಶಿವನು ಕೈಲಾಸಕ್ಕೆ ಒಯ್ಯುವುದು–ತೃತೀಯ ಸಂಧಿಯಲ್ಲಿ ಬರುವ ವಿಷಯವಾಗಿವೆ.

ಇಲ್ಲಿ, ಗುಂಡಬ್ರಹ್ಮಯ್ಯಗಳು ಕೊಟ್ಟ ಭಾಷೆಗೆ ತಪ್ಪದೆ ನಡೆಯುವ ರೀತಿ, ಹಿಡಿದ ವ್ರತದ ಸಾಧನೆಯಲ್ಲಿ ತೋರಿದ ನಿಷ್ಠೆ, ಛಲಗಳು ವೀರಭಕ್ತಿಯ ಗಣಾಚಾರವನ್ನು ಒತ್ತಿ ಹೇಳುತ್ತವೆ; "ಮರಣವೇ ಮಹಾನವಮಿ" ಎಂಬ ಶರಣಧರ್ಮವನ್ನು ಎತ್ತಿಹಿಡಿಯುತ್ತವೆ.

ಹೀಗೆ ಪ್ರಥಮ ಸಂಧಿಯಲ್ಲಿ ಗುಂಡಬ್ರಹ್ಮಯ್ಯಗಳ ಬಿರುದಿನ ಕಹಳೆಯನ್ನು ಮುರಿಯಲು ಶಿವನು ಮಾಡಿದ ಪ್ರತಿಜ್ಞೆ, ಜಂಗಮರೂಪಿನ ನಾರದನ ಬೇಹುಗಾರಿಕೆಗಳು; ದ್ವಿತೀಯ ಸಂಧಿಯಲ್ಲಿ ಕಳ್ಳವೇಷದ ಶಿವನ ಕಳ್ಳತನದ ರೀತಿ, ಅರಮನೆಯ ವಿವಿಧ ವಸ್ತುಗಳ ದರ್ಶನ, ಮೊರೆಹೊಕ್ಕ (ಕಳ್ಳ) ಶಿವನಿಗೆ ಗುಂಡಬ್ರಹ್ಮಯ್ಯಗಳು ನೀಡಿದ

ಅಭಯ; ತೃತೀಯ ಸಂಧಿಯಲ್ಲಿ ಕಳ್ಳರ ಶೋಧನೆ, ಗುಂಡಬ್ರಹ್ಮಯ್ಯಗಳು ಶೂಲ ವೇರುವುದು, ಉಭಯ ಶರಣರನ್ನು ಶಿವನು ಕೈಲಾಸಕ್ಕೆ ಒಯ್ಯುವುದು—ಈ ಅಂಶ ಗಳು "ಗುಂಡಬ್ರಹ್ಮಯ್ಯಗಳ ಚರಿತ್ರೆ"ಯ ೩ ಸಂಧಿಗಳಲ್ಲಿ ಹರಡಿನಿಂತು. ಗುಂಡಬ್ರಹ್ಮ-ಯ್ಯಗಳ ಮೂಲಕ ವೀರಭಕ್ತಿಯ ಮಹತಿಯನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿವೆ.

ಈ ಕೃತಿ ರಚನೆಯಲ್ಲಿ ಕವಿ ಆಯ್ದುಕೊಂಡ ವಸ್ತು. ಬಳಸಿದ ಛಂದಸ್ಸು. ವಿಷಯ ನಿರೂಪಣೆಯಲ್ಲಿ ತೋರಿದ ಆಸಕ್ತಿಗಳು ಸಾರ್ಥಕಗೊಂಡಿವೆ. ಭಾವ-ಭಾಷೆಗಳಲ್ಲಿರುವ ಹನವಂತಿಕೆ. ಘಟನೆಗಳ ಸಂಯೋಜನೆಯಲ್ಲಿ ಮೂಡಿಬಂದ ಏಕಸೂತ್ರತೆ. ಸಂಭಾಷಣೆ ಗಳಲ್ಲಿರುವ ಜೀವಂತಿಕೆಗಳಿಂದ ಕೃತಿಯ ಮೌಲ್ಯ ಅಧಿಕಗೊಂಡಿದೆಯೆಂಬುದರಲ್ಲಿ ಸಂದೇಹವಿಲ್ಲ.

೧೨೪ (೪೦ + ೮೪) ಪುಟದ ಈ ಗ್ರಂಥಕ್ಕೆ ೪೦ ಪುಟದ ಪೀಠಿಕೆಯಿದೆ. ಇದು ಡಾ. ವಿ. ಶಿವಾನಂದರು ಪಟ್ಟಪರಿಶ್ರಮ, ಕೈಕೊಂಡ ಪ್ರಯತ್ನ. ಹಿಡಿದ ಮಾರ್ಗ. ತೋರಿದ ಆಸಕ್ತಿ. ನೀಡಿದ ನಿರ್ಣಯ, ಸಂಶೋಧನ ದೃಷ್ಟಿ ಮತ್ತು ಅಭ್ಯಾಸದ ಫಲ ಗಳನ್ನು ಹೊತ್ತುನಿಂತಿದೆ. ಹೀಗಿದ್ದರೂ ಪೀಠಿಕೆ. ಕೃತಿಯ ಪೂರ್ಣಪರಿಚಯ ಮಾಡಿಸಿ ಕೊಡುವುದರಲ್ಲಿ ಯಶಸ್ವಿಯಾಗಿಲ್ಲ. ಈ ಗ್ರಂಥದ ಮೂಲಸಂಪತ್ತಾದ ಜಾನಪದ ಛಂದಸ್ಸಿನ ವಿವೇಚನೆ ಬರಬೇಕಾದಷ್ಟು ಬಂದಿಲ್ಲ. ಸುವ್ವಿ ಹಾಡುವ ರೀತಿ. ಅಲ್ಲಿ ಎದ್ದು ಕಾಣುವ ಲಯ— ಇವುಗಳನ್ನು ಗುರುತಿಸಿ. ಖಚಿತವಾಗಿ ವಿವೇಚಿಸಬೇಕಿತ್ತು. ಅಂದರೆ ಕೃತಿಯ ತೂಕ ಇನ್ನಷ್ಟು ಅಧಿಕವಾಗುತ್ತಿತ್ತು.

ಒಂದು ಕೃತಿಯ ಸಂಪಾದನಾಕಾರ್ಯದಲ್ಲಿ ಬೇಕಾದ ಎಲ್ಲ ಸಾಮಗ್ರಿಗಳನ್ನು ಡಾ ವಿ. ಶಿವಾನಂದರು ಕೂಡಿಹಾಕಿಕೊಂಡು ಅಲ್ಲಲ್ಲಿ ಪಾಠಾಂತರಗಳನ್ನು ಗುರುತಿಸಿ ದ್ದಾರೆ. ಕೆಲವುಕಡೆ ಪಾಠನಿರ್ಣಯದಲ್ಲಿ ಅವಸರ ಮಾಡಿದಂತೆ ಕಂಡುಬರುತ್ತದೆ. ಪದಗಳನ್ನು ಎಲ್ಲಿ ಬಿಡಿಸಬೇಕು. ಎಲ್ಲಿ ಬಿಡಿಸಬಾರದು ಎಂಬುದು ತಿಳಿಯುವುದಿಲ್ಲ. ಇದರಿಂದ ಅರ್ಥಸ್ಪಷ್ಟತೆಗೆ ಧಕ್ಕೆಬಂದು ಅಪಾರ್ಥ ಸಂಭವಿಸುವುದು. ಉದಾ: ಸಂಗದ ಸುಖವು (೧-೧೨). ರವಸುಪುರದಲ್ಲಿ (೧-೪೬). ಹೀಗೆಹೋದರೆನಾವು (೧-೪೭)' ಆಗಮುವನೀವಲ್ಲಿ (೧-೫೮). ಕಳಸರವಿಯಂತೆ (೧-೧೨). ಈಲೋಕದೊಳಗಿಲ್ಲ (೧-೧೨೦), ಅರಮನೆ (೧-೧೨೬). ಕೋಟೆಯತೆಗ-(೧-೧೩೧). ಅಕ್ಕಯ್ಯಕಾಲ-(೨-೨೩೩). ಕಟ್ಟಿದೇವನಮೇಲೆ (೨-೨೬೮). ಮೇಲೆರಾಯ (೩-೮೦). ಬಿಟ್ಟನೈವೇ-ದ್ಯಫಲಗಳ (೩-೧೮೮)— ಈ ಸಂದಿಗ್ಧತೆ ದೂರಾಗಿ ಪದಗಳ ವಿಂಗಡನೆಯಲ್ಲಿ ವ್ಯವಸ್ಥೆ ಮೈಗೂಡಿಬರಬೇಕು. ಪೀಠಿಕೆಯ ಅಡಿಟಿಪ್ಪಣಿಯಲ್ಲಿ ಬಳಸುವ ಸಂಕ್ಷೇಪಗಳಲ್ಲಿ ಏಕ ರೂಪತೆ ಕಂಡುಬರುವುದಿಲ್ಲ. ಉದಾ:

೧. ಪೀಠಿಕೆ. ಪುಟ ೩, ಅಟಿ : ೨ ಶಿ. ತ, ಚಿಂ. ಪುಟ ೩೫೩ ಪದ್ಯ ೬೧
ಪೀಠಿಕೆ, ಪುಟ ೩, ಅಟಿ : ೫ ಶಿ. ತ. ಚಿ. ಪುಟ ೩೭೩-೧
ಪೀಠಿಕೆ. ಪುಟ ೫, ಅಟಿ : ೧ ಶಿ. ತ. ಚಿಂ. ಸಂಧಿ ೩೭ ಪ. ೧೦೪-೧೦೯

೨. ಪೀಠಿಕೆ, ಪುಟ ೯. ಅಟಿ : ೧ ಕ. ಶಾ. ಸಾಂ. ಅ.
ಪೀಠಿಕೆ, ಪುಟ ೧೫. ಅಟಿ : ೪ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ

೩. ಪೀಠಿಕೆ, ಪುಟ ೩೭. ಅಟಿ : ೧ ಪಂಪಭಾರತ ತ್ರಯೋದಶಾಶ್ವಾಸಂ. ಪ. ೬೨
ಪೀಠಿಕೆ, ಪುಟ ೩೭. ಅಟಿ : ೧ ಪಂ. ಭಾ. ೧೩-೬೩

೪. ಪೀಠಿಕೆಯ ಅಡಿಟಿಪ್ಪಣಿಯಲ್ಲಿ ಒಮ್ಮೆ ಅಂಕಿಗಳನ್ನು ಮತ್ತೊಮ್ಮೆ + ಚಿಹ್ನೆಯನ್ನು ಬಳಸಲಾಗಿದೆ.

ಮುದ್ರಣ ದೋಷಗಳನ್ನು ಬೆನ್ನಿಗೆ ಕಟ್ಟಿಕೊಂಡಿರುವ ಈ ಕೃತಿಗೆ ಒಪ್ಪೋಲೆ ಬೇಕಿತ್ತು. ಸಂಕ್ಷೇಪಗಳ ಪಟ್ಟಿ ಅನುಬಂಧದಲ್ಲಿ ಬರಬೇಕಾಗಿತ್ತು. ಗ್ರಂಥದ ಕಟ್ಟು (Binding) ಮತ್ತು ಮುಖಪುಟಗಳಲ್ಲಿ ಇನ್ನಷ್ಟು ಆಕರ್ಷಣೆ. ಕಳೆ ಮೂಡಿಬಂದಿದ್ದರೆ ಒಳ್ಳೆಯದಾಗುತ್ತಿತ್ತು. ಈ ಕೆಲವು ನ್ಯೂನತೆಗಳು ಹಣಿಕಿಹಾಕಿದರೂ ಕೃತಿಯ ಬೆಲೆಯನ್ನು ಕಡಿಮೆಗೊಳಿಸಲಾರವು. ●

ಬಿ. ಆರ್. ಹಿರೇಮಠ

ಸಂಪಾದಕೀಯ

ಕುಲಪತಿ ಡಾ. ಆರ್. ಸಿ. ಹಿರೇಮಠ :

ಕರ್ನಾಟಕ ವಿಶ್ವವಿದ್ಯಾಲಯ ಇಂದು ೨೫ರ ಪ್ರಾಯದಲ್ಲಿದೆ. ಇದರ ಉಗಮದೊಂದಿಗೆ ಆಗಮಿಸಿ. ಬೆಳವಣಿಗೆಯೊಂದಿಗೆ ಬೆಳೆದವರು ಡಾ. ಆರ್. ಸಿ. ಹಿರೇಮಠ ಅವರು. ಅಡಿಪಾಯದಿಂದ ಮೊದಲುಮಾಡಿ, ಮುಡಿಕಲಶದವರೆಗೆ ಇದರ ನೋವುನಲಿವುಗಳಲ್ಲಿ ಪಾಲುಗಾರರಾದ ಕೀರ್ತಿ ಇವರಿಗಿದೆ.

ಡಾ. ಹಿರೇಮಠರು ಒಬ್ಬ ವ್ಯಕ್ತಿಯಲ್ಲ; ಒಂದು ಶಕ್ತಿ. ೫೦ಕ್ಕೂ ಮಿಕ್ಕ ಕೃತಿಗಳನ್ನು ಪ್ರಕಟಿಸಿದ ದಿವ್ಯಸಾಹಸ, ಕನ್ನಡಪರಂಪರೆಯ ಪ್ರತಿಷ್ಠಾಪನೆಗಳು ಅವರ ವ್ಯಕ್ತಿಸಿದ್ಧಿಯ ಪತಾಕೆಗಳು. ಕನ್ನಡ ಅಧ್ಯಯನಪೀಠವನ್ನು ಕಟ್ಟುವುದರ ಮೂಲಕ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ತಮ್ಮ ಶಕ್ತಿಯನ್ನು ಧಾರೆಯೆರೆದ ಅವರು, ಕನ್ನಡದ ಕುಲಪತಿಗಳು. ನಮ್ಮ ರಾಜ್ಯಸರಕಾರ, ವಿಶ್ವವಿದ್ಯಾಲಯದ ತಾತ್ಪೂರ್ತಿಕ ತೆರವಿನ ಕುಲಪತಿ ಸ್ಥಾನದಲ್ಲಿ ಈ ಕನ್ನಡ ಕುಲಪತಿಗಳನ್ನು ನಿಯಮಿಸಿ, ಅವರ ಬಹುಮುಖ ಸೇವೆಗೆ ಯೋಗ್ಯ ಮನ್ನಣೆ ನೀಡಿದೆ. ಈ ಪ್ರಸಂಗದಲ್ಲಿ 'ಭಾರತಿ' ಅವರಿಗೆ ಉತ್ತರೋತ್ತರ ಸಿದ್ಧಿ-ಪ್ರಸಿದ್ಧಿಗಳನ್ನು ಹಾರೈಸುತ್ತದೆ.

ಪದ್ಮಶ್ರೀ. ಬೇಂದ್ರೆಯವರಿಗೆ ಸನ್ಮಾನ :

ಡಾ. ದ. ರಾ. ಬೇಂದ್ರೆ ಕನ್ನಡದಲ್ಲಿ ಹೊಸ ಯುಗವನ್ನು ನಿರ್ಮಿಸಿದ ಮಹಾಕವಿ. ಪುರಾತನ ಭಾರತೀಯ ಪರಂಪರೆ, ಸಮಕಾಲೀನ-ಸರ್ವಕಾಲೀನ ಪ್ರಜ್ಞೆ, ನೆಲದ ಸಂವೇದನೆಗಳ ಪ್ರತೀಕವಾಗಿರುವ ಅವರ ಕೃತಿಗಳು ಕನ್ನಡಸಾಹಿತ್ಯಕ್ಕೆ, ಭಾರತೀಯ ಸಾಹಿತ್ಯಕ್ಕೆ ಕಾಣಿಕೆಯೆನಿಸಿವೆ.

ಈ ಸೇವೆಗೆ ತಕ್ಕ ಮನ್ನಣೆಯೆನ್ನುವಂತೆ ಡಾ. ಬೇಂದ್ರೆಯವರಿಗೆ ಈ ವರ್ಷದ "ಜ್ಞಾನಪೀಠ" ಗೌರವ ಲಭಿಸಿದ ಪ್ರಸಂಗದಲ್ಲಿ ಕನ್ನಡ ಅಧ್ಯಯನಪೀಠ. ಅವರ ಸತ್ಕಾರ ಸಮಾರಂಭವನ್ನು ಹಮ್ಮಿಕೊಂಡಿದ್ದಿತು. ಡಾ. ಟಿ. ಜಿ. ಕಲಘಟಗಿ, ಡಾ. ಶಂಕರ ಮೊಕಾಸಿ ಪುಣೇಕರ, ಪ್ರಿ. ಜಿ. ಎಸ್. ಸಿದ್ಧಲಿಂಗಯ್ಯ ಅವರು ಡಾ. ಬೇಂದ್ರೆಯವರ ಸಾಹಿತ್ಯವ್ಯವಸಾಯವನ್ನು ಕುರಿತು ಮಾತನಾಡಿದರು. ಅಧ್ಯಕ್ಷತೆ ವಹಿಸಿದ ಮೈಸೂರು ವಿಶ್ವವಿದ್ಯಾಲಯದ ಕುಲಪತಿ, ಪ್ರೊ ದೇಜಗೌ ಅವರು ಡಾ. ಬೇಂದ್ರೆಯವರಂಥ ಮಹಾಕವಿಗಳು ಕನ್ನಡಕ್ಕೆ ಒಂದು ದೊಡ್ಡ ಗೌರವವೆಂದು ನುಡಿದರು. ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಆರ್. ಸಿ. ಹಿರೇಮಠ ಅವರು ಡಾ. ಬೇಂದ್ರೆ

ಯವರ ಭಾವಚಿತ್ರವನ್ನು ಅನಾವರಣಗೊಳಿಸುತ್ತ ಯುಗಕ್ಕೊಮ್ಮೆ ಕಾಣಿಸಿಕೊಳ್ಳುವ 'ಅವತಾರ ಶಕ್ತಿಗಳು' ಎಂದು ಹೇಳಿದರು. 'ಭಾರತಿ' ಇವರಿಗೆ ಇಂಥ ಅನೇಕ ಗೌರವಗಳನ್ನು ಹಾರೈಸುತ್ತದೆ.

ರಾಜ್ಯ ಸಾಹಿತ್ಯಅಕ್ಯಾಡೆಮಿ ಪ್ರಶಸ್ತಿ :

ಕರ್ನಾಟಕರಾಜ್ಯ ಸಾಹಿತ್ಯಅಕ್ಯಾಡೆಮಿ, ಪ್ರತಿವರ್ಷ ಹಿರಿಯ ಕನ್ನಡ ಸಾಹಿತಿಗಳನ್ನು ಗೌರವಿಸುತ್ತಿದೆ. ಈ ವರ್ಷ ಈ ಗೌರವಕ್ಕೆ ಪಾತ್ರರಾದವರು ಸರ್ವಶ್ರೀ ತರಾಸು, ಪರ್ವತವಾಣಿ, ಸಿದ್ಧಯ್ಯ ಪುರಾಣಿಕ, ಎಚ್. ಎಲ್. ನಾಗೇಗೌಡ. ಎ ಎನ್. ಮೂರ್ತಿರಾವ, ಗಮಕಿ ರಾಘವೇಂದ್ರರಾವ.

ಇವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಗಮನಾರ್ಹ ಸೇವೆ ಸಲ್ಲಿಸುವುದರ ಮೂಲಕ ಅವುಗಳ ಅಭಿವೃದ್ಧಿಗೆ ಕಾರಣರಾದವರು. 'ಭಾರತಿ' ಇವರೆಲ್ಲರಿಗೆ ಹಾರ್ದಿಕವಾದ ಅಭಿವಂದನೆಗಳನ್ನು ಅರ್ಪಿಸುತ್ತದೆ. ●

ಸಾದರ ಸ್ವೀಕಾರ

೧. ಇದು ನಮ್ಮ ಆಕಾಶವಾಣಿ :

ಸಂ : ವೆಂಕಟೇಶ ಕುಲಕರ್ಣಿ. ಪ್ರ : ಕರ್ನಾಟಕ ಬಾನುಲಿ ಶ್ರೋತೃ ಸಂಘ, ಬಾಗೋಟಿ.
ಬೆಲೆ : ಎರಡು ರೂಪಾಯಿ. ಪುಟ : IV + ೫೪

೨. ಶಿವಶರಣರ ನುಡಿಮುತ್ತು :

ಸಂ : ಚಂದ್ರಶೇಖರ ಶಾಸ್ತ್ರಿಗಳು. ಪ್ರ : ಕೊಟ್ಟೂರೇಶ ಪ್ರಕಾಶನ, ಹಗರಿಬೊಮ್ಮನಹಳ್ಳಿ.
ಬೆಲೆ : ಎರಡು ರೂಪಾಯಿ. ಪುಟ : ೪೦

೩. ಕರ್ನಾಟಕ ಯಾತ್ರೆ :

ಲೇ : ಎ. ವ್ಹಿ. ಸದರಜೋಶಿ. ಪ್ರ : ಸುಶೀಲಾ ಪ್ರಕಾಶನ, ಬೆಳಗಾಂವಿ.
ಬೆಲೆ : ಎರಡು ರೂಪಾಯಿ. ಪುಟ : vii + ೫೨

೪. ಜಪಾನ ಪ್ರವಾಸದ ಅನುಭವಗಳು :

ಲೇ : ಸಿ. ಎಸ್. ಅಂಗಡಿ. ಪ್ರ : ಬಿ. ವ್ಹಿ. ಅಂಗಡಿ, ಗೋಕಾಕ.
ಬೆಲೆ : ಎಂಟು ರೂಪಾಯಿ. ಪುಟ : xiii + ೨೦೪

೫. ನಿರಂಜನ :

ಸಂ : ಎ. ಎಸ್. ಹೂಗಾರ, ಎಚ್. ಪಿ. ಹುಲ್ಯಾಳ. ಪ್ರ : ನಿ. ಜ. ತೋಂಟದಾರ್ಯ ಸಂಸ್ಥಾನಮಠ, ಗದಗ-ಬೇಟಗೇರಿ. ಬೆಲೆ : ಐದು ರೂಪಾಯಿ. ಪುಟ : IV + ೧೭೬

೬. ನೆನಪು :

ಲೇ : ವ್ಹಿ. ಎಲ್. ಜೋಶಿ. ಪ್ರ : ಮಹೇಶ ಪ್ರಕಾಶನ, ಗದಗ.
ಬೆಲೆ : ಎರಡು ರೂಪಾಯಿ. ಪುಟ : ೨೮

೭. ಲಹರಿ :

ಲೇ : ಪಿ. ಹ. ರಾಮಕೃಷ್ಣರಾವ್. ಪ್ರ : ವಿಶ್ವಧರ್ಮ ಪ್ರಕಾಶನ, ಹರಿಹರ.
ಬೆಲೆ : ಮೂರು ರೂಪಾಯಿ. ಪುಟ : viii + ೪೧

ಪತ್ರಿಕೆಗಳು

ಕನ್ನಡನುಡಿ,
ಸಾಹಿತ್ಯ ಪರಿಷತ್ಪತ್ರಿಕೆ,
ಅಭಿರುಚಿ,
ಕೃಷಿವಿಜ್ಞಾನ

ಈ ಸಂಚಿಕೆಯ ಲೇಖಕರು

೧. **ಶ್ರೀ ಎಸ್. ಎಸ್. ಹಿರೇಮಠ :**
ಕನ್ನಡ ಅಧ್ಯಾಪಕರು, ವಿಜಯನಗರ ಕಾಲೇಜು, ಹೊಸಪೇಟ.

೨. **ಶ್ರೀ ಮಹಾದೇವ ಕಣವಿ :**
ಕನ್ನಡ ಅಧ್ಯಾಪಕರು, ಕಲಾ ಮತ್ತು ವಿಜ್ಞಾನ ಕಾಲೇಜು, ಗುಳೇದಗುಡ್ಡ.

೩. **ಶ್ರೀ ಶ್ರೀ. ಚೆ. ರಾಮಸ್ವಾಮಿ :**
ಸಂಶೋಧನ ವಿದ್ಯಾರ್ಥಿ, ಅಣ್ಣಾಮಲೈ ವಿಶ್ವವಿದ್ಯಾಲಯ, ಅಣ್ಣಾಮಲೈನಗರ.

೪. **ಶ್ರೀ ಶ್ರೀರಾಮ ಇಟ್ಟಣ್ಣವರ :**
ಕನ್ನಡ ಅಧ್ಯಾಪಕರು, ಸಿದ್ಧೇಶ್ವರ ಜ್ಯೂನಿಯರ ಕಾಲೇಜು, ಬೀಳಗಿ.

೫. **ಶ್ರೀ ದೊಡ್ಡರಂಗೇಗೌಡ :**
೩೪, ಬಸವಣ್ಣಗಲ್ಲಿ, ಕೆ. ಆರ್. ಶೆಟ್ಟಿ ಪೇಟೆ, ಬೆಂಗಳೂರು–೨.

೬. **ಶ್ರೀ ವಿಲ್ಯಂ ಮಾಡ್ತ :**
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೭. **ಶ್ರೀ ಸಿ. ವ್ಹಿ. ಪಾಟೀಲ :**
ಹೊಳೆಇಟಗಿ.

೮. **ಶ್ರೀ ಗುರಲಿಂಗ ಕಾಪಸೆ :**
ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ.

೯. **ಡಾ. ಎಂ. ಎಸ್. ಸುಂಕಾಪುರ :**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ.

೧೦. **ಎಂ. ಎಸ್. ಮಹಾಂತಯ್ಯ :**
೪–೨–೮೬೩ (ಸಿಐ ೨) ಪತ್ರಪೋಟೆ ಬಿಲ್ಡಿಂಗ. ರಾಮಕೋಟೆ, ಹೈದ್ರಾಬಾದ.

೧೧. **ಡಾ. ಬುದ್ದಣ್ಣ ಹಿಂಗಮಿರೆ :**
ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ.

೧೨. **ಶ್ರೀ ಎಚ್. ಜಿ. ಲೋಕೂರ :**
ಕನ್ನಡ ಅಧ್ಯಾಪಕರು, ಲಿಂಗರಾಜ ಕಾಲೇಜು, ಬೆಳಗಾಂವಿ.

೧೩. **ಶ್ರೀ ಗುಂಡಾ ಜೋಯಿಸ್ :**
ಕೆಳದಿ ವಸ್ತುಸಂಗ್ರಹಾಲಯ, ಕೆಳದಿ.

೧೪. **ಶ್ರೀ ಎಂ. ವ್ಹಿ. ಶರ್ಮಾ ತದ್ದಲಸೆ :**
ಅಂಚೆ : ಹುಣಸೆಕೊಪ್ಪ, ಶಿರಶಿ (ಉ. ಕ.).

೧೫. **ಶ್ರೀ ಎಂ. ಎಸ್. ಪಾಲಿ :**
ಶ್ರೀ ಸದ್ಗುರು ಶಿವಾನಂದ ಕಾಲೇಜು, ಕಾಗವಾಡ.

೧೬. **ಕು. ಹೇಮಲತಾ ಪದಕಿ :**
ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೧೭. **ಶ್ರೀ ಶಂ. ಬಾ. ಜೋಶಿ :**
ಸಂಶೋಧಕರು, ಸಾಧನಕೇರಿ, ಧಾರವಾಡ.

೧೮. **ಡಾ. ಎಸ್. ಶೆಟ್ಟರ್ :**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ಹಾಗೂ ಪ್ರಾಚ್ಯಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ.

೧೯. **ಶ್ರೀ ಎಸ್. ರಾಜಶೇಖರ :**
ಅಧ್ಯಾಪಕರು, ಇತಿಹಾಸ ಹಾಗೂ ಪ್ರಾಚ್ಯಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ.

೨೦. **ಡಾ. ಎಂ. ಚಿದಾನಂದಮೂರ್ತಿ :**
ರೀಡರ್, ಕನ್ನಡ ಅಧ್ಯಯನಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೧. **ಡಾ. ಎಂ. ಎಂ. ಕಲಬುರ್ಗಿ :**
ರೀಡರ್, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೨೨. **ಶ್ರೀ ಬಿ. ಆರ್. ಹಿರೇಮಠ :**
ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ

ಇತ್ತೀಚಿನ ಪ್ರಕಟನೆಗಳು

ಉಪನ್ಯಾಸ ಗ್ರಂಥಮಾಲೆ : ಪ್ರತಿಯೊಂದರ ಬೆಲೆ ೨೫ ಪೈಸೆ

ಶಿಕ್ಷಣವೇತ್ತ ಡಾ. ಜಾನ್‌ಡ್ಯೂಯಿ	— ಟಿ. ಕೆ. ಹಿರೇಗಂಗೆ
ನಮ್ಮ ಅರಣ್ಯಗಳು	— ಟಿ. ಎಂ. ಪಂಡಿತ
ಹರಿಜನೋದ್ಧಾರಕಾರ್ಯ	— ಎನ್. ಕೆ. ಕಡೆತೋಟದ
ಬದಲಾಗುತ್ತಿರುವ ಭಾರತೀಯ ಕುಟುಂಬ	— ಎಚ್. ವ್ಹಿ. ನಾಗೇಶ್
ಷಡಕ್ಷರದೇವ ಕವಿಯ ರಾಜಶೇಖರ ವಿಳಾಸ	— ಎಂ. ಎನ್. ವಾಲಿ
ಆಯುರ್ವೇದ ಆಹಾರ ವಿಜ್ಞಾನ	— ಎನ್. ರಾಘವೇಂದ್ರ
ಟೆಲಿವ್ಹಿಜನ್	— ಎಂ. ಎಸ್. ಕೊಟ್ಲಿ
ಶಿಕ್ಷಣ ಮತ್ತು ಸಂಸ್ಕೃತಿ	— ಆಯ್. ಎಸ್. ಬಿದರಿ
ಜೀವವಿಮೆ ಹಾಗೂ ಭಾರತದಲ್ಲಿ ಬಂಡವಾಳ ಸಂಚಯ	— ಎಂ. ಎಂ. ಹೆಗಡೆ
ಸಾಮಾಜಿಕ ಬದಲಾವಣೆ ಮತ್ತು ಪ್ರಗತಿ	— ಕೆ. ಜಿ. ಜೋಶಿ
ಜಗತ್ತು ಮುಣ್ಣುಗೂಡೀತೆ ?	— ರಂಗನಾಥ ಕೌಲಗುಡ್
ಕವಿ ಬ್ರಹ್ಮಶಿವ	— ಎಸ್. ಪಿ. ಪಾಟೀಲ
ಅರವಿಂದಾಶ್ರಮ ಶ್ರೀಮಾತೆ	— ಸ. ಸ. ಮಾಳವಾಡ
ಸಾಪೇಕ್ಷತಾವಾದ	— ವ್ಹಿ. ಎಂ. ಕೋರವಾರ
ಸಂಕರಣ ಬೀಜೋತ್ಪಾದನೆ	— ಎಂ. ಎಂ. ಹೊಸಮನಿ

ಇತರ ಪ್ರಕಟನೆಗಳು :

ಶಾಸನ ವ್ಯಾಸಂಗ	— ಎಂ. ಎಂ. ಕಲಬುರ್ಗಿ	ಸಾದಾಪ್ರತಿ : ರೂ. ೭–೦೦ ಉತ್ತಮಪ್ರತಿ : ರೂ. ೧೦–೦೦
ಶಾಸನ ಸಂಪದ (ದ್ವಿ. ಆ.)	ಸಂ. ಆರ್. ಸಿ. ಹಿರೇಮಠ ಎಂ. ಎಂ. ಕಲಬುರ್ಗಿ	ಸಾದಾಪ್ರತಿ : ರೂ. ೪–೦೦ ಉತ್ತಮಪ್ರತಿ: ರೂ. ೬–೦೦

ಕಮೀಶನ್ನಿನ ವಿವರ :

ವಿಶ್ವವಿದ್ಯಾಲಯದ ಪ್ರಕಟಣೆಗಳನ್ನು ಕೊಳ್ಳುವವರಿಗೆ ಈ ಕೆಳಗಿನಂತೆ ಕಮೀಶನ್ ಕೊಡಲಾಗುತ್ತದೆ.

ಪಠ್ಯಪುಸ್ತಕಗಳು (ಪರೀಕ್ಷೆಗಳಿಗೆ ಗೊತ್ತುಪಡಿಸಿದವು ಮಾತ್ರ) :
೨೫ ಪ್ರತಿಗಳನ್ನು ಅಥವಾ ಅದಕ್ಕೂ ಹೆಚ್ಚಿಗೆ ಕೊಳ್ಳುವವರಿಗೆ :
೧೦೦ ಕ್ಕೆ ೧೫ ರಂತೆ

ರೂ. ೨೦೧೧/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :
೧೦೦ ಕ್ಕೆ ೨೦ ರಂತೆ

ಇತರ ಎಲ್ಲ ಪ್ರಕಟಣೆಗಳು (ನಿಯತಕಾಲಿಕೆಗಳನ್ನು ಒಳಗೊಂಡು) :
೧೦೦ ರೂ ಗಳಿಂದ ೫,೦೦೦ ರೂ. ವರೆಗಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ:
೧೦೦ ಕ್ಕೆ ೨೫ ರಂತೆ

೫,೦೦೦ ರೂ. ಗಳಿಗೆ ಮೇಲ್ಪಟ್ಟು ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :
೧೦೦ಕ್ಕೆ ೩೩ ೧/೩ ರಂತೆ

ಒಂದು ವರ್ಷದ ಅವಧಿಯಲ್ಲಿ (ಏಪ್ರಿಲ್ ೧ ರಿಂದ ಮಾರ್ಚ ೩೧ ರ ವರೆಗೆ) ಒಟ್ಟಿಗೆ ರೂ. ೨೦,೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ೩೩ ೧/೩ ದಂತೆ ಕಮೀಶನ್ ಕೊಡಲಾಗುವುದು.

*   *   *   *   *

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ — ರೂ. ೪ (ಅಂಚೆವೆಚ್ಚ ಸಹಿತ)
ಬಿಡಿ ಪ್ರತಿ — ರೂ. ೨-೫೦ (ಅಂಚೆ ವೆಚ್ಚ ರೂ. ೦-೨೫ ಪ್ರತ್ಯೇಕ)
(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ–ಸಂಸ್ಥೆಗಳು ೧೦೦ ರೂ. ಕಳಿಸಿ
ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ'
ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು.
ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು
ಕಳುಹಿಸುವ ವ್ಯವಸ್ಥೆ ಮಾಡಲಾಗುವುದು.
(ಹಣವನ್ನು ಮನಿ ಆರ್ಡರ ಅಥವಾ ಪೋಸ್ಟಲ್ ಆರ್ಡರ ಮೂಲಕ
ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ–೩